|| ಶ್ರೀಶ ಪಾಹಿ ಮಾಂ ||

ಅಧ್ಯಾತ್ಮರಸರಂಜಿನೀ

★

ಗ್ರಂಥಕರ್ತರು ಮತ್ತು ಪ್ರಕಾಶಕರು:
ಶಾಸ್ತ್ರರತ್ನಂ, ವೇದಾಂತವಿಶಾರದ
ಚೀಮನಹಳ್ಳಿ ರಘುನಾಥಾಚಾರ್ಯರು
ಪಂಡಿತಮಾರ್ತಾಂಡ, ಉಪನಿಷದ್ರತ್ನಾಕರ, ತತ್ವಚಿಂತಾಮಣಿ
ಸಾಹಿತ್ಯರತ್ನಂ, ಜ್ಞಾನಗುಣಾಕರ, ಇತ್ಯಾದಿ ಬಿರುದಾಂಕಿತರು

★

೨೯, ಹಯವದನ ಸದನ,
೭ನೇ ಬೀದಿ, ಚಾಮರಾಜಪೇಟೆ, ಬೆಂಗಳೂರು – 18

★

ಮುದ್ರಕರು:
... ಪ್ರಿಂಟರಿ, ಸೌರಾಷ್ಟ್ರಪೇಟೆ ಕ್ರಾಸ್,
ಬೆಂಗಳೂರು – ೨.

1967

[...] [ಅಂಚೆ ವೆಚ್ಚ ಪ್ರತ್ಯೇಕ

|| ಶ್ರೀಶ ಪಾಹಿ ಮಾಂ ||

ಅಧ್ಯಾತ್ಮರಸರಂಜಿನೀ

★

ಗ್ರಂಥಕರ್ತರು ಮತ್ತು ಪ್ರಕಾಶಕರು :

ಶಾಸ್ತ್ರರತ್ನಂ, ವೇದಾಂತವಿಶಾರದ

ಚೀಮನಹಳ್ಳಿ ರಘುನಾಥಾಚಾರ್ಯರು

ಪಂಡಿತಮಾರ್ತಾಂಡ, ಉಪನಿಷದ್ರತ್ನಾಕರ, ತತ್ವಚಿಂತಾಮಣಿ

ಸಾಹಿತ್ಯರತ್ನಂ, ಜ್ಞಾನಗುಣಾಕರ, ಇತ್ಯಾದಿ ಬಿರುದಾಂಕಿತರು

★

೨೯, ಹಯವದನ ಸದನ,

೬ನೇ ಬೀದಿ, ಚಾಮರಾಜಪೇಟೆ, ಬೆಂಗಳೂರು – 18

★

ಮುದ್ರಕರು :

ಚಿತ್ರಾ ಪ್ರಿಂಟರಿ, ಸೌರಾಷ್ಟ್ರಪೇಟೆ ಕ್ರಾಸ್,

ಬೆಂಗಳೂರು – ೨.

1967

ಬೆಲೆ 3 ರೂ.] [ಅಂಚೆ ವೆಚ್ಚ ಪ್ರತ್ಯೇಕ

ಪ್ರ ಸ್ತಾ ವ ನೆ

ಪ್ರಸ್ಥಾನತ್ರಯವೆಂದು ಪ್ರಸಿದ್ಧವಾಗಿರುವ ದಶೋಪನಿಷತ್ತುಗಳು, ಬಹ್ಮಸೂತ್ರಗಳು ಮತ್ತು ಗೀತಾ ಶಾಸ್ತ್ರಗಳ, ಭಾಷ್ಯಗಳು, ಶ್ರೀಮದಾಚಾರ್ಯರ ಅನುವ್ಯಾಖ್ಯಾನವೇ ಮೊದಲಾದ ಮೂಲಗ್ರಂಥಗಳು, ಅವುಗಳ ಟೀಕಾ ಟಿಪ್ಪಣ್ಯಾದಿಗಳನ್ನು ಅನುಸರಿಸಿ ವೇದಾಂತ ಸಾರದ ಪ್ರಮೇಯಗಳನ್ನು ಅನೇಕ ಪೂರ್ವಾಚಾರ್ಯರಾದ ಮಹನೀಯರು ಸಂಗ್ರಹಿಸಿರುವ ' ಮಧ್ವ ಸಿದ್ಧಾಂತಸಾರ" "ಸತ್ತತ್ವ ರತ್ನಮಾಲಾ" "ತತ್ವಸಾರ" "ಪ್ರಮೇಯ ಮುಕ್ತಾಮಾಲಾ" ಮೊದಲಾದ ಪ್ರಮೇಯ ಗ್ರಂಥಗಳ ಮತ್ತು ಅನೇಕ ಶ್ರುತಿ, ಸ್ಮೃತಿ, ಪುರಾಣೇತಿಹಾಸಾದಿ ಗ್ರಂಥಗಳ ಆಧಾರದಿಂದ ಸರಳ ಕನ್ನಡದಲ್ಲಿ ಪ್ರಮಾಣ ಸಹಿತವಾಗಿ ಸುಲಭ ಶೈಲಿಯಲ್ಲಿ ಅನುವಾದ ಮಾಡಿ ಈ ಮೊದಲೇ "**ಅಧ್ಯಾತ್ಮಾಮೃತನಿಧಿ**" ಎಂಬ ಗ್ರಂಥವನ್ನು ವಾಚಕರಿಗೆ ಕೊಟ್ಟಿರುತ್ತೇನೆ.

೨. ಇದಕ್ಕೆ ಪೋಷಕವಾಗಿ ಸುಲಭವಾಗಿ ವಿಷಯಗಳು, ವಿಶಕಲಿತವಾಗದೆ ದಂಡಾಯಮಾನವಾಗಿ ಏಕತ್ರ ತಿಳಿದು ಮನಸ್ಸಿನಲ್ಲಿ ನಿಂತು ಅನುಸಂಧಾನ ಮಾಡಲು ಅನುಕೂಲಿಸುವಂತೆ ಕೇವಲ ಸರಳವಾದ ಅಚ್ಚ ಕನ್ನಡದಲ್ಲಿ ವಿಷಯಗಳ ಜೋಡಣಿಕೆ, ವಿಷಯ ನಿರೂಪಣೆಗಳನ್ನು ವಿಷಯಾನುಕ್ರಮಣಿಕೆ ಮತ್ತು ಪಥಕಗಳೊಡನೆ ಈಗ "**ಅಧ್ಯಾತ್ಮ ರಸರಂಜಿನೀ**" ಎಂಬ ಈ ಎರಡನೆಯ ಭಾಗವನ್ನು ಓದುಗರಿಗೆ ಒದಗಿಸಿ ಕೊಟ್ಟಿರುತ್ತೇನೆ.

೩. ಈ ಗ್ರಂಥವನ್ನು ಅಚ್ಚುಮಾಡಲು ಅನುಗ್ರಹಪೂರ್ವಕವಾಗಿ ಆಶೀರ್ವದಿಸಿ ಫಲಮಂತ್ರಾಕ್ಷತೆಯನ್ನು ಸ್ವಲ್ಪ ದ್ರವ್ಯ ಸಹಾಯದಿಂದ ಪ್ರೋತ್ಸಾಹಿಸಿದ ಶ್ರೀಮತ್ಪರಮಹಂಸ್ಯೇತ್ಯಾದಿ ಬಿರುದವೃಂದ ವಿಭೂಷಿತರಾದ ಭೀಮ

ಸೇಕು ಮುನಿಬೃಂದ ಮಠಾಧೀಶರಾದ ಶ್ರೀ ೧೦೮ ಶ್ರೀ ರಘುಕುಲತಿಲಕ ತೀರ್ಥ ಶ್ರೀಪಾದಂಗಳವರಿಗೆ ನನ್ನ ಕೃತಜ್ಞತಾಪೂರ್ವಕವಾದ ಸಾಷ್ಟಾಂಗ ಪ್ರಮಾಣಗಳನ್ನು ಅರ್ಪಿಸುತ್ತೇನೆ.

೪. ಪ್ರಕೃತ ಶ್ರೀಕೃಷ್ಣಮಠದ ಪರ್ಯಾಯ ಪೀಠಸ್ಥ ಶ್ರೀ ಸರ್ವಜ್ಞಾಚಾರ್ಯರವರ ಸಿಂಹಾಸನಾಧಿರೂಢ ಶ್ರೀ ೧೦೮ ಶ್ರೀ ಕಾಣಿಯೂರು ಮಠಾಧೀಶರು ಉಡುಪಿ, ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯತ್ವಾದ್ಯನೇಕ ಬಿರುದಾಲಂಕೃತರಾದ ಶ್ರೀಮದ್ವಿದ್ಯಾ ಸಮುದ್ರತೀರ್ಥ ಶ್ರೀ ಪಾದವರೇಣ್ಯರ ಕರಕಮಲ ಸಂಜಾತರಾದ ಶ್ರೀ ೧೦೮ ಶ್ರೀ ವಿದ್ಯಾವಾರಿನಿಧಿ ತೀರ್ಥ ಶ್ರೀಪಾದಂಗಳವರು ಈ "**ಅಧ್ಯಾತ್ಮ ರಸರಂಜಿನೀ**" ಗ್ರಂಥವನ್ನು ಅಮೂಲಾಗವಾಗಿ ಓದಿಸಿ ನೋಡಿ ತಮ್ಮ ಅಮೌಲ್ಯವಾದ "**ಶುಭಾಶಂಸ ಪ್ರಸ್ತಾವನೆ**" "**ಶ್ರೀಮುಖ ಸಂದೇಶವನ್ನು**" ಫಲ ಮಂತ್ರಾಕ್ಷತೆಯನ್ನಿತ್ತು ಅನುಗ್ರಹಿಸಿದ್ದಕ್ಕಾಗಿ ನನ್ನ ವಿನಯ ಪೂರ್ವಕವಾದ ಸಾಷ್ಟಾಂಗ ಪ್ರಣಾಮಗಳನ್ನು ಸಮರ್ಪಿಸುವುದು ಮಾತ್ರವಲ್ಲದೆ ಅವರಿಗೆ ನಾನು ಚಿರ ಋಣಿಯಾಗಿದ್ದೇನೆ.

೫. ಈ ವರ್ಷದಲ್ಲಿ ಅಚ್ಚಾಗಿ ಪ್ರಕಟಿಸಿದ ನಮ್ಮ ೮--೧೦ ಗ್ರಂಥಗಳನ್ನೆಲ್ಲಾ ವಿಮರ್ಶಾತ್ಮಕ ರೀತಿಯಲ್ಲಿ ಪರಿಶೋಧಿಸಿ ತಮ್ಮ ಅಮೋಘವಾದ ಸದಭಿಪ್ರಾಯವನ್ನು ವ್ಯಕ್ತಪಡಿಸಿ ಪ್ರಶಂಸನೆ ಪತ್ರಗಳನ್ನು ಕಳುಹಿಸಿ ಪ್ರೋತ್ಸಾಹಿಸಿದ ೧. ಮಹಾ ವಿದ್ವಾನ್, ಶ್ರೀಮಾನ್ ಪೂಜ್ಯ ಅಗ್ರಹಾರ ನಾರಾಯಣ ಪಂಡಿತರು, ಮತ್ತು ೨. ಆಸ್ಥಾನ ಮಹಾ ವಿದ್ವಾಂಸರೂ, ನಿವೃತ್ತ ತರ್ಕ, ವೇದಾಂತ ಶಾಸ್ತ್ರ ಪ್ರಾಧ್ಯಾಪಕರೂ ನಮ್ಮ ಪರಮ ಮಿತ್ರರೂ ಆದ ಶ್ರೀ ಮ. ಸಂ. ಅನಂತ ಕೃಷ್ಣಾಚಾರ್ಯರವರು ತಥಾ ೩. ದ್ವೈತ, ವೇದಾಂತ ಸಂಸ್ಕೃತ ಮಹಾಪಾಠಶಾಲಾ ಪಂಡಿತರಾದ ಶ್ರೀ ವೇ. ಸುಬ್ರಾಯ ಪುರಾಣಿಕರವರಿಗೂ ನನ್ನ ಸವಿನಯ ಪ್ರಣಾಮಪೂರ್ವ ಅಭಿನಂದನೆಗಳನ್ನು ಅರ್ಪಿಸಿ ಸದಾ ಇವರುಗಳಿಗೆ ಕೃತಜ್ಞನಾಗಿರುತ್ತೇನೆ.

೬. ಇದರ ಪ್ರಚಾರಕಾರ್ಯಕ್ಕಾಗಿ ಸ್ವಲ್ಪಮಟ್ಟಿಗೆ ದ್ರವ್ಯ ಸಹಾಯದಿಂದ ಪ್ರೋತ್ಸಾಹಿಸಿದ ೧. ಬೆಂಗಳೂರ ಸೈನ್ಸ್ ಮತ್ತು ಆರ್ಟ್ಸ್ ಕಾಲೇ

ಜಿನ ಪ್ರಿರ್ಸಿಪಾಲರಾದ ಶ್ರೀಮಾ ಉಮ್ಮರ್ಜಿಯವರಿಗೂ, ೩. ಚನ್ನರಾಯ ಪಟ್ಟಣದ ತಾಲ್ಲೂಕು ಕಳ್ಳೆರೆಯಲ್ಲಿರುವ ಡಾಕ್ಟರ್ ಶ್ರೀಮಾರ್ ಸತ್ಯನಾರಾಯಣ ರಾಯರಿಗೂ ನಮ್ಮ ಕೃತಜ್ಞತೆಗಳೂ ಅಭಿನಂದನೆಯೂ ಸಲ್ಲಿಸತಕ್ಕದ್ದಾಗಿದೆ.

೪. ವಾಚಕ ವೃಂದವು ಎಂದಿನಂತೆ ಈ ಉತ್ತಮವಾದ "**ಅಧ್ಯಾತ್ಮಾಮೃತನಿಧಿ**" "**ಅಧ್ಯಾತ್ಮ ರಸರಂಜಿನೀ**" ಎಂಬ ಎರಡು ಗ್ರಂಥಗಳನ್ನೂ ಸಂಗ್ರಹಿಸಿ ಮುಂದಿನ ಗ್ರಂಥಗಳ ಪ್ರಚಾರ ಕಾರ್ಯಕ್ಕೆ ಸಹಾಯವನ್ನಿತ್ತು ಪ್ರೋತ್ಸಾಹಿಸಬೇಕಾಗಿ ಕೋರುತ್ತೇನೆ.

ಬೆಂಗಳೂರು,
20-5-1967,

ಚೀಮನಹಳ್ಳಿ ರಘುನಾಥಾಚಾರ್ಯ
ಶಾಸ್ತ್ರರತ್ನಂ.

ವಿಷಯಾನುಕ್ರಮಣಿಕೆ

ಪುಟಗಳು ೫೨-೫೩

ನಾಡೀವಿದ್ಯೆ - ಭಗವದುಪಾಸನೆ

ಸುಷುಮ್ನಾ — ವೃಷಣ ಆಸನಗಳ ಮಧ್ಯೆ ೪ ಅಂಗುಲ ವಿಸ್ತಾರ ೨ ಅಂಗುಲ ದಪ್ಪದ ಕಂದವು ದೇಹಾಧಾರ, ಸರ್ವ ನಾಡಿಗಳ ಮೂಲಾಧಾರ–ಇದರ ಮಧ್ಯದಿಂದ ತಲೆಯ ನೆತ್ತಿಯವರೆವಿಗೆ (ಋಜು) ಶಲಾಕಾದಂತೆ ಬಿದಿರಿನ (ವೇಣು) ವಿವರದಿಂದ ಕೂಡಿದೆ. ಇದೇ ಐದು ಪ್ರಭೇದವುಳ್ಳದ್ದಾಗಿದೆ.

ವಜ್ರಿಕಾ	ಆರ್ಯಾ	ಪ್ರಕಾಶಿನೀ	ವೈದ್ಯುತಾ	ಬ್ರಹ್ಮನಾಡೀ ಸುಷುಮ್ನಾ ನಾಡಿ ಸಾಂದನಂ
ಪೃಷ್ಠಾಂಶ (ಹಿಂಭಾಗ)	ವಾಮಾಂಶ (ಎಡಭಾಗ)	ಪುರೋಂಶ (ಮುಂಭಾಗ)	ದಕ್ಷಾಂಶ ಬಲಭಾಗ	ಮಧ್ಯಭಾಗ
ಪ್ರದ್ಯುಮ್ನ	ಅನಿರುದ್ಧ	ವಾಸುದೇವ	ಸಂಕರ್ಷಣ	ನಾರಾಯಣ
ಹರಿತ ವರ್ಣ	ನೀಲ ವರ್ಣ	ಬಿಳೀ ವರ್ಣ	ಪಿಂಗಳ ವರ್ಣ	ತರುಣಾರುಣವರ್ಣ

ಭೀಮಸೇತುಮುನಿಬೃಂದ ಮಠಾಧೀಶರಾದ
ಶ್ರೀಮತ್ಪರಮಹಂಸೇತ್ಯಾದಿ ಅಶೇಷ ಬಿರುದಾಲಂಕೃತ
ಶ್ರೀಮದಚ್ಯುತ ಪ್ರೇಕ್ಷಾಚಾರ್ಯರ ಸಂಸ್ಥಾನ
ಶ್ರೀ ಶ್ರೀ ಸತ್ಯತೀರ್ಥ ಶ್ರೀಗಳವರ ಶುಭ ಸಂಪ್ರದಾಯ ಪ್ರವರ್ತಕ



೧೦ಲ ಶ್ರೀ ಶ್ರೀ ರಘುಕುಲತಿಲಕ ತೀರ್ಥ ಶ್ರೀಪಾದಂಗಳವರು
ಭೀಮನಕಟ್ಟೆ, ತೀರ್ಥಹಳ್ಳಿ ತಾ॥

Sri Madhvacharya Peetam,
Paryaya Sri Kaniyoor Mutt, Car Street,
Udipi (S.K.)

Dated : 15–12–1966

ಶ್ರೀಕೃಷ್ಣಮಠ ಪರ್ಯಾಯಪೀಠಸ್ಥ ಶ್ರೀಸರ್ವಜ್ಞಾಚಾರ್ಯರವರ
ಸಿಂಹಾಸನಾಧಿರೂಢ ಶ್ರೀ ಶ್ರೀ ಕಾಣಿಯೂರು ಮಠ
ಉಡುಪಿ ಇವರಿಂದ ಅನುಗ್ರಹಿಸಿದ

ಶುಭಾಶಂಸನ ಪ್ರಸ್ತಾವನೆ

ಶ್ರೀ ಮುಖ

ಸಂಸ್ಥಾನದ ಮೊಹರು



ಶ್ರೀ ಉಡುಪಿ ದ. ಕ.

॥ ಶ್ರೀ ಲಕ್ಷ್ಮೀನೃಸಿಹ್ಮ ಶ್ರೀಃ ॥

ಸ್ವಸ್ತಿ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯತ್ವಾದ್ಯನೇಕ ಗುಣಸಂಪನ್ನ, ಪದವಾಕ್ಯಪ್ರಮಾಣ ಪಾರವಾರ ಪಾರೀಣ, ಸರ್ವತಂತ್ರ ಸ್ವತಂತ್ರ, ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನಧಾರಣ ಸಮಾಧ್ಯಷ್ಟಾಂಗ ಯೋಗನಿರತ, ಸಕಲ ಸುರವರನಿಕರ ಮಣಿಮಯಮುಕುಟ ಪ್ರಭಾಪೂಜರಂಜಿತ, ಶ್ರೀಮದ್ರಜತಪೀಠ ಪುರಾಧೀಶ,

ಶ್ರೀಮದ್ಭೈಷ್ಮೀ ಸತ್ಯಾ ಸಮೇತ ಶ್ರೀಮತ್ ಕೃಷ್ಣ ದಿವ್ಯ ಪಾದಪದ್ಮಾರಾಧಕ, "ಶ್ರೀಮದಾನಂದತೀರ್ಥಾಚಾರ್ಯ" ವರಮತೋದ್ಧಾರಕ, ಶ್ರೀಮದ್ರಾಮತೀರ್ಥಾಚಾರ್ಯ ಶುಭ ಸಂಪ್ರದಾಯ ಪ್ರವರ್ತಕ, ಶ್ರೀ ಶ್ರೀಮದ್ವಿದ್ಯಾಸಮುದ್ರ ತೀರ್ಥ ಶ್ರೀಪಾದವರೇಣ್ಯ ಕರಕಮಲ ಸಂಜಾತ, ಶ್ರೀ ೧೦೮ ಶ್ರೀಮದ್ವಿದ್ಯಾವಾರಿನಿಧಿತೀರ್ಥ ಶ್ರೀಪಾದಂಗಳವರು, ಅಸ್ಮತ್ಸಂಸ್ಥಾನೋಪರಿ ಮುಖ್ಯಾಭಿಮಾನಿಗಳಾದ ಪಂಡಿತ ಮಾರ್ತಾಂಡ, ವೇದಾಂತ ವಿಶಾರದ ಶಾಸ್ತ್ರರತ್ನಂ, ಇತ್ಯಾದಿ ಬಿರುದಾಂಕಿತ, ಚೀಮನಹಳ್ಳೀ ರಘುನಾಥಾಚಾರ್ಯರಿಗೆ ಕೃತಾನೇಕ ಶ್ರೀಮನ್ನಾರಾಯಣ ಸ್ಮರಣಾನಿ.

ನಮ್ಮ ಸಂಸ್ಥಾನಕ್ಕೆ ಮುಖ್ಯಾಭಿಮಾನಿಗಳಾದ ಪಂಡಿತ ಮಾರ್ತಾಂ ಇತ್ಯಾದಿ ಬಿರುದಾಂಕಿತರಾದ ಚೀಮನಹಳ್ಳಿ ರಘುನಾಥಾಚಾರ್ಯರು ಆಸ್ಥಾ ಮಹಾ ವಿದ್ವಾಂಸರು. ನಮಗೆ ಕಳೆದ ೧೫-೨೦ ವರ್ಷಗಳಿಂದ ವಿಶೇ ಪರಿಚಿತರು.

ಇವರು ನಮ್ಮ ಪೂಜ್ಯ ಗುರುಗಳಿಂದಲೂ, ಪುತ್ತಿಗೆಮಠ ಮೊದಲಾ ಇತರ ಶ್ರೀಪಾದಂಗಳವರಿಂದಲೂ ಆಗಾಗ ಉಡುಪಿ ಕ್ಷೇತ್ರಕ್ಕೆ ಬಂದು ತಮ ಶಾಸ್ತ್ರ ಪಾಂಡಿತ್ಯ, ಉಪನ್ಯಾಸಾದಿಗಳನ್ನು ಮಾಡಿ, ವಿಶೇಷವಾಗಿ ಸನ್ಮಾನಿ ರಾಗಿರುತ್ತಾರೆ.

ಇವರು ಬಾಲ್ಯದಿಂದಲೂ ಸಂಸ್ಕೃತ ಸಾಹಿತ್ಯ, ವೇದಾಂತ ಶಾಸ್ತ್ರಾ ಗಳನ್ನು ತನ್ನ ತಂದೆಯವರಾದ ವಿದ್ವದ್ವರೇಣ್ಯ ಚೀಮನಹಳ್ಳೀ ಕೃಷ್ಣಾ ಚಾರ್ಯರಲ್ಲಿಯೇ ಕ್ರಮವಾಗಿ ವ್ಯಾಸಂಗಮಾಡಿ ರಹಸ್ಯ ಪ್ರಮೇಯಗ ನ್ನೆಲ್ಲಾ ತಿಳಿದಿರುತ್ತಾರೆ.

ಅಲ್ಲದೆ ಸದ್ಭಕ್ತಿದರ್ಪಣ, ಮರುಚ್ಛಾಸ್ತ್ರ ಸಾರಸಂಗ್ರಹ ಮೊದಲಾ ಪ್ರೌಢಗ್ರಂಥಗಳನ್ನು ಸುಲಭ ಶೈಲಿಯಲ್ಲಿ ಸಂಸ್ಕೃತದಲ್ಲಿಯೂ ಕನ್ನಡ ಭಾ

ಯಲ್ಲಿಯೂ ವಿರಚಿಸಿದಿದಲ್ಲದೆ "ಸರ್ವಜ್ಞ ಸಂದೇಶ"ವೆಂಬ ಉತ್ತಮರೀತಿಯ ಮಾಸಪತ್ರಿಕೆಯುನ್ನು ಶಾಸ್ತ್ರಪ್ರಮೇಯ ಪ್ರಮಾಣಗಳಿಂದ ಕೂಡಿದ ಸರ್ವಜ್ಞಾಚಾರ್ಯರ ಸಿದ್ಧಾಂತವನ್ನು ಪ್ರಚಾರಮಾಡಿ ಬಾಲಕರಿಗೂ, ಸ್ತ್ರೀಯರಿಗೂ, ವಿದ್ವಾಂಸರಿಗೂ, ಉಪಯುಕ್ತ ವಿಷಯಗಳನ್ನು ಪ್ರಕಟಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿರುತ್ತಾರೆ.

ಇವರು ಕನ್ನಡ ಮತ್ತು ಸಂಸ್ಕೃತದಲ್ಲಿ ಸಾಮಾನ್ಯತಃ ಎಲ್ಲರಿಗೂ ತಿಳಿಯುವಂತೆ, ಪೌರಾಣಿಕ ಇತಿಹಾಸಗಳಿಂದ ಆರಿಸಿ ಏಕತ್ರ ಸಂಗ್ರಹಿಸಿದ ವಿಷಯಗಳನ್ನೊಳಗೊಂಡ ''ಬದರೀಕ್ಷೇತ್ರ, ಗಯಾಕ್ಷೇತ್ರ ಮಹಾತ್ಮ್ಯೆಗಳೂ, ಪಿತೃಭಕ್ತಿ, ಪಂಚಾಖ್ಯಾನಂ, ಅಧ್ಯಾತ್ಮಾಮೃತನಿಧಿ' ಮೊದಲಾದ ಉತ್ಕೃಷ್ಟಗ್ರಂಥಗಳನ್ನು ಸರಳವಾದ ಕನ್ನಡದಲ್ಲಿ ಬರೆದು ಬಹುದ್ರವ್ಯ ವೆಚ ಮಾಡಿ, ಮುದ್ರಿಸಿದ್ದು ಬಹು ಸ್ತುತ್ಯವು. ಇವುಗಳನ್ನು ನಾವು ಆಮೂಲಾಗವಾಗಿ, ಓದಿ ಸಂತುಷ್ಟರಾಗಿರುತ್ತೇವೆ.

''ಶ್ರುತ್ಯರ್ಥ ಸ್ತುತಿಶತಕಂ'', ವೇದವ್ಯಾಸ ಪಂಚಕಂ, ಶ್ರೀಭಾರತೀಶ ಕರಾವಲಂಬನಸ್ತೋತ್ರಂ, ಶ್ರೀರಾಮ ದೇವರಸ್ತುತಿ, ಇತ್ಯಾದಿ ಸ್ತೋತ್ರಗಳನ್ನು ಮಾಡಿದ್ದು ಸ್ತುತ್ಯಾರ್ಹವು ಶ್ರೀ ಶ್ರೀನಿವಾಸ ಶರಣಾಗತಿ ಸ್ತುತಿ ಶತಕಂ, ಗುರುಗಳ ವೈಭವ ಮೊದಲಾದ ಅನೇಕ ಸ್ತೋತ್ರಗಳನ್ನು ಮಾಡಿದ್ದು ಸ್ತುತ್ಯರ್ಹವು. ಅವುಗಳನ್ನು ನಾವು ನೋಡಿದ್ದೇವೆ. ಓದಿಸಿ ಕೇಳಿದ್ದೇವೆ; ಮತ್ತು ಅವುಗಳನ್ನು ತಿಳಿದು ಆನಂದಪಟ್ಟಿದ್ದೇವೆ.

ಪ್ರಕೃತ ''ಅಧ್ಯಾತ್ಮಾಮೃತನಿಧಿಯ'' ಎರಡನೆಯ ಭಾಗವಾದ ಈ ''ಅಧ್ಯಾತ್ಮರಸರಂಜನೀ'' ಎಂಬ ಈಗ ಮುದ್ರಣವಾಗುತ್ತಿರುವ ಗ್ರಂಥವು ಪ್ರಸ್ಥಾನತ್ರಯದಲ್ಲಿರುವ ಪ್ರಮೇಯಗಳು, ಅನೇಕ ಪ್ರಾಚೀನಾಚಾರ್ಯರು, ಸಂಗ್ರಹಿಸಿರುವ ಸಂಸ್ಕೃತ ಭಾಷೆಯಲ್ಲಿರುವ ಪ್ರಮೇಯಗಳನ್ನೆಲ್ಲಾ ಒಳಗೊಂಡಿದೆ. ಇಂತಹ ಉತ್ತಮಕೃತಿಗೆ ನಾವು ಈ ಪ್ರಸ್ತಾಪನೆಯ ಶ್ರೀಮುಖ ಪತ್ರವನ್ನು ಬರೆದು ಫಲಮಂತ್ರಾಕ್ಷತೆಯನ್ನಿತ್ತು, ಇವರ ಸ್ತುತ್ಯಕಾರ್ಯಕ್ಕೆ ಸಂತೋಷಪಟ್ಟು, ವಯೋವೃದ್ಧರೂ, ಜ್ಞಾನವೃದ್ಧರೂ, ಆದ ಇವರು

ಇಂತಹ ಉತ್ತಮ ಗ್ರಂಥಗಳನ್ನು ಇನ್ನು ಮುಂದೆಯೂ ಬರೆ
ಲೋಕೋಪಕಾರಮಾಡಲಿ ''ಎಂದು ನಮ್ಮ ಉಪಾಸ್ಯಮೂರ್ತಿ ಶ್ರೀಕೃಷ್ಣ
ಲಕ್ಷ್ಮೀನರಸಿಹ್ಮದೇವರು ಇವರಿಗೆಆಯುರಾರೋಗ್ಯ, ಜ್ಞಾನ ಭಕ್ತಿಗಳನ್ನ
ಕೊಟ್ಟು ಐಹಿಕಾಮುಷ್ಮಿಕ ಫಲಗಳನ್ನು ಅನುಗ್ರಹಿಸಲಿ" ಎಂದು ನಾ
ಸಂಪ್ರಾರ್ಥಿಸುತ್ತೇವೆ.

ಇತಿ,

ನಾರಾಯಣಸ್ಮರಣೆಗಳು.

(Sd.) विद्यावारिनिधितीर्थाः

ಶ್ರೀ ಪರ್ಯಾಯ ಪೀಠಾಧಿರೂಢರಾದ ಶ್ರೀ ಕಾಣಿಯೂರುಮಠ

ಸಂಸ್ಥಾನಾಧಿಪತಿಗಳು.

ಶ್ರೀ ಶ್ರೀ ವಿದ್ಯಾವಾರಿನಿಧಿತೀರ್ಥ ಶ್ರೀಪಾದಂಗಳವರು

Vedantha Vachaspathy,
A. Narayana Tantri
Dwita Vedantha Vidwan & Siromani
Astana Vidwan,
Paryaya Sri Kaniyoor Mutt.

"Sri Guru Prasad"
Kunjavittu
UDIPI

13–12–1966

ಪ್ರಶಸ್ತಿ ಪತ್ರಿಕಾ

ಜಯತಿ ಶ್ರೀರಮಾಕಾಂತಃ ಜಯತಿ ಶ್ರೀಶ್ಚ ತತ್ಪ್ರಿಯಾ ।
ಶ್ರೀ ಶ್ರೀಶಭಕ್ತೋ ಜಯತಿ ಮಧ್ವೋವಿಧ್ವಸ್ತಸಾಧ್ವಸಃ ॥

ಶಾಸ್ತ್ರ ರತ್ನಂ, ವೇದಾಂತ ವಿಶಾರದ, ಪಂಡಿಮಾರ್ತಾಂಡ, ಸಾಹಿತ್ಯ ರತ್ನಂ, ತತ್ವಚಿಂತಾಮಣಿ, ಜ್ಞಾನಗುಣಾಕರ ಉಗನಿಷದ್ರತ್ನಾಕರ ಇತ್ಯಾದಿ ಬಿರುದಾಂಕಿತರೂ, ನಮಗೆ ಪರಮಪ್ರಿಯರೂ, ಮಹಾ ವಿದ್ವಾಂಸರೂ ಆದ ಚೀಮನಹಳ್ಳಿ ರಘುನಾಥಾಚಾರ್ಯರು ಬಹುಕಾಲದಿಂದ ಧಾರ್ಮಿಕ ಸಚ್ಛಾಸ್ತ್ರಗಳನ್ನು ರಚಿಸಿ ನಮ್ಮ ನಾಡಿಗೆ ಧಾರ್ಮಿಕ, ಲೌಕಿಕ ವೈದಿಕ ಸದ್ಭಕ್ತರಿಗೆ ಬಹು ಉಪಕರಿಸಿರುತ್ತಾರೆ. ಇವರಿಗೆ ಸಂಸ್ಕೃತದಲ್ಲಿಯೂ ಕವಿತಾ ಸಾಮರ್ಥ್ಯವಿದೆ. ಕೆಲವು ಸ್ತೋತ್ರಗಳನ್ನು ರಚಿಸಿರುತ್ತಾರೆ.

ಸಚ್ಛಾಸ್ತ್ರಗಳನ್ನು ನಿರೂಪಿಸುವುದಕ್ಕಾಗಿಯೇ ಅಲ್ಲಲ್ಲಿ ಉಪನ್ಯಾಸಾದಿಗಳನ್ನು ಮಾಡುತ್ತಾ ಜನರನ್ನು ರಂಜಿಸುತ್ತಿರುತ್ತಾರೆ. ಇಂತಹವರು ಕಳುಹಿಸಿಕೊಟ್ಟವುಗಳಲ್ಲಿ "ಶ್ರೀಮರ್ಮ ಮರುಚ್ಛಾಸ್ತ್ರ ಸಾರಸಂಗ್ರಹ", "ಸದ್ಭಕ್ತಿ ದರ್ಪಣಂ" ಎಂಬ ಸಂಸ್ಕೃತ ಗ್ರಂಥಗಳು, ''ಬದರೀ ಕ್ಷೇತ್ರ ಮಾಹಾತ್ಮ್ಯ, ಗಯಾಕ್ಷೇತ್ರ ಮಾಹಾತ್ಮ್ಯ, ಪಂಚಾಖ್ಯಾನಂ, ಪಿತೃಭಕ್ತಿ, ಅಧ್ಯಾತ್ಮಾಮೃತನಿಧಿ" ಎಂಬ ಕನ್ನಡ ಗ್ರಂಥಗಳೂ ಇವುಗಳನ್ನೆಲ್ಲಾ ಓದಿನೋಡಿ ನನಗೆ ಪರಮ ಸಂತೋಷವಾಯಿತು. ಸಂಸ್ಕೃತ ಭಾಷೆಯಲ್ಲಿರತಕ್ಕ ಪ್ರೌಢ ಗ್ರಂಥಗಳಿಂದ ಅನೇಕ ಸಮೀಚೀನ ವಿಷಯಗಳನ್ನು ಸಂಗ್ರಹಿಸಿ, ಸಂಸ್ಕೃತ ಗ್ರಂಥಗಳನ್ನು ತಿಳಿಯದಿದ್ದವರಿಗೂ, ಸುಲಭವಾಗಿ ಸರಳ ಕನ್ನಡ ಭಾಷೆ

ಯಲ್ಲಿ ತಿಳಿಯುವಂತೆ ಅನೇಕ ಪ್ರಮಾಣಗಳನ್ನು ಉದಾಹರಿಸಿ, ಅವು
ಸಾರಾಂಶವನ್ನು ಕನ್ನಡ ಭಾಷೆಯಲ್ಲಿ ಅನುವಾದಮಾಡಿರುತ್ತಾರೆ. ದಶೋ
ನಿಷತ್ತು ಅವುಗಳ ಭಾಷ್ಯ, ಸೂತ್ರಭಾಷ್ಯ, ಗೀತಾಭಾಷ್ಯ, ಗೀತಾತಾತ್ಪ
ಅನುವ್ಯಾಖ್ಯಾನ ಮೊದಲಾದ ಶ್ರೀಮದಾಚಾರ್ಯರ ಮೂಲಗ್ರಂಥಗಳನು
ಅವುಗಳನ್ನನುಸರಿಸಿರುವ ಪೂರ್ವಾಚಾರ್ಯರುಗಳು ಸಂಗ್ರಹಿಸಿರುವ ಅನೆ
ಪ್ರಮೇಯ ಗ್ರಂಥಗಳ ಸಾರವನ್ನೂ ಏಕತ್ರ ಕೇಂದ್ರೀಕರಿಸಿ ಬರೆದಿ
ಬಹಳ ಸಂತೋಷಕರ. ಬಹುಧಾ ಸ್ತುತ್ಯರ್ಹವು.

ಈ ಎಲ್ಲಾ ಗ್ರಂಥಗಳ ವಿಷಯದಲ್ಲಿ ಅನೇಕ ಸಂಸ್ಥಾನಾಧಿಪತಿಗಳ
ಬಹು ಪಂಡಿತವರೇಣ್ಯರೂ ಭಗವದ್ಭಕ್ತರಾದ ಅನೇಕ ಲೌಕಿಕ ರಾಜಕಾರ
ಗಳೂ ತಂತಮ್ಮ ಅಭಿನಂದನಾ ಪುರಸ್ಕರ ಅಭಿಪ್ರಾಯ ವಿಶೇಷಗಳನ
ಕಳುಹಿಸಿರುವುದು ಮಾತ್ರವಲ್ಲದೆ, ಅನೇಕ ಪತ್ರಿಕೆಗಳಲ್ಲಿ ವಿಮರ್ಶೆ ಮಾಡಿದ
ಬಹು ಸ್ತುತ್ಯವು.

ಈ ಸಂಸ್ಕೃತ ಗ್ರಂಥಗಳ ಶೈಲಿಯು ಪ್ರೇಕ್ಷಾವಂತರ ಶೈಲಿಯಂತೆ ಇರ
ಪ್ರಾಚೀನ ಪದ್ಧತಿಯನ್ನು ಬಿಡದೆ, ಆಧುನಿಕ ಜನರಿಗೂ ಸುಬೋಧವಾಗ
ವಂತೆ ಬರೆಯಲ್ಪಟ್ಟವೆ. ನಮ್ಮ ಸಿದ್ಧಾಂತಕ್ಕೆ ಸ್ವಲ್ಪವೂ ವಿರೋಧವಿಲ್ಲದೆ, ಪ
ಮತೀಯರ ಮನಸ್ಸನ್ನು ಸ್ವಲ್ಪವೂ ನೋಯಿಸದಂತೆ ಶ್ರೀಮದಾಚಾರ್ಯ
ಸಿದ್ಧಾಂತವನ್ನು ಎತ್ತಿ ತೋರಿಸಿರುತ್ತಾರೆ.

ಇವರು ಆಸೇತು ಹಿಮಾಚಲಪರ್ಯಂತ ಕ್ರಮವಾಗಿ ಅನೇಕ ವಷ
ಗಳಲ್ಲಿ ತೀರ್ಥಯಾತ್ರೆಮಾಡಿ ಬದರೀಕ್ಷೇತ್ರ, ಗಯಾಕ್ಷೇತ್ರ ಮೊದಲಾ
ಕ್ಷೇತ್ರಗಳ ಮಹಿಮೆಗಳನ್ನು ಅನೇಕ ಪುರಾಣ, ಸಂಹಿತಾ, ಇತಿಹಾ
ಮೊದಲಾದ ಗ್ರಂಥಗಳ ಆಧಾರದಿಂದ ಬರೆದಿರುತ್ತಾರೆ. ಪಂಚಾಖ್ಯಾನ
ಪಿತ ಭಕ್ತಿ ಎಂಬ ಎರಡು ಗ್ರಂಥಗಳು ಪದ್ಮಪುರಾಣದ ಸೃಷ್ಟಿ ಖಂಡದಿಂ
ಆರಿಸಿ ಸ್ತ್ರೀಬಾಲಕರನ್ನಾರಂಭಿಸಿ ಸರ್ವ ಸದ್ಭಕ್ತರಿಗೂ, ಸ್ವರ್ಗ, ಮೋ
ಗಳನ್ನು ಪಡೆಯಲು ಉಪಯುಕ್ತವಾಗುವಂತೆ, ಕನ್ನಡದಲ್ಲಿ ಅನುವಾ
ಸಲ್ಪಟ್ಟವೆ.

"ಈ ರೀತಿಯಾಗಿ ತಮ್ಮ ೭೦ನೇ ವಯಸ್ಸಿನಲ್ಲಿಯೂ ಗ್ರಂಥಗಳನ್ನು ಬರೆದು ಜನರಿಗೆ ಬಹು ಉಪಕಾರಮಾಡುತ್ತಿರುವ ಈ ಆಚಾರ್ಯರಿಗೆ ದೀರ್ಘಾಯುಷ್ಯತ್ ಸುಗುಣ ಸುಪುತ್ರ ಆಯುರಾರೋಗ್ಯಾದಿ ಐಶ್ವರ್ಯಾದಿ ಗಳನ್ನು ಕೊಟ್ಟು, ಮೋಕ್ಷಾದಿ ಪುರುಷಾರ್ಥಗಳನ್ನು ಶ್ರೀ ಹರಿ ವಾಯುಗಳು ಅನುಗ್ರಹಿಸಲಿ". "ಇನ್ನು ಮುಂದೆಯೂ ಜನರಿಗೆ ಉಪಕಾರವಾಗುವಂತೆ ರಚಿಸಿರುವ ಅನೇಕ ಗ್ರಂಥಗಳು ಜಾಗ್ರತೆಯಾಗಿ ಹೊರಬರುವಂತೆ ಮಾಡಿ ಸುತ್ತಾ, ಇಂತಹ ಅನೇಕ ಸತ್ಕಾರ್ಯಗಳನ್ನು ಮಾಡಿಸಲಿ" ಎಂದು ಶ್ರೀ ಮುಖ್ಯಪ್ರಾಣಾಂತರ್ಗತ ರುಕ್ಮಿಣೀ ಸತ್ಯಭಾಮಾ ಸಮೇತ ಶ್ರೀ ಗೋಪಾಲ ಕೃಷ್ಣನನ್ನು ನಿರಂತರ ಪ್ರಾರ್ಥಿಸುತ್ತೇನೆ.

ಶ್ರೀಶಸ್ತೇ ಸುಶ್ರಿಯಂ ದದ್ಯಾತ್ ಆಯುರ್ವಾಯುಸುತಪ್ರಿಯಃ ।
ಭೂಮಿಂ ತೇ ವಾಮನೋ ದದ್ಯಾದರೀ್ ಹಂತು ನೃಕೇಸರೀ ॥

(Sd.) **A. Narayana Tantri**

(ಅಗ್ರಹಾರ ನಾರಾಯಣ ತಂತ್ರಿ,)
ವಿದ್ವಾನ್ ಶಿರೋಮಣಿ, ನಿವೃತ್ತ ವೇದಾಂತ ಪ್ರಧಾನ ಪಂಡಿತ,
ಸಂಸ್ಕೃತ ಕಾಲೇಜು ಉಡುಪಿ,
ಪಂಡಿತ ಆಯುರ್ವೇದ ಕಾಲೇಜು.
ಶ್ರೀ ಶೀರೂರುಮಠ, ಶ್ರೀಕೃಷ್ಣ ಪರ್ಯಾಯಪೀಠಸ್ಥ
ಶ್ರೀ ಕಾಣಿಯೂರು ಮಠದ. ಆಸ್ಥಾನ ಮಹಾವಿದ್ವಾನ್,
ಉಡುಪಿ ದ. ಕನ್ನಡ.

॥ ಶ್ರೀಃ ॥

ಸಚ್ಛಾಸ್ತ್ರರತ್ನಂ ಶ್ರೀಮಾನ್ ಚೀಮನಹಳ್ಳಿ ರಘುನಾಥಾಚಾ
ನನಗೆ ಚಿರಪರಿಚಿತರು. ಅವರು ಪೌರ್ವಾತ್ಯ ಪಾಶ್ಚಾತ್ಯ ಉಭಯ
ವಿಶಾರದರು. "ಇದಂ ಬ್ರಾಹ್ಮಂ-ಇದಂ ಕ್ಷಾತ್ರಂ" ಎಂಬಂತೆ ಲೌ
ವ್ಯವಹಾರ ಮತ್ತು ವೈದಿಕ ಧರ್ಮ ಸಂಪ್ರದಾಯಗಳಲ್ಲಿ ನಿಷ್ಠಾವಂತ
ಗಳು. ಸದ್ವಂಶ ಪರಂಪರೆಯಿಂದ ರಕ್ತಗತವಾಗಿ ಬಂದ ಸಾತ್ವಿಕ
ಯುಳ್ಳವರು ವಿಖ್ಯಾತ ಪಂಡಿತರು. ಸದಾಚಾರ ಸಂಪನ್ನರು. ಅವ
೭೦ರ ಹರಯದ ಗಡಿಯಲ್ಲಿದ್ದರೂ, "ವೃದ್ಧೋಽಪಿ ತರುಣಾಯತೇ" ಎಂ
ಶಾಸ್ತ್ರದೊಳಗಣ ಅಮೂಲ್ಯ ತತ್ವ ರತ್ನಗಳನ್ನು ಶ್ರಾದ್ಧಾಳು ಜನತೆಗೆ
ಕಿಸುವ ಉದ್ದೇಶದಿಂದ, ನಾನು ತಿಳಿದಂತೆ ಈಗಾಗಲೇ ೧೯ ಗ್ರಂಥಗಳ
ಬರೆದು ಮಹೋಪಕಾರ ಮಾಡುತ್ತಿದ್ದಾರೆ, ನಾನು ಓದಿದ ಅವರ ಕೃತಿ
ಪೈಕಿ ''ಅಧ್ಯಾತ್ಮಾಮೃತನಿಧಿ"ಯು ಆಧ್ಯಾತ್ಮಿಕ ಪ್ರವೃತ್ತಿಯಲ್ಲಿ ನಿರತ
ಬಯಸುವವರಿಗೆ ಅತ್ಯಂತೋಪಕಾರಿಯಾಗಿದೆ. ''ಪಂಚಾಖ್ಯಾನಂ" ಮ
''ಪಿತೃಭಕ್ತಿ'' ಇವು ಎಳೆಯರನ್ನು ಸನಾತನ ಸದ್ಗುಣಗಳತ್ತ ಕಡೆ
ದೊಯ್ಯಲುಯ್ಯಾಲೆಯಂತಿರುವುದು ಎಂದು ಹಾರ್ದಿಕವಾಗಿ ಹೇಳಬ
ಒಟ್ಟಾರೆ ಸಚ್ಛಾಸ್ತ್ರಮಹೋದಧಿಯಲ್ಲಿ ಮುಳುಗಿ ಹುಡುಕಿ. ವಿಮರ್ಶಿ
ಸಮಾಜಕ್ಕೆ ಅತ್ಯುಪಯುಕ್ತ ಅಮೂಲ್ಯ ರತ್ನಗಳನ್ನು ಆಯ್ದು ಕೊಡುವ ಅ
ಔದಾರ್ಯ ಮತ್ತು ಜಾಣ್ಮೆ, ಸರ್ವಥಾ ಪ್ರಶಂಸನೀಯ. ಅವರು ಧೀರ್ಘ
ಯುರಾರೋಗ್ಯಾದಿ ಭಾಗ್ಯವಂತರಾಗಿ ಬಹುಕಾಲ ಬಹುಮುಖ ಸಮಾ
ಸೇವೆ, ತದ್ವಾರಾ ಹರಿಗುರು ಸೇವೆಯನ್ನು ಮಾಡುತ್ತಾ ಇರುವಂತೆ ಶ್ರೀ
ಗುರುಗಳ ಪರಿಪೂರ್ಣಾನುಗ್ರಹವು ಅವರಿಗುಂಟಾಗಲೆಂದು ಹಾರೈಸುತ್ತೇ

ಇತಿ,

ಶ್ರೀ ವೇ. ಸುಬ್ರಾಯ ಪುರಾಣಿಕ.

ಪಂಡಿತ,

ದ್ವೈತ ವೇದಾಂತ ಸಂಸ್ಕೃತ ಮಹಾ ಪಾಠಶಾ

ಉಡುಪಿ.

ಉಡುಪಿ
೧೫-೧೨-೧೯೬೬

ನಮ್ಮ ಗ್ರಂಥಪ್ರಚಾರಕ್ಕೆ ಮಹಾಪೋಷಕರಾದ

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯೇತ್ಯಾದ್ಯಶೇಷಬಿರುದವೃಂದವಿಭೂಷಿತರಾದ

ಶ್ರೀಮದುಡಪೀಕೃಷ್ಣಪೂಜಾಪರ್ಯಾಯ ಮಠದ

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರವರ ಸಿಹ್ಮಾಸನಾಧಿರೂಢ



ಶ್ರೀಕಾಣಿಯೂರು ಮಠಾಧೀಶ

ಶ್ರೀಶ್ರೀ ೧೦೮ ಶ್ರೀವಿದ್ಯಾವಾರಿನಿಧಿತೀರ್ಥ ಶ್ರೀಪಾದಂಗಳವರು

|| ಶ್ರೀ ಗುರುಭ್ಯೋನಮಃ ||

ಅಧ್ಯಾತ್ಮಾಮೃತ ನಿಧಿ

ಎರಡನೆಯ ಭಾಗ

ಕೃಷಿಕಾರನು (ರೈತನು) ಕ್ಷೇತ್ರ (ಹೊಲ)ದಲ್ಲಿ ಯಾವ ವಿಧವಾದ ಬೀಜವನ್ನು ಬಿತ್ತುತ್ತಾನೆಯೋ ಆ ವಿಧವಾದ ಫಲವನ್ನು ಪಡೆದು ಅನುಭವಿಸುತ್ತಾನೆ. ಅದರಂತೆ ಯಾವ ವಿಧ ಕರ್ಮವನ್ನು ಈ ಜೀವನು ಮಾಡುತ್ತಾನೆಯೋ ಅದಕ್ಕೆ ತಕ್ಕ ಫಲವನ್ನು ಅನುಭವಿಸಲೇಬೇಕು. "ಯಾರು ಮಕ್ಕಳು? ಯಾರು ಮಿತ್ರರು? ಯಾರು ಸ್ವಜನರು? ಯಾರು ಬಂಧುಗಳು? ಎಂಬುದನ್ನರಿತು ಸುಖದುಃಖಗಳನ್ನು ತ್ಯಜಿಸಿ ಶಾಂತತೆಯನ್ನು ಹೊಂದಬೇಕು.

ಮಹಾತ್ಮರಾದ ಪಂಡಿತರು ತತ್ವಜ್ಞಾನದಿಂದ ಪರಾರ್ಥ ವಿಷಯದಲ್ಲಿ ವ್ಯರ್ಥವಾಗಿ ಚಿಂತೆಯನ್ನು ಹಚ್ಚಿಕೊಂಡು ವ್ಯಸನಪಡುವುದಿಲ್ಲವು. ಪಂಚಭೂತಾತ್ಮಕವಾದ ಕೇವಲ ಸಂಧಿ ಜರ್ಜರವಾದ ಕಾಯ (ದೇಹ)ವನ್ನು ಆತ್ಮನು ಮಿತ್ರನನ್ನಾಗಿ ಮಾಡಿಕೊಂಡನು.

ಆತ್ಮನೆಂಬುವನು ಮಹಾ ಪುಣ್ಯವುಳ್ಳವನು. ಸರ್ವತ್ರ ಇರುವನು. ಸರ್ವ ದರ್ಶಕನು, ಸರ್ವ ಸಿದ್ಧಿಯುಳ್ಳವನು, ಸರ್ವಾತ್ಮನೂ, ಸಾಕ್ಷಿಕನೂ, ಸರ್ವ ಸಿದ್ಧಿಯನ್ನು ಕೊಡುವವನೂ ಹೀಗೆ ಸರ್ವಮಯನಾಗಿ, ನಿರಂಜನ (ದೋಷವಿಲ್ಲದವ)ನಾಗಿ ಏಕಾಂಗಿಯಾಗಿ ಸಂಚರಿಸುತ್ತಿರುವನು. ಹೀಗೆ ನಿರ್ಜನ ವನದಲ್ಲಿ ಅಲೆದಾಡುತ್ತಿರುವಾಗ ಮಹೋಜಸ (ಪರಾಕ್ರಮ ಮತ್ತು ಕಾಂತಿವಂತ)ರೂ, ಬುದ್ಧಿವಂತರೂ, ಪುಣ್ಯಾತ್ಮರೂ ಆದ ನಾಲ್ಕು ಜನರು ಮೂರ್ತಿವಂತರಾಗಿ ಬಂದು, ಇವರಿಗೆ ಮಿತ್ರನಾದ ವಾಯು (ಶ್ವಸನ)ವನ್ನು ಕಂಡು ಈ ರೀತಿ ಐವರನ್ನು ನೋಡಿದನು.

ಅನಂತರ ಮಹಾತ್ಮನಾದ ಆತ್ಮನು ಜ್ಞಾನ ಸಾಹಾಯವುಳ್ಳವನಾಗಿ, ಅವರನ್ನು ಕಂಡು—"ಇವರು ಪರಸ್ಪರ ಏನೋ ಆಲೋಚನೆ ಮಾಡುತ್ತಿದ್ದಾರೆ; ಇವರನ್ನು ನೋಡು. ಈಗ ನನ್ನ ಮಾತಿನಂತೆ ಅವರಲ್ಲಿ ಹೋಗಿ

"ನೀವು ಯಾರು? ಎಂದು ಕೇಳು" ಎಂದು ಜ್ಞಾನವನ್ನು ಕುರಿ
ಹೇಳಿದನು.

ಆಗ ಜ್ಞಾನವು, ಅರ್ಥದಿಂದ ಕೂಡಿದ ಆ ಮಹಾತ್ಮನಾದ ಆತ್
ಮಾತನ್ನು ಕೇಳಿ ಆತನನ್ನು ಗೌರವಿಸಿ, ಆರಾಧಿಸಿ "ಅವರಿಂದ ನಿನಗೇ
ಪ್ರಯೋಜನ? ತತ್ವತಃ ಅವೆಲ್ಲವನ್ನೂ ಹೇಳು, ತಾವು ಸರ್ವದಾ ಶುದ್ಧರಾ
ರುವಿರಿ" ಎಂದು ನುಡಿದನು.

ಆತ್ಮಾ—"ಎಲೈ ಜ್ಞಾನನೇ, ಈ ಐದು ಜನರೂ ಮಹಾ ಪ್ರಾಜ್ಞರ
ರೂಪವಂತರು, ಮನಸ್ವಿ (ಸತಂತ್ರರು)ಗಳು. ಸ್ವಲ್ಪ ಕೇಳು ನಾನು ಹೋ
ಇವರನ್ನು ಕಂಡು ಸ್ವಲ್ಪ ಮಾತನಾಡಿಸುತ್ತೇನೆ. ಈ ಭವ್ಯರು ಮತ್ತು ಸಾ
ಕರಾದ ಇರ್ವನ್ನು ಶ್ವಸನನಿಂದ ಕೂಡಿ ಬಂದವರನ್ನು ವಿಚಾರಿಸುತ್ತೇನ
ಎಲೈ ಜ್ಞಾನನೇ, ನೀನು ದೂತ ಕರ್ಮದಲ್ಲಿ ಕುಶಲನು ನೀನು ಹೋ
ತಿಳಿದು ಬಾ." ಎಂದನು.

ಜ್ಞಾನವು—"ಹೇ ಆತ್ಮ, ನೀವು ಸ್ವಲ್ಪ ಕೇಳಿರಿ, ನಿಜವನ್ನು ಹೇಳ
ತ್ತೇನೆ. ಸತ್ಯವನ್ನು ಹೇಳುತ್ತೇನೆ. ಹೇ ತಾತ, ಇವರ ಸಂಗತಿ (ಸಹವಾಸ
(ಸಂಬಂಧ)ವನ್ನು ಎಂದಿಗೂ ಯಾವಾಗಲೂ ನೀವು ಮಾಡಬಾರದು. ಹೆ
ಮಹಾಮತಿಗಳೇ, ಶುದ್ಧಾತ್ಮರೇ, ಶುಭೇಚ್ಛುಗಳಾದ ತಮ್ಮಿಂದ ಈ ಐದ
ಜನರ ಸಂಗತಿಯು ನಿಮಗೆ ಈ ಮೋಹವು ಕವಿಯಲು ಇಚ್ಛಿಸುತ್ತದಷ್ಟೆ!
ಎಂದನು.

ಆತ್ಮಾ—"ಎಲೈ ಜ್ಞಾನವೇ, ನೀನು ಇವರ ಸಂಗತಿ ಬೇಡವೆಂದ
ಏತಕ್ಕೆ ಅಡ್ಡಿ ಪಡಿಸುತ್ತಿರುವಿ? ಎಲೈ ಪಂಡಿತನೇ, ಅದರ ಕಾರಣವನ್
ನಿಶ್ಚಯವಾಗಿ, ಯಥಾರ್ಥವಾಗಿ ಹೇಳು" ಎಂದನು.

ಜ್ಞಾನ—ಇವರ ಸಂಗ ಮಾತ್ರದಿಂದಲೇ ಮಹತ್ತರವಾದ ದುಃಖ
ಉಂಟಾಗುವುದು. ಈ ಐವರೂ ದುಃಖ ಮೂಲರು. ಶೋಕ ಸಂತಾಪಕಾರರು
ಇದು ನಿಜವು." ಎಂದನು.

"ಹೀಗೆಯೇ ಆಗಲಿ. ನಿನ್ನ ಮಾತನ್ನು ನಡೆಸುತ್ತೇನೆ. ಮಹಾ
ಪ್ರಾಜ್ಞನೇ" ಎಂದು ಜ್ಞಾನವನ್ನು ಕುರಿತು ಹೇಳಿ, ಆತ್ಮನು ಧ್ಯಾನದೊಡ
ಸಂಗತನಾದನು.

ಅನಂತರ ಆ ಐದು ಜನರೂ ಆ ಆತ್ಮನನ್ನು ಕಂಡರು. "ಬುದ್ಧಿ"ಯನ್ನು ಕರೆದು—"ನೀನು ಆತ್ಮನೊಡನೆ ಸೇರಲು, ಹೇ ಕಲ್ಯಾಣಿ, ದೂತತ್ವವನ್ನು ವಹಿಸು. "ಆ ಮಹಾಮತಿಯಾದ ಆತ್ಮನಲ್ಲಿ ಹೋಗಿ, ಇಡೀ ವಿಶ್ವಕ್ಕೇ ಧಾರಕರೂ, ಶುಭಪ್ರದರೂ, ಮಹಾತ್ಮರೂ ಆದ ಪಂಚ ತತ್ವಗಳೂ ನಿನ್ನೊಡನೇ ಸಂಗತರಾಗಲು ಮಿತ್ರತ್ವವನ್ನು ಇಚ್ಛಿಸುತ್ತಾರೆ" ಎಂದು ಹೇಳು. "ಎಲೈ ಬುದ್ಧಿಯೇ, ಈ ಕಾರ್ಯವು ಈಗಲೇ ನಿನ್ನಿಂದ ಮಾಡಲ್ಪಡಬೇಕು. ನೀನು ಈಗ ಹೋಗು" ಎಂದು ಹೇಳಿದರು.

ಬುದ್ಧಿಯು—"ಹಾಗೆಯೇ ಆಗಲಿ, ಪೂಜ್ಯರೇ, ಈ ಉತ್ತಮ ಕಾರ್ಯವನ್ನು ಮಾಡುವೆನು" ಎಂದು ಅವರಿಗೆ ಹೇಳಿ, ಆತ್ಮನನ್ನು ಕುರಿತು ಹೊರಟುಹೋದಳು. ಆತ್ಮನನ್ನು ಕುರಿತು ಬುದ್ಧಿಯು—ಪೂಜ್ಯನೇ, ಮಹಾತ್ಮನೇ, ನಾನು ಬುದ್ಧಿಯು. ಮಹಾತ್ಮರಾದ ತತ್ವರೈವರಿಂದ ದೂತತ್ವದಲ್ಲಿ ನಿಯೋಜಿತಳಾಗಿ ಅವರ ಕಡೆಯಿಂದ ತಮ್ಮ ಸಮೀಪಕ್ಕೆ ಬಂದಿದೇನೆ. ಅವರ ಮಾತನ್ನು ನೀನು ದಯಿವಿಟ್ಟು ಕೇಳು. ಆ ತೇಜಸ್ಸು ಮೊದಲಾದ ಐದು ತತ್ವಾಭಿಮಾನಿಗಳೂ ಅಕ್ಷಯವಾಗಿರತಕ್ಕ ನಿನ್ನ ಮೈತ್ರಿಯ (ಸ್ನೇಹವ)ನ್ನು ಇಚ್ಛಿಸುತ್ತಾರೆ. ಮಹಾ ಪ್ರಾಜ್ಞನೇ, ಮೈತ್ರ (ಪ್ರೇಮ–ಸ್ನೇಹ)ವನ್ನು ಮಾಡು. ಧ್ಯಾನವನ್ನು ಗೆಲ್ಲು; ಮೌನವನ್ನು ದೂರಮಾಡು" ಎಂದು ನುಡಿದಳು.

ಜ್ಞಾನವು—"ಎಲೈ ಆತ್ಮನೇ, ಇವರೊಡನೆ ಸರ್ವಥಾ ನಿನ್ನಿಂದ ಸಮಾಗಮವು ಮಾಡಲೇ ಬಾರದು. ಇವರ ಸಂಬಂಧವನ್ನು ನೀನು ಖಂಡಿತವಾಗಿ ಮಾಡಲೇ ಕೂಡದು. ಇವರ ಸಂಸರ್ಗಮಾತ್ರದಿಂದಲೇ ಮಹತ್ ದುಃಖವು ಉಂಟಾಗುವುದು. ನೀನು ನನಗಿಂತಲೂ ಜ್ಞಾನದಿಂದ ಕಡಿಮೆಯಾಗಿದ್ದಿ. ನೀನು ಹೇಗೆ ಕರ್ಮವನ್ನು ಮಾಡುವಿ? ಆದುದರಿಂದಲೇ ನೀನು ಇವರ ಸಮಾಗಮ (ಸಹಾಸ)ವನ್ನು ಮಾಡಲೇಕೂಡದು. ಅನ್ಯಥಾ, ನನ್ನ ಮಾತನ್ನು ಕೇಳದಿದ್ದರೆ; ಹೇ ವಿಭೋ, ನಿನಗೆ ಗರ್ಭವಾಸವಾಗುವುದು. ಜ್ಞಾನದಿಂದ ನನಗಿಂತ ಕಡಿಮೆ ಎಂದು ಮಾತ್ರವೇ ಅಲ್ಲ; ಜ್ಞಾನಹೀನನಷ್ಟೇ ಅಲ್ಲದೆ, ನಿಶ್ಚಯವಾಗಿಯೂ ಅಜ್ಞಾನವನ್ನೂ ಹೊಂದುವಿ." ಎಂದು ಹೇಳಿ, ಆ ಆತ್ಮನಿಗೆ ಬೋಧಿಸಿ, ಮಹಾಮತಿಯಾದ ಜ್ಞಾನವು, ಸುಮ್ಮನಾದನು.

ಆಗ ಹಾಗೆ ಬಂದಿದ್ದ ಬುದ್ಧಿಯನ್ನು ಕುರಿತು ಆತ್ಮನು ತನ್ನ ಸ
ವನ್ನು "ಎಲೈ ಶೋಭನೇ, ಮಂಗಳಾಂಗಿ, ನನಗೆ (ಈ ಆತ್ಮನಿಗೆ,)
ಮತ್ತು ಧ್ಯಾನರಿಬ್ಬರೂ ನನ್ನ ಕಲ್ಯಾಣ ಕಾಂಕ್ಷಿಗಳು. ನನ್ನ ಯೋಗ
ಚಿಂತಕರು. ಅಲ್ಲಿಗೆ ನಾನು ಬರುವುದು ನನಗೆ ಯುಕ್ತವಲ್ಲ. ಹೇ ಬುದ್ಧಿ
ನಾನೇನು ಮಾಡಲಿ?" ಎಂದು ಹೇಳಿದುದನ್ನು ಕೇಳಿ ಆ ಯು
ಯಾದ ಬುದ್ಧಿಯು ಆ ಐದು ಜನರಲ್ಲಿ ಹಿಂತಿರುಗಿ ಹೋಗಿ, ಸ
ವಿಷಯವನ್ನೂ, ಜ್ಞಾನ ಮತ್ತು ಧ್ಯಾನರಿಬ್ಬರ ಸಮಾಚಾರವನ್ನೂ, ಅ
ಲಾಗ್ರವಾಗಿ ತಿಳಿಸಿದಳು.

ಅನಂತರ ಆ ಪಂಚತತ್ವಗಳೆಲ್ಲರೂ ತಾವೇ ಆತ್ಮನಲ್ಲಿಗೆ ಹ
"ನಿಮ್ಮ ಜೊತೆಯಲ್ಲಿ ನಿತ್ಯವೂ ಮೈತ್ರಿ (ಸ್ನೇಹವ)ಯನ್ನೇ ಇಚ್ಛಿಸುತ್ತ
ಎಲೈ ಲೋಕೇಶನೇ, ನೀನು ಶುದ್ಧನಾಗಿರುವುದರಿಂದ ನಿನ್ನ ಸಮೀಪಕ್ಕೆ
ದೇವೆ. ನೀವೇ ಸ್ವಯಂ ವಿಚಾರಮಾಡಿ ನಮಗೆ ಉತ್ತರವು ನಿಮ್ಮಿಂದ
ಲ್ಪಡಲಿ" ಎಂದರು.

ಆತ್ಮನು—"ನೀವಾಗಿ ನೀವು ಐದು ಜನರೂ ಬಂದಿರುವಿರಿ. ನ
ಯನ್ನು ಇಚ್ಛಿಸುತ್ತಿದೀರಿ. ಇದಕ್ಕೆ ಮೊದಲು ನೀವು ನನ್ನ ಮುಂದೆ
ಗುಣ ಮತ್ತು ಪ್ರಭಾವಗಳನ್ನು ವಿವರಿಸಿ ತಿಳಿಸಿರಿ" ಎಂದನು.

ಭೂಮಿಯು—"ಸರ್ವಕಾರ್ಯಕ್ಕೂ ನಾನು ಮುಖ್ಯಸ್ಥಾನವು. ಚ
ಮಾಂಸದಿಂದ ಕೂಡಿದ ಮೂಲಭೂತ ಅಸ್ಥಿಗಳು ದೃಢವಾಗಿರಲಿ
ಉಗುರು ಲೋ (ರೋ)ಮದಿಂದ ಕೂಡಿದ ದೇಹ (ಕಾಯ)ದ ಮಧ್ಯ
ಎಲೈ ಮಹಾ ಪ್ರಾಜ್ಞನೇ, ನನ್ನದೇ ಹೆಚ್ಚು ಪ್ರಭಾವವು. ನಾಸಿಕ (ಮೂ
ಗಮನವುಳ್ಳ ಮಹಾ ಮನಸ್ಕನಾದ ಗಂಧ(ದ ಅಭಿಮಾನಿಯು)ವು
ಭೃತ್ಯನು" ಎಂದು ಹೇಳಿದನು.

ಆಕಾಶವು—"ನಾನು ಆಕಾಶನು ಬಂದಿದೇನೆ. ನನ್ನ ಪ್ರಭಾ
ದೇಹದಲ್ಲೆಂಥದೆಂಬುದನ್ನು ಪರಬ್ರಹ್ಮಸ್ವರೂಪಿಗೆ ಹೇಳುತ್ತೇನೆ, ಕೇಳ
ವಾಗಲಿ. ಬಾಹ್ಯಾಂತರ (ಒಳಗೆ ಹೊರಗಿನ) ಅವಕಾಶವುಳ್ಳವನಾಗಿ ಶ
ಸ್ಥಾನದಲ್ಲಿ ನಾನು ವಾಸಿಸುತ್ತೇನೆ. ನನ್ನ ಭೃತ್ಯರು ಶ್ರವಣೇಂದ್ರಿ

(ಎರಡು ಕಿವಿ)ಗಳಲ್ಲಿ, ಹೇಳಿದ್ದನ್ನು (ಕೇಳಲು) ಶ್ರವಣ ಮಾಡಲು ಪ್ರತಿಷ್ಠಿತ ರಾಗಿರುವರು" ಎಂದು ಹೇಳಿದನು.

ವಾಯುವು—"ನಾನು ಪಂಚರೂಪದಿಂದ, ಯಾವ ಸ್ವರೂಪದಿಂದಲೂ, ಅನಂತರ ನಿಃಶ್ವಾಸದಲ್ಲೂ, ಕರ್ಮಕಾಯದಲ್ಲಿ ಸ್ಥಿತನಾಗಿ ಶುಭಾಶುಭ ಕರ್ಮಗಳನ್ನು ಮಾಡುವೆನು. ಇದು ನನ್ನ ಆತ್ಮಗುಣ. ಇಂಥ ದೇಹದಲ್ಲಿದ್ದು ಕರ್ಮ ಮಾಡುವ ಸ್ಪರ್ಶಾಖ್ಯ ಗುಣವುಳ್ಳವನು ನನ್ನ ಅಮಾತ್ಯನು" ಎಂದನು.

ತೇಜಸ್ಸು—"ದೇಹದಲ್ಲಿ ನಿತ್ಯವೂ 'ಸೂರ್ಯನ' ವಿನಿಯೋಗವನ್ನು ನಾನು ಮಾಡುವೆನು. ಒಳಗೆ ಹೊರಗಿರುವ ಸರ್ವ ದೃಶ್ಯ, ಅದೃಶ್ಯ ವಸ್ತುಗಳನ್ನೂ, ದುಷ್ಟ ಅದುಷ್ಟ ಪದಾರ್ಥಗಳನ್ನೂ, ನೇತ್ರಗಳ ಮೂಲಕ ತೋರಿಸುವೆನು. ಎರಡು ನೇತ್ರಗಳೂ ನನ್ನ ಅಮಾತ್ಯರು. ಭೃತ್ಯರು. ನನಗೆ ನನ್ನ ರಾಜ್ಯಲಬ್ಧ, ದ್ರವ್ಯಲಬ್ಧ, ಪ್ರಸಾಧಕರು. ಹೇ ಆತ್ಮನೇ ಈ ವಿಧವಾದದು ನನ್ನ ವ್ಯಾಪಾರವೆಂದು ನಿನಗೆ ಮೊದಲೇ ತಿಳಿಸಿದ್ದೇನೆ" ಎಂದನು.

ಆಪಾಃ (ನೀರುಗಳು)—ಶುಕ್ರ (ತೇಜಸ್ಸು) ಮಜ್ಜಾ, ಲಾಲಾ (ಜೊಲ್ಲು) ಪಲ, ತ್ವಕ್, (ಚರ್ಮ) ಸಂಧಿಗಳಲ್ಲಿರುವ ರಕ್ತ, ಚಲನೆಗಳಾಗುವಂತೆ ನಾವು ದೇಹದಲ್ಲಿದ್ದುಕೊಂಡು ಪ್ರೇರಿಸುವೆವು. ಅಹೋರಾತ್ರಿಯಲ್ಲೂ ಕಳೇಬರ (ದೇಹ)ವನ್ನು ಅಮೃತದಿಂದ ಚನ್ನಾಗಿ ಪೋಷಣೆ ಮಾಡುವೆವು. ಈ ರೀತಿಯಾದ ಸಮೀಚೀನವಾದ ವ್ಯಾಪಾರವು ಈ ದೇಹವೆಂಬ ಪಟ್ಟಣದಲ್ಲಿ ನಮಗೆ ಅರ್ಪಿಸಿ ಕೊಡಲ್ಪಟ್ಟಿದೆ. ಉತ್ತಮವಾದ ರಸಗಳನ್ನು ಆಸ್ವಾದನ ಮಾ(ರುಚಿನೋ)ಡುವ ರಸನವ (ನಾಲಿಗೆಯು)ನ್ನು ನಮ್ಮ ಅಮಾತ್ಯ ಭೃತ್ಯನೆಂದು ತಿಳಿ" ಎಂದರು.

ನಾಸಿಕಾ—(ಮೂಗು) ದೇಹಕ್ಕೂ ಸಹ ಸುಗಂಧದಿಂದ ಉತ್ಕೃಷ್ಟವಾದ ಪುಷ್ಟಿಯನ್ನುಂಟುಮಾಡುವೆನು. ದುರ್ಗಂಧವನ್ನು ಪರಿಹರಿಸಿ, ದೇಹದಲ್ಲಿ ಸರ್ವವನ್ನೂ ತೋರಿಸುವೆನು. ಎಲೈ ಮಹಾನುಭಾವನೇ, ಬುದ್ಧಿಯಿಂದ ಕೂಡಿ ಆಕೆಯ ಭಾವನೆಯಿಂದ ಸಂಭಾವಿತಳಾಗಿ, ಸ್ವಾಮಿಕಾರ್ಯ

ಕ್ಕೋಸ್ಕರವಾಗಿ ಈ ಕಾಯದಲ್ಲಿ ನಿಶ್ಚಲಳಾಗಿರುವೆನು. ವಿವಿಧ
ಯುಳ್ಳ ಗಂಧವನ್ನು ನನ್ನ ಗುಣವೆಂದು ತಿಳಿ" ಎಂದನು.

ತ್ವಕ್ (ಚರ್ಮವು) — ಪಂಚರೂಪಾತ್ಮಕವಾದ (ಪ್ರಾಣ,
ವ್ಯಾನ, ಉದಾನ, ಸಮಾನ) ವಾಯುವು ಈ ಶರೀರದಲ್ಲಿ ವ್ಯವಸ್ಥಿತ
ಅವರ ಬಾಹ್ಯಾಭ್ಯಂತರ ಚೇಷ್ಟೆ (ಒಳ ಹೊರಗಿನ ವ್ಯಾಪಾರ)ಗಳನ್ನು
ವಾಗಿ ತಿಳಿದಿದ್ದೇನೆ. ಶೀತ, ಉಷ್ಣ, ಬಿಸಿಲು, ಮಳೆ, ಸ್ಫುರಣ (ಅದಿ
ವನ್ನೂ ತಿಳಿದಿದ್ದೇನೆ. ಮನುಜರು ಸಂಸ್ಪರ್ಶದಿಂದ ಅವರ ಅಂಗ
ಗಳನ್ನೂ ತಿಳಿದಿರುವೆನು. ನನ್ನ ಮುಖ್ಯ ಗುಣವು ಸ್ಪರ್ಶವು. ಇದನ
ವಾಗಿ ಹೇಳುತ್ತೇನೆ. ಎಲೈ ಆತ್ಮನೇ, ಇದು ನನ್ನ ವ್ಯಾಪಾರವೆಂದು
ಸಿರುವೆನು" ಎಂದನು.

ಎರಡು ಕಣ್ಣುಗಳು — "ಸಂಸಾರದಲ್ಲಿ ಕೆಟ್ಟದೋ ಒಳ್ಳೆ
ಯಾವ ರೂಪಗಳಿವೆಯೋ ಅವನ್ನು, ಎಲೈ ಪೂಜ್ಯನೇ, ಯಾವಾಗ
ಬುದ್ಧಿಯು ಪ್ರೇರಿಸುವುದೋ ಆಗ ನಾವಿಬ್ಬರೂ ನೋಡುವೆವು,
ಇಲ್ಲವು. ನಾವೂ ಈ ಕಾಯ ಮಧ್ಯದಲ್ಲಿ ವಾಸಿಸುವೆವು. ನಮ್ಮ
ರೂಪವೇ ಗುಣವು, ಎಲೈ ಮಹಾ ಮತಿಯೇ, ಈ ದೇಹಮಧ್ಯದಲ್ಲಿ
ವ್ಯಾಪಾರವಿಷ್ಟೇ ಎಂದು ಉಕ್ತವಾಗಿದೆ." ಎಂದರು.

ನಾಲಿಗೆ—"ಹೇ ತಾತ, ನಾನು ಬುದ್ಧಿಯಿಂದ ಯುಕ್ತವಾ
ಭೇದಗಳನ್ನು ವಿಚಾರಮಾಡುತ್ತೇನೆ. ಉಪ್ಪು ಹುಳಿ, ಮೊದಲಾದ
ವನ್ನೂ, ನೀರಸ ಸ್ವಾದು (ಸಿಹಿ, ಮಧುರ) ಮೊದಲಾದವುಗಳನ್ನೆಲ್ಲ
ತ್ತೇನೆ. ಈ ರೀತಿ ನಿತ್ಯಯುಕ್ತ ವ್ಯಾಪಾರಗಳಿಂದ ನಾನು ವಾಸಿಸುತ್ತಿ
ಎಲ್ಲ ಇಂದ್ರಿಯಗಳಿಗೂ ಬುದ್ಧಿಯೇ ಮುಖ್ಯ ನಾಯಕಳು; ಪ್ರೇ
ಎಂದಳು.

ಹೀಗೆ ಪಂಚೇಂದ್ರಿಯಗಳೂ ಬಂದು ಪ್ರಿಯಳೇ, ಕೇಳು ನಿನ್ನ ಸ್ವ
ಯಾವ ಕರ್ಮಗಳನ್ನು ಪುನಃ ಪ್ರಶ್ನೆ ಹೇಳುತ್ತಾರೆಯೋ ಅವನ್ನು

ಆಗ ಬುದ್ಧಿಯು ಬಂದು, ಮಹಾ ಮತಿಯಾದ ಆತ್ಮನನ್ನು
"ನನ್ನಿಂದ ರಹಿತವಾಗಿ ನಾನ್ನಿಲ್ಲದಿದ್ದರೆ ಈ ದೇಹವು ನಶಿಸುವುದು,

ನಾನೂ ಇದ್ದರೆ ಇದಕ್ಕೆ ಹಾನಿಯಿಲ್ಲವು. ಆದುದರಿಂದ ಹೇ, ಮಹಾಮಾತೇ, ಆತ್ಮನೇ, ನನ್ನನ್ನಿಟ್ಟುಕೊಂಡೇ ನನ್ನೊಡನೆ ಎಲ್ಲದರಲ್ಲೂ ಪ್ರವೃತ್ತಿಯುಳ್ಳವನಾಗು" ಎಂದಳು.

ಅನಂತರ ಕರ್ಮವು (ಕರ್ಮದಲ್ಲಿ ಅಭಿಮಾನಿಯು) ತನ್ನ ಸಮೀಪಕ್ಕೆ ಬಂದ ಆತ್ಮನನ್ನು ಕುರಿತು ಹೀಗೆ ಹೇಳಿತು.

"ಎಲೈ ಮಹಾ ಪ್ರಾಜ್ಞನೇ, ನಾನು ಕರ್ಮವು ನಿನ್ನ ಪಾರ್ಶ್ವ (ಸಮೀಪ)ಕ್ಕೆ ಬಂದಿರುವೆನು. ಹೇ ತಾತ, ನಾನು ನಿನಗೆ ಪ್ರೇರಣೆ ಮಾಡುತ್ತೇನೆ" "ಯಾವ ರೀತಿ? ಹೇಗೆ? ಯಾವ ಮಾರ್ಗದಿಂದ ಹೋಗೋಣ?" ಎಂಬುದನ್ನು ಕೇಳಿ ಅವರನ್ನು ಕುರಿತು ಆತ್ಮನು ಎಲ್ಲವನ್ನೂ "ನೀವು ಐವರೂ ಸರ್ವಸಾಧಾರಣವಾಗಿ ಒಟ್ಟಿಗೆ ಸೇರಿಯೇ ಪಂಚಾತ್ಮಕರಾಗಿಯೇ ಇರುವಿರಲ್ಲವೆ? ಆದುದರಿಂದ ನಿಮ್ಮ ಪಂಚಾತ್ಮಕರೊಡನೆ ಮೈತ್ರಿಯ (ಸ್ನೇಹವ)ನ್ನು ಬೆಳಸಿರಲು ಸಂಪೂರ್ಣವಾಗಿ ಇಚ್ಛಿಸುತ್ತೇನೆ. ನೀವೆಲ್ಲರೂ ಸಮಗ್ರವಾಗಿ ಸರ್ವ ವಿಷಯದಲ್ಲಿ ಅದರಲ್ಲೂ ನನ್ನೊಡನೆಯೇ ನೀವೆಲ್ಲರೂ ಏತಕ್ಕಾಗಿ ಮೈತ್ರಿಯನ್ನು ಇಚ್ಛಿಸುವಿರಿ? ಪೂರ್ಣ ಕಾರಣವನ್ನು ಹೇಳಿರಿ." ಎಂದನು.

ಪಂಚಾತ್ಮಕ (ಐವ)ರೂ—"ನಮ್ಮೆಲ್ಲರ ಸಂಗ ಪ್ರಸಂಗದಿಂದ ಪಿಂಡವು ಉತ್ಪನ್ನವಾಗುತ್ತದೆ. ಹೇ ದೇವ, ಯಾವಾಗ ಆ ಪಿಂಡದಲ್ಲಿ ನೀನು, ಎಲೈ ಸುವ್ರತನೇ, ಮಹಾದೇವನೇ, ವಾಸಿಸುತ್ತೀಯೋ, ಆಗ ನಾವೆಲ್ಲರೂ ನಿನ್ನ ಪ್ರಸಾದ (ಅನುಗ್ರಹ) ದಿಂದ ಅಲ್ಲಿ ಇದ್ದು ವಾಸಿಸುತ್ತೇವೆ. ಆದುದರಿಂದ ಈ ಕಾರಣಕ್ಕಾಗಿ ನಿನ್ನ ಮೈತ್ರಿಯನ್ನು ನಿತ್ಯದಲ್ಲೂ ಇಚ್ಛಿಸುತ್ತೇವೆ" ಎಂದರು.

ಆತ್ಮನು—"ಸರಿ, ಹಾಗೆಯೇ ಆಗಲಿ, ಮಹಾಭಾಗರೇ, ನಿಮಗೆ ಪ್ರಿಯವನ್ನೇ ಮಾಡುತ್ತೇನೆ. ಈ ವಿಷಯದಲ್ಲಿ ನಿಮಗೆ ಸಂದೇಹ ಬೇಡ. ಮೈತ್ರಿಯು ಪ್ರೀತಿಗೆ ಕಾರಣವು." ಎಂದನು.

ಮಹಾತ್ಮನಾದ ಜ್ಞಾನದಿಂದ ತಡೆದು, ಅಡ್ಡಿಪಡಿಸಿ, ನಿವಾರಿಸಲ್ಪಟ್ಟರೂ, ಧ್ಯಾನದಿಂದಲೂ ನಿವಾರಿತನಾದರೂ, ಈ ಮಹಾತ್ಮನೂ, ಪೂಜ್ಯನೂ ಆದ ಆತ್ಮ ಮಹಾಭಾಗನು ಅವರ ಸಹವಾಸದಲ್ಲಿ ಸೇರಿಬಿಟ್ಟನು. ಅಲ್ಲಿ ಅವರಿಂದ ಅವನು ಪ್ರಮೋಹಿತನಾಗಿ, ರಾಗದ್ವೇಷಾದಿಗಳಿಂದ ಕೂಡಿ, ಪಂಚತತ್ವಗಳಿಂದ

ಸಮಾಯುಕ್ತನಾಗಿ, ಆ ಪ್ರಭುವು ಕಾಯತ್ವವನ್ನು ಹೊಂದಿದನು. ಯ
ಗರ್ಭದಲ್ಲಿ ಬಂದನೋ ವಿಣ್ಮೂತ್ರಗಳಿಂದ ಕೂಡಿ ದುರ್ಗಂಧಯುಕ್ತ ಪಿ
ವರ್ತದಲ್ಲಿ ಅವರೊಡನೆ ಸೇರಿಬಿದ್ದನೋ, ಅಂಗದಿಂದ ವ್ಯಾಕುಲನಾಗಿ
ತ್ಮಕರನ್ನು ಕುರಿತು, ಆಗ ಆತನು. "ಭೋ ಭೋ, ಎಲೈ ಪಂಚಾತ್ಮ
ನೀವೆಲ್ಲರೂ ನನ್ನ ಮಾತನ್ನು ಕೇಳಿರಿ. ನಿಮ್ಮ ಪ್ರಸಂಗದಿಂದ ನಾನೀಗ
ದುಃಖದಿಂದ ಮೋಹಿತನಾದೆನು. ಈಗ ಮಹಾ ಭಯಂಕರವಾ
ಘೋರ ಪಿಚ್ಛಿಲದಲ್ಲಿ ಬಿದ್ದಿದ್ದೇನೆ." ಎಂದನು.

ಪಂಚಾತ್ಮಕರು—ಹೇ ರಾಜ್ಞ, ಗರ್ಭವು ಪೂರ್ಣವಾಗುವವ
ವಾಸಿಸಿರಿ. ಅನಂತರ ನಿನಗೆ ಈ ಸ್ಥಾನದ ನಿರ್ಗಮನ (ಹೊರಕ್ಕೆ ಹೋ
ಅವಕಾಶ)ವು ಉಂಟಾಗುವುದು. ಸಂಶಯಬೇಡ ತಾವು ಈ ಕಾಯದೇ
ನಮಗೆ ಸ್ವಾಮಿಯೆಂದು ವ್ಯವಸ್ಥಿತವಾಗಿದೆ. ಈ ರಾಜ್ಯವನ್ನು, ಹೀಗೆ
ಚೆನ್ನಾಗಿ, ನಡೆಯಿಸಬೇಕು ಮುಂದೆ ಸುಖವನ್ನು ಅನುಭವಿಸುವಿ. (ಭ
ಯಾಗುವಿ.)" ಎಂದು ಹೇಳಿದರು

ಅವರ ಆ ಮಾತನ್ನು ಕೇಳಿ ಆತ್ಮನು ದುಃಖದಿಂದ ಪೀಡಿತನ
ಅಲ್ಲಿಂದ ಹೊರಕ್ಕೆ ಹೊರಡಲಿಚ್ಛಿಸಿ ಪಲಾಯನ ಪರನಾದನು.

(ಹೀಗೆ ಪದ್ಮ ೭ನೇ ಅಧ್ಯಾಯ ೧೦ರಿಂದ ೭೯ ಶ್ಲೋಕ)

ಆ ಗರ್ಭವು ದಿನದಿನದಲ್ಲೂ ಖೇದವನ್ನು ಹೊಂದಿ, ವ್ಯಾಕುಲವಾಯಿ
ಆದರಿಂದ ಆ ಧರ್ಮಾತ್ಮನೂ ದುಃಖಾಕ್ರಾಂತನಾಗಿ ಸರ್ವಪೀಡೆಗ
ಅತ್ಯಂತ ಅಭಿಪೀಡಿತನಾಗಿ, ಅಧೋಮುಖನಾಗಿ ಗರ್ಭದಲ್ಲಿದ್ದುಕೊಂ
ಮೋಹಜಾಲವೆಂಬ ಬಲೆಯಿಂದ ಬಂಧಿತನಾಗಿ ಆಧಿ (ಮನೋವ್ಯಥೆ) ವ
(ಶರೀರ ಸಂಬಂಧ ರೋಗಾದಿ) ಗಳ ಉಪದ್ರವದಿಂದ ಸಮಾಕ್ರಾಂತ
ಹಾ! ಹಾ! ಭೂತನಾಗಿ, ವಿಚೇತನನಾಗಿ, ಮಹಾ ದುಃಖದಿಂದ ಕ
ಅತ್ಯಂತ ಪ್ರಪೀಡಿತನಾಗಿ, ಜ್ಞಾನವನ್ನು ಕುರಿತು ಹೇಳುತ್ತಾನೆ.

ಆತ್ಮಾ—"ಮಹಾಪ್ರಾಜ್ಞನೇ, ಆಗ ನಿನ್ನ ಮಾತನ್ನು ನಾನು
ಲಿಲ್ಲ. ಧ್ಯಾನದಿಂದ ನಿವಾರಿತನಾದಾಗ್ಯೂ, ಆತನು ನನ್ನನ್ನು ಎಷ್ಟು ತಡೆದ

ಕೇಳದೆ ಈಗ ಈ ಮಹಾ ಸಂಕಟದಲ್ಲಿ ಬಿದ್ದೆನು, ಎಲೈ ಪ್ರಾಜ್ಞನನೇ, ಈ ಸುದಾರುಣವಾದ ಗರ್ಭವಾಸದ ದೆಶೆಯಿಂದ ನನ್ನನ್ನು ರಕ್ಷಿಸು. ಪಾರು ಮಾಡು." ಎಂದನು.

ಜ್ಞಾನನು—"ಎಲೈ ಆತ್ಮನೇ, ನನ್ನಿಂದ ಬೇಡ ಬೇಡವೆಂದು, ತಡೆದು ಅಡ್ಡಿಮಾಡಿ ವಾರಿತನಾದರೂ ನನ್ನ ಮಾತನ್ನು ಕೇಳಲೇ ಇಲ್ಲ." ಮಹಾ ಕ್ರೂರಿಗಳಾದ ಈ ಪಂಚಾತ್ಮಕರೊಡನೆ ಗರ್ಭಸಂಕಟದಲ್ಲಿ ಬಿದ್ದಿ. ಈಗ ನೀನು ಧ್ಯಾನವನ್ನು ಹೊಂದು, ಧ್ಯಾನ ಮಾಡುವುದರಿಂದ ಸುಖವನ್ನು ಹೊಂದುವಿ. ನಿನಗೆ ಗರ್ಭವಾಸದ ದೆಶೆಯಿಂದ ಮೋಕ್ಷ (ಬಿಡುಗಡೆಯು)ವು ಆಗುತ್ತದೆ. ಸಂಶಯು ಬೇಡ." ಎಂದನು.

ಆತ್ಮನು—ಆ ಜ್ಞಾನನ ಮಾತನ್ನು ಕೇಳಿ, ಜ್ಞಾನದ ತತ್ವವನ್ನು ತಿಳಿದು ಧ್ಯಾನವನ್ನು ಕರೆದು "ನನ್ನ ಮಾತನ್ನು ಕೇಳೋಣವಾಗಲಿ. ಎಲೈ ಧ್ಯಾನನೇ, ನಿನ್ನನ್ನು ಶರಣು ಹೊಂದಿದೇನೆ. ನಿತ್ಯದಲ್ಲೂ ನೀನು ನನ್ನನ್ನು ರಕ್ಷಿಸು." ಎಂದನು.

ಧ್ಯಾನವು — "ಹಾಗೆಯೇ ಆಗಲಿ, ಮಹಾಪ್ರಾಜ್ಞನೇ, ಮಹಾ ಮತಿಯೇ, ಒಳ್ಳೆಯದು ಆಗಲಿ." ಎಂಬ ಈ ವಾಕ್ಯವನ್ನು ಕೇಳಿ ಆತ್ಮನು ಧ್ಯಾನಂಗತನಾದನು. ಧ್ಯಾನದಿಂದ ಕೂಡಿದ ಆತ್ಮನು ಗರ್ಭದಲ್ಲಿ ಸ್ಥಿತನಾಗಿ ಭಗವಧ್ಯಾನಮಾಡುತ್ತಾ ಮೋಹರಹಿತನಾದನು. ಯಾವಾಗ ಆತ್ಮನು ಧ್ಯಾನಂಗತನಾದನೋ ಆಗಲೇ ಗರ್ಭಜನ್ಯ ಭಯವು ವಿಸ್ಮೃತವಾಗಿ ಮರೆತು ಹೋಯಿತು. ಆ ಆತ್ಮನು ಜ್ಞಾನ ಮತ್ತು ಧ್ಯಾನರಿಬ್ಬರಿಂದ ಸಹಿತನಾಗಿ ಮೋಹವರ್ಜಿತನಾದನು.

ಹೀಗೆ ನಿತ್ಯದಲ್ಲೂ ಚಿಂತಿಸುತ್ತಾ, ಪ್ರಭುವು ತನ್ನ ಸ್ವರೂಪಭೂತ ನಿತ್ಯ ಸುಖವನ್ನೇ ಯೋಚಿಸುತ್ತಾ "ಇಲ್ಲಿಂದ ಹೊರಕ್ಕೆ ಹೊರಟಮಾತ್ರದಿಂದಲೇ ಈ ಪಂಚಾತ್ಮಕ (ಪಾಂಚಭೌತಿಕ) ಶರೀರವನ್ನು ತ್ಯಜಿಸಿ ಬಿಡುತ್ತೇನೆ, ಎಂದು ಚಿಂತಿಸುತ್ತಿದಂತೆಯೇ, ಪ್ರಸೂತಿಕಾಲವು ಪ್ರಾಪ್ತವಾಗಲು, ಶುಭಕಾಲದಲ್ಲಿ ಗರ್ಭವು ಪ್ರಾಜಾಪತ್ಯವೆಂಬ ವಾಯುವಿನಿಂದ ಚಾಲಿತವಾಯಿತು. ಬಲಿಷ್ಠನಾದ ಪ್ರಾಣವಾಯುವಿನಿಂದಲೂ ತಳ್ಳಲ್ಪಡಲು ಯೋನಿಯು 24 ಅಂಗುಲ ವಿಕಾಶವಾಗಲು —

" ಯೋನಿರ್ವಿಕಾಶ ಮಾಯಾತಿ ಚತುರ್ವಿಂಶಾಂಗುಲಂ ತದಾ
ಪಂಚಾದಶಾಂಗುಲೋ ಗರ್ಭಸ್ತೇನ ಪೀಡಾ ವಿಜಾಯತೇ ॥

ಎಂಬ ರೀತಿಯಿಂದ 25 ಗರ್ಭವು ಅಂಗುಲವುಳ್ಳದಾದುದರಿಂ ಪೀಡೆಯುಂಟಾಗುತ್ತದೆ. ಹೀಗೆ ಸಂಪೀಡ್ಯಮಾನನಾಗಿ ಮೂರ್ಛಿ ಭೂಮಿಭಾಗದಲ್ಲಿ ಜ್ಞಾನ ಧ್ಯಾನದಿಂದ ಕೂಡಿಕೊಂಡು ಬಿದ್ದು, ದಿ ಪ್ರಾಜಾಪತ್ಯ ವಾಯುವಿನಿಂದ ಅವನು ಬೇರೆ ಮಾಡಲ್ಪಟ್ಟನು. ಸಂಸ್ಪರ್ಶ ಮಾತ್ರದಿಂದಲೇ ಜ್ಞಾನಧ್ಯಾನರು ವಿಸ್ಮೃತರಾಗಲು, ಮೋಹ ಸಂದಗ್ಧನಾಗಿ, ಆತ್ಮನು ಪ್ರಿಯಳಾದ ತಾಯಿಯೊಡನೆ ಸ್ಥಿ ಗುಣದೋಷಗಳಿಂದ ಆವರಿಸಲ್ಪಟ್ಟು, ಮಹಾಮೋಹದಿಂದ ಕೂಡಿ, ಅನ್ನಪಾನಾದಿಗಳನ್ನು ದಿನೇ ದಿನೇ ಇಚ್ಛಿಸುತ್ತಾನೆ.

ಹೀಗೆ ಸಂಸ್ಪೃಷ್ಟಮಾನನಾದ ಆತ್ಮನು ಪಂಚಾತ್ಮಕದೊಡನೆ ಪಾ ಗಳಾದ ಇಂದ್ರಿಯಗಳಿಂದಲೂ, ಸರ್ವವಿಷಯಗಳಿಂದಲೂ, ವ್ಯಾಪಿಸ ಬಾಂಧವರುಗಳ ಮತ್ತು ಹೆಂಡತಿಯರ, ಅತಿ ಮೋಹದಿಂದ, ಸಮ್ಮೋಹ ದಿನ ದಿನಕ್ಕೂ, ಆಕುಲ ವ್ಯಾಕುಲವುಳ್ಳವನಾಗುತ್ತಾನೆ.

ಹೀಗೆ ಮಹಾಮೋಹದಿಂದ ಸಂದಗ್ಧನಾದ ಪ್ರಭುನಾದ ಆ (ಜೀವ)ನು, ನದಿಯಲ್ಲಿರುವ ಮೀನು ಹೇಗೆ ಬೆಸ್ತನ ಬಲೆಯಲ್ಲಿ ಸಿಕ್ಕಿ ಬಂ ದ್ಧಾಗುತ್ತದೆಯೋ, ಅದರಂತೆ ಚಲಿಸಲು ಸಹ ಶಕ್ಯವಿಲ್ಲದೆ, ಪ್ರಬಂಧಿತ ನಂಟರಿಷ್ಟರು, ಅನುಬಂಧಿಗಳು, ಭಾರ್ಯಾ, ಪುತ್ರ, ಮಿತ್ರರುಗಳಿಂದ, ರಾಗಾದಿ ಮೋಹಜಾಲ ಗಳಿಂದಲೂ, ಸರ್ವ ದೃಢ ಬಂಧನಗಳಿಂ ಬಂಧಿತನಾಗಿರುವನು.

ಹೀಗೆ ಆತ್ಮನು ವ್ಯಾಪಕವಾದ ಪ್ರಪಂಚದಿಂದ ವ್ಯಾಪಿ (ಸಲ್ ತನಾಗಿ, ಜ್ಞಾನ ವಿಜ್ಞಾನಗಳಿಂದ ವಿಭ್ರಷ್ಟನಾಗಿ, ರಾಗದ್ವೇಷಗಳಿಂ ನಾಗಿ, ಕಾಮದಿಂದ ಪೀಡಿತನಾಗಿ, ಹಾಗೆಯೇ ಕ್ರೋಧದಿಂದಲೂ, ಯಿಂದಲೂ, ಕರ್ಮದಿಂದಲೂ ಬದ್ಧನಾಗಿ ಮಹಾ ಮೂಢನಾಗುತ್ತಾ

ಕಾಮೇನ ಪೀಡ್ಯಮಾನಸ್ತು ಕ್ರೋಧೇನೈವ ತಥೈವ ವಾ
ಪ್ರಕೃತ್ಯಾ ಕರ್ಮಣಾ ಬದ್ಧೋ ಮಹಾಮೂಢೋ ವಿಜಾಯತೇ

ಹೀಗೆ ಯಾವಾಗ ಈ ಆತ್ಮನು ಕಾಮಕ್ರೋಧ ವಶನಾಗುತ್ತಾನೆಯೋ, ಲೋಭ, ರಾಗಾದಿ ಅರಿಷಡ್ವರ್ಗಗಳಿಂದೆಲ್ಲ ದುರಾತ್ಮರಿಂದಲೂ ವ್ಯಾಪಿಸಲ್ಪಟ್ಟು

ಇಯಂ ಭಾರ್ಯಾ ಹ್ಯಯಂ ಪುತ್ರ ಇದಂ ಮಿತ್ರಮಿದಂ ಗೃಹಂ।
ಏವಂ ಸಂಸಾರಜಾಲೇನ ಮಹಾಮೋಹೇನ ಬಂಧಿತಃ ॥

ಈಕೆಯು ನನ್ನ ಹೆಂಡತಿಯು, ಇವನು ಮಗನು, ಇದು ಮನೆ, ಇವನು ಮಿತ್ರ ಎಂಬ ಇತ್ಯಾದಿ ಸಂಸಾರದ ಬಲೆಯ, ಮಹಾ ಮೋಹದಿಂದ ಬಂಧಿತನಾಗಿರುವನು.

ಆಗ ನಿರಂತರ ಅಹೋರಾತ್ರಿ ಪುತ್ರ ಶೋಕಾದಿಗಳಿಂದ ದುಃಖಿತನಾಗಿರುವನು ಮಾತ್ರವಲ್ಲದೆ, ವಾರ್ಧಿಕ್ಯದಿಂದ, ರೋಗಾದ್ಯುಪದ್ರವಗಳಿಂದ, ಹಾಗೆಯೇ ಮನೋವ್ಯಥೆಯಿಂದ ಆವರಿಸಲ್ಪಟ್ಟು, ದುಃಖಶೋಕಗಳಲ್ಲಿ ಮುಳಗಿರುವನು. ಈ ರೀತಿಯಾಗಿ ಆತ್ಮನು ದಾರುಣಗಳಾದ ದುಃಖಮೋಹಗಳಿಂದಲೂ, ಅಭಿಮಾನದಿಂದಲೂ, ಮಾನಭಂಗವೇ ಮೊದಲಾದ ನಾನಾ ದುಃಖಗಳಿಂದಲೂ, ಖಂಡಿಸಲ್ಪಟ್ಟು, ದೂಷಿತನಾಗಿ ವೃದ್ಧತ್ವದಿಂದಲೂ, ಶಬಲತ್ವದಿಂದಲೂ ಪೀಡಿತನಾಗಿ, ಮಹಾಭೂತ (ದಿಂದ ಆವಿಷ್ಟ)ನಾಗಿ, ವಿಚೇತನನಾಗಿ, ಪರಾಧೀನದಲ್ಲಿ ಬಿದ್ದು, ಕಷ್ಟಪಡುವನು. ಹಗಲುಹೊತ್ತು ಚೈತನ್ಯ, ಶಕ್ತಿರಹಿತನಾಗಿ, ರಾತ್ರಿಯಲ್ಲಿ ಸ್ವಪ್ನಗಳನ್ನು ಕಂಡು, ಸುಖದುಃಖಗಳನ್ನು ಚಿಂತಿಸುತ್ತಾ ದಿನೇ ದಿನೇ, ವೈಕಲ್ಪದಿಂದ ಮೋಹದಿಂದ ವ್ಯಾಪ್ತನಾಗಿ, ಸಂಸಾರದಲ್ಲಿ ಸುತ್ತುತ್ತಿರುವ ಆತ್ಮನು ನಿಃಶಂಕನೂ, ನಿಸ್ಸಂಗನೂ, ಬಂಧುಹೀನನೂ, ವಸ್ತ್ರರಹಿತನೂ ಪ್ರಶಾಂತನೂ, ಸದಾ ಸಂತುಷ್ಟನೂ ಆದ **ವೈರಾಗ್ಯವನ್ನು** ಕಂಡನು.

ಆಗ ಕಾಮಕ್ರೋಧ ವಿವರ್ಜಿತನಾದ ಆ ವೀತರಾಗ (ವೈರಾಗ್ಯ) ನನ್ನು ಕುರಿತು ಆತ್ಮನು "ನೀವು ಯಾರು? ನಿನಗೆ ನನ್ನವರಾಗಿ (ಬರೀ ಬೆತ್ತಲೆ) ಮಿತ್ರರೊಡನೆ ಇರಲು ಲಜ್ಜೆಯಾಗುವುದಿಲ್ಲವೆ? ಯಾವ ಜನರ ಮಧ್ಯೆ, ಸ್ತ್ರೀಯರು, ವೃದ್ಧರು, ಯುವತಿಯರು, ತಾಯಿಯರು ಹೀಗೆ ಇವರೆಲ್ಲರ ಮಧ್ಯೆ

ಅಸಾವೃತನಾಗಿ, ಬಟ್ಟೆ ಹೊದೆದುಕೊಳ್ಳದೆ, ಬರೀಮೈಲಿ ನೀನು
ಲಾರಿ. ಅಪಮಾನಿತನಾಗುವಿ" ಎಂದನು.

ವೀತರಾಗನು—"ಇಲ್ಲಿ ನನಗಾಗಿ ಕಾಣಲ್ಪಡುವವನಾರು?
ನಗ್ನನಾಗಿಲ್ಲವೆನ್ನುವುದು ಯಾವಾಗ? ನಾನು ಜ್ಞಾನವೆಂಬ ವ
ಹೊದ್ದಿಕೆಯಿಂದ ಕೂಡಿರುವೆನು. ನಾನು ಬರೀ ಬೆತ್ತಲೆ (ನಗ್ನ
ಇಲ್ಲವು. ಯಾವಾಗ ಇಂದ್ರಿಯ ಮತ್ತು ವಿಷಯ (ಅರ್ಥ)ಗಳ
ಯಾಗಿ ದಿವ್ಯವಾದ ಮರ್ಯಾದೆ ರಹಿತನಾಗಿರುವೆಯೋ ಅಂಥ ನೀನು
ನಗ್ನನಾಗಿ ಕಾಣಿಸುವಿ. ಮರ್ಯಾದೆ ಬಿಟ್ಟವನು ನಗ್ನನು ನೀನು" ಎ

"ಆತ್ಮನು—ಎಲೈ ಸುವ್ರತನೇ, ಮಹಾ ಪ್ರಾಜ್ಞನೇ ನಿನಗೆ
ವಾಗಿ ತಿಳಿದಿದ್ದ ಪಕ್ಷದಲ್ಲಿ ಪುರುಷನಿಗೆ ಯಾವುದು ಮರ್ಯಾದೆಯು?
ವಿಸ್ತಾರವಾಗಿ ಹೇಳು" ಎಂದನು.

ಮಹಾಮತಿಯಾದ, ವೀತರಾಗ ಮಹಾ ಪ್ರಾಜ್ಞನು ಅವ
ಕುರಿತು "ಸುಖದುಃಖಗಳಲ್ಲಿ, ಸ್ಥಿರಚಿತ್ತನಾಗಿ ಸದಾ ಇರುವುದು.
ಳಲ್ಲಿ ಸರ್ವಭಾವದಿಂದ ಕ್ಲೇಶವುಳ್ಳವನಾದರೂ ಎಂದಿಗೂ ಸುಸ್ಥಿರತ್ವ
ಬಿಡದೆ ಇರಬೇಕು. ಯಾವ ಲಜ್ಜೆಯು ವಿಶೇಷವಾಗಿ ಪ್ರವೇಶಿಸುತ್ತ
ಅದರ ವಿಷಯವನ್ನು ಹೇಳುತ್ತೇನೆ. "ನನ್ನಿಂದ ಈಗ ಹೀಗೆ ಮಾ
ಬಾರದು. ಇದು ಅಸತ್ಪಥವು; ದುಷ್ಟಮಾರ್ಗವು. ನಗ್ನಸ್ಥಾನವು
ನಾದದ್ದು. ಸಾಜಾತ್ಯದಿಂದ ಇದು ಅಕರ್ಮವು. ಮಾಡಬಾರದ ಕ
ನಗ್ನಸ್ಥಾನ ವಿವರ್ಜಿತ ಸ್ಥಾನದಲ್ಲಿ ನಾನು ಹೀಗೆ ಮಾಡುವುದು ಅ
ಎಂದು ಪಶ್ಚಾತ್ತಾಪದಲ್ಲಿ ತಲ್ಲೀನವಾಗುವುದೇ ಲಜ್ಜೆ (ನಾಚಿಕೆ)ಯು.
ಹೇಳಲ್ಪಟ್ಟಿದೆ." ಇನ್ನು ನೀನು ಕೇಳಿದ ಲೋಕದ ವಿಷಯವನ್ನು
ತ್ತೇನೆ ಕೇಳು.

ಹೇಗೆ ಕುಂಬಾರನು ಚಕ್ರದಲ್ಲಿ ಮಣ್ಣಿನ ಮುದ್ದೆಯನ್ನಿಟ್ಟು,
ದಿಂದ ತಿರುಗಿಸಿ ನಾನಾವಿಧಗಳಾದ ಬೇರೆ ಬೇರೆ ರೀತಿಯ ಸಹಸ್ರಾರು
ಭಾಂಡ (ಗಡಿಗೆ, ಮಡಿಕೆ, ಗುಡಾಣ, ಹರಿವೆ, ಕುಡಿಕೆ, ಶರಾವ)
ಲಾಢವುಗಳನ್ನು ತನ್ನ ಮನಸ್ಸಿನಂತೆ ತನಗೆ ತೋರಿದಂತೆ ನಿರ್ಮಾಣ

ತ್ತಾನೆಯೋ, ಅದರಂತೆಯೇ ಈ (ಧಾತಾ) ಬ್ರಹ್ಮನೂ ನಾನಾ ರೂಪ ದೇಹಗಳನ್ನು ಸೃಜಿಸುತ್ತಾನೆ. ಅನಂತರ ಕೊನೆಗೆ ಯಾವುದಾದರೊಂದು ಕಾರಣದಿಂದ, ಕುಲಾಲನ ಘಟಗಳಂತೆ, ಅವು ನಾಶವನ್ನೂ ಹೊಂದುವುವು. ಎಲೈ ಮಹಾ ಪ್ರಾಜ್ಞನೇ ಯಾವುವು ನಾಶಹೊಂದುವುವೋ ಅವು **ಅಲೋಕವು.** ಯಾವುವು ಅಲೋಕವೋ ಅವೆಲ್ಲವೂ ನಾಶವನ್ನು ಹೊಂದುವುವು. ಯಾವುವು ಸರ್ವದಾ ಇರುವುವೋ, ಸ್ಥಿತಗಳಾಗಿ ದೇಹದಲ್ಲಿರುವುವೋ, ಯಾವ ಲೋಕಗಳು ಸನಾತನಗಳೋ, ಅವುಗಳ ವಿಷಯದಲ್ಲಿ ಲಜ್ಜೆಯನ್ನು ಅವಶ್ಯಕವಾಗಿ ಮಾಡಬೇಕು. ಅಂಥವು ಈ ಭೂಲೋಕದಲ್ಲಿಲ್ಲವು. ಆಕಾಶ, ವಾಯು, ತೇಜಸ್ಸು, ಪೃಥಿವೀ, ಆಪಗಳು ಈ ಐದೂ ಸರ್ವತ್ರ ಸಂಸ್ಥಿತಗಳಾಗಿ ಪ್ರಕಾಶಿಸುತ್ತಾ ಲೋಕಗಳೆಂದು ಹೇಳಲ್ಪಟ್ಟವೆ. ಸರ್ವತ್ರ ಇವು ಇದ್ದೇ ಇರುವುವು. ಇಂಥವರಲ್ಲಿ ಯಾರಿಗೆ ಲಜ್ಜೆಯು ವಿಧಾನಮಾಡಲ್ಪಡುತ್ತದೆ?

ಹೇ ತಾತನೇ, ಇನ್ನು ಈಗ ಸ್ತ್ರೀಯರ ರೂಪವನ್ನು ಹೇಳುತ್ತೇನೆ ಸ್ವಲ್ಪ ಕೇಳಿರಿ. ಹೇಗೆ ಒಬ್ಬ ಚಂದ್ರನು ಉದಕದಿಂದ ಕೂಡಿದ ಘಟಗಳಲ್ಲಿ ವಿರಾಜಿಸಿ ಕಾಣಲ್ಪಡುತ್ತಾನೆಯೋ, ಅದರಂತೆ ನೀನು ಸರ್ವತ್ರ ವಿರಾಜಿಸುತ್ತಿರುವಿ.

ಸಹಸ್ರಾರು ಜಂತುಗಳಲ್ಲಿ ಮೋಹಬದ್ಧನಾಗಿ ಮಹಾತ್ಮ್ಯೆಯಿಂದ ಕೂಡಿ ಸ್ಥಾವರ ಮತ್ತು ಜಂಗಮಗಳೆಲ್ಲದರಲ್ಲೂ ನೀನು ಸ್ಥಿತನಾಗಿರುವಿ. ಮಾಯಾ ಮೋಹಮಯವಾದ ಪಾಪಿ ಯೋನಿ ದ್ವಾರದಿಂದಲೂ, ಯೌವನ ವಯಸ್ಸಿನಿಂದ ಎದ್ದು ಮೇಲೆ ಕಾಣುವ ಉನ್ನತ ಎರಡು ಕುಚಗಳಿಂದಲೂ, ವಿರಾಜಮಾನವಾಗಿವೆ. ತ್ವಕ್ (ಚರ್ಮ) ಮಾಂಸದ ಆರೀತಿಯಾದ ವೃದ್ಧಿಯು ಸೃಷ್ಟಿಕರ್ತನಾದ ಧಾತೃವಿ (ಬ್ರಹ್ಮ)ನಿಂದ ನೋಡಿಯೇ ನೋಡಲ್ಪಟ್ಟದೆಂಬ ವಿಷಯದಲ್ಲಿ ಸಂಶಯವಿಲ್ಲ.

ಜನರ ಲೋಕದ ಪತನಕ್ಕೆ ಇಂಥ ಮೋಹರೂಪವು ಪ್ರದರ್ಶಿಸಲ್ಪಟ್ಟಿದೆ. ನಿನ್ನಿಂದ ಪರಿಕೀರ್ತಿತವಾದ ಅಂಥಾ ನಾರಿಯು ಇಲ್ಲವೇ ಇಲ್ಲವು. ವಿಧಾತನು ತನ್ನ ವಿನೋದಕ್ಕಾಗಿ, ಲೀಲೆಯಿಂದ ಆರೀತಿ ಸೃಷ್ಟಿ ಮಾಡುತ್ತಾನೆ. ಹೇಗೆ ಸ್ತ್ರೀಯರೋ, ಆದರಂತೆ ಪುರುಷರು, ಇಂಥ ಜೀವರು ಸರ್ವತ್ರ ಸಂಸ್ಥಿತವಾಗಿರುವರು. ಕುಚ ಮತ್ತು ಯೋನಿ ವಿಹೀನರು ಯಾರೋ, ಅವರು ಸದಾ ನಿಜವಾಗಿಯೂ ಜೀವನ್ಮುಕ್ತರೇ ಸೌದು. ನರನು "ಪುರುಷನೆಂಥಲೂ"

ನಾರಿಯು "ಪ್ರಕ್ರತಿ" ಎಂತಲೂ ಹೇಳಲ್ಪಟ್ಟಿದಾರೆ. ಆ ಪ್ರಕೃತಿ
ನಾರಿಯು ಪುರುಷನೊಡನೆ ಕೂಡಿ ರಮಿಸಿ ಕ್ರೀಡಿಸುತ್ತಾಳೆ. ಎಂದಿಗೂ
ರಾಗುವುದೇ ಇಲ್ಲವು. ನೀನು ಹೇ ಆತ್ಮನೇ, ಪ್ರಕೃತಿಯಿಂದ ಕ
ಸ್ತ್ರೀ ಪುರುಷರಿಬ್ಬರಲ್ಲಿ ಕಾಣಲ್ಪಡುವಿ, ಹೀಗಿರುವಾಗ ಯಾರು
ಲಜ್ಜೆಯನ್ನು ಮಾಡಬೇಕು? ಇದನ್ನು ಸಮನಾಗಿ ನಡೆದುಕೊಂಡಿರು

ಇನ್ನು ಪ್ರಿಯಳಾದ ವೃದ್ಧ ಸ್ತ್ರೀ ವಿಷಯವನ್ನು ಹೇಳುತ್ತೇನೆ.
ಸುಂದರಿಯು ಅಂಗದಲ್ಲಿ ವಾರ್ಧಿಕ್ಯದಿಂದ ಜರ್ಜರಿತವಾಗಿ ಬೆಳ್ಳಗಿರು
ಕೂದಲುಗಳಿಂದಲೂ, ಹಲ್ಲುಗಳು ಬಿದ್ದು, ವ್ಯಾಕುಲದಿಂದ ಕೂಡಿ
ನಳೂ, ದೀನಳೂ ಆಗಿದ್ದರೂ ಈ ನಾರಿಯು ಬಲವುಳ್ಳವನಿಂದ,
ವೃದ್ಧಳಲ್ಲ. ಇನ್ನು ವೃದ್ಧೆಯು ಯಾರೆಂಬದು ಹೇಳಲ್ಪಡುತ್ತದೆ.
ಲಕ್ಷಣವು ಉಕ್ತವಾಯಿತು. (ವೃದ್ಧ ಸ್ತ್ರೀಯನ್ನು) ಯುವತಿಯ ವಿಷಯ
ಇನ್ನು ಹೇಳುತ್ತೇನೆ. ನಿತ್ಯವೂ ಜೀವಪಾರ್ಶ್ವದಲ್ಲೇ ಸಮಾಧಿಯಿಂದ
ಶ್ರಿತಳಾಗಿ ಜ್ಞಾನದಿಂದ ವೃದ್ಧಿಹೊಂದಿ ಸಮಾಸ್ಥಿತಳಾಗಿ "ಸುಮತಿ"
ಕಳಾಗಿ ಯಾವಾಕೆಯು ಯುವತಿಯೂ, ವೃದ್ಧಳೂ ಆಗಿರುವಳೋ
ನಾರಿಯು ಸ್ವರ್ಗಲೋಕಗಳಲ್ಲೂ ಸರ್ವರಲ್ಲೂ ಸರ್ವದಾ ಪ್ರತಿಷ್ಠಿತ
ವಳು. ಅಂಥವಳ ವಿಷಯದಲ್ಲಿ ಲಜ್ಜೆಯನ್ನು ಮಾಡಬೇಕು.
ಯುಳ್ಳವರಾಗಬೇಕು.

ಇನ್ನೊಂದನ್ನು ಹೇಳುತ್ತೇನೆ. ಈಗ ಯಾವ ನಿನ್ನಿಂದ ಪ್ರೋ
ತಾಯಿಯ ವಿಷಯವನ್ನು ಹೇಳುತ್ತೇನೆ. ಪ್ರಾಣಿಗಳ ಅಂಗಪ್ರದೇ
ಸದಾಕಾಲದಲ್ಲೂ ಚೇತನಳಾಗಿ ಸ್ಥಿತಳಾಗಿ ಪರಜ್ಞಾನಪ್ರದಳು ಯ
ಆಕೆಯು "ಪ್ರಾಜ್ಞಾ" ಎಂದು ಕೀರ್ತಿತಳಾಗಿದ್ದಾಳೆ. ಆ "ಪ್ರಜ್ಞೆ
ಪ್ರಾಣಿಗಳನ್ನು ಪಾಲನೆ ಮಾಡಿ ಸಲಹುವ ವಿಷಯದಲ್ಲಿ "ಮಾ
(ತಾಯಿ) ಎಂದು ಸಮಾಖ್ಯಾತಳಾಗಿದ್ದಾಳೆ. ಆಕೆಯೇ "ಸುಮತಿ" ನ
ಳಾಗಿ ಸರ್ವ ಲೋಕಗಳಲ್ಲೂ ಪೋಷಣೆಗೂ, ಸರ್ವ ಪ್ರಾಣಿಗಳ ಹಿತಕ್ಕಾ
ಸ್ಥಿತಳಾಗಿ ತಾಯಿಯೆಂದು ಕರೆಯಿಸಿಕೊಳ್ಳುವ ಮಾತೃವಾಗಿ ಪರಿಕ
ಗಿದ್ದಾಳೆ. ಸಂಸಾರ ದ್ವಾರ (ಮಾರ್ಗ)ಗಳಲ್ಲಿ ನಿತ್ಯ ಯಾವ ರೂಪಗಳು
ದುಃಖ ಪ್ರದರ್ಶಕಗಳಾಗಿರುವುವೋ ಇಂಥವೆಲ್ಲ ಮಾತೃಗಳಾಗಲ

ಅಂಥವರು ದುಃಖಪ್ರದರಲ್ಲದೆ ತಾಯಿಯರಲ್ಲವೇ ಅಲ್ಲವು. ಹೀಗೆ ಮಾತೃ ರೂಪವನ್ನು ಹೇಳಿದೆನು. ಇನ್ನೇನನ್ನು ಹೇಳಲಿ? ಎಂದು ಕೇಳಿದನು.

ಆತ್ಮನು—"ನನಗೆ ಸಂತಾಪವನ್ನು ನಾಶಮಾಡಲು ಬಂದಿರುವ ತಾವು ಯಾರು? ನಿನ್ನ ಸ್ವಂತ ಸ್ವರೂಪ ಕಥನವನ್ನು ನೀನೇ ವಿಸ್ತಾರವಾಗಿ, ಸಾಮಾಖ್ಯಾನ ಮಾಡಿ ಹೇಳು" ಎಂದನು.

ವೀತರಾಗನು—"ಯಾವನ ದೆಶೆಯಿಂದ ಕಾಮುಗಳು ಹಿಂತಿರುಗಿ ಓಡಿ ಹೋಗುತ್ತವೆಯೋ ಅಂಥವನು ನಾನು "ವೀತರಾಗ"ನೆಂದು ಕರೆಯಲ್ಪಡುವೆನು. ಶುದ್ಧನಾಗಿ ಈತನ ಈ ಕರ್ಮಗಳನ್ನು ಪ್ರಯತ್ನಪೂರ್ವಕವಾಗಿ ವಿಚಾರ ಮಾಡಿ ನೋಡಿ ತಿಳಿಯಬೇಕು. ಅನ್ಯಥಾ ಅದು ಗೊತ್ತಾಗುವುದಿಲ್ಲವು. ನನ್ನ ಸಮೀಪಕ್ಕೆ "ಆಶೆ"ಯೆಂಬುದು ಎಂದಿಗೂ ಯಾವಾಗಲೂ ಯಾವರೀತಿಯಿಂದಲೂ ಬರಲಾರದು. ಕ್ರೋಧ, ಲೋಭ, ಮೋಹಗಳು ಎಲ್ಲವೂ ಆಶೆ ರಹಿತನಾದ ನನ್ನಿಂದ ಭಯಪಟ್ಟು ಸಂಪೂರ್ಣವಾಗಿ ಲಯವನ್ನೇ ಹೊಂದಿದವು. ನಿನಗೆ ಮಂಗಳವಾಗಲಿ. ನಾನು "ವೀತರಾಗನು" ಆಗಿದ್ದೇನೆ. ವಿವೇಕವು ನನ್ನ ಧನವು." ಎಂದನು.

ಆತ್ಮನು—ವಿವೇಕನೆಂಬ ಹೆಸರುಳ್ಳ ನಿನ್ನ ಸಹೋದರನು ಎಂಥವನು? ನಿನ್ನ ಸ್ವಂತ ಭ್ರಾತೃವಿನ ಲಕ್ಷಣವನ್ನು ಹೇಳು. ನಿನ್ನ ಭ್ರಾತನು ಆತ್ಮನಿಗೂ ನನಗೂ ಭ್ರಾತೃವೇ ಎಂದು ಕೇಳಿದನು.

ವೀತರಾಗನು—"ಆತನ ರೂಪವನ್ನೂ ಲಕ್ಷಣವನ್ನೂ ನಾನೇ ನಿನ್ನ ಮುಂದೆ ಹೇಳುವುದಿಲ್ಲವು. ಹೇ ಮಹಾ ಭಾಗನೇ, ಆ ನನ್ನ ಸಹೋದರನ ಆಹ್ವಾನವನ್ನು ನಾನು ಮಾಡುತ್ತೇನೆ ಎಂದು ಹೇಳಿ "ಎಲೈ ವಿವೇಕನೇ, ಭ್ರಾತನೇ ನಮ್ಮಿಬ್ಬರ ಮಾತನ್ನು ಕೇಳು, ಎಲೈ ಮಹಾ ಭಾಗನೇ, ಮಹಾ ಮತಿಯೇ ನನ್ನಲ್ಲಿರುವ ಸ್ನೇಹದ ದೆಶೆಯಿಂದ ದಯವಿಟ್ಟು ಇಲ್ಲಿಗೆ ಬಾ." ಎಂದನು.

ಆ ವಿವೇಕಿಯು "ಶಾಂತಿ" ಮತ್ತು "ಕ್ಷಮಾ" ಎಂಬ ಇಬ್ಬರು ಹೆಂಡತಿಯರಿಂದ ಕೂಡಿ ಬಂದನು. ಆತನು ಸರ್ವ ತತ್ವವನ್ನು ಬಲ್ಲವನು. ಸರ್ವ ದರ್ಶಿಯು, ಸರ್ವತ್ರ ವ್ಯಾಪಿಯು, ಸರ್ವಾರ್ಥದಲ್ಲೂ ಇರುವನು, ಸರ್ವ

ಸತ್ವ ಪರಾಯಣನು, ಸಕಲ ಸಂದೇಹಗಳಿಗೂ ಶತ್ರುವು. ಆತನಿದ್ದಲ್ಲಿ
ಹಾದಿಗಳಿಗೆ ಅವಕಾಶವೇ ಇಲ್ಲವು. ಜ್ಞಾನವತ್ಸಲನು, ಆ ಮಹಾ
"ಧಾರಣ" ಮತ್ತು "ಧೀಃ" ಎಂಬ ಇಬ್ಬರು ಹೆಣ್ಣು ಮಕ್ಕಳು,
"ಮೋಕ್ಷ"ವೆಂಬುವನು ಮಹಾ ಗುರುವೋ, ಅಂಥವನಿಗೆ "
ವೆಂಬುವನು ಜ್ಯೇಷ್ಠ ಸುತನು, ನಿರ್ಮಲನೂ, ಮತ್ತು ನಿ
ಕಾರಿಯು, ನಿರಾಶನು, ನಿಷ್ಪರಿಗ್ರಹನು, (ದಾನ ತೆಗೆದುಕೊಳ್ಳದಿರು
ಸರ್ವವೇತ್ತ (ತಿಳಿದವ)ನೂ, ಸರ್ವವೇಳೆಯಲ್ಲೂ ಪ್ರಸನ್ನಾತ್ಮನು,
ಮನಸ್ಸುಳ್ಳವನು, ಗತದ್ವಂದ್ವನು (ಸುಖದುಃಖ ಲಾಭಾಲಾಭ, ಜ
ಜಯ ಮೊದಲಾದ ದ್ವಂದ್ವರಹಿತನು,) ಸರ್ವಕಾಲದಲ್ಲೂ ಸಮನು,
ಕಾರವಾಗಿ ಸಂತೋಷದಿಂದ ಉಬ್ಬಿ ದುಃಖದಿಂದ ಕುಗ್ಗದೆ ಇರುವನು)
ಮತಿಯು ಆದ ಇಂಥಾ ವಿವೇಕಿಯು ಗುಣರತ್ನಗಳಿಂದ ವಿಭೂಷಿ
ಯಾವ ತನಗೆ ಮಹಾತ್ಮರಾದ "ಸತ್ಯ" ಮತ್ತು "ಧರ್ಮ"ರೆಂಬ ಮಹಾ
ಗಳಾದ ಅಮಾತ್ಯರಿಬ್ಬರೊಡನೆಯೂ, ಕ್ಷಮಾ ಮತ್ತು ಶಾಂತಿಯ
ಭಾರ್ಯೆಯರೊಡಗೂಡಿ ಸಮೀಪಕ್ಕೆ ಬಂದನು.

ವೀತರಾಗನನ್ನು ಕುರಿತು — "ಸಮೂಹೂತನಾಗಿ, ಕರೆದಿ
ಬಂದಿದೇನೆ. ಏನು ಕಾರಣ ಏತಕ್ಕಾಗಿ ಆಹ್ವಾನಿಸಿರುವಿ? ನನ್ನ
ಹೇಳಿ. ಏನು ಉದ್ದೇಶದಿಂದ ಈಗಲೇ ನನ್ನನ್ನು ಕರೆದಿರುವಿ?"
ಕೇಳಿದನು.

ವೀತರಾಗನು—"ಈ ನಮ್ಮೆಲ್ಲರಿಗೆ ನಿಂತಿರುವ ಈ ಪುರುಷ,
ಸರ್ವವ್ಯಾಪಕನೂ, ನಿಯಾಮಕನೂ ಸ್ವಾಮಿಯೂ, ನನಗೂ ಸ್ವಾಮಿ
ಎಲೈ ಭ್ರಾತನೇ ಈತನು ಮಹಾ ಪಾಶಗಳಿಂದ (ನಿಯಂತ್ರಿತನಾಗಿ)
ಟ್ಟಿದ್ದಾನೆ. ಈತನು ದಾರುಣಗಳಾದ ಸಂಸಾರದ ಮೋಹ ಬಂಧನ
ಬಂಧಿಸಲ್ಪಟ್ಟು, ಪಂಚ ತತ್ವಗಳಿಂದ ಸಮಾವಿಷ್ಟನಾಗಿ, ಜ್ಞಾನ,
ಗಳಿಂದ ವಿವರ್ಜಿತನಾಗಿದಾನೆ. ನೀವು ತತ್ವಗಳಲ್ಲಿ ಪಂಡಿತರು, ಈ ಆತ್ಮ
ನೀವೇ ವಿಚಾರಮಾಡಿ ಕೇಳಿರಿ" ಎಂಬ ವೀತರಾಗನ ಮಾತನ್ನು

ವಿವೇಕಿಯು “ವಿಶ್ವನಾಯಕನೇ, ದೇವನೇ, ತಾವು ಸುಖವಾಗಿದ್ದೀರಾ? ನೀವು ಈ ಸಂಸಾರದಲ್ಲಿ ಬಂದಮೇಲೆ ಏನೇನು ಸುಖವನ್ನು ಶುಭ(ಫಲ)ಗಳನ್ನು ಅನುಭವಿಸಿದಿರಿ?” ಎಂದು ಆತ್ಮನನ್ನು ಕೇಳಿದನು.

ಆತ್ಮನು—ನನ್ನಿಂದ ಗರ್ಭವಾಸದಲ್ಲಿ ದಾರುಣವೂ, ಅಸಹ್ಯವೂ ಆದ ಮಹದ್ದುಃಖವು ಬಹಳವಾಗಿ ಅನುಭವಿಸಲ್ಪಟ್ಟಿತು ಮಹಾ ಪ್ರಾಜ್ಞನೇ, ಸದಾ ಜ್ಞಾನಹೀನನಾಗಿ ದುಃಖವು ಅನುಭವಿಸಲ್ಪಟ್ಟಿತು. ಶರೀರ ಬಂದಮೇಲೆ ಈ ದೇಹದಲ್ಲಿಯೂ ಜ್ಞಾನವಿಭ್ರಷ್ಟನಾಗಿ ಲೋಕಸಂಗತನಾಗಿ ಜನರೊಡನೆ ಬೆರೆತು, ಬಾಲ್ಯದಲ್ಲಿ ಎಲೈ ತಾತ, ಪ್ರಿಯನೇ, ನನ್ನಿಂದ ಕೃತ್ಯಾಕೃತ್ಯಗಳು ಮಾಡಲ್ಪಟ್ಟವು. ಯೌವನದಲ್ಲಿ ಭಾರ್ಯೆಯು ಅನೇಕರೀತಿ ರತಿ ಕ್ರೀಡೆಯಿಂದ ಅನುಭವಿಸಲ್ಪಟ್ಟಳು. ವಾರ್ಧಿಕ್ಯವನ್ನು ಹೊಂದಿ, ಪುತ್ರಶೋಕಾದಿಗಳಿಂದ ಸಂತಪ್ತನಾಗಿ ಭಾರ್ಯಾದಿಗಳ ವಿಯೋಗದಿಂದ ಅಹೋರಾತ್ರಿಯೂ ಅನೇಕ ದುಃಖಗಳಿಂದ ಆವರಿಸಲ್ಪಟ್ಟು, ಸಂಮೂಢನಾಗಿ ದಿನೇ ದಿನೇ ಸಂತಪ್ತನಾಗಿದೇನೆ. ಎಲೈ ಪ್ರಾಜ್ಞನೇ, ಹಗಲು ರಾತ್ರಿಯಲ್ಲಿ ಸ್ವಲ್ಪವೂ ಸುಖವನ್ನು ಪಡೆದು ಕಾಣಲಾರೆನು. ಹೀಗೆ ದುಃಖದಿಂದ ಸಂತಪ್ತನಾದ ನಾನು, ಮಹಾಮತಿಯೇ, ಏನುಮಾಡಲಿ! ಅದಕ್ಕೆ ಉಪಾಯವನ್ನು ಹೇಳು. ಏತರಿಂದ ನಾನು ಸುಖವನ್ನು ಪಡೆಯುವೆನು? ಈ ಸಂಸಾರವೆಂಬ ಬಲೆಯ ಸಮೂಹದಿಂದ ಈ ಸಂಬಂಧದ ದೆಸೆಯಿಂದ ಈಗಲೇ ಬಿಡುಗಡೆ ಮಾಡು.”

> ವಾರ್ಧಿಕಂ ಪ್ರಾಪ್ಯ ಸಂತಪ್ತಃ ಪುತ್ರಶೋಕಾದಿಭಿಸ್ತಥಾ ।
> ಭಾರ್ಯಾದೀನಾಂ ವಿಯೋಗೈಸ್ತು ದಗ್ಧೋಽಸ್ಮ್ಯಹಮಹರ್ನಿಶಂ ।
> ದುಃಖೈರನೇಕಸಂವರ್ತ್ಯೈಃ ಸಂತಪ್ತೋಽಸ್ಮಿ ದಿನೇ ದಿನೇ ।
> ದಿವಾರಾತ್ರೌ ಮಹಾಪ್ರಾಜ್ಞ ನ ವಿಂದಾಮಿ ಸುಖಂ ಕ್ವಚಿತ್ ।
> ಏವಂ ದುಃಖೈಃ ಸುಸಂತಪ್ತಃ ಕಿಂ ಕರೋಮಿ ಮಹಾಮತೇ ।
> ತಮುಪಾಯಂ ವದಸ್ವೈವ ಸುಖಂ ವಿಂದಾಮಿ ಯೇನ ವೈ ।
> ಅಸ್ಮಾತ್ ಸಂಸಾರಜಾಲೌಘಾನ್ಮೋಚಯಾದ್ಯ ಸುಬಂಧನಾತ್ ॥

ವಿವೇಕನು—“ಎಲೈ ಜಗತ್ಪತಿಯೇ, ನೀನು ಶುದ್ಧನಾಗಿದ್ದಿ, ನಿರ್ದ್ವಂದ್ವನಾಗಿರುವಿ, ಪಾಪಸಂಬಂಧವಿಲ್ಲದವನು. ಅದುದರಿಂದ ಪಾಪವಿಲ್ಲವೆಂಬುದು ಪ್ರಸಿದ್ಧವು. ಸುಖಪ್ರದನೂ, ಮಹಾತ್ಮನೂ ಆದ ವೀತರಾಗನ ವಶನಾಗಿ

ಹೀಗೆಯೇ ಹೋಗು, ವನಕ್ಕೆ ಹೋಗು. ನಿಃಸಂಶಯವಾಗಿ ಯಾವ
ನಿಸ್ಸಂಗವೂ, ಆಚಾರ ವರ್ಜಿತವೂ ಆದ ನಗ್ನವು ಕಾಣಲ್ಪಟ್ಟಿತೋ
ಈತನು ಸರ್ವಸಂತಾಪ ನಾಶಕನಾದ ಸುಖಪ್ರದರ್ಶಕನು" ಎಂದನು

ಇದನ್ನು ಕೇಳಿ ಶುದ್ಧಾತ್ಮನು ಪುನಃ ವೀತರಾಗನಲ್ಲಿ ಹೋಗಿ ಅ
ಕುರಿತು ಅತ್ಯಂತ ದೀನನಾಗಿ,—

"ನನ್ನ ಮಾತನ್ನು ಕೇಳಿರಿ, ಏತರಿಂದ ನಾನು ಸುಖವನ್ನು
ಕಾಣುತ್ತೇನೆಯೋ ಆ ಮಾರ್ಗವನ್ನು ನನಗೆ ತೋರಿಸಿರಿ" ಎಂದನು.

ವೀತರಾಗನು—ಹಾಗೆಯೇ ಆಗಲಿ. ಮಹಾ ಪ್ರಾಜ್ಞನೇ,
ಮಾತನ್ನು ನಡೆಯಿಸುತ್ತೇನೆ. ಸುಖವಾರ್ತೆಯು ನಿನ್ನಿಂದ ಮಾಡಲ್ಪ

ವಿವೇಕನನ್ನು ಕುರಿತು ಪುನಃ ಹೋಗು, ಈತನು ನಿನಗೆ ಸುಖ
ವನ್ನು ಹೇಳುವನು" ಎಂದನು.

ಹೀಗೆ ಪುಣ್ಯಾತ್ಮನಾದ ವೀತರಾಗನಿಂದ ಪ್ರೇರಿತನಾಗಿ ಪ್ರಭ
ಆತ್ಮನು ಹೊರಟು ಶುದ್ಧ ಸತ್ವಮನೂ, ಮಹಾತ್ಮನೂ ಆದ ಆ ವಿವೇ
ಕುರಿತು, —

"ನೀನೇ ನನಗೆ ಸುಖವನ್ನು ತೋರಿಸು. ವೀತರಾಗನಿಂದ ಪ
ನಾಗಿ ಬಂದಿದ್ದೇನೆ. ನಿಮ್ಮನ್ನು ಶರಣಹೊಂದಿದ್ದೇನೆ. ದಾರುಣವಾದ
ರದ ದೆಶೆಯಿಂದ ರಕ್ಷಿಸು" ಎಂದನು.

ವಿವೇಕವು—"ಮಹಾ ಪ್ರಾಜ್ಞನೇ, ಜ್ಞಾನನ್ನು ಕುರಿತು ಹೋ
ಅವನು ನಿನಗೆ ಸರ್ವವನ್ನೂ ಹೇಳುತ್ತಾನೆ" ಎಂದನು.

ಹಾಗೆ ಉಕ್ತನಾದ ಆತ್ಮನು ಎಲ್ಲಿ ಜ್ಞಾನವು ಪ್ರತಿಷ್ಠಿತನಾಗಿರು
ಅಲ್ಲಿಗೆ ಸಂಪ್ರಾಪ್ತನಾಗಿ ಬಂದು—

"ಭೋ, ಭೋ, ಜ್ಞಾನನೇ, ಮಹಾ ತೇಜನೇ, ಸರ್ವಭಾ
ಕನೇ, ನಿನ್ನನ್ನು ನಾನು ಶರಣು ಹೊಂದಿದೇನೆ. ಸುಖದ ಮಾರ್ಗವನ್ನು
ರ್ಶನ ಮಾಡಿ ತೋರಿಸು" ಎಂದನು.

ಜ್ಞಾನವು—ಎಲೈ ಲೋಕೇಶನೇ, ನಾನು ನಿನ್ನ ಭೃತ್ಯನು, ಎಲೈ ಸುವ್ರತನೇ, ನೀನು ನನ್ನನ್ನು ತಿಳಿಯಲಿಲ್ಲ. ನನ್ನಿಂದಲೂ, ಧ್ಯಾನದಿಂದಲೂ ಪೂರ್ವದಲ್ಲೇ ಪುನಃ ಪುನಃ ಬೇಡ ಬೇಡವೆಂದು ಅಡ್ಡಿಮಾಡಿ ವಾರಿತನಾದರೂ ಈ ಪಂಚಾತ್ಮಕರ ಸಂಗದಿಂದ ಮಹಾ ಆಪತ್ತನ್ನು ನೀವು ಹೊಂದಿದಿರಿ. ಮಹಾ ಪ್ರಾಜ್ಞನೇ, ಧ್ಯಾನವನ್ನು ಕುರಿತು ಹೋಗು. ಆತನು ನಿನಗೆ ಸುಖವನ್ನು ಕೊಡುವನು" ಎಂದು ಜ್ಞಾನನಿಂದ ಪ್ರೇಷಿತನಾಗಿ ಆತ್ಮನು ಧ್ಯಾನನನ್ನ ಆಶ್ರಯಿಸಿ ಸ್ಥಿತನಾಗಿ—

"ಧ್ಯಾನನೇ, ಸುಖವನ್ನು ಆತ್ಯಂತಿಕ ಸಿದ್ಧಿ ಸೌಖ್ಯವನ್ನು ನನಗೆ ತೋರಿಸು. ಹೀಗೆ ನಿನ್ನನ್ನು ಶರಣುಹೊಂದಿ ಬಂದಿರುವ ನನ್ನನ್ನು ಪರಿರಕ್ಷಣೆ ಮಾಡು" ಎಂದನು.

ಹೀಗೆ ಸಂಭಾಷಣೆ ಮಾಡಿದ ಆ ಧ್ಯಾನನ ಮಾತನ್ನು ಕೇಳಿದ ನಂತರ ಆತನೇ ಪುನಃ ಆ ಆತ್ಮನನ್ನು ಕುರಿತು ಪ್ರಹೃಷ್ಟನಾಗಿ ಮಿತ್ರನಂತೆ—

"ಎಲೈ ಪ್ರಿಯನೇ, ತಾತನೇ, ಸರ್ವ ಕರ್ಮಗಳಲ್ಲೂ ಸಂಸ್ಥಿತನಾಗಿರುವ ನಾನು ಎಂದಿಗೂ ತ್ಯಾಜ್ಯನಾಗಬಾರದು, ನನ್ನನ್ನು ಯಾವಾಗಲೂ ಬಿಡಬಾರದು. ನಿನ್ನಿಂದಲೇ ವೀತರಾಗನಿಂದಲೂ, ಸದಾ ವಿವೇಕನಿಂದಲೂ, ಜ್ಞಾನದಿಂದ ಕೂಡಿ ಧ್ಯಾನದಿಂದ ಯುಕ್ತನಾಗಿ, ಇರು. ನೀನು ಆತ್ಮನನ್ನು (ಭಗವಂತನನ್ನು) ನೋಡುವಿ ನೀನು ಆತ್ಮವಾನನು ಆಗಿದ್ದಿ. ವಿಕಲ್ಪರಹಿತನಾಗಿ ನಿರಾತಂಕನಾಗಿ ಸ್ಥಿರನಾಗಿ ಇರು.

ಹೇಗೆ ಗಾಳಿ ಇಲ್ಲದಾಗ ದೀಪವು ಸ್ಥಿರವಾಗಿ ಇದ್ದು, ಉರಿದು, ಕಜ್ಜಲ (ಕರಿ ಕಾಡಿಗೆಯ)ವನ್ನು ಬಿಟ್ಟು ವಮನ ಮಾಡುತ್ತದೆಯೋ, ಹಾಗೆಯೇ ದೋಷಗಳನ್ನೆಲ್ಲಾ ಜ್ಞಾನ (ಧ್ಯಾನಾ) ಅಗ್ನಿಯಿಂದ ಪ್ರಜ್ವಲಿಸಿ ಸುಟ್ಟು, ನಿರ್ವಾಣ (ಪ್ರಾಕೃತ ದೇಹರಹಿತತ್ವ)ವನ್ನು ಹೊಂದಿ (ಭಗವಂತನು) ದರ್ಶನವನ್ನು ಹೊಂದಿ ಪಡೆಯುವಿ.

ಏಕಾಂತಸ್ಥನೂ, ನಿರಾಹಾರಿಯೂ, ಮಿತಾಶಿಯೂ ಸರ್ವದಾ ಅಪ್ರಾಶಿಯೂ ಆಗು. ನಿರ್ದ್ವಂದ್ವನೂ, ಶಬ್ದ ಸಂಹೀನನೂ, ಸರ್ವಸಂಗ ರಹಿತನೂ ಆಗಿ ನಿಶ್ಚಲೋಪಾಸನೆಯಲ್ಲಿ ಸ್ಥಿತನಾಗಿರು. ಆತ್ಮಾಂತರ್ಗತನಾಗಿ,

ಆತ್ಮಸ್ಥನಾದ ಪರಮಾತ್ಮನನ್ನು, ಮನಸ್ಸಿನಿಂದ, ಧ್ಯಾನದಿಂದ (ನ
ಸ್ಥಿರಬುದ್ಧಿಯಿಂದ ವಿಷ್ಣುವಿನ ಪರಮ ಪದ ವೆನಿಸಿದ ಪರಸ್ಥಾ
(ವೈಕುಂಠ, ಶ್ವೇತದ್ವೀಪ, ಅನಂತಾಸನವೆಂಬ ತ್ರಿಧಾಮವನ್ನು) ಹೊ
ಎಂದು ಹೇಳಿದನು.

ಹೀಗೆ ಆಧ್ಯಾತ್ಮ ಕಥನವು ಪದ್ಮಪುರಾಣ ೮ನೇ ಅಧ್ಯಾಯ
೧೦೧ ಶ್ಲೋಕಗಳು.

ಜೀವದ ಬಂಧನ ನಿರೂಪಣೆ

ಭಗವಂತನಿಗೆ "ಜೀವಾಂತಸ್ಥನಾದದ್ದು (ಜೀವನ ಒಳಗೆ ಇ
ಜೀವನ ಹೊರಗೆ ಇರತಕ್ಕದ್ದು ಎಂಬುವ ಎರಡು ರೂಪಗಳಿವೆ"
ಪ್ರಸಿದ್ಧವು. ಅದೇನೇ ಪ್ರಲಯಕಾಲದಲ್ಲಿ ಸಮಸ್ತ ಅವತಾರಗಳಿಗೆ
ಧಿಷ್ಠಾನವಾದುದ್ದು ಪ್ರಧಾನವಾಗಿದೆ. ಆ ರೂಪದ ದೆಸೆಯಿಂದಲೆ
ಯಲ್ಲಿ ಅಖಿಲ ಅವತಾರಗಳೂ ಸಂಭವಿ (ಪ್ರಾದುರ್ಭವಿ)ಸುವುವು. ಈ
ನಾದ ಆದ್ಯವೆನಿಸಿದ ಮೂಲ (ರೂಪ)ವು ಪ್ರಳಯದಲ್ಲೂ, ಸೃಷ್ಟಿಯಲ್ಲಿ
ಅನಂತ ರೂಪಗಳಿಂದ ಜೀವರನ್ನು ಅಧಿಷ್ಠಾನ ಮಾಡಿಕೊಂಡು
ಗಳಾಗಿ ಸದಾ ಇರುವುವೇ ಹೊರ್ತು ಏಕತ್ರದಲ್ಲಿ ಲೀನವಾದವು,
ಇದನ್ನೇ **ಬಿಂಬರೂಪವೆನ್ನುವರು.** ಈ ಬಿಂಬರೂಪಿಯು ಜ್ಞಾನ
ಮೋಕ್ಷವು. ಇದೇ ವಿಜ್ಞಾನ(ವೆಂದು ಪ್ರಸಿದ್ಧವಾಗಿದೆ)ವೆನಿಸಿದೆ.

ರೂಪಾಂತರ ಜ್ಞಾನ ಮತ್ತು ಉಪಾಸನಾದಿಗಳಾದರೋ ಪ್ರ
ನಿವರ್ತಕತ್ವದಿಂದ, ಭಗವಂತನ ಬಿಂಬದ ಜ್ಞಾನ ಮತ್ತು ಉಪಾ
ಗಳಿಗೆ ಉಪಯೋಗವಾಗುತ್ತದೆ. ಇಲ್ಲಿ ವಿಶೇಷವೇನೆಂದರೆ—

ಯಾವ ಕಾಲದಲ್ಲಿ ಯಾವ ಜೀವರು ಸೃಷ್ಟಿಗೆ ಬರತಕ್ಕವರೋ
ಪರ್ಯಂತವಾಗಿ, ಅನಾದಿಕಾಲದಿಂದ ರಮಾ ಮಾತ್ರ ಪ್ರತೀಕತ್ವದಿಂದ
ರನ್ನು ಅಧಿಷ್ಠಾನ ಮಾಡಿಕೊಂಡಿರುವನು. ಸೃಷ್ಟಿಕಾಲ್ಪದಲ್ಲಾದರೋ ಆ
ಗಳ ದಶೇಂದ್ರಿಯ, ಪಂಚಭೂತ ಮನಸ್ಸು ಎಂಬ (**ಹದಿನಾರು**)

ಲೇಕಲೆಗಳಿಂದ ಕೂಡಿದ ಗುಣತ್ರಯಾತ್ಮಕವಾದ ಪ್ರಕಾಶ, ಶಕ್ತಿ, ಕ್ರಿಯಾ, ಸ್ಥಿತಿವುಗಳ ಲಕ್ಷಣ, ಶಕ್ತಿಯುಕ್ತವಾದ ಸೂಕ್ಷ್ಮತಮವಾದ "ಲಿಂಗ" ಶರೀರವು ಹಾಲು ನೀರು ಸೇರಿರುವಂತೆ ಜೀವ (ಚಿತಾ) ಚಿತ್‌ನಿಂದ ಸಂಮಿಲಿತವಾಗಿದೆ.

ಅಂಥ ಚಿತ್ ಅಚಿತ್ ಮಿಶ್ರವಾದ ಪಿಂಡದಲ್ಲೇ ಪರಮ ಮುಕ್ತಿಪರ್ಯಂತ ವಾಗಿಯು "ಜೀವನು" ಎಂಬ ಶಬ್ದ ವ್ಯವಹಾರವು. ಅಲ್ಲೇ ಅಪರೋಕ್ಷ ವಿಲ್ಲದಿರುವಾಗ, ಭೇದ ಪ್ರತಿಭಾಸವು ಉಂಟಾಗುವುದಿಲ್ಲವು. ಹೇಗೆ ದೀಪವು ಭೂತಾಂತರದಿಂದ ಸಂಮಿಳಿತವಾಗಿ ಸೇರಿಕೊಂಡಿದ್ದರೂ, ತೇಜಸ್ಸಿಗೆ(ಅಪ್ರತಿಘ) ಅಡ್ಡಿ, ಪ್ರತಿಹತಿಯಿಲ್ಲವೋ ಅದರಂತೆ ಜೀವ ಚಿತ್ ಸಹ ಸೂಕ್ಷ್ಮ ಗುಣ ತ್ರಯಾತ್ಮಕ ಅಚಿತ್ ಮಿಶ್ರಿತನಾಗಿದ್ದರೂ ಚಿದ್ರೂಪ (ಜ್ಞಾನವುಳ್ಳವ) ನಾಗಿಯೇ ಇರುವನು.

ಅಚಿತ್ ಆದರೋ ವಿಶೇಷತಃ ಉಪಕಾರ ಅಪಕಾರವನ್ನು ಹೊಂದಲು (ಅಥವಾ ಮಾಡಲು) ಸಮರ್ಥವಲ್ಲವೆಂದು, ಎರಡನೆಯದಾದ ಮಹತ್ತತ್ವ, ಅಹಂಕಾರತತ್ವ ಭೂತ(ಪಂಚಕ)ಗಳ ಅಂಶಗಳಿಂದ ಸಂಯೋಗಮಾಡಿ ಭೋಗ ದಿಂದ ಪ್ರಾರಬ್ಧ ಕರ್ಮವನ್ನು ಹೋಗಲಾಡಿಸಿ ನಾಶಮಾಡಿ, ಮುಕ್ತನನ್ನಾಗಿ ಮಾಡಲು, ದಶೇಂದ್ರಿಯ, ಮನಸ್ಸು, ಶ್ರದ್ಧಾ, ಆಕಾಶ, ವಾಯು, ತೇಜಸ್ಸು, ಜಲ, ಪೃಥಿವೀ, ಅನ್ನ, ವೀರ್ಯ, ತಪಸ್ಸು. ಲೋಕ, ಮಂತ್ರ, ನಾಮಕರ್ಮ, ಚಿದಾತ್ಮಕ ಹದಿನಾರು (ಷೋಡಶ) ಕಲಾಗಳಿಂದ ಕೂಡಿದ ಸ್ಥೂಲ ಶರೀರ ವನ್ನು ನಿರ್ಮಾಣ ಮಾಡಿ, ಸ್ವಯಂ ತಾನೂ, ಅಲ್ಲಿ ಜೀವವನ್ನು, ಅಂಗಾರ ದಲ್ಲಿರುವ ಅಗ್ನಿಯಂತೆ, ನಿವೇಶ ಮಾಡಿ (ಸೇರಿಸಿ) ಇಟ್ಟು, ಅವನಿಂದ ಸಂಪಾ ದಿಸಲ್ಪಡುವ ಪುಣ್ಯ ಪಾಪ ರೂಪವಾದ ವಿತ್ತವನ್ನು, ಸಾತ್ವಿಕ, ರಾಜಸ, ತಾಮಸರಾದ ತನ್ನ ಪುತ್ರರಾದ ತ್ರಿವಿಧ ಜೀವರಿಗೆ ಅವರವರ ಯೋಗ್ಯತೆ ಯನ್ನು ಅನುಸರಿಸಿ (ಯಥಾಯೋಗ್ಯವಾಗಿ) ವಿಭಾಗ ಮಾಡಿ ಹಂಚಿ ಕೊಡಲು ಕಾರ್ಯ, ಕಾರಣ, ಪ್ರೇರಕರಾದ ಬ್ರಹ್ಮ, ರುದ್ರ, ಇಂದ್ರಾದಿ ಪುಷ್ಕರಾಂತ ರಾದ ದೇವತೆಗಳನ್ನೂ, ದೇವಶತ್ರುಗಳಾದ ಅಸುರರನ್ನೂ ಅಧಿಷ್ಠಾನರನ್ನಾಗಿ ಮಾಡಿ, ಜೀವರ ಅಧಿಷ್ಠಾನದಲ್ಲಿ ಸ್ವಯಂ ಅಂತರ್ಯಾಮಕನಾಗಿರುತ್ತಾನೆ.

ಮುಂದೆ (ಭೋಭೂಯಮಾನ) ಅನುಭವಿಸಬೇಕಾಗಿರುವ ಜ್ಞಾನ, ಆನಂದ, ಸ್ವರೂಪದಲ್ಲಿ, ಪ್ರಾಕೃತವಾದ ಸುಖಾದಿಗಳ ಭೋಗವನ್ನು ಅನು

ಭವಿಸುವ ಅವಸರದಲ್ಲಿ ಈರೀತಿಯಾದ ಆ ಸ್ವರೂಪ ಸುಖವು
ಅವಿದ್ಯಗಳೆಂಬ ಪದಗಳಿಂದ ಬೋಧ್ಯವಾದ ಸ್ವೇಚ್ಛಾ (ಭಗವದಿ
ದಿಂದಲೂ, ಲಿಂಗಶರೀರ ರೂಪದಿಂದಲೂ ಮತ್ತು ಪ್ರಕೃತಿಯಿಂ
ದಿಸಲ್ಪಟ್ಟಿದೆ. ಇಷ್ಟುಮಾತ್ರದಿಂದಲೇ, ಶರೀರ, ಇಂದ್ರಿಯ, ವಿ
ಭೋಗವನ್ನು ಕೊಟ್ಟರೆ, ಸಾಲದು. ಸುಪ್ತ್ಯಾದಿಗಳಲ್ಲಿ ಅವು ಕ
ದಿಲ್ಲ. ಅದರ ಅನುಭವವೂ ಆಗಲಾರದು. ಆದುದರಿಂದ ಯಾವುದ
ಸಹಕೃತಗಳಾದರೆ ಶರೀರಾದಿಗಳು, ಭೋಗವನ್ನು ಅನುಭವಿಸಿ
ಸಮರ್ಥವಾಗುತ್ತದೆಯೋ ಅದೇ ಮುಖ್ಯ ಬಂಧಕವು.

ಅದನ್ನು ಸರಿಯಾಗಿ ವಿಚಾರ ಮಾಡಿದರೆ ಅಭಿಮಾನವೇ ವ
ರುವುದೆಂದು ತಿಳಿದುಬರುತ್ತದೆ. ಅದು ಹೇಗೆಂದರೆ —

ತನ್ನಲ್ಲಿರುವ ಸ್ವಾಮಿತ್ವ ವಿಶೇಷದ ಅಜ್ಞಾನದಿಂದ, ಶರೀ
ಮನೋವಿಷಯಕ ಸ್ವಾಮಿತ್ವಾಭಿಮಾನವು. ಅಲ್ಲಿಯೂ ಸಹ ವಿ
ಯಿಂದ ಶರೀರೇಂದ್ರಿಯಗಳಲ್ಲೂ, ವಿಶೇಷತಃ ಮನಸ್ಸಿನಲ್ಲೂ
ತಾನು ಮಾಡುವವನೆಂಬ, "ಸ್ವಾಮಿತ್ವ ಮತ್ತು ಸ್ವಾತಂತ್ರ್ಯಭಿ
ಅಲ್ಲಿ ವಿಷಯಗಳಾದರೋ ಸುಖದುಃಖಪ್ರದಗಳಾಗಿ ಅಭಿಮತಗ
ಅನ್ಯಥಾ ಆಗಲಾರದು. ಸುಖದುಃಖಗಳನ್ನು ಕೊಡಲಾಗದು.

ಸ್ವಾಭಿಮತ (ತನಗೆ ಇಷ್ಟವಾದ) ಗೃಹ ಕನ್ಯೆಯರೇ (ಮನ
ಮೊದಲಾದವರ ಅಲಂಕಾರ, ವೃದ್ಧ್ಯಾದಿಗಳಿಂದ, ಸುಖಾದಿಗ
ಬಂದಿವೆ, ಅನ್ಯರಿಂದ ಅಭಿಮತವಾದವುಗಳಲ್ಲಿ ಅವು ಕಾಣಲ್ಲ
ಅಭಿಮಾನವಾಗಲಿ, ಸುಖದುಃಖಾದಿಗಳಾಗಲಿ, ತನಗಾಗುವುದಿ
(ತಿಳಿದು ಬಂದಿದೆ) ಗೊತ್ತಾಗುತ್ತಿದೆ.

ಶರೀರ ಮತ್ತು ಇಂದ್ರಿಯಗಳಲ್ಲಿ ಸ್ವಕೀಯ ಆತ್ಮ (ತನ
ಉಪಕಾರಿತ್ವದಿಂದ, ವಿಶೇಷತಃ ಸ್ವಾಮಿತ್ವಾಭಿಮಾನವು. "ನನ್ನ
ನನ್ನ ಶರೀರವೆಂಬ ಅಭಿಮಾನವು" ಆಗಲೇ ಅಲ್ಲಿ ಮಮತಾ
ಭೇದಾಜ್ಞಾನವು ಸ್ಪಷ್ಟವಾಗುತ್ತದೆ. ಅದರ ದೆಶೆಯಿಂದ ಅವುಗಳ
ಭಾದ ಕಾರ್ಶ್ಯ ಶಾಂತಿತ್ವಾದಿಗಳ ಬಗ್ಗೆ ಗತತ್ವ ಅಭಿಮಾನವು ಹು

ರ್ತೃತ್ವಾಭಿಮಾನ ಮತ್ತು 2. ಆತ್ಮಗತತ್ವಾಭಿಮಾನ ಇವೆರಡರ ದೆಶೆಯಿಂದ ಆತ್ಮ
ಸಿಗೆ ಅತ್ಯಂತ ಉಪಕಾರವನ್ನು ಮಾಡುವ ಮನಸ್ಸಿನಲ್ಲಿ ದುಃಖಾದಿಗಳುಂಟಾ
ಗುವುವು. ಹೀಗಿರುತ್ತಿರಲು ಆತ್ಮನಿಗೆ ಅಲ್ಲಿ ಮಮತಾತಿಶಯದಿಂದ, ಭೇದಾ
ಜ್ಞಾನದಿಂದ ಮನೋಧರ್ಮಗಳ್ಗೂ ಸಹ "ನಾನು ದುಃಖಿಯು" ಇತ್ಯಾದಿ
ರೋಪವಶದಿಂದ ನೀಚೋಚ್ಚ ಲಕ್ಷಣ ವಿಕಾರಗಳೆರಡೂ ಆಗುವುವೆಂಬುದು
ಸ್ಪಷ್ಟವು. ಸುಖ ದುಃಖಾದಿ ಭೋಗಗಳೇ ಹೊರ್ತು, ಅದು ಸಾಕ್ಷಾತ್ಕಾರ
ಮಾತ್ರವಲ್ಲವು. ಅದು ಹಾಗೆ ಸಾಕ್ಷಾತ್ಕಾರ ಮಾತ್ರವಾಗಿ ಆತ್ಮನಿಗಾಗುವು
ದಾದರೆ ಭಗವಂತನಿಗೂ ದುಃಖಾನುಭವ ಪ್ರಸಂಗವು ಉಂಟಾಗಬೇಕಾದೀತು.
ಇದೇನೇ ಬಂಧವೆಂದು ಹೇಳಲ್ಪಡುತ್ತದೆ. ಇದನ್ನು ಬಂಧವೆಂದು ಕರೆಯು
ತ್ತಾರೆ.

ಅಂಥ ಇದನ್ನು ಶ್ರೀಪತಿಯಾದ ಹರಿಯೇ ಈ ಅಜ್ಞಾನ ಸಪ್ತಕವನ್ನು
ನಿಮಿತ್ತ ಮಾಡಿಕೊಂಡು ಅಭಿಮಾನ ಸಪ್ತಕವನ್ನು ಉತ್ಪಾದನೆ ಮಾಡಿ
ಶರೀರ, ಇಂದ್ರಿಯ, ವಿಷಯಗಳಿಂದ ಸುಖದುಃಖಗಳೆರಡನ್ನೂ ಭೋಜನ
ಅನುಭವ) ಮಾಡಿಸುತ್ತಾನೆಂಬುದು ಸಿದ್ಧವಾಗಿದೆ.

ಈ ವಿಧವಾದ ಶರೀರ, ಇಂದ್ರಿಯ ವಿಷಯ ಲಕ್ಷಣ ಬಂಧಕ ನಿವೃತ್ತಿ
ಗೋಸ್ಕರವಾಗಿಯೇ. ಶರೀರೇಂದ್ರಿಯಗಳಿಂದ ಯಾವ ಯಾವ ಜ್ಞಾನಕರ್ಮ
ಲಕ್ಷಣವಾದ ವ್ಯಾಪಾರವು ಆರಂಭಿಸಲ್ಪಡುತ್ತದೆಯೋ, ಅಲ್ಲಿ ಸರ್ವತ್ರದಲ್ಲಿ
ಅವುಗಳಲ್ಲಿ ಬಂಧಕವು. ಅಭಿಮಾನವೇ ರೂಪಾಂತರದಿಂದ ಪ್ರಸಾರವಾಗಿರು
ದಿತ್ತದೆ.

ಸ್ವಗತ ಕರ್ತೃತ್ವ ವಿಶೇಷ ಅಜ್ಞಾನದಿಂದ "ಅಹಂ ಕರ್ತಾ" "ನಾನು
ಮಾಡುವವನು. ನಾನು ಕರ್ತನು." ಎಂದು ಕರ್ತೃತ್ವ ಸ್ವಾತಂತ್ರ್ಯಾಭಿ
ಮಾನವು.

ಸ್ವಗತ ಭೋಕ್ತೃತ್ವ ವಿಶೇಷಾಜ್ಞಾನದಿಂದ "ಅಹಂ ಭೋಕ್ತಾ"
"ನಾನು ಭೋಗಿಸುವವನು" ಎಂದು ಘೇ ಭೋಕ್ತೃತ್ವ ಸ್ವಾತಂತ್ರ್ಯ
ಭಿಮಾನವು.

ಸ್ವಗತ ಕಾರಕ ಸಾಮ್ಯ ವಿಶೇಷಾಜ್ಞಾನದಿಂದ "ಮಮೈವ ಕರಣಾನಿ"
"ನನ್ನದೇ ಕಾರಣಗಳು" ಎಂಬ ಕಾರಕ ಮುಖ್ಯ ಸ್ವಾಮ್ಯಾಭಿಮಾನವು.

ಸ್ವಗತವಾದ ಫಲಸ್ವಾಮ್ಯ ವಿಶೇಷ ಜ್ಞಾನದಿಂದ "ಫಲಮಪಿ ಮಮ" 'ಫಲವೂ ನನ್ನದೇ.' ನನ್ನಿಂದಲೇ ಫಲಸಿದ್ಧಿಯು ಎಂಬ ಕ್ರಿಯಾಫಲ ಮುಖ್ಯ ಸ್ವಾಮ್ಯಾಭಿಮಾನವು.

ಈ ಯಾವ ಫಲವಿದೆಯೋ ಇದು ಸರ್ವರಿಂದಲೂ ಅಪೇಕ್ಷಿತವಾಗಿ ಸುಖಪ್ರದವೆಂಬ ಹೆಸರಿನಿಂದ ಕರೆಯಲ್ಪಟ್ಟು ಇಚ್ಛಿಸಲ್ಪಡುವ ಐಹಿಕ ಮತ್ತು ಪಾರತ್ರಿಕವೆಂಬ ಎರಡು ಬಗೆಯ ಪ್ರಾಕೃತ ಸುಖ ದುಃಖ ಸದೃಶವಾದ ಸುಖದಲ್ಲಿ ಪುರುಷಾರ್ಥತ್ವಾಭಿಮಾನವು.

ಶ್ರೀ ಹರಿಭಕ್ತಿ ಪ್ರಸಾದಗಳಂತೆಯೇ ಐಹಿಕಾಮುಷ್ಮಿಕ ಪುರುಷಾರ್ಥಗಳು ಎಂಬುದು ಅಜ್ಞಾನನಿಮಿತ್ತಕವು. ಅದನ್ನು ಸಾಧಿಸಲು ಸ್ರಕ್, ಚಂದನ, ವನಿತೆ (ಹೂವು, ಗಂಧ, ಸ್ತ್ರೀ) ಮೊದಲಾದವುಗಳಲ್ಲಿ, ವಿಷಯಗಳಲ್ಲಿ ಪುರುಷಾರ್ಥ ಸಾಧನತ್ವ (ಅಪರ ಪರ್ಯಾಯ) ಪರ್ಯಾಯಾಂತರವಾಗಿ ಬೇರೆ ರೂಪವಾಗಿ, ರೂಪಾಂತರದಿಂದ ಶೋಭನತ್ವ (ತನಗೆ ಆನಂದವಾಗುತ್ತದೆ. ಸುಖ ಸಂತೋಷ, ಕಲ್ಯಾಣವಾಗುತ್ತದೆ ಎಂಬುದರ) ಅಭಿಮಾನವು.

ಶ್ರೀ ಹರಿಭಕ್ತಿ ಪ್ರಸಾದ ಸಾಧನವೇ ಶೋಭನವೆಂಬುದು ಅಜ್ಞಾನ ನಿಮಿತ್ತವು.

ಈ ಪುರುಷಾರ್ಥ, ತತ್ಸಾಧನವಾದ ಅಭಿಮಾನ ಇವೆರಡರಿಂದ ಆವೆರಡರಲ್ಲೂ (ಉಭಯತ್ರ) ದುಃಖ, ತತ್ಸಾಧನ ವೈಶೇಷ್ಯ ಅಜ್ಞಾನದಿಂದ, ಅನಂತರ ವೈಶೇಷ್ಯದಿಂದ ಅವುಗಳ (ಉಭಯತ್ರ) ಎರಡರಲ್ಲೂ ರಾಗೋತ್ಪತ್ತಿ, ದುಃಖಗಳು ಪ್ರಾಕೃತ ಸುಖ ವಿಶಿಷ್ಟತ್ವ, ಅಜ್ಞಾನದಿಂದ, ಸುಖದ ದೆಸೆಯಿಂದ ವೈಶೇಷ್ಯದಿಂದ ಅಲ್ಲಿ ದ್ವೇಷವು.

ಈ ಪ್ರಕಾರವಾಗಿ 1. ಕರ್ತೃತ್ವ, 2. ಭೋಕ್ತೃತ್ವ, 3. ಕಾರಕ, 4. ಫಲಸ್ವಾಮ್ಯ, 5. ಪುರುಷಾರ್ಥ, 6. ತತ್ಸಾಧನ, 7. ಅಭಿಮಾನವು ಆಂತರಿಕವಾಗಿ ಸರ್ವಥಾಪಿ ಪರಿಹರಿಸಲು ಅಶಕ್ಯವಾದುದು.

ಆ ರೀತಿಯಾದ ರಾಗ, ದ್ವೇಷಗಳಿಂದ ಅವುಗಳ ಪ್ರಯುಕ್ತ ಪೂರ್ವದಲ್ಲಿ ಆಪಾದಿತ (ಸಂಪಾದಿಸಲ್ಪಟ್ಟ) ವಾದ ಬಂಧಕ ನಿವೃತ್ತಿಯಿಂದ ಸುಖವನ್ನು

ಅಪೇಕ್ಷಿಸುತ್ತಾ ಪೂರ್ವಸ್ಥಿತವಾದ ಒಂದು ಶರೀರ, ಕೆಲವು ಇಂದ್ರಿಯವು ಇಂದ್ರಿಯು ವಿಷಯುರೂಪ ಬಂಧನಿವೃತ್ತಿಗೋಸ್ಕರವಾಗಿ, ಸ್ನಾನ, ಸಂಧ್ಯಾವಂದನೆ, ಧ್ಯಾನ, ಪಾಠ, ವ್ಯಾಖ್ಯಾನ, ಉಪದೇಶ, ಜಪ, ತಪಸ್ಸು, ಅರ್ಚನ, ಮೊದಲಾದವು ಯಾವ ಯಾವ ಸತ್ಕರ್ಮಗಳು ಮಾಡಲ್ಪಡುತ್ತವೆಯೋ, ಅವೆಲ್ಲಾ ಅಸಂಖ್ಯಾತಗಳಾದ ಶರೀರ, ಇಂದ್ರಿಯು, ವಿಷಯುಗಳ ಆಪಾದಕಗಳೇ (ಸಂಪಾದನೆ ಮಾಡಿ ಕೊಡುವವುಗಳೇ) ಆಗುವುವು. ಇದರಿಂದ ಇನ್ನೊಂದು ಶರೀರಪ್ರಾಪ್ತಿಯುು ಆಗುವುದು.

ಬಂಧಕ ನಿವೃತ್ತಿಗಾಗಿ ಇನ್ನು ಮುಂದೆಯೂ ಮಾಡುವ ಕ್ರಿಯುಮಾಣಗಳಾದ ಆ ಕರ್ಮಗಳು, ಅವುಗಳ ಸಾಧನ ಸಮೂಹಗಳೂ ಸಹ, ಅಭಿಮಾನ ರಾಗ, ದ್ವೇಷ ಮೂಲಕಗಳೇ ಆಗಿರುವುದರಿಂದಲೇ ಅವು ಪುನಃ ಶರೀರಾಂತರ (ಬೇರೆ ಶರೀರ)ದಿಂದ ಆಗಬೇಕಾಗಿ ಇದೇ ರೀತಿಯೇ ಪುನಃ ಪುನಃ ಹುಟ್ಟು, ಸಾವು (ಜನನ, ಮರಣ) ರೂಪ ಸಂಸಾರ ರೂಪ ಬಂಧಕವೇ ಆಗಿರುವುದು.

ಶ್ರೀಪತಿ ಹರಿಯೇ ಅಜ್ಞಾನಷಟ್ಕವನ್ನು ನಿಮಿತ್ತ ಮಾಡಿಕೊಂಡು, ಅಭಿಮಾನ ಷಟ್ಕವನ್ನು ಉತ್ಪಾದನೆ ಮಾಡಿ, ಪುನಃ ಅಜ್ಞಾನದ್ವಯುದ ನಿಮಿತ್ತದಿಂದ, ರಾಗ, ದ್ವೇಷಗಳೆರಡನ್ನೂ ಉತ್ಪಾದನೆ ಮಾಡಿ, ಅದನ್ನು ಅನುಸರಿಸಿ, ಜೀವನಿಂದ ಜ್ಞಾನಕರ್ಮ ಲಕ್ಷಣ ಶರೀರ ಇಂದ್ರಿಯುಗಳಿಂದ ಸಾಧ್ಯವಾದ ವ್ಯಾಪಾರವನ್ನು ಮಾಡಿಸಿ, ಆ ಕರ್ಮದಿಂದ ನವೀನ (ಹೊಸ ಶರೀರ) ದೇಹಾದಿಗಳನ್ನು ಕೊಡುವುದರ ಮೂಲಕ ಪುನಃ ಜೀವವನ್ನು ಕಟ್ಟಿಹಾಕುತ್ತಾನೆ. ಬಂಧನ ಮಾಡುತ್ತಾನೆ. ಇದು ಜೀವನ ಬಂಧಕ (ತ್ವ)ವು ಬದ್ಧನಾದ ಜೀವನ ಸ್ಥಿತಿಯುು.

ಬಂಧನಿವೃತ್ತಿ

ಭಗವಾನ್ ಶ್ರೀಪತಿಯಾದ ಹರಿಯುು, ಶರೀರ, ಇಂದ್ರಿಯು, ವಿಷಯು, ಮನಸ್ಸುಗಳಿಗೆ ಮುಖ್ಯ ಸ್ವಾಮಿಯುು. ಅನಂತರ ಕ್ರಮವಾಗಿ ಬ್ರಹ್ಮಾದಿಗಳನ್ನು ಮೊದಲು ಮಾಡಿಕೊಂಡು ಪುಷ್ಕರಾಂತರಾದವರೂ ಇವೆರಡರಲ್ಲೂ

ಅವರ ಮಕ್ಕಳುಗಳೂ ಸ್ವಾಮಿ (ನಿಯಾಮಕ)ಯರು. "ನಾನಾದರೋ ಅವ ರಿಂದ ನಿಯತ (ಕೊಡಲ್ಪಟ್ಟ) ಸ್ವಾಮ್ಯವುಳ್ಳವನಾಗಿದ್ದೇನೆ" ಎಂದು ತನ್ನಲ್ಲಿ ಸ್ವಾಮ್ಯ (ಸ್ವಾತಂತ್ರ್ಯದಿಂದ) ವಿಶೇಷವಿಲ್ಲವೆಂಬುದು ತಿಳಿಯಲ್ಪಟ್ಟರೆ, ಅದು (ತಾನು ಹಾಗೆ ಸ್ವತಂತ್ರ ಸ್ವಾಮಿಯಲ್ಲವೆಂದು ತಿಳಿಯುವುದರಿಂದ) ತದ್ವಿಷ ಯಕ ಸ್ವಾಮಿತ್ವಾಭಿಮಾನವೆಂಬ ಅಜ್ಞಾನವನ್ನು ನಿವೃತ್ತಿ ಮಾಡುತ್ತದೆ.

ಅದು ನಿವೃತ್ತವಾದರೆ, ವಿಷಯಗಳಲ್ಲಿ ಸ್ವಾಮ್ಯಾಭಿಮಾನವೂ, ಶರೀ ರೇಂದ್ರಿಯಗಳಲ್ಲೂ ವಿಶೇಷವಾಗಿ ಮನಸ್ಸಿನಲ್ಲೂ ಸಹ ಸ್ವಾಮ್ಯಾಭಿಮಾನವು ನಿವೃತ್ತವಾಗು (ಹೊರಟುಹೋಗು)ತ್ತದೆ. ಈ ರೀತಿಯಾಗಿ ವಿಷಯಾಭಿ ಮಾನಗಳು ಹೊರಟು ಹೋಗುತ್ತಿರಲು, ತನ್ಮೂಲಕವಾದ ತನ್ನ ಶರೀರೇಂ ದ್ರಿಯಗಳಲ್ಲೂ ಮನಸ್ಸಿನಲ್ಲಿಯೂ ಸಹ ಭೇದಾಜ್ಞಾನದ ನಿವೃತ್ತಿಯಾಗುತ್ತದೆ. ಅದು ಇರುವುದಾದರೆ ಧರ್ಮಾರೋಪ ನಿವೃತ್ತಿಯೂ ಅನಂತರ ಅದರ ದೆಶೆ ಯಿಂದ ವಿಷಯಾಭಿಮಾನ, ಧರ್ಮಾರೋಪಗಳೆರಡರ ಮೂಲವಾದ ಮನಸ್ಸಿ ನಲ್ಲಿ ಉಂಟಾಗುವ ದುಃಖಾದಿಗಳ ನಿವೃತ್ತಿಯೂ, ಮನಸ್ಸಿನಲ್ಲೂ ಅಭಿಮಾನದ ನಿವೃತ್ತಿಯಿಂದ ತನ್ಮೂಲಕವಾದ ಸ್ಪಷ್ಟ ಭೇದಾಜ್ಞಾನದ ನಿವೃತ್ತಿಯೂ ಸಹ ಆಗುವುದರಿಂದ ಆತ್ಮನ ದುಃಖಿತ್ವಾದಿ ಆರೋಪ ಅಭಾವದಿಂದಲೂ ಶರೀರ, ಇಂದ್ರಿಯ, ವಿಷಯ, ಮನಃ ಪ್ರಯುಕ್ತ ಬಂಧನದ ನಿವೃತ್ತಿಯೇ ಆಗುವುದು.

ಈ ರೀತಿಯಾದ 1. ಜ್ಞಾನ ಸಪ್ತಕವನ್ನು ಶ್ರೀಪತಿ ಹರಿಯು (ಪ್ರದಾನ ಮಾಡಿ) ಕೊಟ್ಟು 2. ಅಜ್ಞಾನ ಸಪ್ತಕವನ್ನು ನೈಕೃತ್ಯ) (ಹೋಗಲಾಡಿಸಿ) 3. ಅಭಿಮಾನ ಸಪ್ತಕವನ್ನು ಪರಾ (ಕರಿಸಿ) ಕೃತ್ಯ 4. ಶರೀರೇಂದ್ರಿಯ ವಿಷಯ (ಮನಃ)ಕೃತ ಉಪಪ್ಲವವನ್ನು ಪರಿಹರಿಸುತ್ತಾನೆಂದು ಸಿದ್ಧವಾ ಯಿತು.

ಇನ್ನು ಶ್ರೀಪತಿಯಾದ ಹರಿಯೇ ಮುಖ್ಯ ಕರ್ತನು. ತದನಂತರ ಕ್ರಮವಾಗಿ ಬ್ರಹ್ಮಾದಿಗಳು ಪುಷ್ಕರಾಂತ ದೇವತೆಗಳೂ ಉಭಯರಲ್ಲೂ ಅವರ ಪುತ್ರರೂ ಕರ್ತರು. "ನಾನಾದರೋ ಅವರಿಂದ ನಿಯಮಿಸಲ್ಪಟ್ಟು (ನಿಯತನಾದ) ಕರ್ತನು ಕಾರ್ಯಗಳನ್ನು ಮಾಡು ತ್ತೇನೆ." ಎಂದು ತನ್ನಲ್ಲಿ ಎಷ್ಟುರವುಟ್ಟಿಗಿನ ಕರ್ತೃತ್ವ ವಿದೆಂಬುದು

ತಿಳಿಯಲ್ಪಟ್ಟರೆ 'ಅಹಂ ಕರ್ತಾ' ನಾನು ಮಾಡುವವನೆಂಬ ಅಜ್ಞಾನವು ನಿವೃತ್ತವಾಗಿ ತನ್ಮೂಲಕವಾದ ಕರ್ತೃತ್ವ ಸ್ವಾತಂತ್ರ್ಯಾಭಿಮಾನದ ನಿವೃತ್ತಿಯಾಗುತ್ತದೆ. ತಾನು ಸ್ವತಂತ್ರನೂ ಅಲ್ಲ, ಸ್ವತಂತ್ರಕರ್ತನೂ ಅಲ್ಲವೆಂಬುವ ಸಮೀಚೀನ ಜ್ಞಾನವುಂಟಾಗುತ್ತದೆ.

ಹೀಗೆ ಶ್ರೀಪತಿಯಾದ ಹರಿಯೇ ಕ್ರಿಯಾಜ್ಞಾನ ಫಲದ ಮುಖ್ಯ ಭೋಕ್ತನು; ಆದನ್ನು ಅನುಸರಿಸಿ ಕ್ರಮವಾಗಿ ಬ್ರಹ್ಮಾದಿ ಪುಷ್ಕರಾಂತರೂ ಉಭಯರಲ್ಲಿಯೂ ಅವರು ಪುತ್ರರೂ ಭೋಕ್ತೃಗಳು, ನಾನಾದರೋ ಅವರಿಂದ ನಿಯತನಾದ ಭೋಕ್ತನು. ಎಂದು ತನ್ನ ಭೋಕ್ತೃತ್ವ ವಿಶೇಷದಲ್ಲಿ ತನ್ನ ಯೋಗ್ಯತೆ ಮತ್ತು ಇಯತ್ತಾ ಸ್ಥಗಳು ತಿಳಿಯಲ್ಪಟ್ಟರೆ, ತದ್ವಿಷಯಕವಾದ ಅಜ್ಞಾನ ನಿವೃತ್ತಿಯಿಂದ, ತನ್ಮೂಲಕವಾದ ಸ್ವಾತಂತ್ರ್ಯದಿಂದ ಭೋಕ್ತೃತ್ವಾಭಿಮಾನ ನಿವೃತ್ತಿಯು ಉಂಟಾಗುತ್ತದೆ.

ಕಾರಕದ ಸ್ವಾಮಿಯೂ ಸಹ ಶ್ರೀಪತಿಯಾದ ಹರಿಯೇ ಮುಖ್ಯನು. ತದನಂತರ ಕ್ರಮವಾಗಿ ಬ್ರಹ್ಮಾದಿ ಪುಷ್ಕರಾಂತರೂ ಉಭಯೇಪಿ, ತತ್ಪುತ್ರರೂ ಅಮುಖ್ಯ ಕಾರಕರು, ನಾನಾದರೋ ಅವರಿಂದ ನಿಯತ ಸ್ವಾಮ್ಯವುಳ್ಳವನು. ತನ್ನಲ್ಲಿರುವ ಸ್ವಾಮ್ಯ ವಿಶೇಷವು ಎಷ್ಟರ ಮಟ್ಟದ್ದೆಂದು ತಿಳಿಯಲ್ಪಟ್ಟರೆ ತದ್ವಿಷಯಕವಾದ ಅಜ್ಞಾನ ನಿವೃತ್ತಿಯಿಂದ, ತನ್ಮೂಲಕ ಕಾರಕ ಸ್ವಾಮ್ಯಾಭಿಮಾನದ ನಿವೃತ್ತಿಯಾಗುತ್ತದೆ.

ಫಲಸ್ವಾಮಿಯೂ ಸಹ ಶ್ರೀಪತಿ ಶ್ರೀಹರಿಯೇ ಮುಖ್ಯನು. ತದನಂತರ ಅವನನ್ನು ಅನುಸರಿಸಿ ಕ್ರಮವಾಗಿ ಬ್ರಹ್ಮಾದಿ ಪುಷ್ಕರಾಂತ ದೇವತೆಗಳು, ಉಭಯತ್ರದಲ್ಲೂ ಅವರ ಪುತ್ರರೂ ಅಮುಖ್ಯಫಲ ಸ್ವಾಮ್ಯವುಳ್ಳವರು. ನಾನಾದರೋ ತನ್ನಿಯತ ಅವರಿಂದ ನಿಯಮಿಸಲ್ಪಟ್ಟ, ಫಲಸ್ವಾಮ್ಯವುಳ್ಳವನೆಂದು ಸ್ವಸ್ವಾಮ್ಯ ವಿಶೇಷವು ತಿಳಿಯಲ್ಪಟ್ಟರೆ, ಅದರ ಸಂಬಂಧವಾದ ಅಜ್ಞಾನ ನಿವೃತ್ತಿಯಿಂದ ತನ್ಮೂಲಕ ಫಲಸ್ವಾಮ್ಯಾಭಿಮಾನದ ನಿವೃತ್ತಿಯಾಗುವುದು.

ಶ್ರೀ ಹರಿ ಭಕ್ತಿ ಪ್ರಸಾದಗಳೆರಡೇ ಪುರುಷಾರ್ಥವೆಂಬ ವಿಶೇಷ ಜ್ಞಾನವು ಉತ್ಪನ್ನವಾದರೆ, ಅದರ ಅಜ್ಞಾನ ನಿವೃತ್ತಿಯಿಂದ, ತನ್ಮೂಲಕವಾದ ಪ್ರಾಕೃತ ಸುಖದಲ್ಲಿ ಪುರುಷಾರ್ಥತ್ವಾಭಿಮಾನದ ನಿವೃತ್ತಿಯಾಗುವುದು.

ಶ್ರೀಹರಿ ಭಕ್ತಿ, ಪ್ರಸಾದ ಸಾಧನವೇ ಶೋಭನ (ಮಂಗಳಕರವಾದ)ವು ಎಂಬ ಜ್ಞಾನವು ಜನಿಸಿದರೆ, ಅದರ ಅಜ್ಞಾನದ ನಿವೃತ್ತಿಯಿಂದ ತನ್ಮೂಲಕವಾದ ಪ್ರಾಕೃತ ಸುಖ ಸಾಧನದಲ್ಲಿ ಶೋಭನತ್ವಾಭಿಮಾನದ ನಿವೃತ್ತಿಯೂ ಆಗುವುದು.

ಈ ಪುರುಷಾರ್ಥ, ತತ್ಸಾಧನಾಭಿಮಾನಗಳೆರಡರ ನಿವೃತ್ತಿಯಿಂದ ಆವೆರಡರಲ್ಲೂ (ಅನು)ರಾಗ ನಿವೃತ್ತಿಯು ಆಗುವುದು.

ಅಂಥಾ ಈ ರೀತಿಯಾದ "ಪ್ರಾಕೃತ ಸುಖವೂ ಸಹ ಮೋಕ್ಷ ವಿರೋಧಿತ್ವದಿಂದ ದುಃಖದಂತೆ ಹೇಯವಾದುದು." ಎಂಬುವ ಜ್ಞಾನವು ಜನಿಸಿ (ಉತ್ಪನ್ನವಾ)ದರೆ ತಾದೃಶ (ಆರೀತಿಯಾದ) ಅಜ್ಞಾನನಿವೃತ್ತಿಯಿಂದ ತನ್ಮೂಲಕವಾದ ಸುಖದ ಜೆಶೆಯಿಂದ ವೈಶೇಷ್ಯದಿಂದ ದುಃಖದಲ್ಲಿ ದ್ವೇಷದ ನಿವೃತ್ತಿಯು.

ಮೋಕ್ಷವಿರೋಧಿ ಸಾಧನತಯಾ ದ್ವೇಷವೂ ಅನುಸರಿಸಿರುತ್ತದೆ. ಪ್ರಾಕೃತ ಸುಖದಂತೆ ಪ್ರಾಕೃತಸುಖ ಸಾಧನವೂ ಸಹ, ಪುರುಷಾರ್ಥ ಸಾಧನವಲ್ಲವೆಂಬ ಜ್ಞಾನವು ಹುಟ್ಟುತ್ತಿರಲು, ದುಃಖ ಸಾಧನದಲ್ಲೂ ಸಹ ಸುಖಸಾಧನದ ಅವಶಿಷ್ಟ ಜ್ಞಾನದಿಂದ, ಅದರ ಅಜ್ಞಾನದ ನಿವೃತ್ತಿಯಿಂದ, ಸುಖ ಸಾಧನದ ಜೆಶೆಯಿಂದ ವೈಶೇಷ್ಯದಿಂದ, ದ್ವೇಷದ ನಿವೃತ್ತಿಯಾಗುತ್ತದೆ. ಮೋಕ್ಷವಿರೋಧಿ ಸಾಧನತ್ವದಿಂದಲೂ ದ್ವೇಷವೂ, ಅನುಸರಿಸುತ್ತದೆ. ಪ್ರಾಕೃತ ಸುಖಸಾಧನದಂತೆ ಅವೆರಡೂ (ಮೋಕ್ಷವಿರೋಧಿ ಸಾಧನ, ದ್ವೇಷಗಳೆರಡೂ) ಬಂಧಕಗಳೇನೂ ಅಲ್ಲವು. ಪ್ರತ್ಯುತ ಅವೆರಡೂ ಭಕ್ತಿ, ಪ್ರಸಾದ, ರಾಗಗಳಂತೆ ಪರಮ ಪುರುಷಾರ್ಥ ಉಪಯೋಗಿಗಳೇ ಆಗಿರುವುವು.

ಹಾಗೆ ಈರೀತಿಯಾದ ಬಂಧಕ ಸ್ವಭಾವವಾದ ಕರ್ಮವೂ ಶ್ರೀಹರಿ 1. ಕರ್ತೃತ್ವದಿಂದ 2. ತದ್ ಭೋಕ್ತೃತ್ವದಿಂದ 3. ತತ್ ಸ್ವಾಮಿ ಕಾರಕತ್ವದಿಂದ 4. ತತ್ ಸ್ವಾಮಿಃಫಲಕತ್ವದಿಂದ 5. ಭಕ್ತಿ ಪ್ರಸಾದಗಳ ಅತಿರಿಕ್ತ ಅನುದ್ದೇಶ್ಯಕತ್ವದಿಂದ 6. ಅನುಸಂಧಾನ ಮಾಡುವ ಅಭಿಮಾನ ಮೊದಲಾದವುಗಳ ಮೂಲಕತ್ವರೂಪವಾದ ಸಹಕಾರಿ ಸಮವಧಾನ ಅಭಾವದಿಂದ ಬಂಧಕವಾಗುವುದಿಲ್ಲವು. ಪ್ರತ್ಯುತ ಇದಕ್ಕೆ ವಿರುದ್ಧವಾಗಿ ಎಂದರೆ ವಿಪರೀತ ಸಹಕಾರಿ ಸಂಪತ್ತಿನಿಂದ ಮೋಚಕವೇ ಆಗುತ್ತದೆ.

ಇವೆಲ್ಲವೂ ಮನಸ್ಸಿನಲ್ಲಿ ಅಧೀನವಾದುದೆಂದು ಮನಸ್ಸೇ ಮುಖ್ಯ ಮೋಚಕವೆಂದು ತಿಳಿ.

ಈ ರೀತಿಯಾಗಿ ಶ್ರೀಪತಿಹರಿಯೇ ಜ್ಞಾನ ಷಟ್ಕವನ್ನು ನಿಮಿತ್ತ ಮಾಡಿಕೊಂಡು, ಅಭಿಮಾನ ಷಟ್ಕ (ಆರನ್ನು)ವನ್ನು ಪರಾಕರಿಸಿ, (ಪರಾಕೃತ) ಪುನಃ ಜ್ಞಾನದ್ವಯದಿಂದ ರಾಗದ್ವೇಷಗಳನ್ನು ಹೋಗಲಾಡಿಸಿ, (ನ್ಯಕೃತ್ಯ), ಜ್ಞಾನ ಕರ್ಮಲಕ್ಷಣವಾದ ಶರೀರಾದಿ ಸಾಧ್ಯವಾದ ವ್ಯಾಪಾರದಲ್ಲಿ ಸಹಕಾರಿ ಸಂಪತ್ತಿಯನ್ನೂ ಹೊಂದಿಸಿಕೊಟ್ಟು, ಅದರಿಂದ ಜೀವನನ್ನು ಬಂಧನಿವೃತ್ತಿ ಮೂಲಕವಾಗಿ ಮುಕ್ತನನ್ನಾಗಿ ಮಾಡುತ್ತಾನೆ.

ಭಗವಂತನ ಬಿಂಬೋಪಾಸನೆ

ವಿಷ್ಣುವು ಹರಿನಾಮಕ ರೂಪದಿಂದ ಬಿಂಬರೂಪದಿಂದ ಮುಖದಲ್ಲಿ ಮುಖವು ಇತ್ಯಾದಿ ಕ್ರಮದಿಂದ ಇರುವನೆಂದು ಹೇಳಲ್ಪಟ್ಟಿತು.

ಅಲ್ಲಿ ಹರಿಯ ಮುಖಾದಿಗಳಾದರೋ ಪ್ರತ್ಯೇಕ ಪ್ರತ್ಯೇಕವಾಗಿ ಒಂದೊಂದು ರೂಪಾತ್ಮಕವೇ ಆಗಿರುವುದು. ಅನೇಕ ರೂಪಗಳ ಸಮಾಹಾರ (ಒಟ್ಟುಕೂಡುವಿಕೆಯೂ)ವೂ ಸಹ ಆಯಾಯ ಪ್ರಾಣಿ ಪಾದ ಮೊದಲಾದ ಅವಯವಗಳಿಂದ ಕೂಡಿ ರೂಪಾಂತರದಂತೆ, ಅದು ನವನಾರೀ ಕುಂಜರದಂತೆ (ಒಂಭತ್ತು ಸ್ತ್ರೀ ಮೂರ್ತಿಗಳನ್ನು ಸರಿಯಾಗಿ ಸೇರಿಸಿ ಒಂದು ಆನೆಯಾಗಿ ಚಿತ್ರಿಸಿರುವಂತೆ) ಕಾಣುವುದು. ಅದು ಹೇಗೆಂದರೆ —

ಶಿರಸ್ಸು	....	ನಾರಾಯಣನು
ಲಲಾಟವು	....	ಪ್ರದ್ಯುಮ್ನನಿಂದ ಉದ್ಭವಿಸಿದ ಕೇಶವನು
ಹುಬ್ಬಿನ ಮಧ್ಯೆ ಮತ್ತು ಎರಡು ಹುಬ್ಬುಗಳು	....	ಕಪಿಲದೇವನು
ಎರಡು ಕಣ್ಣುಗಳಲ್ಲಿನ ಶುಕ್ಲ (ಬಿಳಿಯು)	....	ರಾಮನು
ಎರಡು ಕಣ್ಣುಗಳಲ್ಲಿನ (ಕಪ್ಪು) ಕೃಷ್ಣ	....	ಕೃಷ್ಣನು
ಎರಡು ಕಪೋಲಗಳು	....	ಸಂಕರ್ಷಣನು
ಘ್ರಾಣೇಂದ್ರಿಯು (ಮೂಗು)	....	ಪ್ರದ್ಯುಮ್ನನು

ಘ್ರಾಣೇಂದ್ರಿಯದ ಗೋಳಕವು .... ನೃಸಿಹ್ಮನು
ಉತ್ತರ (ಮೇಲಿನ) ತುಟಿ .... ವಾಸುದೇವನು
ಅಧರ (ಕೆಳಗಿನ) ತುಟಿ .... ಸಂಕರ್ಷಣನು
ಮೇಲಿನ ಕೆಳಗೆ ಹಲ್ಲಿನ ಸಾಲುಗಳೆರಡೂ .... ಪ್ರದ್ಯುಮ್ನನು
ರಸನೇಂದ್ರಿಯವು .... ಸಂಕರ್ಷಣನು
ರಸನೇಂದ್ರಿಯವು ಗೋಳಕ ಮತ್ತು
ಜಿಹ್ವಾಮೂಲವು ಸಹ .... ಸಂಕರ್ಷಣನು
ವಾಗಿಂದ್ರಿಯವು .... ವಾಸುದೇವನು
ವಾಗಿಂದ್ರಿಯದ ಗೋಳಕ ಮತ್ತು ಮುಖವು .... ಭಾರ್ಗವ ರಾಮನು

ಕಂಠಕೂಬರ .... ವಾಸುದೇವ ಮತ್ತು ಗೋವಿಂದನು
ದಕ್ಷಿಣ ಕಂಧರ (ಕುತ್ತಿಗೆ) .... ವರಾಹನಿಂದ ಜನಿಸಿದ ತ್ರಿವಿಕ್ರಮ
ಎಡ ಕಂಧರ (ಕುತ್ತಿಗೆ) .... ನಾರಾಯಣೋದ್ಭೂತ ಹೃಷೀಕೇಶನು
ಕಕುತ್ (ಹೆಗಲು) .... ನಾರಾಯಣೋದ್ಭೂತ ದಾಮೋದರನು
ಪೃಷ್ಠಭಾಗ (ಬೆನ್ನು)ವು .... ನಾರಾಯಣೋದ್ಭೂತ ಪದ್ಮನಾಭನು
ಬಲಗಡೆಯ ಊರ್ಧ್ವಬಾಹುವು .... ವಾಸುದೇವನು
ವಾಮೋರ್ಧ್ವ (ಎಡಗಡೆ ಮೇಲಿನ ಬಾಹುವು) .... ಸಂಕರ್ಷಣನು
ಎಡಗಡೆ ಕೆಳ ಬಾಹುವು .... ಪ್ರದ್ಯುಮ್ನನು
ದಕ್ಷಾಧ (ಬಲ ಕೆಳಗಿನ) ಬಾಹುವು .... ಅನಿರುದ್ಧನು

ದಕ್ಷೋರ್ಧ್ವಾದಿ ಹಸ್ತ ಚತುಷ್ಟಯಗಳೂ ಕ್ರಮವಾಗಿ — ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧರೆಂಬ ನಾಲ್ಕು ರೂಪಗಳು

ಹಸ್ತ ಚತುಷ್ಟಯದಲ್ಲಿ ಪಾಣಿನಾಮಕ (ಅಂಗೈ) ಇಂದ್ರಿಯ ಚತುಷ್ಟಯವೂ ಕ್ರಮವಾಗಿ — ವಾಸುದೇವಾಗಿ ನಾಲ್ಕು ರೂಪಗಳು

ಹಾಗೆಯೇ ನಾಲ್ಕು ಹಸ್ತಗಳಲ್ಲಿ ನೆಲೆಸಿ ಸ್ಥಿತವಾಗಿರುವಂತೆ ನಾಲ್ಕು ಹಸ್ತಗಳಲ್ಲಿರುವ ಪದ್ಮ ಧ್ವಜ ಮೊದಲಾದ ಲಾಂಛನವೂ ವಾಸುದೇವಾದಿ ಚತುಷ್ಟಯವು ಪ್ರತ್ಯೇಕ ಪ್ರತ್ಯೇಕವಾಗಿ ನಾಲ್ಕು ಹಸ್ತಗಳಲ್ಲಿರುವ ಅಂಗುಲೀಯ ಪಂಚಕ ಚತುಷ್ಟಯವು ಎಂದರೆ ಇಪ್ಪತ್ತು ನಾರಾಯಣಾದಿ

ರೂಪ ಪಂಚ ಚತುಷ್ಟಯುವು. ಒಂದೊಂದು ಹಸ್ತದಲ್ಲೂ, ನಾರಾಯಣ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನಾನಿರುದ್ಧರೆಂದು ಐದು ರೂಪದಿಂದ ಕೂಡಿ (4×5=20) ಇಪ್ಪತ್ತು ರೂಪಗಳಿರುವುವು.

ನಖ! ಪಂಚಕ ಚತುಷ್ಟಯುವೂ (20 ಉಗುರುಗಳೂ) ಸಹ ನಾರಾಯಣಾದಿ ಪಂಚರೂಪಕ ಚತುಷ್ಟಯುಗಳೇ ಆಗಿ 20 ರೂಪಗಳಿರುವುವು.

(ದಕ್ಷ) ಬಲದ ಊರ್ಧ್ವಬಾಹುವಿನಲ್ಲಿರುವ ಚಕ್ರವು— ಪ್ರಾಜ್ಞನು ಆದ ಆದರಲ್ಲಿರುವ ಸಹಸ್ರ ಅರಗಳು— ವಿಶ್ವಾದಿ ಸಹಸ್ರ ಮೂರ್ತಿಗಳು.

ವಾಮ (ಎಡ) ಊರ್ಧ್ವಬಾಹುವಿನಲ್ಲಿ ಗದೆಯು— ತುರ್ಯನು. ಆದ ರಲ್ಲಿರುವ ಅಷ್ಟ (8 ಅರಾಗಳು— ವಿಶ್ವ ತೈಜಸ. ಪ್ರಾಜ್ಞ, ತುರೀಯ, ಆತ್ಮಾ, ಅಂತರಾತ್ಮ ಪರಮಾತ್ಮ ಜ್ಞಾನಾತ್ಮರೆಂಬ 8 ಮೂರ್ತಿಗಳು.

ವಾಮ (ಎಡದ) ಕೆಳ (ಅಧರ) ಬಾಹುವಿನಲ್ಲಿ ಪದ್ಮವು— ತೈಜಸನು ಆದರಲ್ಲಿರುವ ೧೦೦೦ ದಳಗಳಲ್ಲಿ— ವಿಶ್ವಾದಿ ಸಹಸ್ರ ಮೂರ್ತಿಗಳು.

ದಕ್ಷ (ಬಲದ) ಕೆಳಬಾಹುವಿನಲ್ಲಿನ ಶಂಖವು— ವಿಶ್ವನು ಆದರಲ್ಲಿರುವ ೧೦೦ ಆವರ್ತ (ಸುತ್ತು)ಗಳಲ್ಲಿ ನಾರಾಯಣೋ ನರಃ ಶೌರಿಃ ಇತ್ಯಾದಿ ನೂರು ರೂಪಗಳು.

ಹೃದಯುವು — ಪದ್ಮಸಂಭೂತ ಮಾಧವನು.
ಊರು — ಅನಿರುದ್ಧನು.
ಸ್ತನದ್ವಯುಗಳು — ನೃಸಿಹ್ಮಃ
ದಕ್ಷಿಣ (ಬಲ) ಕುಕ್ಷಿ — ವಾಸುಧೇವಜಃ ವಿಷ್ಣುವು.
ವಾಮ (ಎಡು) ಕುಕ್ಷಿ — ವರಾಹನಿಂದ ಜನಿಸಿದ ವಾಮನನು.
ಉದರ — ಪ್ರದ್ಯುಮ್ನ ನಾರಾಯಣನು.
ಗಂಭೀರನಾಭಿ — ನೃಸಿಹ್ಮ.
ಲಲಾಟ, ಕಂಠ, ಉದರಗಳಲ್ಲಿ —
ತ್ರಿವಳಿಗಳಲ್ಲಿ ರಾಮ, ಕೃಷ್ಣ ಕಪಿಲರೆಂಬ ಮೂರು ರೂಪಗಳು.
ಬಸ್ತಿ (ತುಂದ) ಯಲ್ಲಿ — ನೃಸಿಂಹ್ಮನು.

ಮೇಂಢ್ರದಲ್ಲಿ — ವಾಸುದೇವನು.

ಗುದದಲ್ಲಿರುವನು — ವಾಸುದೇವನು.

ಗುದದಲ್ಲಿರುವ
ಪಾಯುನಾಮಕ ಇಂದ್ರಿಯ — ಪ್ರದ್ಯುಮ್ನನು.

ಕಟಿಪ್ರದೇಶ — ವಾಸುದೇವಜ, ನಾರಾಯಣನು

ಊರು (ತೊಡೆಗಳೆರಡು) ದ್ವಯ — ವಾಸುದೇವಜ ವಾಸುದೇವನು.

ಜಾನುದ್ವಯಗಳಲ್ಲಿ — ವಾಸುದೇವಜ ಸಂಕರ್ಷಣನು.

ಜಂಘಾದ್ವಯಗಳಲ್ಲಿ — ವಾಸುದೇವಜ ಪ್ರದ್ಯುಮ್ನನು.

ಪ್ರಪದ (ಮುಂಗಾಲುಗಳೆರಡು)
ದ್ವಯ — ವಾಸುದೇವಜ ಅಧ್ವನು.

ಅಂಘ್ರಿಗಳೆರಡು (ಪಾದಗಳಲ್ಲಿ) — ಸಂಕರ್ಷಣನು.

ಅಲ್ಲಿರುವ ಪಾದನಾಮಕ ಇಂದ್ರಿಯವೂ — ಸಂಕರ್ಷಣನೇ

ಧ್ವಜ, ವಜ್ರ, ಅಂಕುಶ, ಪದ್ಮಗಳೆಂಬ — ವಾಸುದೇವ, ಸಂಕರ್ಷಣ,
ನಾಲ್ಕು ಪಾದ (ಚಿಹ್ನೆ)ಗಳಲ್ಲಿ ಪ್ರದ್ಯುಮ್ನಾನಿರುದ್ಧರೆಂಬ
ಮೂರ್ತಿಗಳು.

ಪಾದದ್ವಯಗಳಲ್ಲಿರುವ
ಹತ್ತು ಬೆರಳುಗಳಲ್ಲಿಯೂ — ನಾರಾಯಣಾದಿ ಹತ್ತು
ಪಂಚರೂಪ ದ್ವಯಗಳು.

ಪಾದ ನಖ ಪಂಚಕದ್ವಯ — ನಾರಾಯಣಾದಿ ಪಂಚಕ
(೧೦ ಉಗುರುಗಳಲ್ಲಿ) ದ್ವಯ (೧೦ ರೂಪಗಳು)

ತ್ವಗಿಂದ್ರಿಯವು — ಸಂಕರ್ಷಣನು.

ಚರ್ಮವೂ ಅದರ ಗೋಳಕವು — ನಾರಾಯಣ

ಮನಸ್ಸು — ಅನಿರುದ್ಧನು.

ಮನಸ್ಸಿನ ಗೋಳಕ, ಹೃದಯವು — ಪ್ರದ್ಯುಮ್ನೋದ್ಭೂತ ಮಾಧವನು

ಮನಃ ಪ್ರಭೇದ ಭೂತ ಐದಕ್ಕೆ — ಐದೂ ಕ್ರಮವಾಗಿ ಅನಿರುದ್ಧ
ಪ್ರದ್ಯುಮ್ನ ಸಂಕರ್ಷಣ, ವಾಸುದೇವ
ನಾರಾಯಣರೆಂಬ ಮೂರ್ತಿ ಪಂಚಕಗಳು.

ಕೇಶಮೂಲ	....	ಸಂಕರ್ಷಣ
ಶಿರಃ ಕಪಾಲದಮೇಲೆ	....	ವಾಶುದೇವನು
ರೋಮದಲ್ಲಿ	....	ನಾರಾಯಯಣನು
ತ್ವಕ್ (ಚರ್ಮ)	....	ಪ್ರದ್ಯುಮ್ನನು
ಮಾಂಸವು	....	ವರಾಹನು
ರುಧಿರ ರಕ್ತವು	....	ನಾರಾಯಣನು
ಮೇದಸ್ಸು	....	ಅನಿರುದ್ಧನು

ಮೂರನೂರ ಅರವತ್ತು (360) ಸಂಖ್ಯೆಯ ಮಜ್ಜಗಳು, ಅಷ್ಟೇ 360 ಸಂಖ್ಯಾಕ ಸಂಕರ್ಷಣ ಮೂರ್ತಿಗಳು.

ಮೂರನೂರ ಅರವತ್ತು ಮೂಳೆ (ಅಸ್ಥಿಗಳು) ಅಷ್ಟು ಸಂಖ್ಯೆಯ (360) ಅನಿರುದ್ಧ ರೂಪಪಳು.

ಪ್ರಾಣ	....	ನಾರಾಯಣ
ಅಪಾನ	....	ವಾಸುದೇವ
ವ್ಯಾನ	....	ಸಂಕರ್ಷಣ
ಉದಾನ	....	ಪ್ರದ್ಯುಮ್ನ
ಸಮಾನ	....	ಅನಿರುದ್ಧನು
ಅನ್ನಮಯ ಕೋಶ	....	ಅನಿರುದ್ಧನು
ಪ್ರಾಣಮಯ ಕೋಶ	....	ಪ್ರದ್ಯುಮ್ನ
ಮನೋಮಯ ಕೋಶ	....	ಸಂಕರ್ಷಣ
ವಿಜ್ಞಾನಮಯ ಕೋಶ	....	ವಾಸುದೇವ
ಆನಂದಮಯ ಕೋಶ	....	ನಾರಾಯಣನು
ಅವ್ಯಕ್ತತ್ವ	....	ನಾರಾಯಣನ
ಗುಣತ್ರಯ (ಸತ್ವ, ರಜ, ತಮಃ)		ವಿಶ್ವ, ತೈಜಸ, ಪ್ರಾಜ್ಞರು.
ಮಹತ್ತತ್ವ	....	ವಾಸುದೇವ
ಅಹಂಕಾರತ್ವ	....	ಸಂಕರ್ಷಣ
ಮನಸ್ತತ್ವ	....	ಅನಿರುದ್ಧ

ಆಕಾಶ	....	ನಾರಾಯಣ
ವಾಯು	....	ವಾಸುದೇವ
ತೇಜಸ್ಸು	....	ಸಂಕರ್ಷಣ
ಆಪಃ	....	ಪ್ರದ್ಯುಮ್ನ
ಪೃಥಿವೀ	....	ಅನಿರುದ್ಧ
ಹಾಗೆಯೇ ಶಬ್ದ	....	ನಾರಾಯಣ
ಸ್ಪರ್ಶ	....	ವಾಸುದೇವ
ರೂಪ	....	ಸಂಕರ್ಷಣ
ರಸ	....	ಪ್ರದ್ಯುಮ್ನ
ಗಂಧ	....	ಅನಿರುದ್ಧನು

ಪುಷ್ಟಭಾಗದಲ್ಲಿ ವಜೀಕಾನಾಮನಾಡೀ—ಹರಿದ್ವರ್ಣ—ಪ್ರದ್ಯುಮ್ನನು

(ಎಡ) ಭಾಗದಲ್ಲಿ ಆರ್ಯಮಾನಾಡೀ ನೀಲವರ್ಣ—ಅನಿರುದ್ಧನು.

ಅಗ್ರದಲ್ಲಿ ಪ್ರಕಾಶಿನೀ ನಾಮನಾಡಿ—ಶುಕ್ಲವರ್ಣ—ವಾಸುದೇವನು.

ಬಲ (ದಕ್ಷಿಣ)ದಲ್ಲಿ ವೈದ್ಯುತಾನಾಡಿ—ಪಿಂಗಳ ವರ್ಣ—ಸಂಕರ್ಷಣನು.

ಮಧ್ಯೇ ಬ್ರಹ್ಮನಾಡೀ—ರಕ್ತವರ್ಣ—ನಾರಾಯಣನು.

ಸುಷುಮ್ನಾನಾಡಿಯ ನಾಲ್ಕು ದಿಕ್ಕುಗಳಲ್ಲಿ ಸ್ಥಿತಗಳಾದ ನೂರು (೧೦೦) ಶತನಾಡಿಗಳು—ನಾರಾಯಣಾದಿ ಶತ ರೂಪಗಳು.

ಈ ನೂರು ನಾಡಿಗಳಲ್ಲೂ ನಾಲ್ಕು ಪ್ರಧಾನಗಳಾದ ನಾಡಿಗಳು ಚತು ರ್ದಿಕ್ಕುಗಳಲ್ಲಿ ಇವೆ. ಅವುಗಳಲ್ಲಿ—

ಪಶ್ಚಿಮ (ಹಿಂಭಾಗ)ದಲ್ಲಿ	....	ವಜ್ರಿಕಾ—ಪ್ರದ್ಯುಮ್ನನು
ವಾಮೇ (ಎಡದಲ್ಲಿ)	....	ಇಡಾ—ಅನಿರುದ್ಧನು
ಅಗ್ರ (ಮುಭಾಗ)	....	ಧಾರಿಣೀ—ವಾಸುದೇವ
ದಕ್ಷಿಣೆ (ಬಲಭಾಗ)	....	ಪಿಂಗಳಾ—ಸಂಕರ್ಷಣನು

1. ಎಂದು ಎಪ್ಪತ್ತೆರಡು ಸಹಸ್ರ (೭೨,೦೦೦) ನಾಡಿಗಳು. ಬೃಹತೀ ಸಹಸ್ರ ವಾಚ್ಯಗಳಾಗಿ ಎಪ್ಪತ್ತೆರಡು ಸಹಸ್ರ (೭೨,೦೦೦) ರೂಪಗಳಿರುವುವು. 2. ಅದ

ರಲ್ಲಿ ದಕ್ಷಿಣ (ಬಲ) ಭಾಗದಲ್ಲಿರುವ (೩೬,೦೦೦) ನಾಡಿಗಳೂ ಬೃಹತೀ ಸಹಸ್ರ ಸ್ವರಾಕ್ಷರ ವಾಚ್ಯಗಳಾಗಿ (೩೬,೦೦೦) ಮೂವತ್ತಾರು ಸಾವಿರ ಪುರುಷ ರೂಪ ಗಳು. 3. ಎಡಭಾಗದ (೩೬,೦೦೦) ನಾಡಿಗಳಲ್ಲಿ ಬೃಹತೀಸಹ ಸ್ರವ್ಯಂಜನಾ ಕ್ಷರ ವಾಚ್ಯಗಳಾದ (೩೬,೦೦೦) ಮೂವತ್ತಾರು ಸಾವಿರ ("ಸ್ತ್ರೀ") ರೂಪ ಗಳಿವೆಯೆಂದು ತಿಳಿಯುವುದು.

1. ಹೀಗೆ (೭೨,೦೦೦) ಸಹಸ್ರ ನಾಡೀ ಪ್ರಭೇದ ಭೂತಗಳು. ಅವುಗಳ ಅವಾಂತರ ನಾಡಿಗಳು ದ್ವಾಸಪ್ತತಿ (೭೨,೦೦೦) ಸಹಸ್ರದಿಂದ ಜನಿಸಿದ ರೂಪ ಗಳೂ ಅನೇಕವಾಗಿವೆ. 2. ಮಸ್ತಕದಲ್ಲಿರುವ ಕಿರೀಟ ಮೊದಲಾದ ಆಭರ ಣದಲ್ಲಿ ಅನಿರುದ್ಧನಿಂದ ಉದ್ಭವಿಸಿದ ಮತ್ಸ್ಯನು. 3. (ಕರ್ಣ) ಕಿವಿಗಳೆರಡರಲ್ಲಿ ಕುಂಡಲಾದಿ ಸಮಸ್ತಾಭರಣವೂ ಅನಿರುದ್ಧೋದ್ಭೂತ ಕೂರ್ಮನು. 4. ಕಂಠದ ಕೌಸ್ತುಭಾದ್ಯಾಭರಣವು ಅನಿರುದ್ಧೋತ ವರಾಹವು.

ಉರಸ್ಸಿನಲ್ಲಿ (1) ಪ್ರಥಮ ತ್ರಿಚ ಅಸೀತಿ. ಪ್ರತಿಪಾದ್ಯ ಶುಕ್ಲವರ್ಣ ವಾಸುದೇವನು ತನ್ನ ಅಸೀತ ರೂಪತ್ರಯಗಳಿಂದ ತ್ರಿಗುಣೀಕೃತ ಮೂರು (ಎಳೆಯ) ಮುತ್ತಿನ ಮಾಲೆಯು.

(2) ದ್ವಿತೀಯ ತ್ರಿಚಾಸೀತಿ. ಪ್ರತಿಪಾದ್ಯ ಪಿಂಗಳ ಸಂಕರ್ಷಣನು ತನ್ನ ಅಸೀತ ರೂಪತ್ರಯಗಳಿಂದ ತ್ರಿಗುಣಿತ (ವೈಢೂರ್ಯ) ಮಾಲೆಯು.

(3) ತೃತೀಯ ತ್ರಿಚಾಸೀತ ಪ್ರತಿಪಾದ್ಯ ಪೀತವರ್ಣ ಪ್ರದ್ಯುಮ್ನನು. ತನ್ನ ತ್ರಿಚ ಅಸೀತಿ ರೂಪಗಳಿಂದ ಮೂರು ಎಳೆಯ ಕಾಂಚನಮಾಲೆಯು.

ತ್ರಿಚಾಸೀತದ ಆದ್ಯ ಭಾಗ ಪ್ರತಿಪಾದ್ಯನಾದ ರಕ್ತವರ್ಣ ಅನಿರುದ್ಧ ನಾರಾಯಣನು.

ಅಸೀತ್ಯುತ್ತರ ರೂಪಗಳಿಂದ ದ್ವಿಗುಣಿತ (ಎರಡು ಎಳೆಯ) ರತ್ನ ಮಾಲೆಯು.

ಅಂತ್ಯಭಾಗ ಪ್ರತಿಪಾದ್ಯ ನೀಲವರ್ಣ ಅನಿರುದ್ಧನು ಅಸೀತ್ಯುತ್ತರ ನೂರು ಸ್ವರೂಪಗಳಿಂದ ದ್ವಿಗುಣಿತ (ಎರಡೆಳೆಯ) ಇಂದ್ರನೀಲ ಮಾಲಾ— ನೃಸಿಹ್ಮೋದ್ಭೂತ ನೃಸಿಹ್ಮನು.

ಬಾಹುಗಳಲ್ಲಿ ಕೇಯೂರ ಪೂರ್ವ (ಮೊದಲಾದ) ಆಭರಣವು —
ನೃಸಿಹ್ಮೋದ್ಭೂತ ವಾಮನನು.

ನಿತಂಬ (ಕಟಿಪಶ್ಚಾದ್ಭಾಗ)ದಲ್ಲಿ ಕಾಂಚೀ ಮೊದಲಾದ ಆಭರಣವು—
ನೃಸಿಹ್ಮೋದ್ಭೂತ ಭಾರ್ಗವನು.

ಪಾದಗಳೆರಡರಲ್ಲೂ ಮಂಜರೀ (ಪೈಜನ) ಮೊದಲಾದ ಆಭರಣವು—
ಸಂಕರ್ಷಣೋದ್ಭವ ಕೃಷ್ಣನು.

ಕೈಯ್ಯ ಬೆರಳುಗಳಲ್ಲಿ ಉಂಗುರ ಮೊದಲಾದ ಆಭರಣವು — ಸಂಕ
ರ್ಷಣೋದ್ಭೂತ ಕಲ್ಕಿಯು.

ಕಿರೀಟಾದಿ ಸರ್ವಾಭರಣಗಳಲ್ಲಿ ಕುಂದಣ ಖಚಿತಗಳಾದ ನವರತ್ನ
ಗಳು — ಅನಿರುದ್ಧಾದಿ ಮೂರ್ತಿತ್ರಯಗಳಿಂದ ಉದ್ಭವಿಸಿದ ಮತ್ಸ್ಯಾದಿ
ನವ ರೂಪಗಳು.

ಅಥರ್ವಾಧಿಕಾರಿಗಳಿಂದ ಉಪಾಸ್ಯ "ಆತ್ಮ"ವೆಂಬ ನಾಮವುಳ್ಳ
ಗುಣವುಳ್ಳವನು—ಅನಿರುದ್ಧನು.

ಮನುಷ್ಯೋತ್ತರಿಂದ ಉಪಾಸ್ಯಗಳಾದ ಆನಂದ, ಜ್ಞಾನ, ಸತ್
ಆತ್ಮಾ ಎಂಬ ನಾಲ್ಕು ಗುಣಗಳು ವಾಸುದೇವಾದಿ (ವಾಸುದೇವ, ಸಂಕರ್ಷಣ
ಪ್ರದ್ಯುಮ್ನ, ಅನಿರುದ್ಧ)ರೆಂಬ ಚತುರ್ಮೂರ್ತಿಗಳು.

ಹೀಗೆಯೇ ಇಚ್ಛಾ, ಕೃತಿ, ವೀರ್ಯ, ಔದಾರ್ಯ, ಪ್ರಾಗಲ್ಭ್ಯ ಮೊದ
ಲಾದ ಹಾಗೆಯೇ ವಿರಾಗ, ಶಮ, ದಮಾದಿ ಅನಂತಗುಣಗಳು, ತನ್ನಾಮಕ
ಗಳಾದ ಅನಂತರೂಪಗಳೇ ಇರುವುವು.

ತಥಾ ಸರ್ಜನ, ಪಾಲನ, ಸಂಹರಣ ಗಳೆಂಬ (ಸೃಷ್ಟಿ, ಸ್ಥಿತಿ
ಪಾಲನೆ)! ಕ್ರಿಯೆಗಳೂ ಕ್ರಮವಾಗಿ ವಿಶ್ವ, ತೈಜಸ, ಪ್ರಾಜ್ಞ ಮೂರ್ತಿಗಳು

ಇಂಥ ಈ ರೀತಿಯಾದ ಸೃಷ್ಟ್ಯಾದಿ ಕಾರ್ಯಗಳಿಗಾಗಿ ಅನಂತ ಕ್ರಿಯೆ
ಗಳು ವಿಶ್ವಾದಿಗಳಿಂದ ಉದ್ಭವಿಸಿದ ಅನಂತಮೂರ್ತಿಗಳೂ ಇರುವುವು.

ಏವಂಚ ಉಕ್ತರೀತಿಯಿಂದ ಒಂದೊಂದು ಅವಯವ ಸಮೂಹವು
ಪ್ರತ್ಯೇಕ ಪ್ರತ್ಯೇಕವಾಗಿ ಒಂದೊಂದು ರೂಪಾತ್ಮಕವಾದುದು.

ಅದರಲ್ಲೂ ಅವಯವ ಸಮೂಹವೂ ರೂಪಾಂತರಾತ್ಮಕವಾದುದು.

ಇದೇ ರೀತಿಯಾಗಿ ಗುಣಗಳಿದ್ದೂ ಸಹ ಪ್ರತ್ಯೇಕವಾಗಿ ಏಕೈಕ ರೂಪಾತ್ಮಕವಾದುದರಿಂದ ಏಕೈಕ ಗುಣರೂಪಾತ್ಮಕವಾದುದರಿಂದಲೂ ಒಂದೊಂದು ಗುಣವೂ ಅನೇಕ ಗುಣಾತ್ಮಕವಾದುದು. ಅಲ್ಲಿಯೂ ಒಂದೊಂದೂ ಅನೇಕ ಗುಣಾತ್ಮಕವೆಂದೂ ಒಂದೊಂದು ಗುಣದ ಅನಂತಾನಂತ ಗುಣಾತ್ಮಕತ್ವವನ್ನು ತಿಳಿಯುವುದು.

ಇದೇರೀತಿಯಾಗಿ ಕ್ರಿಯೆಗಳಲ್ಲೂ ಒಂದೊಂದು ಕ್ರಿಯೆಯೂ ಅನಂತಾನಂತ ಕ್ರಿಯಾತ್ಮಕವಾದುದೆಂಬುದನ್ನು ತಿಳಿಯುವುದು.

ಈಶ ಜೀವರ ಬಿಂಬ ಪ್ರತಿಬಿಂಬ ಭಾವವು

ಪರಮ ಮುಕ್ತಿಯಲ್ಲಿ ಸರ್ವವೂ ಶ್ರೀಹರಿಯ ಅಧೀನವೆಂಬ ಭಕ್ತಿಪೂರ್ವಕ ಪ್ರವಣ (ವಿಶ್ವಾಸ)ವೇ ಭರದಿಂದ ಕೂಡಿದ ಮನೋವೃತ್ತಿಯೇ ಪರಮ ಸಾಧನವೆಂದು ಸಿದ್ಧವಾಗಿರುತ್ತೆ. ಇದನ್ನೇ ಅಧಿಕಾರಿಗಳ ಅವಸ್ಥೆ, ತಾರತಮ್ಯದಿಂದ ಪ್ರವೃತ್ತಧರ್ಮ, ನಿವೃತ್ತಧರ್ಮ,ವೆಂಬ ರೀತಿಯಲ್ಲಿ ಶ್ರುತಿ, ಸ್ಮೃತಿಗಳಲ್ಲಿ ಹೇಳಲ್ಪಟ್ಟಿದೆ. ಅದು ಹೇಗೆಂದರೆ—

1. ಕರ್ಮ ಮಾಡುವವರಿಗೆ, ಸ್ನಾನ, ಸಂಧ್ಯಾವಂದನೆ, ಬ್ರಹ್ಮಯಜ್ಞ, ಜಪ, ದೇವತಾರ್ಚನೆ, ವೈಶ್ವದೇವ, ಬಲಿಹರಣ, ಅತಿಥಿ ಪೂಜನೆ, ವ್ರತಾದಿಗಳ ವಿಶೇಷಾನುಷ್ಠಾನ, ಯಜ್ಞ, ಯಾಗಾದಿಗಳೂ ಯಾವುವು ಇವೆಯೋ ಅವುಗಳು.

2. ಜಿಜ್ಞಾಸುಗಳಿಗೆ, ನಿತ್ಯಾನಿತ್ಯ ವಸ್ತುವಿವೇಕ, ಇಹ ಮತ್ತು ಪರ ಲೋಕದಲ್ಲಿ ಅರ್ಥ ಫಲ ಭೋಗ, ವೈರಾಗ್ಯ, ಶಮ, ದಮ, ಉಪರತಿ, ತಿತಿಕ್ಷಾ, ಮನಃ ಸಮಾಧಾನ, ಭಕ್ತ್ಯಾದಿಗಳಾವುವಿದೆಯೋ ಅವು, ಇವೆರಡೂ ಸಹ—

3. ಜ್ಞಾನಿಗಳಿಗೆ ಲೋಕಸಂಗ್ರಹಾರ್ಥವಾಗಿ ಯಾವುದಿದೆಯೋ ಮತ್ತು

4. ಅಧ್ಯಾತ್ಮ ವೇತ್ತೃಗಳಿಗೆ, ಅನಿರುದ್ಧಾದಿ ರೂಪಧ್ಯಾನ ತ್ರಿವಿಧ ಪೂಜೆ, ಶರಣಾಗತಿ, ಸರ್ವ ಸಮರ್ಪಣೆ, ಮೊದಲಾದ ಸಾಧನ ಸಮೂಹವೂ ಇವುಗಳೇ ಆಗಿವೆ.

ಹೇಗೆ ರೋಗಿಗಳಿಗೆ ರುಚಿಯುನ್ನುಂಟುಮಾಡಲು ತಂಡುಲ, ಗೋಧಿ ಮೊದಲಾದ ಸ್ವಾಭಾವಿಕವಾದ ದ್ರವ್ಯ (ಪದಾರ್ಥ)ವನ್ನೇ ಅನೇಕ ರೀತಿಯಾಗಿ ವ್ಯಪದೇಶ ಮಾಡುತ್ತಾ, ಆರೀತಿ ಪದಾರ್ಥ ಭೇದಗಳನ್ನು ಮಾಡುತ್ತಾರೆಯೋ, ರುಚಿಯನ್ನು ಉತ್ಪಾದನೆ ಮಾಡುತ್ತಾರೆಯೋ ಅದರಂತೆಯೇ ಮೇಲೆ ನಿರೂಪಿಸಿದ ವಿಧದಿಂದ ಅನೇಕ ರೀತಿಯಲ್ಲಿ ಭವರೋಗಿಗಳಿಗೆ, ಪುರಾಣ ವಚನಗಳು, ಸಂಸಾರದಿಂದ ಮುಕ್ತರಾಗಲು ರುಚಿಯನ್ನು ಉತ್ಪಾದನೆ ಮಾಡಲು ಬಹುವಿಧದಲ್ಲಿ ಪ್ರತಿಪಾದನೆ ಮಾಡುವುವು.

ಇದು ಅನುಭವದಿಂದ ಅಭಿವ್ಯಕ್ತವಾಗಿ ತನ್ನ ಸಾಕ್ಷಿಯಿಂದ ಪುಷ್ಟವಾಗಿ ಚನ್ನಾಗಿ ಉಪ್ಪಬೀತವಾಗಿ, ವ್ಯವಸ್ಥಿತ ರೀತಿಯಲ್ಲಿ ನಿರೂಢವಾಗಿ, ದೃಢವಾಗಿ ನಿಂತು ಅನಂತರ, ಅದು ಸಹಸ್ರಾರು ವಿರೋಧಿ ಪ್ರಮಾಣಗಳಿಂದಲೂ ಸಹ ಚಲಿಸುವುದಿಲ್ಲವು.

ಇದೇ ಸಾಧನ ಸಂಪತ್ತಿನ ಪರಾಕಾಷ್ಠವು. ಇದೇನೇ ವೃತ್ತಿ ವೈಕಲ್ಯದಲ್ಲಿ ಸಾಕ್ಷೀಂದ್ರಿಯದಲ್ಲಿರುವ ಸಾಧ್ಯರೂಪವೂ ಆಗಿ ವಿಜಯಿಯಾಗಿ ವಿಜೃಂಭಿಸುವುದೋ ಅದರಂತೆಯೇ ಈ ಶ್ರೀಹರಿಯೂ 1. ಕರ್ಮ ಮಾಡತಕ್ಕವರಿಗೆ, ದೇವತೆಗಳು, ಋಷಿಗಳು, ಪಿತೃರೂಪದಲ್ಲೂ, 2. ಜಿಜ್ಞಾಸುಗಳಿಗೆ. ಶರೀರ ಇಂದ್ರಿಯ ದೇವತಾದಿಗಳ ಭಾವದಿಂದಲೂ, 3. ಜ್ಞಾನಿಗಳಿಗೆ ರಾಮ, ಕೃಷ್ಣ, ನೃಸಿಂಹ, ವಾಮನ, ಹಯಗ್ರೀವಾದಿ ರೂಪವಾಗಿಯೂ, 4. ಅಧ್ಯಾತ್ಮ ವೇತ್ತೃಗಳಿಗೆ, ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ರೂಪಗಳಿಂದಲೂ ಈ ತಮ್ಮ ಹೃದಯ ಗುಹೆಯಲ್ಲಿ ವಾಸಿಸುವರಾಗಿ ಸರ್ವ ವ್ಯವಹಾರ ನಿರ್ವಾಹಕತ್ವದಿಂದಲೂ, ಪೂಜ್ಯನಾದವನೆಂದು ಶಾಸ್ತ್ರಗಳಲ್ಲಿ ಪ್ರತಿಪಾದ್ಯನಾಗಿ ಸ್ತುತ್ಯನಾಗಿದಾನೆ.

ಇದು ಇಲ್ಲಿ ಸ್ವಲ್ಪಮಟ್ಟಿಗೆ ಈರೀತಿ ಪ್ರತಿಪಾದಿಸಿ ತೋರಿಸಲ್ಪಡುವುದು.

ಜೀವನಾದರೋ ಲಿಂಗಶರೀರದಲ್ಲಿ ನೀರಿನಿಂದ ಕೂಡಿದ ಕ್ಷೀರದಂತೆ ಕೂಡಿಕೊಂಡೇ ಸಮ್ಮಿಳಿತನಾಗಿರುವನೆಂದು ಹೇಳಲ್ಪಟ್ಟಿದೆ. ಅಂಥ ಜೀವನಲ್ಲಿ ವಿಷ್ಣುವು "ಹರಿ" ಎಂಬ ರೂಪದಿಂದ ಮುಖದಲ್ಲಿ ಮುಖವು ಅಂಗ ಪ್ರತ್ಯಂಗಗಳಲ್ಲಿ ಅಂಗಾಂಗಗಳು ಈ ಕ್ರಮದಿಂದ ಇರುತ್ತಾನೆ. ಅವನಿಗೆ ಉಪಾಧಿಯೂ ಪ್ರತಿಬಿಂಬವೂ (ಜೀವ)ನೇ ಆಗಿರುವನು. ಅವನಾದರೋ (ಆ ಪ್ರತಿಬಿಂಬನು) ಸ್ವಾಭಾವಿಕವಾಗಿಯೇ ತನ್ನನ್ನು ಬಿಂಬದ ಅಭಿಮುಖವಾಗಿಯೇ ನೋಡುತ್ತಾನೆ. ನೋಡುತ್ತಿದ್ದರೂ ತನ್ನಲ್ಲಿಯೇ ತನ್ನನ್ನೇ ಉಪಾಧಿತಯಾ ಸಹ ಕಂಡು ನೋಡುತ್ತಾನೆ.

ದೇವತಾ ತಾರತಮ್ಯಾಂತರ್ಗತ್ವೇನ ಬಿಂಬ ಪ್ರತಿಬಿಂಬ ಭಾವವು.

ಈ ಬಿಂಬವಾದರೊ ಜೀವನಿಗೆ ಸಾಕ್ಷಾತ್ತಾಗಿ ಅಲ್ಲವು. ಆದರೆ ಸರ್ವ ದೇವತೆಗಳಲ್ಲಿ "ಅವರ"ನಾದ ಪುಷ್ಕರನೆಂಬುವನು ಬಿಂಬವು. ಆ ಸಾಕ್ಷಾತ್ ಬಿಂಬವು ಮುಖದಲ್ಲಿ ಮುಖವು ಇತ್ಯಾದಿ ಕ್ರಮದಿಂದ ಇದಾನೆ. ಆ ದೇವನಲ್ಲಿ ಶನೈಶ್ಚರನೂ ಅದೇ ಕ್ರಮದಿಂದ ಬಿಂಬನಾಗಿರುವನು. ಆ ಶನೈಶ್ಚರನಲ್ಲಿ ಉಷಾದೇವಿಯೂ, ಆ ಉಷೆಯಲ್ಲಿ ಬುಧನೂ, ಬುಧನಲ್ಲಿ ಸ್ವಾಹಾದೇವಿಯೂ, ಆಕೆಯಲ್ಲಿ ಪರ್ಜನ್ಯ ನಾಮಕನನೂ, ಆ ಪರ್ಜನ್ಯ ದೇವನಲ್ಲಿ ಯಾದರೊ ವಿಶ್ವೇಶ, ಅಶ್ವಿನಿಗಳು, ಕುಬೇರರೂ, ಅವರಲ್ಲಿ ಅಗ್ನಿಯೂ, ಆ ಅಗ್ನಿಯಲ್ಲಿ ವರುಣನೂ, ಆತನಲ್ಲಿ ಚಂದ್ರ, ಸೂರ್ಯ, ಧರ್ಮ, ಶತರೂಪಾದೇವಿಯೂ, ಅವರಲ್ಲಿ ಪ್ರವಹನೂ, ಆತನಲ್ಲಿ ಅನಿರುದ್ಧ, ಸ್ವಾಯಂಭುವ ಮನು, ಬೃಹಸ್ಪತಿ, ದಕ್ಷ, ರತಿ, ಶಚಿಯರೂ, ಅವರಲ್ಲಿ ಅಹಂಕಾರಿಕ ಪ್ರಾಣನು, ಆತನಲ್ಲಿ ಇಂದ್ರ ಕಾಮಕರೂ, ಅವರಲ್ಲಿ ಉಮಾ, ಸೌಪರ್ಣೀ, ವಾರುಣಿಯರು ಮೂವರೂ, ಅವರಲ್ಲಿ ರುದ್ರ, ಗರುಡ, ಶೇಷರೂ ಬಿಂಬರಾಗಿರುವರು. ಅವರಿಗೆ ಸರಸ್ವತಿ ಭಾರತಿಯರೂ, ಅವರಿಗೆ ಬ್ರಹ್ಮ ವಾಯುರೂ, ಅವರಿಬ್ಬರಿಗೂ ರಮಾದೇವಿಯರೂ, ಆ ಮಹಾಲಕ್ಷ್ಮಿಗೆ ಶ್ರೀ ಹರಿಯೂ, ಹೀಗೆ ಈ ರೀತಿಯಾಗಿ ಪರಂಪರೆಯಿಂದ ಬಿಂಬರಾಗಿರುವರು.

ಸಾಧನ ಭಗದುಪಾಸನೆ ಫಲಗಳು ಅವರವರ ಯೋಗ್ಯತಾ ಮತ್ತು ತಾರತಮ್ಯಾನುಸಾರವಾಗಿ ಎಂದು

ಯದ್ಯಪಿ ಶ್ರೀಹರಿಯು ಮಹಾಲಕ್ಷ್ಮಿಯನ್ನು ಅಧಿಷ್ಠಾನ ಮಾಡಿಕೊಂಡು ಅನಾದಿ ಕಾಲದಿಂದ ಜೀವ ಬಿಂಬನಾಗಿ ಇದ್ದಾಗ್ಯೂ, ಹಾಗೆಯೇ ಅವರಿಗೆ ಸಾಧನ ಸಂಪತ್ತಿಯನ್ನುಂಟುಮಾಡಿಕೊಟ್ಟು ಬಂಧನದಿಂದ ಬಿಡುಗಡೆ ಮಾಡಿ ಮುಕ್ತಿಯನ್ನುಂಟುಮಾಡಲು ಸಮರ್ಥನಾಗಿದ್ದಾಗ್ಯೂ, ಪುಷ್ಕರನನ್ನು ಆರಂಭಿಸಿ ಬ್ರಹ್ಮ ದೇವನವರೆವಿಗೆ ಇರುವವರಿಗೆಲ್ಲ ದೇವತೆಗಳಿಗೂ ಪರಮಾನುಗ್ರಹದಿಂದ, ಅನ್ಯಗತವಾದ ಭಗವದ್ಧರ್ಮ ಫಲವನ್ನೂ, ಮುಕ್ತಿಯಲ್ಲಿ ಆನಂದಾತಿಶಯ ಲಕ್ಷಣ ಫಲವನ್ನೂ ಕೊಡಲು ಅವರಿಂದ "**ಸಪ್ತಾನ್ನ ವಿದ್ಯೆಯ**" ಉಪಾಸನೆಯೇ ಮೊದಲಾದ ಸಾಧನಗಳನ್ನು ಬಹು ದೀರ್ಘ ಕಾಲ ಮಾಡಿಸಿ, ಅದರ ಫಲವನ್ನು ಶರೀರ ಇಂದ್ರಿಯ ಮೊದಲಾದವುಗಳ ಸ್ವಾತಂತ್ರ್ಯಾಧಿಕ್ಯ ತಾರತಮ್ಯದಿಂದ ಕರ್ತನಾದ ಜೀವನನ್ನು ಪ್ರಾರಂಭಿಸಿ ಬ್ರಹ್ಮನ ಪರ್ಯಂತ ಉತ್ತರೋತ್ತರ ಅಧಿಕವಾಗಿ ಕೊಟ್ಟು ಉತ್ಕೃಷ್ಟನಾಗಿ ಸದಾ ವಿಜಯಿಯಾಗಿದಾನೆ.

ತ್ರಿವಿಧ ಬಿಂಬ ಪ್ರತಿಬಿಂಬ ಭಾವನೆ

1. ಹೀಗೆ ಲಕ್ಷ್ಮೀದೇವಿಯೇ ಮೊದಲಾದವರಿಂದ ಪುಷ್ಕರ ದೇವನ ಪರ್ಯಂತವಾಗಿ ನೀರಿನ ಜೊತೆಯಲ್ಲಿ ಕ್ಷೀರವು ಸಮ್ಮಿಳಿತವಾಗಿದ್ದರೂ, ಅವರಿಗೆ ಬಾಹ್ಯ ಮತ್ತು ಅಭ್ಯಂತರ ಭಾವವನ್ನು ಉಂಟುಮಾಡಿ ಸ್ವಯಂ ಸರ್ವಾಂತರನಾಗಿಯೇ ಮುಖದಲ್ಲಿ ಮುಖವು ಇತ್ಯಾದಿ ಕ್ರಮದಿಂದ ಹರಿಯು ಜೀವನನ್ನೂ ವ್ಯಾಪಿಸಿಕೊಂಡೇ ಇದ್ದಾನೆ. ಇದನ್ನೇ "**ದ್ರವ್ಯ ಬಿಂಬ ಭಾವ**" ವೆಂದು ಹೇಳುತ್ತಾರೆ.

2. ಇದೇ ರೀತಿಯಾಗಿ "ಅಕಾರಾದಿ" ಪಂಚಾಶತ್ (ಐವತ್ತು) ವರ್ಣಾತ್ಮಕವೂ, ಷಡ್ಜವೇ ಮೊದಲಾದ ಅನೇಕವಿಧ ಸ್ವರಾತ್ಮಕವೂ, ಅತಿ ಮಧುರ "ಶಬ್ದ"ವೂ, ಶೀತೋಷ್ಣಾದಿ ರೂಪ ಸುಖ ದುಃಖವನ್ನು ಕೊಡುವ "ಸ್ಪರ್ಶವೂ" ಶುಕ್ಲಾದಿ ಅನೇಕ ವಿಧ ರೂಪವೂ "ಮಧುರಾದ್ಯನೇಕ ವಿಧ ಸುರಸ (ಸಮೀಚೀನ ರಸ)ವೂ, ಸುರಭಿಯೇ ಮೊದಲಾದ ಅನೇಕ ಗಂಧವೂ"

ಜ್ಞಾನ, ಆನಂದ, ಇಚ್ಛಾ, ಕೃತಿ, ವೀರ್ಯ, ಔದಾರ್ಯ, ಪ್ರಾಗಲ್ಭ್ಯವೇ ಮೊದಲಾದ ಪ್ರಮುಖ ಗುಣಗಳೂ, ವೈರಾಗ್ಯ, ಶಮ, ದಮಾದಿಗಳೂ ಇನ್ನೂ ಯಾವುವು ಜೀವನ ಸ್ವರೂಪಾನುಗುಣಗಳು ಇವೆಯೋ, ಅವರಲ್ಲಿಯೂ ಅದೇರೀತಿ ಯಾದ ಬಿಂಬ ಗುಣಗಳೂ ಉಕ್ತಗಳಾದ ಅನೇಕ ದೇವತಾಗುಣಗಳ ದ್ವಾರಾ, ಬಿಂಬತಯಾ ಇರುವುವು. ಇದನ್ನೇ **ಗುಣಬಿಂದ ಪ್ರತಿಬಿಂಬ** ಭಾವವೆಂದು ಕರೆಯುತ್ತಾರೆ.

3. ಇದರಂತೆಯೇ, ಗಮನಾಗಮನ, ಗ್ರಹಣ, ಉದ್ಧರಣ, ಆನಯನ ಮೊದಲಾದ ಅನೇಕವಿಧ ಸ್ವರೂಪಭೂತಗಳಾದ ಕ್ರಿಯೆಗಳಲ್ಲಿ ಅದೇ ರೀತಿಯಾದ ಉಕ್ತ ಅನೇಕ ದೇವತೆಗಳ ದ್ವಾರಾ ಬಿಂಬ ಕ್ರಿಯೆಯೂ ವಿಜಯಶಾಲಿಯಾಗಿ ಉತ್ಕೃಷ್ಟವಾಗಿದೆ. ಇದೇನೇ ಕ್ರಿಯಾ **ಬಿಂಬ ಪ್ರತಿಬಿಂಬ** ಭಾವತ್ವದಿಂದ (ಗೀತೆಯೇ) ಕರೆಯಲ್ಪಡುತ್ತದೆ.

\+\+\+\+\+\+\+\+

ಸ್ಥೂಲ ಶರೀರ ಸೃಷ್ಟಿಯು

ಬಿಂಬರೂಪಿಯಾದ ಹರಿಯು ಅನಂತಾನಂತ ಜೀವರುಗಳಲ್ಲಿ ಅನಾದಿ ಕಾಲವನ್ನು ಪ್ರಾರಂಭಿಸಿ, ಮುಖದಲ್ಲಿ ಮುಖವನ್ನು ಇತ್ಯಾದಿ ಕ್ರಮದಿಂದ **ರಮಾ** ದೇವಿಯರ ಅವಯವ, ಗುಣ, ಕ್ರಿಯಾಮಾತ್ರವನ್ನು ದ್ವಾರವಾಗಿ ಮಾಡಿಕೊಂಡು ತನ್ನ ಅವಯವಗಳಿಂದ ಜೀವರ ಅವಯವಗಳನ್ನೂ, ತನ್ನ ಗುಣಗಳಿಂದ ಜೀವರ ಗುಣಗಳನ್ನೂ, ತನ್ನ ಕ್ರಿಯೆಗಳಿಂದ ಜೀವರ ಕ್ರಿಯೆಗಳನ್ನೂ, ಲೀಲಾಮಾತ್ರದಿಂದಲೇ ಛಿದ್ರವಾಗದಂತೆ ಸಂಪೂರ್ಣವಾಗಿ ವ್ಯಾಪಿಸಿ ಇರುತ್ತಾ, ತನ್ನಿಂದ ಆಲಿಂಗಿತರಾದ ಅಶೇಷ ಸಮಸ್ತ ಜೀವಗಣದ ಆನಂದಾದಿಗಳು ಸದಾ ಕಾಲವು ಇದ್ದಾಗ್ಯೂ, ಜ್ಞಾನಾನಂದವೇ ಮೊದಲಾದ ನಿಜಸ್ವರೂಪವನ್ನು, **ಮಾಯಾ, ಅವಿದ್ಯಾ** ಪದಗಳಿಂದ ತಿಳಿಯಲ್ಪಡು (ಬೋಧ್ಯವಾಗಿರು)ವ ಸ್ವೇಚ್ಛಾರೂಪದಿಂದಲೂ, **ಲಿಂಗಶರೀರ** ರೂಪದಿಂದಲೂ, ಪ್ರಕೃತಿಯಿಂದಲೂ ಆಚ್ಛಾದಿತವಾಗಿರುವುದರಿಂದ ಅನುಭವ ಪದವಿಯನ್ನು ಈ ಜೀವರು ತಮ್ಮ ಸ್ವರೂಪ ಜ್ಞಾನವನ್ನು ಅವಲಂಬಿಸ (ತಿಳಿಯ)ಲಾರರು.

ಅಲ್ಲಿ ಜೀವರಿಗೆ ವಿಶೇಷ ಉಪಕಾರ ಅಥವ ಅಪಕಾರಗಳನ್ನು ಮಾಡಲ ಅಸಮರ್ಥವಾದ ಅತಿ **ಸೂಕ್ಷ್ಮ ಲಿಂಗಶರೀರ** ತತ್ಸದೃಶಗಳಾದ ಮಹತ್ತತ್ವ ಅಹಂಕಾರತತ್ವ ಭೂತಗಳ ಅಂಶಗಳಿಂದ ಪುನಃ ಪುನಃ ಸಂಯೋಜನೆ ಮಾಡಿ ಸೇರಿಸಿ ಕ್ರಮವಾಗಿ (ಉಪಚಿತ) ಬೆಳವಣಿಗೆಯಿಂದ ಅಭಿವೃದ್ಧಿಯನ್ನು ಮಾಡಿ ಪುನಃ **ಸ್ಥೂಲರೂಪ** ಮಹತ್ತತ್ವವೇ ಮೊದಲಾದ ಇಪ್ಪತ್ತನಾಲ್ಕು ತತ್ವಗಳ ಸೃಷ್ಟಿಪೂರ್ವಕವಾಗಿ, ಆ ತತ್ವಗಳಿಂದ, **ಸ್ಥೂಲ ಸ್ಥೂಲತರಾದಿ** ಕ್ರಮದಿಂದ ಸುರರು, ನರರು, ತಿರ್ಯಕ್ ಪ್ರಾಣಿ ಮೊದಲಾದ ನಾನಾವಿಧ ಶರೀರ ಸಮೂಹವನ್ನು ನಿರ್ಮಾಣ ಮಾಡಿ, ಅವುಗಳನ್ನು ಒಳಗೆ ಪ್ರವೇಶ ಮಾಡಿಸಿ ಅವುಗಳಿಗೆ ಸತ್ತಾದಿಗಳನ್ನು ಕೊಟ್ಟು ಅಲ್ಲಿ **ಜೀವನನ್ನು**, ಅಂಗಾರದಲ್ಲಿ ವಹ್ನಿಯಂತೆ ನಿವೇಶನ ಮಾಡಿ ಇಟ್ಟು, ಸಂಪಾದಿಸಲ್ಪಡಬೇಕಾದ ಪುಣ್ಯ ಪಾಪಗಳೆಂಬ **ವಿತ್ತವನ್ನು** ತ್ರಿವಿಧರಾದ ಸ್ವಪುತ್ರರಿಗೆ ಯಥಾ ಯೋಗ್ಯವಾಗಿ ವಿಭಾಗ ಮಾಡಿಕೊಡಲು **ಕಾರ್ಯ ಕಾರಣ ಪ್ರೇರಕರಾದ** ಬ್ರಹ್ಮಾದಿ ಪುಷ್ಕರಾಂತರಾದ ದೇವತೆಗಳನ್ನೂ. ದೇವತಾರಿಗಳಾದ ಅಸುರಾದಿಗಳನ್ನೂ, ದ್ವಾರವಾಗಿ ಮಾಡಿಕೊಂಡು, ಅವರ ಮೂಲಕ ಜೀವರನ್ನು ಅಧಿಷ್ಠಾನ ಮಾಡಿ ಬಹುಕಾಲ ಅವರುಗಳಿಂದ ಸಾಧನಗಳನ್ನು ಮಾಡಿಸಿ, ಕ್ರಮವಾಗಿ ತನ್ನ ಆತ್ಮನನ್ನು ಅಪರೋಕ್ಷ ಜ್ಞಾನದಿಂದ ದರ್ಶನವನ್ನು ಮಾಡಿಸಿ, ಪ್ರಾರಬ್ಧ ಕರ್ಮದಿಂದ ಅತಿರಿಕ್ತವಾಗಿ ಬೇರೆಯಾದ ಕೆಲವು ಸಂಚಿತಗಳನ್ನು ವಿನಾಶಮಾಡಿ ಕೆಲವು ಕರ್ಮಗಳನ್ನು ವಿಶ್ಲೇಷಮಾಡಿ, ಆಗಾಮಿಗಳ ಸಂಬಂಧವಿಲ್ಲದಂತೆ ಮಾಡಿ, ಭೋಗದಿಂದ ಪ್ರಾರಬ್ಧ ಕರ್ಮವನ್ನು ಹೋಗಲಾಡಿಸಿ, ನಾಶಮಾಡಿ **ನಿಜಾನುಭವ ಸ್ವಸ್ವರೂಪಾನುಭವಕ್ಕೆ** ವಿರೋಧಿಗಳಾದ ಕಾಮಗಳನ್ನು. **ಅವಿದ್ಯಾದಿ** ಪದಗಳಿಂದ ಬೋಧ್ಯವಾದ ಉಕ್ತರೂಪವಾದ, ಹಿಂದೆ ಹೇಳಿದ ಬಂಧದ ದೆಶೆಯಿಂದ ಸಂಪೂರ್ಣವಾಗಿ ಬಿಡುಗಡೆಯಿಂದ ಮುಕ್ತರನ್ನು ಮಾಡಿ, ಅನ್ಯಥಾ ರೂಪವನ್ನು ಬಿಟ್ಟು, ಸ್ವರೂಪದಿಂದ ಅವಸ್ಥಿತರಾಗಿರುವವರಿಗೆ ನಿರುಪಾಧಿಕವಾದ, ಬಾಧರಹಿತವಾದ, **ನಿಜಾನಂದ ಜ್ಞಾನಾದಿ ಸ್ವರೂಪ ಸುಖಾನುಭವವನ್ನು** ಸಾರ್ವಕಾಲೀನವಾದುದನ್ನು ಅನುಗ್ರಹಿಸಿಕೊಟ್ಟು, ಅಂಥ ಮುಕ್ತರೊಡನೆ, ವೈಕುಂಠ ಮೊದಲಾದ ಸ್ಥಾನ ವಿಶೇಷಗಳಲ್ಲಿ ವಿಹಾರವನ್ನು ಮಾಡಲು ಇಚ್ಛಿಸಿದವನಾಗಿ, ಎರಡನೆಯ ರೂಪದಿಂದ ಸ್ಥೂಲ ಶರೀರ

ವನ್ನು ಕೊಟ್ಟನೆಂಬಂಶವು ಹೇಳಲ್ಪಟ್ಟಿತು. ಅಲ್ಲಿ ಆ **ಸ್ಥೂಲ ಶರೀರದ** ಸೃಷ್ಟಿಕ್ರಮವು ಈರೀತಿ ಇರುವುದು.

ಬ್ರಹ್ಮಮಾನದಿಂದ ನೂರು ವರ್ಷ ಪರ್ಯಂತರ ಲಯಕಾಲವು. (ಕೃತ, ತ್ರೇತಾ, ದ್ವಾಪರ, ಕಲಿ) ಯುಗಗಳೆಂಬ ನಾಲ್ಕು ಸೇರಿದ **ಚತುರ್ಯುಗವೆನಿ**ಸಿದ **ಮಹಾಯುಗವು** ಸಹಸ್ರಸಲ ತಿರುಗಿದರೆ, ಎಂದರೆ ನಾಲ್ಕು ಸಹಸ್ರ ಯುಗಗಳಿಗೆ ಬಹ್ಮನಿಗೆ **ಒಂದು ಹಗಲು**, ಅಷ್ಟೇ ಕಾಲವು ರಾತ್ರಿಯು. ಇಂಥಾ ಪ್ರಮಾಣ ಕಾಲವು ಬ್ರಹ್ಮನ **ದಿನವು**. ತಿಂಗಳಿಗೆ ಇಂಥವು ಮೂವತ್ತು ದಿನಗಳು ಒಂದು **ತಿಂಗಳು**. ಆರೀತಿಯಾದ ೧೨ ಒಂದು ಬ್ರಹ್ಮಮಾನದ **ವರ್ಷವು**. ಅಂತಹ ೧೦೦ ವರ್ಷಕ್ಕೆ ಒಂದು ಬ್ರಹ್ಮಮಾನದ **ಶತಾಯುಃ ಕಾಲವು**. ಅಂಥಾ ಈ ನೂರು ವರ್ಷ ಕಾಲವು ಭಗವಾನ್ ನಾರಾಯಣನಿಗೆ ರೆಪ್ಪೆ ಹಾಕುವಷ್ಟು **ನಿಮೇಷ ಕಾಲದಂತೆ**. ಎಂದು ನಿರ್ದೇಶ ಮಾಡಿದ್ದಾರೆ. ಅದು ಅಂತ್ಯವಿಲ್ಲದ್ದು. ತಿಳಿಯಲು ಅಶಕ್ಯವಾದುದು.

ಆ ಲಯಕಾಲದಲ್ಲಿ ರಮಾದೇವಿಯರು ಉದಕರೂಪದಿಂದ ವ್ಯಾಪ್ತರಾಗಿದ್ದಾರೆ. ಭೂದೇವಿಯು ವಟ (ಆಲದೆಲೆ) ಪತ್ರವಾಗುತ್ತಾಳೆ. ದುರ್ಗಾದೇವಿಯು ತಮೋರ ರೂಪದಿಂದ ವ್ಯಾಪ್ತಳಾಗಿರುತ್ತಾಳೆ.

ಆಗ ತತ್ವನಿಯಾಮಕ ರೂಪಗಳಿಂದಲೂ, ಅವತಾರ ರೂಪಗಳಿಂದಲೂ, ಏಕೀಭವಿಸಿ, ಅತೀತ, ಅನಾಗತ, ವರ್ತಮಾನ (ಭೂತ, ಭವಿಷದ್ ವರ್ತಮಾನ) ಕಾಲದ ಅನಂತ ಕಲ್ಪಗಳಿಗೆ ಸಂಬಂಧಪಟ್ಟ ತ್ರಿವಿಧರಾದ ಜೀವರಾಶಿಗಳನ್ನು ತನ್ನ ಉದರದಲ್ಲಿ ಇಟ್ಟುಕೊಂಡು, ಲಕ್ಷ್ಮೀದೇವಿಯರೊಡನೆ ಆಲಿಂಗಿತನಾದ ಆ ಭಗವಂತನು ಬಾಲರೂಪದಿಂದ ವೈಕುಂಠದ ಶ್ರೀ ಭಾಗದಮೇಲೆ **ವಟಪತ್ರ**ದಲ್ಲಿ ಬ್ರಹ್ಮನ ಆಯುರ್ಮಾನದಿಂದ ಎಂಭತ್ತ ಏಳೂವರೆ (87½) ವರ್ಷ ಪರ್ಯಂತವಾಗಿ **ಯೋಗನಿದ್ರೆ**ಯನ್ನು ಹೊಂದಿರುವನು

ಆಗ ಜಗತ್ತಿನ ಸರ್ಜನಾದಿ ವ್ಯಾಪಾರ ಶೂನ್ಯವಾಗಿರುವುದರಿಂದ ಬ್ರಹ್ಮನು "**ಶೂನ್ಯ**" ಪದದಿಂದ (ಅಭಿಧಾನದಿಂದಲೇ) ಕರೆಯಲ್ಪಡುವನು. ಆ ಬ್ರಹ್ಮಮಾನದಿಂದಲೇ ಉಳಿದ (12½) ಹನ್ನೆರಡೂವರೆ ವರ್ಷವಿದ್ದ ತೆಯೋ

ಆ ಕಾಲದಲ್ಲಿ ಯೋಗನಿದ್ರೆಯನ್ನು ಸಮಾಪನೆ ಮಾಡಿ ಮುಗಿಸಿ ತನ್ನ ಸಮೀ
ದಲ್ಲಿದ್ದ **ಅಂಭ್ರಣೀ ದೇವಿಯನ್ನು** ಭಗವಂತನು ನೋಡಿದನು.

ಅನಂತರ ಆಗ ಆಕೆಯೊಡನೆ "**ರಮಣ ಮಾಡುವೆನು**" ಎಂಬ ಇಚ್ಛೆಯ
ಆತನಿಗೆ ಉಂಟಾಯಿತು. ಆಗ ರಮಾದೇವಿಯು ಸ್ತುತಿಯನ್ನು ಮಾಡಿದಳ
ಆ ಸ್ತುತಿಯಿಂದ ಪ್ರಸನ್ನನಾಗಿ ಭಗವಂತನು ತನ್ನ ಉದರದಲ್ಲಿದ್ದ ಬ್ರಹ್ಮಾ
ದೇವತೆಗಳನ್ನೂ, ಕಲ್ಯಾದಿ ದೈತ್ಯರನ್ನೂ, ಮನುಜರನ್ನೂ ನೋಡಿದನ
ಅಲ್ಲಿ ಪ್ರಾಪ್ತ ಲಿಂಗ ಭಂಗವುಳ್ಳವರು (ಲಿಂಗ ಭಂಗವಾದವರು) ಧ್ಯಾನಂ ಗ
ರಾಗಿದಾರೆ. ಮುಂದೆ ಲಿಂಗ ಭಂಗವಾಗುವವರು ಸುಷುಪ್ತಿ ಸಂಸ್ಥರಾಗಿದಾ
ಈ ರೀತಿಯಾದ ವಿವಿಧ ಜೀವ ಸಮೂಹವನ್ನು ನೋಡಿ ಈರೀತಿ ಚಿಂತಿಸಿದನ

ಬ್ರಹ್ಮಶಬ್ದವಾಚ್ಯನಾದ ನಾರಾಯಣನು "ಬ್ರಹ್ಮಾದಿ ಅಶೇ
ಜೀವರನ್ನು ಸೃಷ್ಟಿಸುವೆನು. ಆದಕ್ಕಾಗಿ ಪ್ರಕೃತ್ಯಾದಿ ತತ್ವಗಳನ
ಅದರಿಂದ ತ್ರಿವಿಧರಾದ ಜೀವರ ಸುಖ, ದುಃಖ ಮತ್ತು ಮಧ್ಯ
ರೂಪವೆನಿಸಿದ ಸುಖ ದುಃಖ ಮಿಶ್ರ ಸ್ವಭಾವ ಸಂಪತ್ತಿಯನ
ಸೃಷ್ಟಿಸುವೆನು. ಅದರಿಂದ ನನಗಾದರೋ **ತತ್ತತ್ ಸತ್ತಾ, ಪ್ರತೀತಿ
ಪ್ರವೃತ್ಯಾದಿ** ಪ್ರದಾನ ಮಾಡಲು ಅಲ್ಲಲ್ಲಿ ಅಭಿವ್ಯಜ್ಯಮಾನವಾಗುವ ಅನ
ರೂಪಗಳೊಡನೆ ವಿಹಾರವು ಉಂಟಾಗುವುದು. ಲಕ್ಷ್ಮಿಗೂ ಸಹ ನಿತ
ವಿಯೋಗತ್ವದಿಂದ ಅಲ್ಲಲ್ಲಿ ಬಹುಧಾ ಪ್ರಾದುಭಾವಗಳೂ ಆಗಿ ಆದರಿಂದ ಅ
ಯಲ್ಲಿ ನನಗೆ ಅಧಿಕ ಪ್ರೀತಿಯುಂಟಾಗುವುದು" ಎಂದು ಚಿಂತಿಸಿದನು.

ಅನಂತರ ಪರಮಾತ್ಮನು ತಮೋರೂಪಳಾದ ದುರ್ಗಿಯನ್ನು ಪ
ಮಾಡುತ್ತಾನೆ. ಆಗಲೇ ಉದಕವೂ ಲಕ್ಷ್ಮೀದೇವಿಯೊಡನೆ ಏಕೀಭೂತವಾ
ತ್ತದೆ. ವಟಪತ್ರವು ಭೂದೇವಿಯ ಜೊತೆಯಲ್ಲಿ ಏಕಾಕಾರವಾಗುತ್ತದೆ.

ಅಂತರ ನಾರಾಯಣನು ಕ್ರಮವಾಗಿ ವಾಸುದೇವಾದಿ **ಚತುವ್ಯೂ
ಹಾತ್ಮನಾಗಿ** ಪ್ರಾದುರ್ಭವಿಸಿದನು. ಇದೇ **ಆತ್ಮಸೃಷ್ಟಿಯು**.

ಹಾಯೇ ಕ್ರಮವಾಗಿ ಆಗಾಗ, ಸೃಷ್ಟಿಗಾಗಿ, ಪಾಲನೆಗಾಗಿ, ಸಂಹ
ಕ್ಕಾಗಿ, ಜ್ಞಾನೋಪದೇಶಕ್ಕೆ, ದೈತ್ಯರ ದೆಶೆಯಿಂದ ಭಯಪರಿಹಾರಕ್ಕೋಸ್ಕ
ತನ್ನಿಂದ ಕೃತವಾದ ಸೇತುನಿಯಮ (ಸಂಕಲ್ಪ)ದ ಪರಿಪಾಲನೆಗಾಗಿಯ

ಮುಂದಾಗುವ 1. ಮತ್ಸ್ಯಾದಿದಶ ರೂಪಗಳು, 2. ಕೇಶವಾದಿ ಇಪ್ಪತ್ತು ನಾಲ್ಕು ರೂಪಗಳು, 3. ನಾರಾಯಣಾದಿ ಶತ ರೂಪಗಳು, 4. ವಿಶ್ವಾದಿ ಸಹಸ್ರ ರೂಪಗಳು, 5. ಪರಾದಿ ಬಹು ರೂಪಗಳು, 6. ಅಜಾದ್ಯನಂತ ರೂಪಗಳು, 7. ಚೇತನಾದ್ಯನಂತಾನಂತ ರೂಪಗಳು ಬಹುಶಃ ಈರೀತಿ ಯಾಗಿ ವಿಭಾಗಮಾಡಿ, ನಿಯಮಿತನಾದ(ನಿಯಮಿಸಿದ)ನು.

ದೇಹೇಂದ್ರಿಯಾಂತಃಕರಣಾದಿಗಳಿಗೆ ಈಷದಪಿ ವಿಕಾರವಿಲ್ಲದೆ ಭಗವಂತನು ಕೇವಲ ಲೀಲಾ ಮಾತ್ರದಿಂದಲೇ ಜಗತ್ತಿಗೆ ಉಪಕಾರ ಮಾಡಲು, ದೀಪದಿಂದ ದೀಪಾಂತರದಂತೆ **ಮೂಲ ರೂಪದ**ದೆಶೆಯಿಂದ ಬಹಿಃ (ಹೊರಗೆ) ಹೊರಟು ಬರುವುದು "**ಶುದ್ಧ ಸೃಷ್ಟಿ**"ಯು ಎಂತಲೂ ಕರೆಯಲ್ಪಡುತ್ತದೆ.

ಇದನ್ನು ಅನುಸರಿಸಿ ರಮಾ ದೇವಿಯೂ ಸಹ ಭಗವದಿಚ್ಛೆಯಿಂದ **ಸಿಸೃಕ್ಷುತ್ವ** (ಸೃಷ್ಟಿ ಮಾಡಬೇಕೆಂಬ ಇಚ್ಛೆ) ರೂಪ ವಿಶೇಷವನ್ನು ಹೊಂದುತ್ತಿರಲು **ಮಾಯಾದಿ** ರೂಪದಿಂದ ಪ್ರಾದುರ್ಭವಿಸಿದಳು. ಇದೇ "**ಲಕ್ಷ್ಮೀ ಸೃಷ್ಟಿಯು**" ಎಂಬುದು ಇದು ಭಗವದಧೀನವಿಶೇಷಾವಾಪ್ತಿರೂಪತ್ವದ ದೆಶೆಯಿಂದ "**ಪರಾಧೀನ ವಿಶೇಷಾವಾಪ್ತಿ ಸೃಷ್ಟಿಯು**" ಎಂತಲೂ ಕರೆಯಲ್ಪಡುತ್ತದೆ.

ಅನಂತರದಲ್ಲಿ ಭಗವಾನ್ ನಾರಾಯನು ರಮಾದೇವಿಯರ ರೂಪಗಳೊಡನೆಯೂ, ಮುಕ್ತರಾದ ಬ್ರಹ್ಮಾದಿಗಳ ಜೊತೆಯಲ್ಲೂ ನಾನಾರೂಪದಿಂದ ಕ್ರೀಡೆಯನ್ನು ಮಾಡಿ ಜೀವರುಗಳ ದೇಹಗಳ ಸೃಷ್ಟಿಗೋಸ್ಕರವಾಗಿ ಪ್ರಕೃತಿಯನ್ನು ಬೋಧನೆ ಮಾಡಿದನು.

ಪ್ರಕೃತಿಯಾದರೋ 1. **ಅವ್ಯಕ್ತಾ**, 2. **ವ್ಯಕ್ತಾ**, 3. **ವ್ಯಕ್ತಾವ್ಯಕ್ತಾ** ಎಂಬುದಾಗಿ ಮೂರು ವಿಧವಾದದು. ಇದರಲ್ಲಿ ಮೊದಲನೆಯು ಸರ್ಗಹೀನ (ಸೃಷ್ಟಿರಹಿತ) ವಾಗಿ ಕಾರ್ಯೋತ್ಪತ್ತಿಯಲ್ಲಿ ಅಪಾದಾನ ರೂಪವಾಗಿರುವುದು. ಎರಡನೆಯದು ಸರ್ಜನೋನ್ಮುಖತ್ವವನ್ನು ಹೊಂದಿ ಕಾರ್ಯವನ್ನು ಕುರಿತು ಉಪಾದಾನರೂಪವಾದುದು. ಮೂರನೆಯದಾದರೋ ಕಾರ್ಯರೂಪವಾದುದು.

ಅದರಲ್ಲಿ ಅಪಾದಾನ ಭೂತವಾದ **ಮೂಲ ಪ್ರಕೃತಿಯು** ದೆಶೆಯಿಂದ ಉದ್ಧೃತಗಳಾದ ಮಹದಾದಿ ಕಾರ್ಯರೂಪ ತೃತೀಯ ಪ್ರಕೃತ್ಯುಪಾದನ ಭೂತಗಳಾದ ವ್ಯಕ್ತಾವ್ಯಕ್ತವೆಂಬ ಎರಡನೆಯ ಪ್ರಕೃತಿ ರೂಪಗಳ ಸತ್ವಾದಿ **ಗುಣಗಳ ಸ್ಥಿತಿಯು** ಇದು.

ಅದು ಹೇಗೆಂದರೆ —

ಸೃಷ್ಟಿಯಲ್ಲಿ ಶುದ್ಧ ಸತ್ವದಿಂದಲೇ ಸತ್ವಗುಣವು ಉಂಟಾಗುತ್ತದೆ. ಅದು ಮುಕ್ತರ ಉಪಭೋಗಕ್ಕೋಸ್ಕರವಾಗಿ ಆಗುತ್ತದೆ.

ಒಂದು ತಮೋಭಾಗ ಅದರ ನೂರು (ಶತ) ಗುಣಾಧಿಕ ರಜೋಭಾಗ ಶತಗುಣಾಧಿಕವಾದ ಸತ್ವಭಾಗ ಇವುಗಳೆಲ್ಲದರ ಒಟ್ಟಿಗೆ ಮಿಳಿತವಾಗಿ ಸೇರುವುದರಿಂದ **ರಜೋಗುಣವು** ಆಗುತ್ತದೆ.

ಒಂದು ರಜೋಭಾಗವು ಅದರ ದಶ (೧೦) ಗುಣಾಧಿಕ ತಮೋಭಾಗವು ಆ ತಮಸ್ಸಿನ ದಶಗುಣಾಧಿಕ ಸತ್ವಭಾಗವು ಇವುಗಳಿಂದ ಮಿಳಿತವಾದದು **ತಮೋಗುಣ**ವಾಗುತ್ತದೆ.

ಪ್ರಲಯಕಾಲದಲ್ಲಿ ಸತ್ವಗುಣವು ತನ್ನ ಮೂಲಗುಣವನ್ನು ಪ್ರವೇಶಿಸುತ್ತದೆ. ತಮೋಗುಣವೂ ತನ್ನ ಮೂಲವನ್ನು ಪ್ರವೇಶಿಸುತ್ತದೆ. ರಜೋಗುಣವಾದರೋ ಹನ್ನೆರಡು ಭಾಗಗಳಾಗಿ ಅದರಲ್ಲಿ ಹತ್ತು ಭಾಗಗಳಿಂದ ಸತ್ವಗುಣವನ್ನು ಪ್ರವೇಶಿಸುತ್ತದೆ. ಒಂದು ಭಾಗದಿಂದ ತಮೋಗುಣವನ್ನು ಪ್ರವೇಶಿಸುತ್ತದೆ. ಉಳಿದ (ಅವಶಿಷ್ಟವಾದ ಒಂದು ಭಾಗದಿಂದ ತನ್ನ ಮೂಲ ಗುಣವನ್ನು ಪ್ರವೇಶಿಸುತ್ತದೆ. ಹೀಗೆ ಪ್ರವೇಶ ಮಾಡುವುದೇ **ಗುಣಗಳ ಸಾಮ್ಯಾವಸ್ಥೆ** ಎಂದು ಕರೆಯಲ್ಪಡುತ್ತದೆ.

ಮೂರಕ್ಕೂ ರಜೋಗುಣದಿಂದ ಮಿಶ್ರತ್ವ ಸಾಮ್ಯವಿರುವುದರ ದೆಶೆಯಿಂದ ಸಾಮ್ಯಾವಸ್ಥೆಯೆಂಬ ನಾಮವು. ಅನಂತರ ನದಿಗಳು ಸಮುದ್ರವನ್ನು ಪ್ರವೇಶಿಸುವಂತೆ ಗುಣತ್ರಯಗಳೂ ಮೂಲ ಪ್ರಕೃತಿಯಲ್ಲಿ ಪ್ರವೇಶಿಸುವುವು.

ಪುನಃ ಸೃಷ್ಟಿಕಾಲದಲ್ಲಿ **ಸತ್ವಗುಣವು** ತನ್ನಲ್ಲಿ ಪ್ರವಿಷ್ಟಗಳಾದ ರಜೋಭಾಗಗಳನ್ನು ಅಲ್ಲಿಯೇ ಬಿಟ್ಟು ಸ್ವಯಂ ಶುದ್ಧವಾಗಿಯೇ ಹೊರಕ್ಕೆ ಬರುತ್ತದೆ.

ರಜೋಗುಣವಾದರೋ ತನ್ನೊಂದಿಗೆ ಪ್ರವಿಷ್ಟವಾದ ಒಂದು ಭಾಗವು ಅಲ್ಲಿಯೇ ಸ್ಥಿತವಾಗಿ ಉಳಿದ ಭಾಗಗಳೂ ಹೀಗೆ ಹನ್ನೊಂದು ರಜೋಭಾಗ ಗಳ ಜೊತೆಯಲ್ಲಿ ಹೊರಕ್ಕೆ ಹೊರಟು ಬರುತ್ತದೆ.

ತಮೋಗುಣವಾದರೂ ತನ್ನ ಜೊತೆಯಲ್ಲಿ ಪ್ರವಿಷ್ಟಗಳಾದ ರಜಃ ಸತ್ವ ಭಾಗಗಳೆರಡರ ಜೊತೆಯಲ್ಲಿ ಸೇರಿಕೊಂಡೇ ಒಟ್ಟಿಗೆ ಹೊರಕ್ಕೆ ಬರುತ್ತದೆ. **ಇದೇನೇ " ಗುಣಗಳ ಸೃಷ್ಟಿಯು "**.

ಭಗವಾನ್ ನಾರಾಯಣನೂ ಸಹ ಗುಣತ್ರಯಗಳ ನಿಯಾಮಕತ್ವದಿಂದ ವಿಶ್ವಾದಿ ಮೂರು ರೂಪಗಳಿಂದ ಆಗ ಹೊರಕ್ಕೆ ಬರುತ್ತಾನೆ. ಆತನನ್ನು ಅನುಸರಿಸಿ ರಮಾದೇವಿಯೂ, ಶ್ರೀ, ಭೂ, ದುರ್ಗಾಖ್ಯ ಮೂರು ರೂಪವುಳ್ಳ ವಳಾಗಿ (ತ್ರಿರೂಪದಿಂದ) ಇರುತ್ತಾಳೆ. ಅಲ್ಲಿ ಸತ್ವವು ಅತಿ (ಶ್ವೇತ) ಬೆಳ್ಳಗೂ ರಜವು ಶಬಲ ವರ್ಣವೂ, ತಮಸ್ಸು ಅತಿ (ಶ್ಯಾಮ) ಕಪ್ಪು ಎಂದು ತಿಳಿಯುವುದು.

ಅನಂತರ ರಜಸ್ಸಿನೊಡನೆ ಬಂದ ಹತ್ತು ರಜೋಭಾಗಗಳಿಂದ ತಮಸ್ಸಿನ ಜೊತೆಯಲ್ಲಿ ಬಂದ ರಜಸ್ತಮೋ ಭಾಗಗಳೆರಡರಿಂದಲೂ (ಮಿಳಿತವಾಗಿ) ಸೇರಿದ **ಗುಣವೈಷಮ್ಯ** ನಾಮಕ ಮಹತ್ತತ್ವವು ಹುಟ್ಟಿತು. ಅದರ ಅಭಿಮಾನಿಗಳು ಚತುರ್ಮುಖ ಬ್ರಹ್ಮನೂ, ವಾಯುವೂ, ಪ್ರಕೃತಿಯು ಮತ್ತು ಶ್ರದ್ಧೆಯು ದೇವತೆಗಳು. ಅದರ ಉಭಯ ಸತ್ತ್ವಾದಿ ಪ್ರದತ್ವದಿಂದ ಭಗವಂತನೂ ಸಹ **ವಾಸುದೇವ** ರೂಪದಿಂದ ಅವತರಿಸಿದನು.

ಮಹತ್ತತ್ವದ ದೆಶೆಯಿಂದ ಅಹಂಕಾರ ತತ್ವವು ಅದರ ಅಭಿಮಾನಿ ರುದ್ರ, ಶೇಷ, ಗರುಡರು, ಅವುಗಳ ಉಭಯರ (ತತ್ವ, ತತ್ವಾಭಿಮಾನಿಗಳ) ರನ್ನು ನಿಯಮನ ಮಾಡಲು ಭಗವಂತನು **ಸಂಕರ್ಷಣಾತ್ಮಕ**ನಾಗಿ ಅವತರಿಸಿದನು.

ಅಹಂಕಾರತ್ವದಲ್ಲಿ ಒಂದು ತಮೋಭಾಗವೂ, ಅದರ ಹತ್ತರಷ್ಟು ಗುಣಾಧಿಕವುಳ್ಳ ರಜೋಭಾಗವೂ ಅದರ ದಶಗುಣಾಧಿಕ ಸತ್ವಭಾಗವು ಎಂಬು ದಾಗಿ ಮೂರು ಭಾಗ (ಭಾಗತ್ರಯ) ವಿರುವುದು. ಅದರಲ್ಲಿ ಅಹಂಕಾರ ತ್ವಾಂತರ್ಗತವಾದ ತಮೋಭಾಗದಿಂದ **ಬುದ್ಧಿತತ್ವವು** ಉತ್ಪನ್ನವಾಗುತ್ತದೆ.

ಅದಕ್ಕೆ ಅಭಿಮಾನಿಗಳು ಉಮಾ, ವಾರುಣೀ ಮತ್ತು ಸೌಪರ್ಣಿಯರು. ಭಗವಂತನೂ ಸಹ ಆ ಬುದ್ಧಿತತ್ವ ಮತ್ತು ಅದರ ಅಭಿಮಾನಿಗಳ ಉಭಯರ ನಿಯಮನಕ್ಕಾಗಿ, **ಪ್ರದ್ಯುಮ್ನಾತ್ಮನಾಗಿ** ಅವತಾರ ಮಾಡಿದನು.

ಬುದ್ಧಿ ತತ್ವಾಂರ್ಗತವಾದ ತಮೋಭಾಗದಿಂದ **ಮನಸ್ತತ್ವವೂ**, ಇಂದ್ರಿಯರೂಪಾದ ಬುದ್ಧಿಯೂ ಉತ್ಪನ್ನವಾಗುತ್ತವೆ. ಇಂದ್ರಾದಿಗಳೂ ಮನೋಮಾನಿಗಳೂ ಅದಕ್ಕೆ ಅಭಿಮಾನಿಗಳಾದ ದೇವತೆಗಳು. ಹಾಗೆಯೇ ಭಗವಂತನೂ ಸಹ ಅವುಗಳೆರಡನ್ನೂ ನಿಯಮನ ಮಾಡಲು **ಅನಿರುದ್ಧಾತ್ಮನಾಗಿ** ಅವತರಿಸಿದನು.

ಮನಸ್ತತ್ವದಲ್ಲಿ ಅಂಶ ತ್ರಯಗಳಿವೆ. ಅಲ್ಲಿರುವ ಪ್ರಚುರ **ಸತ್ವಾಂಶದ** ದೆಶೆಯಿಂದ ವೈಕಾರಿಕ ನಾಮಕ ದೇವತೆಗಳ ದೇಹವನ್ನೂ ಇಂದ್ರಿಯರೂಪ ಮನಸ್ಸನ್ನೂ ಸೃಜಿಸಿದನು. ಇಂದ್ರಾದಿ ದೇವತೆಗಳ ಇಂದ್ರಿಯ ಪ್ರವರ್ತಕತ್ವದಿಂದ ಅತಿ ವಿಕಾರತ್ವದ ದೆಶೆಯಿಂದ **ವೈಕಾರಿಕ** ನಾಮಕತ್ವವನ್ನು ತಿಳಿಯುವುದು.

ಪ್ರಚುರ ರಜೋಗುಣಾಂಶದ ದೆಶೆಯಿಂದ ತೈಜಸ, ಮತ್ತು ದಶೇಂದ್ರಿಯಗಳ ಸೃಷ್ಟಿಯು. ಅಲ್ಲಿ ಶ್ರೋತ್ರ, ತ್ವಕ್, ಚಕ್ಷು, ಜಿಹ್ವಾ ಘ್ರಾಣಗಳೆಂಬ **ಪಂಚ ಜ್ಞಾನೇಂದ್ರಿಯ**ಗಳೂ, ವಾಕ್, ಪಾಣಿ, ಪಾದ, ಪಾಯು, ಉಪಸ್ಥಗಳೆಂಬ ಪಂಚ ಕರ್ಮೇಂದ್ರಿಯಗಳೂ ಹುಟ್ಟಿದವು.

ಪ್ರಚುರ ತಮೋಂಶದ ದೆಶೆಯಿಂದ ಶಬ್ದವೂ, ತನ್ಮಾತ್ರ(ದ್ವಾರಾ) ವೆನಿಸಿದ ಆಕಾಶವೂ ಉತ್ಪನ್ನವಾಯಿತು. ಹಾಗೆಯೇ ಅದಕ್ಕೆ ದೇವತೆಯಾದ ಪಾವಕನೆಂಬ **ವಿನಾಯಕ**ನು, ಆ ಉಭಯರ ನಿಯಾಮಕನಾದ **ನಾರಾಯಣ**ನೂ ಆದರು.

ಆಕಾಶದ ದೆಶೆಯಿಂದ ಸ್ಪರ್ಶವೂ, ತನ್ಮಾತ್ರದ್ವಾರಾ ಮತ್ತು ವಾಯು ದೇವತೆಯಾದ ಮರೀಚಿಯೂ ಆದನು. ಅವರ ನಿಯಾಮಕನು **ವಾಸುದೇವನು** ಅವತರಿಸಿದನು.

ವಾಯುವಿನ ದೆಶೆಯಿಂದ ರೂಪವೂ ತನ್ಮಾತ್ರದ್ವಾರಾ ತೇಜಸ್ಸೂ ಅವಕ್ಕೆ ದೇವತೆಯಾದ ಪಾವಕನೆಂಬ ಹೆಸರಿನ ಅಗ್ನಿಯೂ ತನ್ನಿಯಾಮಕ

ತೇಜಸ್ಸಿನ ದೆಶೆಯಿಂದ ರಸವೂ ತನ್ಮಾತ್ರದ್ವಾರಾ ಅಪ್ಪು (ನೀರು) ಗಳೂ ಅವುಗಳ ದೇವತೆಯಾದ ವರುಣನೂ ಅವಕ್ಕೆ ನಿಯಾಮಕನಾದ **ಪ್ರದ್ಯುಮ್ನನು** ಪ್ರಾದುರ್ಭವಿಸಿದರು.

ಅಪಗಳ ದೆಶೆಯಿಂದ ಗಂಧವೂ ತನ್ಮಾತ್ರದ್ವಾರಾ ಪೃಥಿವಿಯೂ ಅದಕ್ಕೆ ದೇವತೆಯಾದ **ಧರಾದೇವಿಯು** ತನ್ನಿಯಾಮಕ **ಅನಿರುದ್ಧನು** ಹುಟ್ಟಿದರು.

ಇವುಗಳೆಲ್ಲಕ್ಕೂ ಮೂಲಭೂತವಾದ ಅಹಂಕಾರವು **ವೈಕಾರಿಕ, ತೈಜಸ, ತಾಮಸ** ಭೇದದಿಂದ ಮೂರು (ತ್ರಿ) ರೂಪವುಳ್ಳದ್ದೆಂದು ಕರೆಯಲ್ಪಡುತ್ತದೆ.

ಇಲ್ಲಿ ಅವ್ಯಕ್ತವೇ ಮೊದಲಾದ ತತ್ವಗಳಿಗೆ ನಿತ್ಯತ್ವವಿದ್ದಾಗ್ಯೂ ಸತ್ವಾದಿ ಗುಣಗಳ **ಉಪಚಯು** (ವೃದ್ಧಿ) ಎಂಬ ಅಭಿಪ್ರಾಯದಿಂದಲೇ ಅವುಗಳ ಉತ್ಪತ್ತ್ಯಾದಿಗಳ ವ್ಯವಹಾರವು.

ಅಲ್ಲಿ ಒಂದು ತಮೋಭಾಗವು ಅದರ ದೆಶೆಯಿಂದ ನೂರುಗುಣ ಕಡಿಮೆ ರಜೋಭಾಗವೆಂದು ಭಾಗತ್ರಯದಿಂದ **ಪಂಚಭೂತಗಳು** ಉಪಚಿತಗಳಾಗುತ್ತವೆ.

a ಅಲ್ಲಿ ಪಂಚಭೂತಗಳ ದೆಸೆಯಿಂದ ಪ್ರಚುರ ಸತ್ವಾಂಶದಿಂದ **ದೇವತೆಗಳ** ದೇಹಗಳ ಸರ್ಗ (ಉತ್ಪತ್ತಿಯು)ವು b ಪ್ರಚುರವಾದ ರಜೋಂಶದಿಂದ **ಮನುಷ್ಯದೇಹಗಳ** ಸರ್ಗವು. c ಪ್ರಚುರ ತಮೋಂಶದಿಂದ 1. ತಮಃ, 2. ಮೋಹ, 3. ಮಹಾಮೋಹ, 4. ತಾಮಿಶ್ರ, 5. ಅಂಧತಾಮಿಶ್ರಗಳೆಂಬ **ಪಂಚಪರ್ವ** ಅವಿದ್ಯಾ ಸರ್ಜನದ್ವಾರಾ, ದೈತ್ಯರು, ರಾಕ್ಷಸರು, ಪಿಶಾಚರು ಮೊದಲಾದವರ ದೇಹಗಳ (ಸರ್ಗ) ಸೃಷ್ಟಿಯು.

ರಜಸ್ತಮಸ್ಸುಗಳೆರಡರಿಂದ ಮಿಳಿತವಾಗಿ ಸೇರಿದ್ದರಿಂದ ಸ್ಥಾವರಾದಿ ದೇಹಗಳ ಸರ್ಗವು.

ಹೀಗೆ ನಾರಾಯಣನು ಮಹದಾದಿ ತತ್ವಗಳನ್ನೂ, ಅವುಗಳ ಅಭಿಮಾನಿಗಳನ್ನೂ, ಬ್ರಹ್ಮಾದಿ ದೇವತೆಗಳನ್ನೂ, ಅವರುಗಳ ದೇಹಗಳನ್ನೂ, ಅವರುಗಳಿಂದ ಬೇರೆಯಾದ ದೇಹಗಳನ್ನೂ, **ಸೂಕ್ಷ್ಮತಮ** ರೂಪದಿಂದ ಕಲ್ಪನೆ ಮಾಡಿ, ಪುನಃ ವಾಸುದೇವ ಸಂಕರ್ಷಣ ರೂಪಗಳೆರಡರಿಂದ **ಸೂಕ್ಷ್ಮತರ**

ರೂಪದಿಂದ ಕಲ್ಪನೆ ಮಾಡಿ, ಪುನಃ ಪ್ರದ್ಯುಮ್ನರೂಪದಿಂದ **ಸೂಕ್ಷ್ಮ** ದಿಂದ ಕಲ್ಪನೆ ಮಾಡಿ, ಅನಂತರ ನಾಲ್ಕನೆಯದಾದ **ತುರೀಯನಾದ** **ರುದ್ಧ** ನಾಮವುಳ್ಳ ರೂಪ(ದಿಂದ) ಸ್ಥೂಲರೂಪದಿಂದ ಸೃಷ್ಟಿಮಾಡಿ, ತರ ಅದರಿಂದ ಲಬ್ಧವಾದ ಸ್ಥೂಲದೇಹಗಳುಳ್ಳ ತತ್ವ ದೇವತೆಗ ಬ್ರಹ್ಮಾಂಡ ನಿರ್ಮಾಣಕ್ಕಾಗಿ ನಿಯೋಜನೆ ಮಾಡಿದನು.

ಅನಂತರ ಬ್ರಹ್ಮಾಂಡದ ನಿರ್ಮಾಣದಲ್ಲಿ ನಿಯುಕ್ತರಾದ ಆ ತ ದೇವತೆಗಳಿಂದ ಸೃಷ್ಟಿ ಮಾಡಲು ಸಾಮರ್ಥ್ಯವಿಲ್ಲದ, ಆ ಅಶಕ್ತರುಗ ಸಂಸ್ತುತನಾಗಿ ಅವರಲ್ಲಿ ಪ್ರಸನ್ನನಾದ ವಾಸುದೇವನ ದೆಶೆಯಿಂದ ಮಾ (ದೇವಿ)ಯಿಂದ "**ಪುರುಷ**" ಎನಾಮಕ ರೂಪದಿಂದ ಅವತರಿಸಿ, ದಾದಿ ತತ್ವಗಳಲ್ಲೂ, ಅವುಗಳ ಅಭಿಮಾನಿಗಳಲ್ಲೂ ಪ್ರವೇಶ ಮಾಡಿ, ಅ ಸರ್ಜ (ಸೃಷ್ಟಿಮಾಡುವ) ಶಕ್ತಿಯನ್ನು ಉದ್ಬೋಧನೆ ಮಾಡಿ, ಅವ **ಬ್ರಹ್ಮಾಂಡವನ್ನು ನಿರ್ಮಾಣ ಮಾಡಿಸಿ**, ಅದರೊಳಗೆ ಸರ್ವಸತ್ವ ಸ ತರಾದ ದೇವತೆಗಳ ಜೊತೆಯಲ್ಲಿ ತಾನೂ ಪ್ರವೇಶಮಾಡಿ ಅಂಡೋದಕ **ಶೇಷಪರ್ಯಂಕ**ದಲ್ಲಿ ಮಲಗಿದವನಾಗಿ, ತನ್ನ ಉದರದ ದೆಶೆಯಿಂದ ಚ ರ್ದಶ (ಹದಿನಾಲ್ಕು) **ಲೋಕ** (ಭುವನ)ಗಳ ಸನ್ನಿವೇಶರೂಪವಾದ ವನ್ನು ನಿರ್ಮಿಸಿ, ಅಲ್ಲಿ ಪುನಃ **ಚತುರ್ಮುಖನನ್ನೂ** ನಿರ್ಮಿಸಿ, ಬ್ರಹ ಡದ ಒಳಗೆ ಅಭಿವ್ಯಕ್ತರಾದ ತತ್ವಾಭಿಮಾನಿ ದೇವತೆಗಳಿಂದಲೂ, ಹದಿನಾ ಲೋಕಗಳನ್ನೂ ನಿರ್ಮಾಣ ಮಾಡಿ, ಅಲ್ಲಿ ಇಂದ್ರಾದಿ ನಾಮಗಳು, ದೇ ಖ್ಯಗಳಾದ ರೂಪಗಳನ್ನೂ ನಿರ್ಮಿಸಲು ಅನಿರುದ್ಧ ನಾಮಕನಾದ ರೂಪದಿ ತೇಜಸ್ಸು, ಜಲ, ಪೃಥಿವಿಗಳೆಂಬ **ಭೂತತ್ರಯಗಳು** ಅವುಗಳಿಗೆ ಅಭಿಮಾ ಯರಾದ **ಪ್ರಾಣ** ಮತ್ತು **ರುದ್ರ**ರೆಂಬ ಉತ್ತಮರೂ, ಇಂದ್ರಾದಿ ಮ ಮರೂ, ಅಗ್ನಿ, ವರುಣ, ಪೃಥಿವೀ ಎಂಬ ಆಖ್ಯೆಯಿಂದಿರುವ ಅಧಮ ದೇ ಗಳನ್ನು ಅನುಪ್ರವೇಶ ಮಾಡಿಸಿ, ಅವರುಗಳ **ತ್ರಿವೃತವು** ತ್ರಿವೃತ ತ್ರಿ ವನ್ನು ಒಂದೊಂದನ್ನಾಗಿ ಮಾಡಿದನು. ಹಾಗೆಯೇ ಅವರಿಗೆ ಆಯಾ ನಾ ಗಳನ್ನೂ ರೂಪಗಳನ್ನೂ ಮಾಡಿಕೊಟ್ಟನು. ಅದು ಹೇಗೆಂದರೆ —

ಅಲ್ಲಿ ಆದಿಯಲ್ಲಿ (ಮೊದಲು) ಭಗವಾನ್ ಅನಿರುದ್ಧನು, ತೇಜಸ್ಸು, ಜ ಪೃಥಿವಿ ಎಂಬ ಭೂತತ್ರಯಗಳನ್ನೂ ಅವುಗಳ ಅಭಿಮಾನಿಗಳಾದ ತ್ರಿ

್ರಣ, ರುದ್ರರುಗಳನ್ನು ಅನುಪ್ರವೇಶಿಸಿ, ಕಾರ್ಯೋನ್ಮುಖತ್ವಾದಿ ಶಕ್ತಿ
ಯನ್ನು ಉದ್ಬೋಧನೆ ಮಾಡಿ, ಕ್ರಮವಾಗಿ ಭೂತಗಳ ದೆಶೆಯಿಂದ ಮೂರು
ಜಡಾಂಶಗಳನ್ನೂ, ದೇವತೆಗಳು ದೆಶೆಯಿಂದ ಮೂವರು **ಚೇತನಾಂಶ**
ಗಳನ್ನೂ (ಉದ್ಧೃತ್ಯ) ಎತ್ತಿ ತೆಗೆದುಕೊಂಡು, ಹೀಗೆ ಈ ಆರು ಅಂಶಗಳನ್ನೂ
(ಅಂಶ ಷಟ್ಕಗಳನ್ನೂ) ಮಿಶ್ರಮಾಡಿ ಒಂದೊಂದು ತೇಜ ಆಖ್ಯವನ್ನು, ಆಪ್
(ಅಬ್) ಆಖ್ಯವನ್ನೂ ಪೃಥಿವ್ಯಾಖ್ಯಾನವನ್ನೂ ಮಾಡಿದನು. ಅವುಗಳ ದೆಶೆ
ಯಿಂದ ಇಂದ್ರಾದಿ ನಾಮಗಳನ್ನೂ ತತ್ತ್ವಚ್ಛರೀರಾದಿ ರೂಪಗಳನ್ನೂ ಉಂಟು
ಮಾಡಿದನು.

ಪುನಃ ಅದರಲ್ಲಿ ಶ್ರೀಭೂತವನ್ನು ಮಾಡಿದನು. ಭೂತತ್ರಯವನ್ನು
ಅವುಗಳ ಉತ್ತಮಾಭಿಮಾನಿಗಳನ್ನೂ ಲಕ್ಷ್ಮ್ಯಾದಿಗಳನ್ನೂ ಅನುಪ್ರವೇಶ
ಮಾಡಿ ಅವರಿಗೆ ಕಾರ್ಯೋನ್ಮುಖತ್ವಾದಿ ಶಕ್ತಿಯನ್ನು ಉದ್ಬೋಧನೆ ಮಾಡಿ
ಮೊದಲಿನಂತೆ **ಜೇತನಾಂಶರನ್ನೂ ಜಡಾಂಶಗಳನ್ನೂ** ಉದ್ಧಾರ ಮಾಡಿ
ತೆಗೆದುಕೊಂಡು ಒಂಭತ್ತು ಅಂಶ(**ಅಂಶನವಕ**)ಗಳನ್ನು ಮಿಶ್ರಮಾಡಿ ಒಂದು
ತೇಜ ಆಖ್ಯವನ್ನು ಅಬ್ ಆಖ್ಯವನ್ನು ಪೃಥಿವೀ ಆಖ್ಯವನ್ನು, ಮಾಡಿದನು.
ಅವುಗಳ ದೆಶೆಯಿಂದ ಅಗ್ನಿ, ವರುಣ, ಪೃಥಿವ್ಯಾದಿ ನಾಮಗಳನ್ನೂ ಶರೀರ
ಗಳನ್ನೂ ರೂಪಗಳನ್ನೂ ಉಂಟುಮಾಡಿದನು.

ಪುನಃ ಆ ಭೂತತ್ರಯಗಳನ್ನೂ ಅವುಗಳ ಉತ್ತಮಾಭಿಮಾನಿಗಳನ್ನೂ
ಮಧ್ಯಮಾಭಿಮಾನಿಗಳಾದ ಅಗ್ನ್ಯಾದಿ ಅಧಮಾಭಿಮಾನಿಗಳನ್ನೂ ಅನುಪ್ರ
ವೇಶ ಮಾಡಿ ಕಾರ್ಯೋನ್ಮುಖತ್ವಾದಿ ಶಕ್ತಿಯನ್ನೂ ಉದ್ಬೋಧನೆ ಮಾಡಿ
ಚೇತನಾಂಶಗಳನ್ನೂ, ಜಡಾಂಶಗಳನ್ನೂ ಉದ್ಧಾರ ಮಾಡಿ ತೆಗೆದು, ಅಂಶ
ದ್ವಾದಶಕ (ಹನ್ನೆರಡು ಅಂಶ)ಗಳನ್ನು ಮಿಶ್ರಮಾಡಿ ಒಂದು ಅಂಶ ತೇಜ
ಆಖ್ಯ, ಅಬ್ ಆಖ್ಯ ಪೃಥಿವೀ ಆಖ್ಯವನ್ನು ಮಾಡಿದನು. ಅವುಗಳಿಗೆ ಮಾನು
ಷಾದಿ ನಾಮರೂಪಗಳನ್ನು ಮಾಡಿದನು.

ಇಲ್ಲಿ **ಮಾನುಷಾದಿ ರೂಪಗಳು** ಇಂದ್ರಾದಿ ನಾಮ ರೂಪಗಳಂತೆ
ಸಾಕ್ಷಾತ್ತಾಗಿ ಅಲ್ಲವು. ಮತ್ತಾದರೋ ಪೃಥಿವಿಯಿಂದ **ಓಷಧಿಗಳು** ಹುಟ್ಟು
ವವು. ಓಷಧಿಗಳ ದೆಶೆಯಿಂದ **ಅನ್ನವೂ** ಆಗಲೇ ಭಗವಂತನೂ ಶರೀರಾದಿ

ಸಂಯೋಗಪ್ರದವಾದ ಕರ್ಮವನ್ನು ಯಾವನಿಗೆ ಯಾವ ಉದ್ಬುದ್ಧ
ತಾದೃಶ ಜೀವನವನ್ನು ತಂದು ಸಂಕರ್ಷಣಾಖ್ಯ ರೂಪಾಂತರದಿಂದ **ಅನ್ನ**
ನಾಗುತ್ತಾನೆ.

ಕರ್ಮೋದ್ಬೋಧವೆಂದರೆ, ಕರ್ಮಸ್ಥಿತನಾದ ಕರ್ಮನಾಮಕ
ಹರಿಗೆ ಫಲದಾನೇಚ್ಛೆಯೇ ಹೊರ್ತು ಬೇರೆಯಲ್ಲವೆಂಬುದು ಇಲ್ಲಿ ರಹಸ್ಯ
ಹೀಗೆಯೇ ಉತ್ತರತ್ರವೂ, ಇನ್ನು ಮುಂದೆಯೂ ತಿಳಿಯುವುದು.

ಯಾವನಿಗೆ ಪುತ್ರಾದಿ ಪ್ರಪಂಚ ಸಂಬಂಧ ಪ್ರದ ಕರ್ಮವು ಉದ್ಬೋ
ವಾಗುತ್ತದೆಯೋ, ಅಂಥವನಿಂದ ಆ ಪಿತೃ ಪುರುಷನಿಂದ ಆ ಅನ್ನವು ತಿ
ಉಪಭೋಗಿಸಲ್ಪಡುತ್ತದೆ. ಅನ್ನದಲ್ಲಿ ಸ್ಥಿತನಾದ ಭಗವಾನ್ **ಸಂಕರ್ಷಣ**
ಸಹ ಜೀವವನ್ನು ತೆಗೆದುಕೊಂಡು (ತಂದು) ಆ ಅನ್ನದ (ದ್ವಾರ) ಮೂ
ಪುರುಷನನ್ನು ಪ್ರವೇಶಿಸುತ್ತಾನೆ. ಆ ಅನ್ನವು ತೇಜಸ್ಸು, ಜಲ, ಪೃಥಿ
ತ್ಮಕವಾಗಿ ಆ ತ್ರಿವಿಧವೂ ಸಹ, ಆ ಪುರುಷನ ಶರೀರವನ್ನು ಹೊಂದಿ ಮ
ಮೂರು ಭಾಗವಾಗಿ ಆಗುವುದು. ಅದರಲ್ಲಿ ಪೃಥಿವೀ ಭಾಗದಲ್ಲಿ ಸ್ಥಿತನ
ರುದ್ರನು, ತನಗೆ ನಿಯಾಮಕನಾದ ಅನಿರುದ್ಧನಿಂದ ಉದ್ಬೋಧಿತನ
ತನ್ನಿಂದ ಅಭಿಮನ್ಯಮಾನವಾದ **ಪೃಥಿವೀ** ಭಾಗವನ್ನು ಮೂರಾಗಿ ವಿಭ
ವಿಂಗಡಿಸಿ, ಅದರಲ್ಲಿ ಯಾವುದು **ಸ್ಥೂಲ** ಭಾಗವೋ ಅದನ್ನು **ಪುರಿ**
(ಅಮೇಧ್ಯ)ವನ್ನಾಗಿ ಮಾಡಿ, ಮಧ್ಯಮದಿಂದ ಮಾಂಸವನ್ನೂ ಉಪಚ
ಮಾಡಿ, ಅಣಿಮಾ (**ಸೂಕ್ಷ್ಮ**) ಭಾಗದಿಂದ ಮನಸ್ಸಿಗೆ ವಿಧಾನಮ
ಮಾನಸಿಕ ವ್ಯಾಪಾರಕ್ಕೆ ಮನಸ್ಸಿನ ಶಕ್ತಿಗೆ, ಸಹಾಯಕ ಮಾಡಿಕೊ
ತಾನೂ ಸಹ ತ್ರಿರೂಪನಾಗಿ ಅವವುಗಳ ನಿಯಾಮಕತ್ವದಿಂದ ಅವವು
(ತತ್ರ, ತತ್ರ) ಪ್ರವೇಶ ಮಾಡುತ್ತಾನೆ.

ಇದರಂತೆ ಅಪ್ ಭಾಗದಲ್ಲಿ ಸ್ಥಿತನಾದ ಮುಖ್ಯ ಪ್ರಾಣನೂ ಸಹ
ರುದ್ಧನಿಂದ ಉದ್ಬೋಧಿತನಾಗಿ ತನ್ನಿಂದ ಅಭಿಮನ್ಯಮಾನವಾದ ಅ
(ನೀರನ್ನು) ಭೂತವನ್ನು ಮೂರು ವಿಧವಾಗಿ ವಿಂಗಡಿಸಿ ಅಲ್ಲಿ ತ್ರಿರೂಪ
ಮೂರು ರೂಪದಿಂದ ಪ್ರವೇಶಿಸುತ್ತಾನೆ.

ಹಿಗೆಯೇ ತೇಜೋಭಾಗದಲ್ಲಿ ಸ್ಥಿತಳಾದ ಶ್ರೀದೇವಿಯೂ ಅನಿ
ನಿಂದ ಉದ್ಬೋಧಿತಳಾಗಿ ತನ್ನಿಂದ ಅಭಿಮನ್ಯಮಾನವಾದ ತೇಜೋ

ವನ್ನು ಮೂರು ರೀತಿಯಲ್ಲಿ ವಿಂಗಡಿಸಿ ಅಲ್ಲಿ ವಿಭಾಗ ಮಾಡಿ, ಅಲ್ಲಿ ಸ್ಥವಿಷ್ಠ (ಸ್ಥೂಲ)ವಾದ ಭಾಗದಿಂದ **ಮೂಳೆಗಳನ್ನೂ** ಸೂಕ್ಷ್ಮಗಳಾದ **ಮಜ್ಜೆಗಳ** ಉಪಚಯುವ (ವೃದ್ಧಿಯು)ನ್ನೂ, ಅತಿ ಅಣಿಮಾ ಸೂಕ್ಷ್ಮ ಭಾಗವನ್ನು **ವಾಗ್ವ್ಯಾಪಾರಕ್ಕೂ** ವಿಧಾನ ಮಾಡಿಕೊಟ್ಟು ಸ್ವಯಂ ತಾನೂ ತ್ರಿರೂಪ ಳಾಗಿ ಅವುಗಳಲ್ಲಿ ಪ್ರವೇಶಿಸುತ್ತಾಳೆ.

ಅಲ್ಲಿ ಮಜ್ಜಾದಲ್ಲಿ ಮುಖ್ಯ ಪ್ರಾಣದೇವನ ವಿಶೇಷತಃ ಸನ್ನಿಧಾನವು. ಆ ಮಜ್ಜಾದಿಂದಲೇ ರೇತಸ್ಸು ಉತ್ಪನ್ನವಾಗುತ್ತದೆ ಮಾಂಸಾದಿಗಳಿಂದ ಅಲ್ಲವು.

ಈ ಕ್ರಮದಿಂದ ಪಿತೃವು ಭೋಜನ ಮಾಡಿದ ಅನ್ನವು (ರೇತಸ್ತ್ವವನ್ನು) **ರೇತೋ ರೂಪವನ್ನು** ಹೊಂದುತ್ತಿರಲು, ಭಗವಾನ್ ಆ **ಸಂಕರ್ಷಣನು** ಜೀವನನ್ನು ತಂದು **ರೇತಸ್ಸಿನಲ್ಲಿ ಸ್ಥಿತನಾಗುತ್ತಾನೆ.** ಆ ರೇತಸ್ಸಿನಲ್ಲಿ ಸ್ಥಿತ ನಾದ ಸಂಕರ್ಷಣನೆಂಬ ತನ್ನ ಸ್ವರೂಪವನ್ನು ಕಿಂಚಿತ್‌ಕಾಲ ಪುರುಷನಲ್ಲಿರು ವಂತೆ ಮಾಡಿ, ಅಲ್ಲಿ ಸ್ಥಿತನಾಗಿರುವ ಪ್ರದ್ಯುಮ್ನನು ಗರ್ಭದಂತೆಯೇ ಭರಣ ಮಾಡಿ ಕಾಪಾಡುತ್ತಾನೆ. ಆ ಭಗವಂತನ ರೂಪಾಂತರ ಸಂಬಂಧ ವಶದಿಂದ ಪುರುಷನ **ಸರ್ವಾಂಗಗಳಲ್ಲೂ ತೇಜೋವಿಶೇಷವು** ಕಾಣಲ್ಪಡುತ್ತದೆ. ಆಗಲೇ ಭಗವಾನ್ ವಾಸುದೇವನು ಸ್ತ್ರೀಯು **ಯೋನಿಯನ್ನು** ಗರ್ಭಧಾರಣೆ ಮಾಡುವ ಅನುಕೂಲ ಶಕ್ತಿಮತಿಯು (ಶಕ್ತಿಯುಳ್ಳದ್ದ)ನ್ನು ಮಾಡುತ್ತಾನೆ. ಅನಂತರ ಪುರುಷನಲ್ಲಿರುವ ಭಗವಾನ್ ಪ್ರದ್ಯುಮ್ನನು **ರೇತಸ್ಸಿನಲ್ಲಿ** ಸ್ಥಿತನಾ ಗಿರುವ ಜೀವನಿಂದ ಸಹಿತನಾದ ಸಂಕರ್ಷಣಾಖ್ಯ (ತನ್ನದೇ ಆದ) ಸ್ವರೂಪ ವನ್ನು ರೇತಸ್ಸಿನ ಜೊತೆಯಲ್ಲೇ ಸ್ತ್ರೀಯಲ್ಲಿ **ಸೇಚನೆ** ಮಾಡುತ್ತಾನೆ. ಆ ಇದನ್ನೇ ಭಗವಾನ್ ಶ್ರೀಹರಿಯು **ಪ್ರಥಮ ಜನ್ಮವೆನ್ನುತ್ತಾರೆ.**

ಇದು ಮೊದಲಿದ್ದ ಸ್ಥಾನದ ಜೆಶೆಯಿಂದ ಸ್ಥಾನಾಂತರಕ್ಕೆ ಹೋದದ್ದ ರಿಂದ ಹೀಗೆನ್ನುತ್ತಾರೆ ಅಷ್ಟೆ. ಅದು ಜೀವನಂತೆ ದೇಹಯೋಗರೂಪ ಜನನ ವಲ್ಲವೆಂದು ತಿಳಿಯುವುದು.

ಅನಂತರದಲ್ಲಿ ಮಾತೃ (ತಾಯಿಲ್ಲಿ) ವಿನಲ್ಲಿ ಸ್ಥಿತನಾಗಿರುವ ಭಗವಾನ್ ಅನಿರುದ್ಧನು ರೇತಸ್ಸಿನೊಡನೆ ಬಂದ ಜೀವನನ್ನು ಸಂಕರ್ಷಣಾಖ್ಯ ಸ್ವರೂಪ

ವನ್ನೂ ಭರಣ ಮಾಡುತ್ತಾನೆ. ಅನಿರುದ್ಧನ ಗರ್ಭಾಶ್ರಯದಿಂದ ಗರ್ಭವು ನಿಂತು ಬೆಳೆಯಲು ಆಶ್ರಯ ಕೊಟ್ಟಿರುವುದರಿಂದಲೇ, ತಾಯಿಯ ಉದರವನ್ನು ಪ್ರವೇಶ ಮಾಡಿ ಅನ್ನಾಹಾರಾದಿಗಳು ಜೀರ್ಣವಾದಾಗ್ಯೂ, ಪಿತೃಶರೀರದ ದೆಶೆಯಿಂದ ಮಾತೃಶರೀರವನ್ನು ಅನುಸರಿಸಿ ಪ್ರವೇಶಿಸಿದ ಗರ್ಭೀಭೂತವಾದ, ಗರ್ಭದಲ್ಲಿರುವ ರೇತಸ್ಸು ಮೊದಲಾದ ಪದಾರ್ಥಗಳು ಮಾತ್ರ ವಿನಾಶವಾಗದಂತೆ ನಿಂತಿರುವುದು. (ಅವಸ್ರಾವವಾಗದೆ) ಅಷ್ಟುಮಾತ್ರವಲ್ಲದೆ ಪ್ರತ್ಯುತ ಅಭಿವೃದ್ಧಿಯೂ ಆಗುತ್ತಿರುವುದು ದಿನೇ ದಿನೇ ಕಾಣಲ್ಪಡುತ್ತದೆ.

ಅಲ್ಲಿಂದ ಆರಂಭಿಸಿ **ಪ್ರಸವಪರ್ಯಂತರವೂ** ತಾಯಿಯ ಸರ್ವಾಂಗಗಳಲ್ಲೂ ತೇಜೋಬಾಹುಳ್ಯವು, ಹೆಚ್ಚಾದ ಸೌಂದರ್ಯ ಕಾಂತಿ ವಿಶೇಷವು ಕಾಣಲ್ಪಡುತ್ತದೆ.

ಹಾಗೆಯೇ ಆ ರೇತಸ್ಸು ನಿರಂತರ ಅಭಿವೃದ್ಧವಾಗಿ ಬೆಳೆಯುತ್ತಿದ್ದರೂ ಆಕೆ (ತಾಯಿಯ)ಯನ್ನು ಹಿಂಸೆ ಮಾಡುವುದಿಲ್ಲವು. ಕಿಂತು ಮತ್ತಾವರೋ ಆಕೆಯ ಒಂದು **ಅಂಗಾಂತರದಂತೆಯೇ** (ಆಕೆಯಲ್ಲಿರುವ ಬೇರೊಂದು ಅಂಗದ ಹಾಗೆಯೇ) ಅನುಕೂಲ್ಯದಿಂದಲೇ ಇರುವುದು.

ಅನಂತರ ರೇತಸ್ಥಿತನಾದ ಭಗವಾನ್ ಸಂಕರ್ಷಣನು ಮಾತೃವಿನಲ್ಲಿದ್ದು ಸ್ವಸ್ವರೂಪಾನುಪಾತಿಯಿಂದ ಕ್ರಮವಾಗಿ ಜೀವಸ್ಥಿತನಾಗಿ ಅವನ **ಶರೀರ ನಿರ್ಮಾಣವನ್ನು** ಮಾಡುತ್ತಾನೆ.

ಅದು ಹೇಗೆಂದರೆ —

ಪಿತೃ ಶರೀರದ ದೆಶೆಯಿಂದ ಕಾಲವಿಶೇಷದಲ್ಲಿ ಯೋನಿ ದ್ವಾರಾ ಮಾತೃಶರೀರವನ್ನು ಪ್ರವೇಶಿಸಿ ಯಾವ ಶುಕ್ರ (ರೇತಸ್ಸು) ಇದೆಯೋ ಅದೇನೇ ಅನಿರುದ್ಧನ ಪ್ರೇರಣೆಯಿಂದ ಸಮಾಗತವಾದ ಮಾತೃ ಶರೀರಸ್ಥ ಶೋಣಿತದಿಂ(ರಕ್ತ, ರಜಸ್ಸಿನಿಂ)ದ ಕೂಡಿ ಅದು ಉದರದಲ್ಲಿ ಕೋಷ್ಠ (ಗರ್ಭದಲ್ಲಿ) ವಿಶೇಷವನ್ನು ಪ್ರವೇಶಿಸಿ ಸಂಕರ್ಷಣಾಧಿಷ್ಠಿತವಾದ ಮಹಿಮೆಯಿಂದ ಒಂದು ರಾತ್ರಿಯಲ್ಲಿ ಕಲಿಲವಾಗುತ್ತದೆ. ಅನಂತರ ಐದು ರಾತ್ರಿಯಲ್ಲಿ ಬುದ್ಬುದ (ನೀರುಗುಳ್ಳೆ)ವೂ, ಹತ್ತು ದಿನಗಳಲ್ಲಾದರೋ ಆಮಪಿಷ್ಟ ಪಿಂಡದಂತೆ ಈಷತ್ ಸ್ವಲ್ಪ (ನೆನೆದುಕೂಡಲೇ [illegible]) ಕಠಿಣದಿಂದ ಕೂಡಿಯೂ

ಒಂದು ಪಕ್ಷ 15 ದಿವಸಗಳಲ್ಲಿ **ಮಾಂಸಖಂಡದಂತೆ** ಅಂಥ ಸಮ್ಯಕ್ ಘನೀಭೂತ ಪಿಂಡದಂತೆ ಆಗುತ್ತದೆ.

ಅಲ್ಲಿ ಗರ್ಭದಲ್ಲಿರುವ ಜೀವರಿಗೆ ಉತ್ತಮ ಮತಿಯುಳ್ಳವರಾದರೆ, ಭಗವಂತನು ತನ್ನ ಇಚ್ಛೆಯಿಂದಲೇ ಅವರ ಇಚ್ಛಾದಿಗಳನ್ನು ಉತ್ಪಾದನೆ ಮಾಡಿ ಅದನ್ನು ನಿಮಿತ್ತ ಮಾಡಿಕೊಂಡು ಅವಯವ ಸಮೂಹವನ್ನು ನಿರ್ಮಾಣ ಮಾಡುತ್ತಾನೆ.

ಅಧಮರಾದ ಪುರುಷದೇಹದಲ್ಲಾದರೋ, ಮುಂದೆ ಬರಬಹುದಾದ ಸಂಭಾವ್ಯಮಾನವಾದ ಸರ್ವವ್ಯಾಪಾರಗಳ ಅನುಕೂಲ್ಯವನ್ನೂ ಯಾವ ಅವಯವಗಳು ನಿರ್ಮಾಣ ಮಾಡಲು ಉತ್ತರತ್ರ ಮುಂದಕ್ಕೆ ತನ್ನ ಪ್ರೇರಣಾನುಸಾರವಾಗಿ ಜೀವರಿಗೆ ಮುಂದಿನ (**ಭವಿಷ್ಯದ**) ಇಚ್ಛಾನುಸಾರದಿಂದ ಸ್ವಯಂ ತಾನೇನೇ ಹಾಗೆ ಹಾಗೆ ಇಚ್ಛಿಸಿ ಅವರ ಅಂಥಾ ಅವಯವ ಸಮೂಹವನ್ನು ನಿರ್ಮಾಣ ಮಾಡುತ್ತಾನೆ.

ಅಲ್ಲಿ ಘನೀಭೂತವಾದ **ಸ್ಥೂಲಪಿಂಡದಲ್ಲಿ** ಇರುವ ಅಂತರಾವಕಾಶದಲ್ಲಿ ಇದ್ದುಕೊಂಡಿರುವ ಸಂಕರ್ಷಣನು "ಅತ್ರ ಅಹಂ ವಿಚಷ್ಟೇ" ಇಲ್ಲಿ ನಾನು ನೋಡಿ ವ್ಯಾಪಾರವನ್ನು ಮಾಡುತ್ತೇನೆಂದು ಮೊದಲಾಗಿ ನೋಡಿ ಅವುಗಳಲ್ಲಿ ಇಚ್ಛೆಯನ್ನೂ ಚೇಷ್ಟೆಯನ್ನೂ ಮಾಡುತ್ತಾನೆ.

ಅನಂತರ ಆಗ ಓಜಸ್ಸು, ಸಹ, ಬಲಾತ್ಮಕವಾದ ಮುಖ್ಯ ವಾಯುವು ಉತ್ಪನ್ನವಾಗುತ್ತದೆ. ಪುನಃ "ವಿಶೇಷವಾಗಿ ಚೇಷ್ಟೆಯನ್ನುಮಾಡುತ್ತೇನೆ." ಎಂಬ ಇಚ್ಛೆಯಲ್ಲಿ **ಆ ವಾಯುವು** ಪ್ರಾಣ, ಅಪಾನ, ವ್ಯಾನ, ಉದಾನ ಸಮಾನರೆಂದು **ಪಂಚ ರೂಪನಾಗುತ್ತಾನೆ.**

ಅವುಗಳಲ್ಲಿ ಪ್ರಾಣನಿಗೆ ಊರ್ಧ್ವಸ್ವಭಾವವುಳ್ಳ ಇತಸ್ತತಃ ವಿಸರ್ಪಣ (ಸಂಚರಿಸುವ) ವೇಗಾತಿಶಯದಿಂದ **ಸ್ಥೂಲಾಂಡದ** ಊರ್ಧ್ವ ದೇಶದಲ್ಲಿ **ನಾರಿಕೇಳ** (ತೆಂಗಿನಕಾಯಿ) ಫಲದಮೇಲೆ ಇಡಲ್ಪಟ್ಟ **ಜಂಬೀರ** ಫಲದಂತೆ ಉತ್ಪನ್ನವಾದ ಮುಖ ನಾಸಿಕಾದಿ ರಂಧ್ರವುಳ್ಳ ಕೇವಲ ಮಂಡಲಾಕಾರವಾದ ದುಂಡಗಿರುವ ಶಿರಸ್ಸೆಂಬ ಅಭಿದಾನದ ಅವಯವ ವಿಶೇಷವು **ಒಂದು ಮಾಸದಲ್ಲಿ** ಹುಟ್ಟುತ್ತದೆ.

ಅನಂತರ **ಹರಿಯು** ನಾನಾ ಕರ್ಮವನ್ನು ಮಾಡಲಿಚ್ಛಿಸಲು ಎರಡು (ಕಾಲು) ಅಂಘ್ರಿಗಳೂ, ಅಲ್ಲಿಯೂ **ಪಾದಾಖ್ಯ** ಇಂದ್ರಿಯವೂ ಪ್ರಜಾನಂದೇಚ್ಛೆಯಿಂದ ಶಿಶ್ನವು "**ಉಪಸ್ಥಾ**"ಖ್ಯ ಇಂದ್ರಿಯವುಮಲಾದಿಗಳ (ಉತ್ಸೃಷ್ಟ) ವಿಸರ್ಜನೆ ಮಾಡಲಿಚ್ಛೆಯಿಂದ **ಗುದ** ಮತ್ತು ಅಲ್ಲಿ "**ಪಾಯು**" ಎಂಬ ಇಂದ್ರಿಯವು, ಪರಕಾಯ ಪ್ರವೇಶಾಪೇಕ್ಷೆಯಲ್ಲಿ ನಾಭಿದ್ವಾರವು ಇತ್ಯಾದಿ ಅವಯವ ಸಮೂಹವು ಎರಡನೆಯ ತಿಂಗಳಲ್ಲಿ ಹುಟ್ಟುತ್ತವೆ.

ಅನಂತರ ಮೂರನೆಯ ತಿಂಗಳಲ್ಲಿ ಹರೀಚ್ಛೆಯಿಂದ ನಖ (ಉಗುರು) ಲೋಮ, ಚರ್ಮಗಳು ಲಿಂಗಭಿದ್ರವವೂ ಹುಟ್ಟುವುವು.

ಆಮೇಲೆ ನಾಲ್ಕನೆಯ ತಿಂಗಳಲ್ಲಿ ಆ ಭಗವಂತನ ಇಚ್ಛೆಯಿಂದ ತ್ವಕ್, ಮಜ್ಜಾ, ಅಸ್ಥಿರೂಪ ಸಪ್ತ (ಏಳು) ಧಾತುಗಳು ಹುಟ್ಟುತ್ತವೆ. ಅಲ್ಲಿ ದೇಹದಲ್ಲಿ (360) ಮೂರನೂರ ಅರವತ್ತು ಸಂಖ್ಯಾಕಗಳಾದ ಮೂಳೆ (ಅಸ್ಥಿ)ಗಳು ಅಷ್ಟೇ ಸಂಖ್ಯೆಯ (360) ಮಜ್ಜಾಗಳು ಉತ್ಪನ್ನವಾಗುವುವು.

ಅನಂತರ ಐದನೆಯ ತಿಂಗಳಲ್ಲಿ ಹೃದಯಾಕಾಶದಲ್ಲಿ ಪ್ರಾಣನ ಇತಸ್ತತಃ ಸಘರ್ಷಣದಿಂದ (ತಿನ್ನಬೇಕೆಂಬ ಇಚ್ಛೆ ಪಾನಮಾಡಬೇಕೆಂಬ ಇಚ್ಛೆ) ಅಶನಾ ಪಿಪಾಸಾಖ್ಯ (ಹಸಿವು ಬಾಯಾರಿಕೆ ಎಂಬ) ಎರಡು ರೂಪನಾಗಿ **ಹಾರು ತನು** ಆಗುತ್ತಾನೆ.

1. ಆ ಅಶನಾ ಪಿಪಾಸಗಳಲ್ಲಿ ಮುಖವು ಶಿರಸ್ಸಿನಲ್ಲಿ ಒಡದು ಬಂದು (**ಮುಖಂ ನಿರಭಿದ್ಯತ**) ಮುಖವು ಉತ್ಪನ್ನವಾಯಿತು.

2. ಅನಂತರದಲ್ಲಿ **ರಸನಗ್ರಹಣ** ಮಾಡ (ರುಚಿ ನೋಡ) ಬೇಕೆಂಬ ಇಚ್ಛೆಯಿಂದ ತತ್ಸಾಧನವಾದ **ರಸನೇಂದ್ರಿಯವು** (ನಾಲಿಗೆಯು) ಅನ್ನಗೋಳವಾದ ತಾಲುವೆಂಬ ಹೆಸರಿನಿಂದ ಜಿಹ್ವಾಮೂಲದ ಜೊತೆಯಲ್ಲೇ ಉತ್ಪನ್ನವಾಗುತ್ತದೆ.

3. ಅನಂತರ ಮಾತನಾಡಬೇಕೆಂಬ ಇಚ್ಛೆಯುಂಟಾಗಲು ಮುಖವೆಂಬ ಗೋಳಕದಲ್ಲಿ **ವಾಗೀಂದ್ರಿಯವು** ಹುಟ್ಟಿತು.

4. ಅಂತರಾಕಾಶದಲ್ಲಿ ವಾಯುವಿನಲ್ಲೂ ದೋಧೂಯಮಾಗಿರಲು ನಿರುದ್ಧವಾದ (ತಡೆಯಲ್ಪಟ್ಟ) ವಾಯುವಿಗೆ ಹೊರಕ್ಕೆ ಹೋಗಬೇಕೆಂಬ ಇಚ್ಛೆ

ಯಿಂದ **ನಾಸಿಕ** (ಮೂಗಿನ) ಎರಡು ಪುಟಗಳೂ ನಿರಭಿದ್ಯವಾದವು. ಗಂಧವ (ಘ್ರಾಣೇಚ್ಛೆಯು)ನ್ನು ವಾಸನೆ ನೋಡಬೇಕೆಂಬ ಇಚ್ಛೆಯಿಂದ ಘ್ರಾಣೇಂದ್ರಿಯುವು ಹುಟ್ಟಿತು.

5. " ನಾನು ಯಾವ ರೀತಿಯಾಗಿದೇನೆ " ಎಂದು ತನ್ನನ್ನು ತಾನು ನೋಡಿಕೊಳ್ಳಲಿಚ್ಛಿಸಲು ಎರಡು ಕಣ್ಣುಗಳೂ ಅವುಗಳ ಗೋಳಕವಾದ ಚಕ್ಷುರಿಂದ್ರಿಯ ವೂ ಹುಟ್ಟಿದವು.

6. ದೇವಾದಿಗಳಿಂದ ಬೋಧಿಸಲ್ಪಡುವುದನ್ನು ಕೇಳಬೇಕೆಂಬ ಇಚ್ಛೆಯಿಂದ ಶ್ರೋತ್ರೇಂದ್ರಿಯುವೂ ಅದಕ್ಕೆ ಗೋಳಕವಾದ ಎರಡು ಕಿವಿಗಳೂ ಹುಟ್ಟಿದವು.

7. ಅಲ್ಲಲ್ಲಿ ಪದಾರ್ಥಗಳಲ್ಲಿ ಮಾರ್ದವ ಕಾಠಿಣ್ಯಗಳು ಕಂಡು ಬಂದವು. ಔಷ್ಣಶಿ, ಶೈತ್ಯ, (ಬಿಸಿ, ತಣ್ಣಗಿರುವುದು) ಮೊದಲಾದವುಗಳ ಜ್ಞಾನೇಚ್ಛೆಯಿಂದ ತ್ವಗಿಂದ್ರಿಯುವು (ಚರ್ಮವು) ಹುಟ್ಟಿತು.

8. ಶ್ರೀ ಹರಿ ಮಹಾತ್ಮ್ಯೆ ನಿದಿಧ್ಯಾಸನೆ ಮೊದಲಾದವುಗಳ ಇಚ್ಛೆಯಲ್ಲಿ ಗೋಳಕಭೂತವಾದ ಹೃದಯುವೂ ಮನಸ್ಸೆಂಬ ಹೆಸರುಳ್ಳ ಇಂದ್ರಿಯ ವೂ ಹುಟ್ಟಿತು.

9. ಅನಂತರ ಸಂಕಲ್ಪ ವಿಕಲ್ಪೇಚ್ಛೆಯಿಂದ, ಸಂಕಲ್ಪವಿಕಲ್ಪರೂಪ (i) **ಮನಸ್ಸು** ಶೃತವಾದ ಅರ್ಥ ವಿಷಯದಲ್ಲಿ (ii) **ಬದ್ಧಿಯೂ**,ಆ ಸ್ವರೂಪದಲ್ಲಿ ಸ್ವರೂಪಮತೀಚ್ಛೆಯಲ್ಲಿ (iii) **ಅಹಂಕಾರವೂ**, ಸ್ಮರಣೇಚ್ಛೆಯಲ್ಲಿ **ಚಿತ್ತವು** ಚೇತೋ ಪ್ರ್ಯಾಪ್ತೀಚ್ಛೆಯಲ್ಲಿ (v) **ಚೇತನವು** ಹೀಗೆ ಮನಸ್ಸಿನಲ್ಲಿ **ಪಂಚ ಮನೋವೃತ್ತಿಗಳೂ** ಸಹ ಹೃದಯದಿಂದಲೇ ಹುಟ್ಟುತ್ತವೆ.

ಅನ್ನ ಪಾನಾಧಿಗಳ ಇಚ್ಛೆಯಲ್ಲಿ **ಉದರ** ಮತ್ತು **ಕುಕ್ಷಿಯು**, ನಾಡಿಗಳೂ ಹುಟ್ಟುವುವು. **ಗುದ** ಮತ್ತು **ವೃಷಣಗಳ** ಮಧ್ಯವು ನಾಡಿಗಳ **ಮೂಲಾಧಾರ ಸ್ಥಾನವು**. ಅವುಗಳಲ್ಲಿ ಸರ್ವಪ್ರಕಾರ ಎಲ್ಲದರಿಂದಲೂ ಶ್ರೇಷ್ಠವಾದದ್ದು " **ಸುಷುಮ್ನಾ** " ನಾಮಕವಾದ ಪ್ರಧಾದ ನಾಡಿಯು ಮೂಲಾಧಾರವನು ಆರಂಭಿಸಿ ಶಿರಸ್ಸಿನ (ತಲೆಯು)ಲ್ಲಿ ಬ್ರಹ್ಮರಂಧ್ರದ ಪರ್ಯಂತ ಶಲಾಕಾದಂತೆ ನೆಟ್ಟಗೆ ಋಜುವಾ ಸ್ಥಿತವಾಗಿರುವುದು.

ಅದಾದರೂ 1. **ವಜ್ರಿಕಾ** 2. **ಆರ್ಯಕಾ** 3. **ಪ್ರಕಾಶಿನೀ** 4. **ವೈದ್ಯುತಾ** 5. **ಬ್ರಹ್ಮನಾಡೀ** ಎಂದು ಪಂಚ (ಐದು) ಪ್ರಭೇದವುಳ್ಳದ್ದಾಗಿದೆ. ಅದರಲ್ಲಿ ಮಧ್ಯೆ ಬ್ರಹ್ಮನಾಡೀ ಪಶ್ಚಿಮ (ಹಿಂಭಾಗದಲ್ಲಿ) ವಜ್ರಿಕಾ ಎಡ ಭಾಗದಲ್ಲಿ ಆರ್ಯಾ, ಮುಂಭಾಗದಲ್ಲಿ ಪ್ರಕಾಶಿನೀ, ಬಲ ಭಾಗದಲ್ಲಿ ವೈದ್ಯುತಾ ಎನಿಸಿರುವವು.

ಹೀಗೆ ಪಂಚ ಪ್ರಭೇದವುಳ್ಳ ಸುಷುಮ್ನಾ ನಾಡಿಯು ನಾಲ್ಕು ದಿಕ್ಕುಗಳಲ್ಲೂ **ನೂರು ನಾಡಿಗಳಿರುವುವು.** ಈ ಶತನಾಡಿಗಳಲ್ಲೂ ವಜ್ರಿಕಾ, ಇಡಾ, ಧಾರಿಣೀ, ಪಿಂಗಳಾ ಎಂಬುವ ನಾಲ್ಕು ಪ್ರಧಾನವಾದವುಗಳು. ಅದರಲ್ಲೂ ಪಶ್ಚಿಮ (ಹಿಂಭಾಗ)ದಲ್ಲಿ ವಜ್ರಿಕಾ ವಾಮ ಭಾಗದಲ್ಲಿ ಇಡಾ ಪೂರ್ವ (ಮುಂಭಾಗ)ದಲ್ಲಿ ಧಾರಿಣೀ, ದಕ್ಷಿಣದಲ್ಲಿ ಪಿಂಗಳಾ ಇರುವುವೆಂದು ತಿಳಿಯುವುದು.

ಹೀಗೆ ವಿದ್ಯಮಾನಗಳಾಗಿರುವ (೧೦೧) ವಂದನೂರ ವಂದು **ನಾಡಿಗಳ** ಮಧ್ಯದಲ್ಲಿ ಪ್ರತಿ ಶಾಖೆಯೂ ನೂರು ನೂರಾಗಿ ಶಾಖಾ ನಾಡಿಗಳಾಗುವುವು ಪುನಃ ಅವುಗಳಲ್ಲಿ ಪ್ರತಿ ಶಾಖಾ ನಾಡಿಗಳಾಗುವುವು. ಏವಂಚ ಒಟ್ಟಿಗೆ ಸೇರಿ ಶರೀರದಲ್ಲಿ **ಎಪ್ಪತ್ತೆರಡು ಸಹಸ್ರ** (೭೨,೦೦೦) ನಾಡಿಗಳಿವೆಯೆಂದು **ತಿಳಿಯು**ವುದು.

ಹೀಗೆ ಸರ್ವ ಅವಯವಗಳ ಉತ್ಪತ್ತಿಯಾದ ನಂತರ **ಆರನೇ ತಿಂಗಳಲ್ಲಿ ತಾ**ಯಿಗೆ ಬಾಧೆಯಾಗದಂತೆ ಗರ್ಭವೇಷ್ಟನ (ಪುಟಕ)ವೆಂಬ ಜರಾಯುವಿನಿಂ (ಗರ್ಭಚೀಲದಿಂ)ದ ನಿರುಚ್ಛ್ವಾಸವನ್ನು ದೃಢವಾಗಿ ಬಂಧನ ಮಾಡಿ ಕಟ್ಟಿ ಗರ್ಭದಲ್ಲಿರುವ ದೇಹದ ನಾಭಿಯನ್ನು ಆರಂಭಿಸಿ ತಾಯಿಯ ಶರೀರದಲ್ಲಿರುವ ಆಂತ್ರಸುಷಿರ (ಕರುಳಿನ ತೂತಿನವರೆಗೆ) ಪರ್ಯಂತ "**ಆಪ್ಯಾಯನೀ**" ಎಂಬ ಹೆಸರಿನ ನಾಡಿಯು ನಿಬದ್ಧವಾಗಿದೆ. ನಿಯತವಾಗಿ ಕಟ್ಟಲ್ಪಟ್ಟಿದೆ. ಆ ನಾಡಿಯ (ದ್ವಾರಾ) ಮೂಲಕವಾಗಿ ತಾಯಿಯು ಭುಂಜಿಸಿದ ಅನ್ನಪಾನಾದಿ ಸೂಕ್ಷ್ಮ ಭಾಗಗಳಿಂದ ಆಪ್ಯಾಯಿತ (ತೃಪ್ತಿಪಟ್ಟ) ದೇಹವುಳ್ಳ ಗರ್ಭದಲ್ಲಿರುವ (ಜಂತು) ಪ್ರಾಣಿಯು, ನಾರೀಕೇಳ (ತೆಂಗಿನಕಾಯಿಯು) ಫಲವು ಹೇಗೋ ಹಾಗೆ ಗರ್ಭಕೋಶ ಸಹಿತವಾಗಿಯೇ ವೃದ್ಧಿ ಹೊಂದುತ್ತದೆ. ಹಾಗೆಯೇ ಕೋಶ ಸಹಿತವಾಗಿಯೇ ಪರಂಪರೆಯಿಂದ ಪ್ರಸವವೂ ವೃದ್ಧಿ ಹೊಂದುತ್ತದೆ.

ಅನಂತರದಲ್ಲಿ **ಏಳನೆಯ ತಿಂಗಳಲ್ಲಿ** ಭಗವಂತನು ಸುಂದರ ಕರ ಚರಣಾದಿ ಸರ್ವಾವಯುವಳಿಂದ ಸಂಯುತವೂ, ಮೃದುತರವೂ, ನವತರವೂ, ಕಲ್ಯಾಣತರವೂ, ಸರ್ವ ವ್ಯವಹಾರಗಳಿಗೆ ಉಪಯುಕ್ತವೂ, ಸರ್ವ ಕಲಾ ಕುಶಲವೂ, ಸರ್ವಾವಯುವ ಬೋಧನ (ಎಲ್ಲವನ್ನೂ ತಿಳಿದುಕೊಳ್ಳಲು) ಸಾಧನವೂ, ಚತು (ರ್ನವತಿ), ತೊಂಬತ್ತು ನಾಲ್ಕು ಲಕ್ಷಣ ಸಂಖ್ಯಾಕ ಯೋನಿ ಭೇದಗಳಿಂದ ಭಿನ್ನವಾದ **ಮಾನುಷ ಶರೀರವನ್ನು** ನಿರ್ಮಿಸಿ, ಅದನ್ನು ನೋಡಿ ಪೂರ್ವದಲ್ಲಿ ತನ್ನಿಂದ ನಿರ್ಮಿತಗಳಾದ **ಒಂಭತ್ತು ಲಕ್ಷ ಸಂಖ್ಯಾಕ** ಜಲಜ ಯೋನಿಗಳ ದೆಶೆಯಿಂದಲೂ, **ಇಪ್ಪತ್ತು ಲಕ್ಷ ಸಂಖ್ಯಾಕ** ಸ್ಥಾವರ ಯೋನಿಗಳ ದೆಶೆಯಿಂದಲೂ, ರುದ್ರ (**ಹನ್ನೊಂದು**) ಲಕ್ಷ ಸಂಖ್ಯಾಕ ಕ್ರಿಮಿ ಯೋನಿಗಳ ದೆಶೆಯಿಂದಲೂ **ಹತ್ತು ಲಕ್ಷ ಸಂಖ್ಯಾಕ** ಪಕ್ಷಿ ಯೋನಿಗಳ ದೆಶೆಯಿಂದಲೂ, **ಮೂವತ್ತು ಲಕ್ಷ** ಸಂಖ್ಯಾಕ ಅಶ್ವಾದಿ ಯೋನಿಗಳ ದೆಶೆಯಿಂದಲೂ ಸಹ ಅತ್ಯಧಿಕವಾದದ್ದನ್ನು ನೋಡಿ, ನಿರವಧಿಕವಾದ ಮುದವನ್ನು ಹೊಂದಿ ದೂರದಲ್ಲೇ ನಿಂತು ಒಂದೇ ರೂಪದಿಂದ ಅದರಲ್ಲೂ, ಅನ್ಯಾಪೇಕ್ಷೆಯಿಲ್ಲದ, ರೂಪದಿಂದ ತತ್ತಚ್ಛಕ್ತಿ ಪ್ರೇರಣಾದಿ ವ್ಯಾಪಾರವನ್ನು ಮಾಡಲು ಅತಿ ಸಮರ್ಥನಾಗಿದ್ದಾಗ್ಯೂ, ಯಾವುದಾದರೂ ಏನಕೇನ ಕಾರಣದಿಂದ, ನಿಮಿತ್ತದಿಂದ, ವ್ಯಾಜದಿಂದ ಅನೇಕ ರೂಪದಿಂದ ಸ್ವಭಾವದಿಂದಲೇ ಜಗತ್ ಸೃಷ್ಟಿಯ ಆರಂಭತ್ವದಿಂದ ಕೇವಲ ಲೀಲೆಯಿಂದ ಅಲ್ಲಿ ಪ್ರವೇಶಿಸುವುದರಿಂದಲೇ, ಅಲ್ಲಲ್ಲಿ ಸ್ಥಿತಳಾದ ಅನೇಕ ರೂಪಗಳಿಂದಲೇ, ಅದರಲ್ಲೂ, ಕೆಲವು ರೂಪಗಳಿಂದ **ಧಾರಣವೂ** ಕೆಲವದರಿಂದ **ಪೋಷಣೆಯೂ**, ಕೆಲವು ರೂಪಗಳಿಂದ ಚೇಷ್ಟೆ, ಕೆಲವುರೂಪ ಗಳಿಂದ ಭೋಜನ ಕೆಲವು ತ್ರಯುಂ ಇತ್ಯಾದಿ ರೂಪದಿಂದ, ಹಾಗೆಯೇ ದೇವತೆ ಗಳಲ್ಲಿ ಪರಮಾನುಗ್ರಹದಿಂದ ಅವರಿಂದಲೇ ಶರೀರ ಸಂಬಂಧವಾದ ಸರ್ವ ವ್ಯಾಪಾರಗಳನ್ನು ಮಾಡಿಸುತ್ತಾ "ಉಪಾಸಕರಿಗೆ" ವಿಷ್ಣು ಶಬ್ದಾರ್ಥಭೂತ ವಾದ ಸರ್ವ ಚೇಷ್ಟಯಿತೃತ್ವವನ್ನೂ, ವಿಶಿಷ್ಟ ಬಲತ್ವವನ್ನೂ ಪ್ರಕಟವನ್ನೂ ಮಾಡುತ್ತೇನೆಂದು ಆಲೋಚಿಸಿದ್ದನ್ನು ಬಹುಶಃ ಅನೇಕ ರೀತಿಯಾಗಿ ವಿಭಜನ ಮಾಡಿ **ಬ್ರಹ್ಮವಾಯುಗಳಿಬ್ಬರ ಜೊತೆಯಲ್ಲೇ** ಈ ಪುರುಷ ಶರೀರ ವನ್ನು ಪ್ರವೇಶಿಸಿದನು. ಅದು ಹೇಗಂದರೆ —

ಅಲ್ಲಿ ಭಗವಾನ್ ವಾಸುದೇವನು ಶರೀರವನ್ನು ಧಾರಣ ಮಾಡಲು, ಅನಿರುದ್ಧಾದಿ ಐದು ರೂಪಗಳನ್ನು ತೆಗೆದುಕೊಂಡು ಬ್ರಹ್ಮವಾಯುರಿಬ್ಬರೊಡನೆಯೇ ಎರಡು ಪ್ರಪದ(ಮುಂಗಾಲುಗಳ ಮೇಲಿನ ಭಾಗ)ಗಳಲ್ಲೂ ಪ್ರವೇಶಿಸಿದನು.

ಯಾವ ಕಾರಣದ ದೆಶೆಯಿಂದಂ ಅನಿರುದ್ಧಾಖ್ಯ ಭಗವಂತನು ಈ ಬ್ರಹ್ಮಾವಾಯುರ ಜೊತೆಯಲ್ಲಿ ಪ್ರಪದವನ್ನು (ಪ್ರಪೇದೇ) ಹೊಂದಿದನೋ! ಆದುದರಿಂದ ಆ ಅಂಗಗಳಿಗೆ "ಪ್ರಪದ" ಎಂದು ಹೆಸರು ಬಂತು.

ಭಗವಂತನು ಎರಡು **ಪ್ರಪದಗಳಲ್ಲೂ** ಅನಿರುದ್ಧನನ್ನು ಸಂಸ್ಥಾಪನೆ ಮಾಡಿ ಇಟ್ಟು, ಅವುಗಳ ದೆಶೆಯಿಂದ ಮೇಲಕ್ಕೆ ಹೋಗಿ ಸ್ಥಿತನಾದನು.

ಹರಿಯಗಿಂತ ವಾಯುವು ಪೂರ್ವದಲ್ಲಿ ಗಮನವುಳ್ಳವನಾದುದರಿಂದ ಪ್ರಪ್ರದಗಳ ಮೇಲೆ ಮೊದಲು ಹೋದುದರಿಂದ, ಅವೆರಡೂ "**ಊರೂ**" ಆದವು.

ಅನಂತರ ಅಲ್ಲಿ "**ಪ್ರದ್ಯುಮ್ನ**"ನನ್ನು ಸಂಸ್ಥಾಪನೆ ಮಾಡಿ ಕಿಂಚಿತ್ ಸ್ವಲ್ಪ ಮೇಲಕ್ಕೆ ಹೋಗಿ, ಅಲ್ಲಿ ನಿಂತು ವಾಯುವನ್ನು ಕುರಿತು "**ಅಹೋ ಉರು ಗರಣಂ ಕರು** ಹೆಚ್ಚಾಗಿ ವಿಶೇಷವಾಗಿ, ಸ್ತೋತ್ರ ಮಾಡು." ಎಂದು ಹೇಳಿದನು. ಆ ವಾಯುವು ಹಾಗೆಯೇ ಮಾಡಿದನು. "ಎಲ್ಲಿ ನಿಂತು ವಾಯುವುಉರುಗರಣ ಮಾಡಿದ (ಹೆಚ್ಚಾಗಿ ಸ್ತುತಿಸಿದ)ನೋ ಆ ಸ್ಥಾನವು "**ಉದರ**" ವೆನಿಸಿತು.

ಅನಂತರ ಅಲ್ಲಿ **ಸಂಕರ್ಷಣ**ನನ್ನು ಸಂಸ್ಥಾಪನೆ ಮಾಡಿ, ಸ್ವಲ ಮೇಲಕ್ಕೆ ಹೋಗಿ "ನನ್ನ ನಿವಾಸಕ್ಕೆ ವಿಸ್ತಾರದಿಂದ ಕೂಡಿದ **ಉರಃ** ಸ್ಥಾನವನ್ನು ಮಾಡು" ಎಂದು ವಾಯುವನ್ನು ಕುರಿತು ಹೇಳಿದನು. ಆ ವಾಯುವೂ ಸಹ ಹಾಗೆಯೇ ಮಾಡಿದನು. "ಉರುತ್ವತಃ" ವಿಸ್ತಾರವಾದುದರಿಂದ ಆ ಸ್ಥಾನವು "ಉರಃ" ಎಂಬ ಹೆಸರುಳ್ಳದ್ದಾಯಿತು. ಈ ಉರುಸ್ಥಾನದ ಮಧ್ಯದಲ್ಲಿ "ಹೃದಯ"ವು. ಅಲ್ಲಿ ವಾಸುದೇವನನ್ನು ಸಂಸ್ಥಾಪಿಸಿದನು. ೬೨ ಪುಟ (Iನೇ ಪಥಕವನ್ನು ನೋಡು)

ಅನಂತರ ಅಲ್ಲಿಂದ ಮೇಲಕ್ಕೆ ಹೋಗಿ ಶಿರಸ್ಸಿನಲ್ಲಿ ಮೂರ್ಧ್ನಾದಲ್ಲಿ ಬ್ರಹ್ಮ ನಾಡಿಯಲ್ಲಿ ದ್ವಾರದೇಶದ ದೆಶೆಯಿಂದ ಸ್ವಲ್ಪ ಕೆಳಭಾಗದಲ್ಲಿರುವ ಪ್ರದೇಶದಲ್ಲಿ ದ್ವಾದಶ (ಹನ್ನೆರಡು) ದಳಗಳಿಂದ ಕೂಡಿದಆರನೆಯ ಕಮಲದಲ್ಲಿ "**ನಾರಾಯಣ**"ನೆಂಬ ಹೆಸರಿನಿಂದ ನಿಂತನು.

ಈ ರೀತಿಯಾಗಿ ಪುಷದದಲ್ಲಿ ಆವಿಷ್ಟನಾದ ವಾಸುದೇವನು ಅನಿರುದ್ಧಾದಿ ಪಂಚ ರೂಪದಿಂದ ಪಂಚ ಸ್ಥಾನಗಳಲ್ಲಿ ನಿಂತುಕೊಂಡು ದೇಹವನ್ನು ಭರಣ ಮಾಡುತ್ತಾನೆ. ಕಾಪಾಡುತ್ತಾನೆ.

ಹಾಗೆಯೇ ಪಂಚರೂಪಿಯಾದ ಭಗವಂತನು ಆರು ಸ್ಥಾನಗಳಲ್ಲಿ ನಿಂತು ಸುಷುಮ್ನಾವನ್ನು ಭರಣ ಮಾಡುತ್ತಾನೆ. ಅಲ್ಲಿ 1. ಮೂಲಾಧಾರದಲ್ಲಿ ಚತುರ್ದಳದಿಂದ ಕೂಡಿದ ರಕ್ತ (ಕೆಂಪು) ಪದ್ಮದಲ್ಲಿ ತ್ರಿಕೋಣ ವಹ್ನಿಮಂಡಲದಲ್ಲಿ ಪ್ರದ್ಯುಮ್ನನು 2. ನಾಭಿಯಲ್ಲಿ ಷಟ್ ದಳಗಳಿಂದ ಕೂಡಿದ ರಕ್ತ ಕಮಲದಲ್ಲಿರುವ ಷಟ್ಕೋಣ ವಾಯು ಮಂಡಲದಲ್ಲಿ ಸಂಕರ್ಷಣನು 3. ಹೃದಯದಲ್ಲಿ ಅಷ್ಟದಳ ರಕ್ತ ಪದ್ಮದಲ್ಲಿ ದ್ವಾದಶ ಕೋಣವುಳ್ಳ ಸೂರ್ಯ ಮಂಡಲದಲ್ಲಿ ವಾಸುದೇವನು 4. ತಾಲು ಸ್ಥಾನದಲ್ಲಿ ಎರಡು (ದ್ವಿದಳ) ದಳವುಳ್ಳ ಶುಕ್ಲ (ಬಿಳೀ) ಪದ್ಮದಲ್ಲಿ ವರ್ತುಲವಾದ ಶಶಿ ಮಂಡಲದಲ್ಲಿ ಅನಿರುದ್ಧನು 5. ಭ್ರೂಮಧ್ಯದಲ್ಲಿ (ಹುಬ್ಬುಗಳ ನಡುವೆ) ಭ್ರೂ ಸ್ಥಾನದಲ್ಲಿ ನಾಲ್ಕು ದಳವುಳ್ಳ ಶುಕ್ಲ ಪದ್ಮದಲ್ಲಿ ತ್ರಿಕೋಣ ವಹ್ನಿಮಂಡಲದಲ್ಲಿ ನಾರಾಯಣನು 6. ಮೂರ್ಧ್ನಾದಲ್ಲಿ ದ್ವಾದಶ (ಹನ್ನೆರಡು) ದಳವುಳ್ಳ ಶುಕ್ಲ ಪದ್ಮದಲ್ಲಿರುವ ವರ್ತುಳ ಶಶಿ ಮಂಡಲದಲ್ಲೂ ಸಹ ನಾರಾಯಣನು. ಶರೀರ ಧಾರಕರಲ್ಲಿ ಐದನೆಯ (ಪಂಚಮ) ರೂಪವು ಯಾವುದು ಸುಷುಮ್ನಾದ ಧಾರಕವಲ್ಲಿ ನಾರಾಯಣಾಖ್ಯನನ್ನು ಆರನೆಯವನನ್ನಾಗಿ ಹೇಳಿದ್ದು ಅವೆರಡರ ರೂಪಗಳು ಒಂದೇ ಎಂದು ತಿಳಿಯುವುದು. ಪುಟ ೬೨ (IIನೇ ಪಥಕವನ್ನು ನೋಡು)

ಸುಷುಮ್ನಾ ನಾಡಿಯು 1. ವಜ್ರಿಕಾ, 2. ಆರ್ಯಾ, 3. ಪ್ರಕಾಶಿನೀ, 4. ವೈದ್ಯುತಾ, 5. ಬ್ರಹ್ಮನಾಡೀ ಎಂದು ಪಂಚ ವಿಧವು.

ಅವೂ 1. ಹಿಂಭಾಗ (ಪೃಷ್ಟ)ದಲ್ಲಿ ವಜ್ರಿಕಾದಲ್ಲಿ ಹರಿದ್ವರ್ಣ ಪ್ರದ್ಯುಮ್ನ 2. ಎಡಗಡೆ ಆರ್ಯಾದಲ್ಲಿ ನೀಲವರ್ಣವುಳ್ಳ ಅನಿರುದ್ಧನು 3. ಅಗ್ರ

(ಮುಂಭಾಗ)ದಲ್ಲಿ ಪ್ರಕಾಶಿನಿಯಲ್ಲಿ ಶುಕ್ಲವರ್ಣವುಳ್ಳ ವಾಸುದೇವನು, ದಕ್ಷಿಣ (ಬಲ ಭಾಗದಲ್ಲಿ) ವೈದ್ಯುತಾ ನಾಡಿಯಲ್ಲಿ ಪಿಂಗಳವರ್ಣವುಳ್ಳ ಸಂ ರ್ಷಣನು, 5. ಮಧ್ಯದಲ್ಲಿ ಬ್ರಹ್ಮನಾಡಿಯಲ್ಲಿ ರಕ್ತವರ್ಣವುಳ್ಳ ನಾರಾಯಣ

ಪುಟ ೬೨ (ಪಥಕ III ನೋಡ

I ಭಗವಾನ್ ವಾಸುದೇವನು ಶರೀರವನ್ನು ಧಾರಣ ಮಾಡಲು ತೆಗೆದುಕೊಂಡ ಅನಿರುದ್ಧಾದಿ ಪಂಚ ರೂಪಗಳು

5. ಮೂರ್ಧ್ನಾ	....	ನಾರಾಯಣನು	....	ತಲೆಯ ಒಳಭಾ
4. ಹೃದಯ	....	ವಾಸುದೇವ	....	ಎದೆ (ಹೃದಯ)
3. ಉದರ	....	ಸಂಕರ್ಷಣ	....	ಹೊಟ್ಟೆ
2. ಊರು	....	ಪ್ರದ್ಯುಮ್ನ	....	2 ತೊಡೆಗಳು
1. ಪ್ರಪದ	....	ಅನಿರುದ್ಧ	....	2 ಮುಂಗಾಲುಗ

ಬ್ರಹ್ಮಾವಾಯುರುಗಳ ಜೊತೆಯಲ್ಲಿ ಪ್ರವೇಶ ಮಾಡಿದಾಗ ಪರಮ ತ್ಮನ ಆಜ್ಞೆಯಂತೆ ಆಯಾ ಸ್ಥಾನಗಳಲ್ಲಿ ನಿಂತು ವಾಯುದೇವರು ಸ್ತೋ ಮಾಡಿದುದರಿಂದ ಬಂದ ಹೆಸರುಗಳು. ಇವು—

II ಪಂಚರೂಪೀ ಭಗವಾನ್ "ಸುಷುಮ್ನಾ"ವನ್ನು ಆರು ಸ್ಥಾ ಗಳಲ್ಲಿ ನಿಂತು ಭರಣ ಮಾಡುವನು.

6. ಮೂರ್ಧ್ನಾ (12) ಹನ್ನೆರಡು ದಳ ವರ್ತುಳ
   ಬಿಳೀ ಪದ್ಮ ಶಶಿಮಂಡಲ .... ನಾರಾಯಣ

5. ಭ್ರೂ (ಮಧ್ಯೆ) ನಾಲ್ಕು ದಳ ತ್ರಿಕೋಣ
   ಶುಕ್ಲ ಪದ್ಮ ವಹ್ನಿಮಂಡಲ .... ನಾರಾಯಣ

4. ಕಾಲು 2 ಎರಡುದಳ ವರ್ತುಳ ○
   ಬಿಳೀ ಪದ್ಮ ಶಶಿಮಂಡಲ .... ಅನಿರುದ್ಧನು

3. ಹೃದಯ 8 ಅಷ್ಟದಳ 12 ದ್ವಾದಶಕೋಣ
   ರಕ್ತಪದ್ಮ ಸೂರ್ಯ(ಮಂಡಲ)ನು .... ವಾಸುದೇವನ

2. ನಾಭಿ ಆರುದಳ 6 ಷಟ್ ಷಟ್ 6 ಕೋಣ
ದಳ ರಕ್ತಪದ್ಮ ವಾಯುಮಂಡಲ.... ಸಂಕರ್ಷಣನು

1. ಮೂಲಾಧಾರ ಚತುಃ 4 ದಳ ತ್ರಿಕೋಣ △
ಕೆಂಪು ಕಮಲ ವಹ್ನಿಮಂಡಲ .... ಪ್ರದ್ಯುಮ್ನನು

III ಪಂಚವಿಧ (ಸುಷುಮ್ನಾ ನಾಡೀಯು)ದಲ್ಲಿ

ಪೃಷ್ಠ (ಹಿಂಭಾಗ)—ವಜ್ರಿಕಾ, ಹರಿದ್ವರ್ಣ .... ಪ್ರದ್ಯುಮ್ನನು
ವಾಮ (ಎಡಗಡೆ)—ಆರ್ಯಾ, ನೀಲವರ್ಣ .... ಅನಿರುದ್ಧ.
ಅಗ್ರ (ಮುಂಭಾಗ)—ಪ್ರಕಾಶಿನೀ, ಶುಕ್ಲವರ್ಣ .... ವಾಸುದೇವ.
ದಕ್ಷಿಣ (ಬಲಗಡೆ)—ವೈದ್ಯುತಾ, ಪಿಂಗಳವರ್ಣ .... ಸಂಕರ್ಷಣನು
ಮಧ್ಯ (ಸ್ಪಂದನ, ಸುಷುಮ್ನಾ)—
ಬ್ರಹ್ಮನಾಡೀ ರಕ್ತವರ್ಣ .... ನಾರಾಯಣನು

ಹೀಗೆಯೇ ಬೇರೆ ನಾಡಿಗಳನ್ನೂ ಭರಣ ಮಾಡಲು ಅಲ್ಲಲ್ಲಿ ಭಗವಂತನು ಸ್ಥಿತನಾಗಿರುವನು. ಅದು ಹೇಗೆಂದರೆ —

ಸುಷುಮ್ನಾ ನಾಡಿಯು ನಾಲ್ಕು ದಿಕ್ಕು (ಕಡೆ)ಗಳಲ್ಲೂ ನೂರು (ಶತ) ನಾಡಿಗಳಿವೆ. ಆ ನಾಡಿಗಳಲ್ಲಿ ನಾರಾಯಣ, ನರಃ ಶೌರಿಃ ಇತ್ಯಾದಿ ನೂರು ರೂಪಗಳಿವೆ. ಶತನಾಡಿಗಳಲ್ಲೂ 1. ವಜ್ರಿಕಾ 2. ಇಡಾ, 3. ಧಾರಿಣೀ, 4. ಪಿಂಗಳಾ ಎಂಬುವು ನಾಲ್ಕು ಪ್ರಧಾನ ನಾಡಿಗಳು. ಈ ಭೇದದಿಂದ ಕೂಡಿದ ಸುಷುಮ್ನಾ ನಾಡಿಯ ನಾಲ್ಕು ದಿಕ್ಕುಗಳಲ್ಲಿ ಇರುವುವು. ಅವು ಹೀಗೆ ಇವೆ.

1. ಪಶ್ಚಿಮ (ಹಿಂಭಾಗದಲ್ಲಿ)— ವಜ್ರಿಕಾದಲ್ಲಿ .... ಪ್ರದ್ಯುಮ್ನನು.
2. ವಾಮ (ಎಡಗಡೆಯಲ್ಲಿ)— ಇಡಾದಲ್ಲಿ .... ಅನಿರುದ್ಧನು.
3. ಅಗ್ರ (ಮುಂಭಾದ)ದಲ್ಲಿ— ಧಾರಣಿಯಲ್ಲಿ .... ವಾಸುದೇವನು.
4. ದಕ್ಷಿಣ (ಬಲಗಡೆ)ಯಲ್ಲಿ— ಪಿಂಗಳಾದಲ್ಲಿ .... ಸಂಕರ್ಷಣನು.

ಹಾಗೆಯೇ ಎಪ್ಪತ್ತೆರಡು ಸಾವಿರ (೭೨,೦೦೦) ನಾಡಿಗಳಲ್ಲಿ ಬೃಹತೀ ಸಹಸ್ರ ವಾಚ್ಯಗಳಾದ ಎಪ್ಪತ್ತೆರಡು (೭೨,೦೦೦) ಸಾವಿರ ಭಗವದ್ರೂಪಗಳು ಇವೆ.

ಬೃಹತೀ ಛಂಧಸ್ಸು 36 ವರ್ಣಗಳಿಂದ ಕೂಡಿದ ವಾಯುದೇವರ
ಅಭಿಮನ್ಯ ಮಾನಗಳಾಗಿವೆ.

ಆ ಬೃಹತೀ ಸಹಸ್ರ ಋಕ್ಕುಗಳಲ್ಲಿ (36,000) ಮೂವತ್ತಾರು ಸಾ
ರೂಪಗಳು ಸ್ವರಾಕ್ಷರ ವಾಚ್ಯಗಳು. ಅಷ್ಟೇ ಸಂಖ್ಯಾಕ (36,000) ಸಂ
ವ್ಯಂಜನಾಕ್ಷರ ವಾಚ್ಯಗಳಾದ 36000 ಸಹಸ್ರ ರೂಪಗಳು ದಕ್ಷಿ
ಭಾಗದಲ್ಲಿರುವ (36,000) ನಾಡಿಗಳಲ್ಲೂ (36,000) ವ್ಯಂಜನಾ
ವಾಚ್ಯಗಳಾದ ಮೂವತ್ತಾರು ಸಹಸ್ರ ರೂಪಗಳು ವಾಮಭಾಗದಲ್ಲಿ
(36,000) ಮೂವತ್ತಾರು ಸಹಸ್ರ ನಾಡಿಗಳಲ್ಲೂ ಇರುವುವೆಂದು ತಿಳಿ
ವುದು. ಇವು ಹಗಲು ನಾಡಿ, ರಾತ್ರಿ ನಾಡಿಗಳೆಂದು, ಸೂರ್ಯ, ಚಂ
ರಸ್ಮಿದ್ವಾರಾ ಮುಖ್ಯಪ್ರಾಣ, ಭಾರತೀದೇವಿಯರ ಅಭಿಮನ್ಯಮಾನಗಳ
ಅಷ್ಟು ರೂಪಗಳಿಂದ ಭಗವಂತನು ಇರುವನೆಂಬುದು ರಹಸ್ಯವು. ಇವು
ರೂಪ ಮತ್ತು ಲಕ್ಷಣಗಳು ಪರಮ ರಹಸ್ಯತಮಗಳಾದುದರಿಂದ ಶ್ರೀಮ
ಚಾರ್ಯರು " **ರೂಪಾಣಾಂ ಲಕ್ಷಣಂ ತೇಷಾಂ ರಹಸ್ಯತ್ವಾನ್ನ ಕಥ್ಯತೆ**
ಎಂದು ಹೇಳಿರುವರು.

ಪಥಕ V

ಬೃಹತಿ ಋಕುಗಳು ಸಹಸ್ರದಲ್ಲಿ ೭೨೦೦೦ ವರ್ಣಗಳು

1. 36000 ಸ್ವರವರ್ಣವಾಚ್ಯ	1. 36000 ವ್ಯಂಜನ ವರ್ಣ ವಾ
2. 36000 ರೂಪಗಳು	2. 36000 ರೂಪಗಳು
3. (ದಕ್ಷ) ಬಲಭಾಗದಲ್ಲಿ	3. (ವಾಮ) ಎಡಭಾಗದಲ್ಲಿ
4. 36000 ನಾಡಿಗಳಲ್ಲಿ	4. 36000 ನಾಡಿಗಳಲ್ಲಿ
5. ಪುಂರೂಪಗಳು	5. ಸ್ತ್ರೀ ರೂಪಗಳು
6. ಅಹಃ 36000ವಾಯು	6. ರಾತ್ರಿ 36000 ಭಾರತೀ
7. ನೂರು ವರ್ಷದಲ್ಲಿ ಹಗಲುಗಳು	7. ನೂರು ವರ್ಷದಲ್ಲಿ ರಾತ್ರಿಗಳು

ಹೀಗೆ ರಶ್ಮಿಗಳ ದ್ವಾರಾ ನಾಡಿಗಳ ಸಂಬಂಧ.

ಹೀಗೆ (72000) ಎಪ್ಪತ್ತೆರಡು ಸಹಸ್ರ ನಾಡೀ ಪ್ರಭೇದ ಭೂತವಾದ ವುಗಳಲ್ಲಿ ಅವುಗಳ ಅವಾಂತರ ನಾಡಿಗಳಲ್ಲಿ ಆ ಎಪ್ಪತ್ತೆರಡು ಸಹಸ್ರ (ದ್ವಾಸಪ್ತತಿ ಸಹಸ್ರ)ಗಳ ರೂಪಗಳಿಂದ ಉದ್ಭವಿಸಿದ ರೂಪಗಳೂ, ಅಸಂಖ್ಯಾಕಗಳಾಗಿವೆ. ಇವೆಲ್ಲವನ್ನೂ ದೇವತೆಗಳೂ ತಿಳಿಯಲು ಅಶಕ್ಯವಾದವು.

ಅದು ಆ ಸೃಷ್ಟಿಕರ್ತನಿಗೆ ಗೊತ್ತು. ಈ ದೇಹರಚನೆಯು ವಿಚಿತ್ರಾನಂತ ಪೂರ್ಣ ಶಕ್ತಿಯು ಮಹಾಮಹಿಮೆಯುಳ್ಳ ಭಗವಂತನದು. ಇದು, ಅದ್ಭುತವೂ, ಆಶ್ಚರ್ಯವೂ, ಅಗಮ್ಯವೂ ಆಗಿದೆ. ಆಧ್ಯಾತ್ಮೋಪಾಸನಕರಾದ ದೇವತೆಗಳು, ಋಷಿಗಳು, ಯೋಗಿಗಳಿಗೂ ಅಗಮ್ಯವಾದುದು!! ಈ **ಪಿಂಡಾಂಡ**ವೆನಿಸಿದ ದೇಹದಲ್ಲಿ ಇಡೀ **ವಿಶ್ವವೇ**, ಬ್ರಹ್ಮಾಂಡವೇ ಅಡಗಿದೆಂಬುದರ ವಿವರಣೆಯಂತೂ ಆಶ್ಚರ್ಯಾಶ್ಚಯಕರವಾದುದು!!

VI

ದೇಹದ ಅವಯವಗಳಲ್ಲಿ ಭಗವನ್ಮೂರ್ತಿಗಳು

ಶಿರಃ ಕಪಾಲದಮೇಲೆ	....	ವಾಸುದೇವನು
ಕೇಶಮೂಲದಲ್ಲಿ	....	ಸಂಕರ್ಷಣನು
ಶಿರಸ್ಸಿನಲ್ಲಿ	....	ನಾರಾಯಣನು
ಲಲಾಟದ (ಹಣೆಯ)ಲ್ಲಿ	....	ಕೇಶವನು
ಹುಬ್ಬು ಮತ್ತು ಭ್ರೂಮಧ್ಯೆ	....	ನಾರಾಯಣನು
ಎರಡು ಕಪೋಲಗಳಲ್ಲಿ	....	ಸಂಕರ್ಷಣನು
ಮೇಲಿನ ತುಟಿಯಲ್ಲಿ	....	ವಾಸುದೇವನು
ಕೆಳತುಟಿ (ಅಧರೋಷ್ಠ)ಯಲ್ಲಿ	....	ಸಂಕರ್ಷಣನು
ಎರಡು ದಂತ ಪಜ್ತಿಗಳಲ್ಲಿ	....	ಪ್ರದ್ಯುಮ್ನನು
ಕಂಠಕೂಬರದಲ್ಲಿ	....	ಗೋವಿಂದನು
(ಕುತ್ತಿಗೆ)ಯಲ್ಲಿ ಬಲ ಹೆಗಲಿನಲ್ಲೂ	....	ತ್ರಿವಿಕ್ರಮನು
ಎಡ ಹೆಗಲಿನಲ್ಲಿ	....	ಹೃಷೀಕೇಶನು
ಕುತ್ತಿಗೆಯ ಹಿಂಭಾಗದಲ್ಲಿ	....	ದಾಮೋದರನು
ಪೃಷ್ಟ (ಬೆನ್ನು) ಹಿಂಭಾಗದಲ್ಲಿ	....	ಪ್ರದ್ಯುಮ್ನನು

ಬಲ ಬಾಹುವಿನ ಊರ್ಧ್ವ–ಅರ್ಧದಲ್ಲಿ	....	ವಾಸುದೇವನು
,, ಕೆಳಗಿನ ಅರ್ಧದಲ್ಲಿ	....	ಅನಿರುದ್ಧನು
ಎಡ ಬಾಹುವಿನ ಊರ್ಧ್ವ–ಅರ್ಧಭಾಗದಲ್ಲಿ....		ಸಂಕರ್ಷಣನು
,, ಅದರ (ಕೆಳಗಿನ) ಅರ್ಧದಲ್ಲಿ	....	ಪ್ರದ್ಯುಮ್ನನು

ಹಸ್ತದಲ್ಲಿರುವ ರೇಖಾವಿಶೇಷಗಳಲ್ಲಿ ವಾಸುದೇವಾದಿ ನಾಲ್ಕು ರೂಪಗಳಿರುವುವು–(ವಾಸುದೇವ, ಸಂಕರ್ಷಣ, ಪ್ರದ್ಯುಮ್ನಾ, ಅನಿರುದ್ಧ) **ಹಸ್ತದ ಅಂಗುಲಿಗಳಲ್ಲಿ ನಾರಾಯಣಾದಿ ರೂಪಪಂಚಕ ದ್ವಯಗಳು** (ಹತ್ತು ರೂಪಗಳು)–**ಉಗುರುಗಳಲ್ಲೂ** ಅವೇ ಪಂಚಕದ್ವಯ (ಹತ್ತು ರೂಪ)ಗಳು.

ಉರಸ್ಸಿನಲ್ಲಿ	....	ಅನಿರುದ್ಧನು
ಸ್ತನದ್ವಯಗಳಲ್ಲಿ	....	ನೃಸಿಂಹನು
ಉದರದ (ಹೊಟ್ಟೆಯ)ಲ್ಲಿ	....	ನಾರಾಯಣನು
ಬಲ ಕುಕ್ಷಿಯಲ್ಲಿ	....	ವಿಷ್ಣುವು
ಎಡ ಕುಕ್ಷಿ (ಬಗಲು)ಯಲ್ಲಿ	....	ವಾಮನನು
ಗಂಭೀರ ನಾಭಿಯಲ್ಲಿ	....	ನೃಸಿಂಹನು

1. ಲಲಾಟ (ಹಣೆ), 2. ಉದರ (ಹೊಟ್ಟೆ), 3. ಕಂಠ (ಕುತ್ತಿಗೆ) ರೂಪಗಳೇ ಮೂರು ಸ್ಥಾನಗಳಲ್ಲಿರುವ ವಳಿತ್ರಯಗಳಲ್ಲಿ (ತ್ರಿವಳಿಗಳಲ್ಲಿ) 1. ರಾಮ, 2. ಕೃಷ್ಣ, 3. ಕಪಿಲ ದೇವರುಗಳು ಮೂವರು ಕ್ರಮವಾಗಿ ಇರುವರು.

ಬಸ್ತಿ (ತುಂದ) ಕಿಬ್ಬೊಟ್ಟೆಯಲ್ಲಿ	....	ನೃಸಿಂಹನು
ವೃಷಣದಲ್ಲಿ	....	ವಾಸುದೇವನು
ಕಟಿ ಪ್ರದೇಶ (ಸೊಂಟ)ದಲ್ಲಿ	....	ನಾರಾಯಣನು
ಊರುದ್ವಯ (ಎರಡು ತೊಡೆ)ಗಳಲ್ಲಿ		ಪ್ರದ್ಯುಮ್ನನು
ಅಂಗುಲಿದ್ವಯಗಳಲ್ಲಿ	....	ಸಂಕರ್ಷಣನು

ಪಾದರೇಖಾ ವಿಶೇಷಗಳಲ್ಲಿ ವಾಸುದೇವಾದಿ ನಾಲ್ಕು ರೂಪಗಳೂ,

ಪಾದಾಂಗುಲಿ (ಬೆರಳು)ಗಳಲ್ಲಿ ನಾರಾಯಣಾದಿ ರೂಪ ಪಂಚಕ ದ್ವಯ (ಹತ್ತು ರೂಪ)ಗಳೂ,

ನಖ (ಕಾಲಿನ ಪಾದದ ಉಗುರು)ಗಳಲ್ಲಿಯೂ ಅವೇ (ಹತ್ತು) ರೂಪ ಪಂಚಕ ದ್ವಯಗಳು ಇರುವುವು.

ಮೂರುವರೆ ಕೋಟಿ ಸಂಖ್ಯಾಕಗಳಾದ ರೋಮಗಳ		ಅಷ್ಟೇ ಮೂರುವರೆ ಕೋಟಿ ಸಂಖ್ಯಾಕ ಪ್ರದ್ಯುಮ್ನ ರೂಪಗಳು
ತ್ವಕ್ಕಿನಲ್ಲಿ	....	ಸಂಕರ್ಷಣನು
ಚರ್ಮದಲ್ಲಿ	....	ನಾರಾಯಣನು
ಮಾಂಸದಲ್ಲಿ	....	ವರಾಹನು
ರುಧಿರ (ರಕ್ತ)ದಲ್ಲಿ	....	ನಾರಾಯಣನು
ಮೇದಸ್ಸಿನಲ್ಲಿ	....	ಅನಿರುದ್ಧನು
360 ಸಂಖ್ಯೆಯ ಮಜ್ಜಾಗಳಲ್ಲಿ		ಅಷ್ಟೇ 360 ಸಂಖ್ಯೆಯ ಸಂರ್ಷಣ ರೂಪಗಳು
360 ಸಂಖ್ಯಾಕ ಅಸ್ಥಿ (ಮೂಳೆ) ಗಳಲ್ಲಿ		ಅಷ್ಟೇ ಸಂಖ್ಯೆಯ 360 ಅನಿರುದ್ಧ ರೂಪಗಳು
360 ಸಂಖ್ಯೆಯ ಪರ್ವ (ಗೆಣ್ಣು) ಗಳಲ್ಲಿಯೂ		ಅಷ್ಟೇ 360 ರಂಖ್ಯೆಯ ಅನಿರುದ್ಧ ರೂಪಗಳು

(a) ಪಂಚ ಕೋಶಗಳಲ್ಲಿ ಭಗವದ್ರೂಪಗಳು

1. ಅನ್ನಮಯ ಕೋಶದಲ್ಲಿ	....	ಅನಿರುದ್ಧನು
2. ಪ್ರಾಣಮಯ ಕೋಶದಲ್ಲಿ	....	ಪ್ರದ್ಯುಮ್ನನು
3. ಮನೋಮಯ ಕೋಶದಲ್ಲಿ	....	ಸಂಕರ್ಷಣನು
4. ಜ್ಞಾನಮಯ ಕೋಶದಲ್ಲಿ	....	ವಾಸುದೇವನು
5. ಆನಂದಮಯ ಕೋಶದಲ್ಲಿ	....	ನಾರಾಯಣನು

****

(b) ತತ್ವಗಳಲ್ಲಿ ಭಗವದ್ರೂಪಗಳು

1. ಅವ್ಯಕ್ತ ತತ್ವದಲ್ಲಿ .... ನಾರಾಯಣನು
2. ಸಾತ್ವಿಕ, ರಾಜಸ, ತಾಮಸ ಗುಣತ್ರಯಗಳಲ್ಲಿ .... ವಿಶ್ವಾದಿತ್ರಯ (ವಿಶ್ವ, ತೈಜಸ, ಪ್ರಾಜ್ಞ,) ಅನಿರುದ್ಧಾದಿತ್ರಯ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷ
3. ಮಹತ್ತತ್ವದಲ್ಲಿ .... ವಾಸುದೇವನು
4. ಅಹಂಕಾರತತ್ವದಲ್ಲಿ .... ಸಂಕರ್ಷಣನು
5. ವಿಜ್ಞಾನತತ್ವದಲ್ಲಿ .... ಪ್ರದ್ಯುಮ್ನನು
6. ಮನಸ್ತತ್ವದಲ್ಲಿ .... ಅನಿರುದ್ಧನು

(c) ಪಂಚಭೂತಗಳಲ್ಲಿ ಭಗವದ್ರೂಪಗಳು

1. ಆಕಾಶದಲ್ಲಿ .... ನಾರಾಯಣನು
2. ವಾಯುವಿನಲ್ಲಿ .... ವಾಸುದೇವನು
3. ತೇಜಸ್ಸಿನಲ್ಲಿ .... ಸಂಕರ್ಷಣನು
4. ಆಪ (ನೀರು)ಗಳಲ್ಲಿ .... ಪ್ರದ್ಯುಮ್ನನು
5. ಪೃಥಿವಿಯಲ್ಲಿ .... ಅನಿರುದ್ಧನು

(d) ಮನಃ ಪ್ರಭೇದಗಳಾದ

1. ಮನಸ್ಸಿನಲ್ಲಿ .... ಅನಿರುದ್ಧನು
2. ಬುದ್ಧಿಯಲ್ಲಿ .... ಪ್ರದ್ಯುಮ್ನನು
3. ಅಹಂಕಾರದಲ್ಲಿ .... ಸಂಕರ್ಷಣನು
4. ಚಿತ್ತದಲ್ಲಿ .... ವಾಸುದೇವನು
5. ಚೇತನದಲ್ಲಿ .... ನಾರಾಯಣನು

(e) ಪಂಚವಿಧ ಮನೋಗೋಳಕವಾದ

1. ಹೃದಯದಲ್ಲಿ .... ಮಾಧವನು
2. (ದಕ್ಷಿಣ) ಬಲಗಣ್ಣಿನಲ್ಲಿ .... ಪ್ರದ್ಯುಮ್ನನು
3. (ವಾಮ) ಎಡಗಣ್ಣಿನಲ್ಲಿ .... ಅನಿರುದ್ಧನು

4. ಆ ಕಣ್ಣುಗಳ ಎರಡರ ಗೋಳಕದಲ್ಲಿ	ಕಪಿಲನು
5. ಎರಡು ಕಣ್ಣುಗಳಲ್ಲಿರುವ ಶುಕ್ಲದ್ವಯುಗಳಲ್ಲಿ	ರಾಮನು
6. ಕೃಷ್ಣ (ಕಪ್ಪು ಗುಡ್ಡಿನಲ್ಲಿ)	ಕೃಷ್ಣನು
7. ಕಾನೀನಿಕ (ಕಣ್ಣಿನ ಪಾಪ)ದಲ್ಲಿ	ಕಪಿಲನು
8. ಶ್ರೋತ್ರೇಂದ್ರಿಯುದಲ್ಲಿ	ವಾಸುದೇವನು
9. ಶ್ರೋತ್ರೇಂದ್ರಿಯು ಗೋಳಕಗ ಳೆರಡರಲ್ಲಿ	ಅನಿರುದ್ಧನು
10. ಘ್ರಾಣೇಂದ್ರಿಯುದಲ್ಲಿ	ಪ್ರದ್ಯುಮ್ನನು
11. ,, ಗೋಳಕದಲ್ಲಿ	ನೃಸಿಂಹನು
12. ರಸನೇಂದ್ರಿಯುದ (ನಾಲಗೆ)ಯಲ್ಲಿ	ಸಂಕರ್ಷನು
13. ಇದರ ಗೋಲಕ ಮತ್ತು ಜಿಹ್ವಾ ಮೂಲದಲ್ಲಿ ಸಹ	ಸಂಕರ್ಷಣನು
14. ತ್ವಗಿಂದ್ರಿಯುದಲ್ಲಿ	ಸಂಕರ್ಷಣನು
,, ಗೋಳಕ ಮತ್ತು ಚರ್ಮಲ್ಲಿ	ನಾರಾಯಣನು
15. ವಾಗಿಂದ್ರಿಯುದಲ್ಲಿ	ವಾಸುದೇವನು
,, ಗೋಳಕ ಮತ್ತು ಮುಖದಲ್ಲಿ	ಭಾರ್ಗವರಾಮನು
16. ಪಾಣೀಂದ್ರಿಯುದಲ್ಲಿ	ವಾಸುದೇವ – ಸಂಕರ್ಷಣ ರಿಬ್ಬರೂ
17. ಇದರ ಗೋಳಕ ಮತ್ತು ಎರಡು ಹಸ್ತ(ದ್ವಯು)ಗಳಲ್ಲಿ	ವಾಸುದೇವ– ಸಂಕರ್ಷಣರು
18. ಪಾದೇಂದ್ರಿಯುದಲ್ಲಿ	ಸಂಕರ್ಷಣನು
19. ಇದರ ಗೋಳಕ ಮತ್ತು ಪಾದ ದ್ವಯುಗಳಲ್ಲಿ	ಸಂಕರ್ಷಣನು
20. ಪಾಯು ಇಂದ್ರಿಯ	ಪ್ರದ್ಯುಮ್ನನು
21. ಪಾಯು ಗೋಳಕ ಮತ್ತು ಗದದಲ್ಲಿ....	ವಾಸುದೇವನು
22. ಉಪಸ್ಥೆಯಲ್ಲಿ	ನಾರಾಯಣನು
23. ಇದರ ಗೋಳಕ ಮತ್ತು ಮೇಂಢ್ರದಲ್ಲಿ	ವಾಸುದೇವನು
24. ಸರ್ವ ಶರೀರವಲ್ಲೂ	"ಶರೀರ"ವೆಂಬ ಹೆಸರುಳ್ಳ (ಭಗವಂತನು) ಹರಿಯು

ಚೇಷ್ಟಾದಿ ವ್ಯಾಪಾರಗಳನ್ನು ಮಾಡಲು ವಾಸುದೇವನು ಬ್ರಹ್ಮವಾಯು ರುಗಳ ಜೊತೆಯಲ್ಲಿ ಮಸ್ತಕ ಸೀಮಾನವನ್ನು ಸೀಳಿಕೊಂಡು ಬ್ರಹ್ಮನಾಡಿಯು ರಂಧ್ರದ ದ್ವಾರಾ ಶರೀರವನ್ನು ಪ್ರವೇಶಿಸಿ, ಅಲ್ಲಿಯೇ ದ್ವಾರ ದೇಶದಲ್ಲಿ ಆರು ಕಮಲದಮೇಲೆ ಸ್ವಯಂ ತಾನು ಸ್ಥಿತನಾಗಿ, ಪುನಃ ಮೂರ ರೂಪಗಳಿಂದ ಕೆಳಗಡೆ (ಅಧಃ) ಪ್ರವೇಶ ಮಾಡಿ, ಅಲ್ಲಿ ಅನಿರುದ್ಧ ರೂಪದಿಂ ಕಣ್ಣುಗಳಲ್ಲೂ, ಪ್ರದ್ಯುಮ್ನ ರೂಪದಿಂದ ಮನಸ್ಸಿನಲ್ಲೂ ಸಂಕರ್ಷಣ ರೂಪ ದಿಂದ ಹೃದಯದಲ್ಲೂ ಸ್ಥಿತನಾಗಿ, ಕ್ರಮವಾಗಿ (ಜಾಗ್ರತ, ಸ್ವಪ್ನ, ಸುಷುಪ್ತಿ ಗಳೆಂಬ) ಅವಸ್ಥಾತ್ರಯದಲ್ಲಿ ಚೇಷ್ಟೆ ಮಾಡುತ್ತಾನೆಂದು ತಿಳಿಯುವುದು.

ಇಲ್ಲಿ ಸರ್ವತ್ರ ಎಲ್ಲೆಲ್ಲಿ ಧಾರಕನು, ಪೋಷಕನು, ಚೇಷ್ಟಕನು ಎಂಬುವೇ ಮೊದಲಾದ ಬಹುರೂಪಗಳು ಪ್ರತ್ಯೇಕ ಪ್ರತ್ಯೇಕವಾಗಿ ಹೇಳಲ್ಪ ಡುತ್ತದೆಯೋ, ಅಲ್ಲಲ್ಲಿ ಒಂದೊಂದು ರೂಪದಿಂದಲೇ ಲೀಲೆಯಿಂದ ಧಾರ ಣಾದಿ ಅನೇಕ ವ್ಯಾಪ್ಯಾರವನ್ನು ಮಾಡುತ್ತಾನೆ.

ಎಲ್ಲಿ ಪುನಃ ದ್ವಯವೆಂದು ಹೇಳಲ್ಪಡುತ್ತದೆಯೋ ಅಲ್ಲಿ ಆ ರೂಪ ದ್ವಯಗಳೇ ಧಾರಣ ಪೋಷಣೆಗಳಂತೆ ಚೇಷ್ಟಾದಿ ಸರ್ವ ವ್ಯಾಪಾರಗಳನ್ನೂ ಮಾಡುತ್ತಾನೆ. ಎಲ್ಲಿ ಧಾರಕವನ್ನೊಂದನ್ನೇ ನಿರೂಪಿಸುತ್ತದೆಯೋ ಅಲ್ಲಿ ಅದೊಂದನ್ನೇ ಧಾರಣಾದಿ ಅನೇತ ಪ್ರಯೋಜನಕ್ಕಾಗಿ ಶರೀರವನ್ನು ಪ್ರವೇಶಿಸಿ ಲೀಲಾದಿಂದಲೇ, ಅಸಾಯಾಸವಾಗಿ ತನ್ನನ್ನು ಬಹುಧಾ ವಿಭಾಗ ಮಾಡಿ, ಅನಂತರೂಪಗಳಿಂದ ಪರಮಾಣು ಪ್ರದೇಶವನ್ನೂ ಸಹ ಬಿಡದೆ, ಅಂಗ ಪ್ರತ್ಯಂಗಗಳೆಲ್ಲದರಲ್ಲೂ ವ್ಯಾಪಿಸಿ ಸ್ಥಿತನಾಗಿದ್ದಾನೆಂದು ತಿಳಿಯುವುದು. ಹಾಗೆ ಇದ್ದಾಗ್ಯೂ ತನ್ನ ವೇಶವು ಆದನಂತರ ಬ್ರಹ್ಮಾದಿ ದೇವತೆಗಳನ್ನು ಯಥಾ ಯಥವಾಗಿ “ನೀವೂ ದೇಹದಲ್ಲಿ ಪ್ರವೇಶಿಸಿರಿ.” ಎಂದು ಆಜ್ಞೆ ಮಾಡಿದನು. ಅವರೂ ಹಾಗೆಯೇ ಮಾಡಿದರೆಂಬುದು ಆಶ್ಚರ್ಯವು !

VII ದೇಹದಲ್ಲಿ ದೇವತೆಗಳ ಪ್ರವೇಶ (ತತ್ವಗಳಲ್ಲಿ)

ಅಲ್ಲಿ ಬ್ರಹ್ಮ ವಾಯುರೂ, ಸರಸ್ವತೀ ಭಾರತೀ ದೇವಿಯರೂ ಸಹ ಅವಿಶೇಷೇಣ (ವಿಶೇಷಣವೇನೂ ಇಲ್ಲದಂತೆ) ಸರ್ವತ್ರ ಪ್ರವೇಶಿಸಿದರು.

ದೇಹದಲ್ಲಿ ರುದ್ರನು ಸ್ವಾಯಂಭುವ ಮನುವೂ, ಪ್ರಾಣ, ಅಪಾನ, ವ್ಯಾನೋದಾನ ಸಮಾನಗಳಲ್ಲಿ ಮುಖ್ಯ ವಾಯುವು ಕ್ರಮವಾಗಿ ಪಂಚರೂಪ ದಿಂದ ಪ್ರಾಣನಲ್ಲಿ ಪ್ರಾಣನೂ ಅಪಾನನಲ್ಲಿ ಅಪಾನನೂ ಇತ್ಯಾದಿ ರೂಪ ದಿಂದಲೂ, ಗುಣತ್ರಯದಲ್ಲಿ ಬ್ರಹ್ಮ, ರುದ್ರ, ಸ್ಕಂದರೂ ಅವರ ಪತ್ನಿಯರು ಗಳೂ ಪ್ರವೇಶಿಸುವರು.

ಮಹತ್ತತ್ವದಲ್ಲಿ .... ಬ್ರಹ್ಮವಾಯುರೂ, ಸರಸ್ವತೀ ಭಾರತೀ ದೇವಿಯರೂ

ಅಹಂಕಾರತತ್ವದಲ್ಲಿ .... ರುದ್ರ, ಶೇಷ, ಗರುಡರು

ಬುದ್ಧಿ ತತ್ವದಲ್ಲಿ .... ಉಮಾ, ವಾರುಣೀ, ಸೌಪರ್ಣಿಯರು

ಮನಸ್ತತ್ವದಲ್ಲಿ .... ಇಂದ್ರ, ಕಾಮ, ಅನಿರುದ್ಧರು

ಇಂದ್ರಿಯಗಳ ಮಧ್ಯದಲ್ಲಿ

1. ಜ್ಞಾನೇಂದ್ರಿಯಗಳಲ್ಲಿ .... ಉಮಾದೇವಿಯು
2. ಕರ್ಮೇಂದ್ರಿಯಗಳಲ್ಲಿ .... ಅಹಂಕಾರಿಕ ಪ್ರಾಣನು
1. ಅಲ್ಲಿ ಮನಸ್ಸಿನಲ್ಲಿ .... ಬ್ರಹ್ಮವಾಯುರೂ, ಗರುಡ, ಶೇಷ, ರುದ್ರ, ಇಂದ್ರ, ಚಂದ್ರ, ವರುಣರು

(a) ಜ್ಞಾನೇಂದ್ರಿಯಗಳು

2. ಶ್ರೋತ್ರದಲ್ಲಿ (ಕಿವಿಗಳಲ್ಲಿ) .... ಚಂದ್ರ, ವರುಣ, ಮಿತ್ರ, ಕುಬೇರರು
3. ಕಣ್ಣುಗಳಲ್ಲಿ (ಚಕ್ಷುಃಸುಗಳಲ್ಲಿ) .... ಸೂರ್ಯನು
4. ಸರನದ (ನಾಲಿಗೆಯ)ಲ್ಲಿ .... ವರುಣನು
5. ಘ್ರಾಣ (ಮೂಗಿನಲ್ಲಿ) .... ಇಬ್ಬರು ಅಶ್ವಿನಿ ದೇವತೆಗಳು
6. ತ್ವಕ್ (ಚರ್ಮದ)ಲ್ಲಿ .... ವಾಯುಸುತ ಮರುತ್

(b) ಕರ್ಮೇಂದ್ರಿಯಗಳು

1. ವಾಕ್ (ವಾಚಿ)ನಲ್ಲಿ .... ಅಗ್ನಿಯು
2. ಕೈಗಳಲ್ಲಿ .... ವಾಯುಸುತ ಮರುತ್ ಮತ್ತು ದಕ್ಷನು

3. ಪಾದಗಳೆರಡರಲ್ಲಿ .... ಜಯಂತ, ಶಚೀಪುತ್ರರಾದ ಯಜ್ಞ ಮತ್ತು ಶಂಭುವು
4. ಪಾಯುವಿನಲ್ಲಿ .... ಮಿತ್ರ, ಯಮರು
5. ಉಪಸ್ಥದಲ್ಲಿ .... ಶಿವ ಮತ್ತು ಸ್ವಾಯಂಭುವ ಮನುವು

ದೇಹದ ಪಂಚಭೂತಗಲ್ಲಿ

1. ಆಕಾಶ .... ವಿನಾಯಕ
2. ವಾಯು .... ವಾಯುಸುತ ಮರೀಚಿಯು
3. ಅಗ್ನಿ .... ಪಾವಕಾಖ್ಯ ಅಗ್ನಿಯು
4. ಆಪಗಳಲ್ಲಿ .... ವರುಣನು
5. ಪೃಥಿವಿಯಲ್ಲಿ .... ಧರಾದೇವಿಯು

ಇಲ್ಲಿ ಪುಷ್ಕರಾದಿಗಳಿಗೂ ಪ್ರಾಣಾಂತ ದೇವತೆಗಳಿಗೂ ಈ ಎಲ್ಲ ದೇವತೆಗಳಿಗೂ ಸರ್ವತ್ರದಲ್ಲಿ ಸ್ಥಿತಿಯು ಇದ್ದಾಗ್ಯೂ (ಬುದ್ಧ್ಯಾರೋಹಕ್ಕಾಗಿ) ಬುದ್ಧಿಯಲ್ಲಿ ಜ್ಞಾಪಕದಿಂದ ನಿಲ್ಲಲು, ಅಲ್ಲಲ್ಲಿ ಇವರ ವಿಶಿಷ್ಯ ಉಕ್ತಿಯು ಎಂದು ತಿಳಿಯುವುದು.

ಹೀಗೆ ಭಗವಂತನು ಭಾಗವತ ಧರ್ಮ, ಜ್ಞಾನ, ಫಲ ಕರ್ತನಾದ ಜೀವನನ್ನು ಪ್ರಾರಂಭಿಸಿ ಬ್ರಹ್ಮದೇವರ ಪರ್ಯಂತ, ದ್ರವ್ಯಸ್ವಾತಂತ್ರ್ಯ, ವಿಜ್ಞಾನ ಪ್ರಯತ್ನಾದಿ ತಾರತಮ್ಯಾನುಸಾರವಾಗಿ, ಉತ್ತರೋತ್ತರವಾಗಿ, ಅಧಿಕ ಸಮೀಚೀನ ಫಲವನ್ನು ಕೊಡಲು, ಶರೀರದಲ್ಲಿ (i) ಬ್ರಹ್ಮಾದಿ ದೇವತೆಗಳನ್ನು ಪ್ರವೇಶಮಾಡಿಸಿ, ಹಾಗೆಯೇ ಅದಕ್ಕೆ ವಿರುದ್ಧವಾದ ವಿಪರೀತ ಫಲಗಳನ್ನು (ii) ಉತ್ತರೋತ್ತರವಾಗಿ ಅಧಿಕವಾಗಿ ಕೊಡಲು ಕಲಿಯೇ ಮೊದಲಾದ ದೈತ್ಯರುಗಳನ್ನು ಶರೀರದಲ್ಲಿ ಪ್ರವೇಶಮಾಡಲು ಅವರಿಗೂ ಆಜ್ಞೆ ಮಾಡಿದನು.

ಅಲ್ಲಿ ಹೇಗೆ ಬ್ರಹ್ಮಾದಿಗಳು ಮಹತ್ತತ್ವ ಮೊದಲಾದವುಗಳನ್ನು ಪ್ರವೇಶ ಮಾಡಿದರೋ, ಅದರಂತೆಯೇ ದೈತ್ಯರೂ ಸಹ "ದೀನತ್ವಾದ್ದೇವನಾಮಾನಃ" ಎಂಬ ರೀತಿಯಿಂದ ದೀನತ್ವದ ದೆಸೆಯಿಂದ ದೇವತೆಗಳೆನಿಸಿ, ಬ್ರಹ್ಮರುದ್ರ

ಇಂದ್ರರೇ ಮೊದಲಾದ ನಾಮವುಳ್ಳವರಾಗಿ, ಸ್ವಾಂತ (ತಮ್ಮ ಒಳಗೆ) ಸ್ಥಿತ ಗಳಾದ ತತ್ವಗಳಲ್ಲಿ ಯಥಾ ಯಥವಾಗಿ ದೇವತೆಗಳಂತೆಯೇ ಪ್ರವೇಶವನ್ನು ಮಾಡಿದರು.

ಅನಂತರದಲ್ಲಿ ಭಗವಾನ್ ಶ್ರೀಪತಿಯು ವಜ್ರವೈಡೂರ್ಯವೇ ಮೊದ ಲಾದ ನಾನಾಮಣಿ ಸಮೂಹಗಳಿಂದ ಖಚಿತ ಪ್ರತಿಮೆಯಂತೆ, ನಾನಾ ವಿಧ ವರ್ಣಗಳಿಂದ ಉಜ್ವಲಗಳಾದ ತನ್ನ (ಸ್ವ) ಮೂರ್ತಿ ಸಮೂಹ ಖಚಿತವಾದ ಜೀವನ ಶರೀರದಲ್ಲಿ ಬ್ರಹ್ಮಾದಿ ಪುಷ್ಕರಾಂತರಾದ ದೇವತೆಗಳನ್ನೂ ದೇವಾರಿಗಳಾದ ಕಲ್ಯಾದಿ ದೇವನಾಮ ಅಸುರರುಗಳನ್ನೂ ಪ್ರವೇಶಮಾಡಿಸಿ, "ಪ್ರಸವ ಕಾಲ"ವು ಸಮೀಪಿಸುತ್ತಿರಲು, ಜೀವನನ್ನು ಗರ್ಭದ ದೇಶೆಯಿಂದ ಹೊರಕ್ಕೆ ಹೊರಡಿಸಲು ಅಪಾನ ವಾಯುವನ್ನು ಆಜ್ಞೆ ಮಾಡಿದನು. ಅವನಾದರೋ ಆಗಲೇ "**ಸೂತಿವಾತ**"ವೆಂಬ ಹೆಸರಿನ ತನ್ನ ಅಂಶದಿಂದ ಗರ್ಭವನ್ನು ತಾಯಿಯ ಉದರದಿಂದ ಹೊರಕ್ಕೆ ಹೊರಡಿಸಿದನು.

ಆ ವಾಯುವೇಗದಿಂದ ಗರ್ಭದಲ್ಲಿರತಕ್ಕ ಜೀವನು ಗರ್ಭಕೋಶ(ಷ) ವನ್ನು ಬಿಟ್ಟು, ಕ್ರಮವಾಗಿ ಅಧಃ ಅಧಃ ಕೆಳಕ್ಕೆ ಕೆಳಕ್ಕೆ ಹೋಗುತ್ತಾ, ಯೋನಿದ್ವಾರಕ್ಕೆ ಬಂದು ಕಬ್ಬಿಣದ ಗಾಣದಿಂದ ಕಬ್ಬು ಹೊರಕ್ಕೆ ಬರುವಂತೆ ಯೋನಿಯ ದೇಶೆಯಿಂದ ಬಹು ಕಷ್ಟದಿಂದ ಹೊರಕ್ಕೆ ಶ್ರಾಂತನಾಗಿ ಬಂದು ಭೂಮಿಯಲ್ಲಿ ಬಿದ್ದು, ಕ್ಷಣಮಾತ್ರದಿಂದಲೆ ಹೊರಗಿನ **ಬಾಹ್ಯವಾಯುವಿನ** ಸ್ಪರ್ಶದನಂತರ ಸ್ವಲ್ಪ ವಿಶ್ರಾಂತನಾಗಿ, ಚೇತರಿಸಿಕೊಂಡು, ಸಚೇತನನು ಆಗುತ್ತಾನೆ.

ಇದನ್ನು ಹರಿಯ **ದ್ವಿತೀಯ** (ಎರಡನೆಯ) ಜನ್ಮವೆಂದು ಕರೆಯು ತ್ತಾರೆ; ಎಂದರೆ ಈ ಮೊದಲೇ ನಾವು ಹೇಳಿದಂತೆ, ಪೂರ್ವದಲ್ಲಿದ್ದ ಸ್ಥಾನ ದಿಂದ ಸ್ಥಾನಾಂತರವನ್ನು ಕುರಿತು ಹೋದುದರಿಂದ ಹಾಗೆನ್ನುವರೆಂದು ತಿಳಿ ಯುವುದು.

ಈ ರೀತಿಯಾಗಿ ಪಿತೃವಿನ (ತಂದೆಯ) ಅಂತಸ್ಥನಾಗಿ (ಒಳಗಿರುವ) ಭಗವಾನ್ ಪ್ರದ್ಯುಮ್ನನು ಜೀವನಿಗೋಸ್ಕರವಾಗಿ ಕರ್ಮವನ್ನು ಮಾಡುವುದ ಕ್ಕಾಗಿ ಈ ರೂಪವನ್ನು ಇಟ್ಟು, ಪಿತೃವಿನ ಮರಣಾನಂತರದಲ್ಲಿ, ತಂದೆಯು

ಅನ್ಯತ್ರ ಜನಿಸ (ಹುಟ್ಟು)ಲು ಪಿತೃವಿನೊಡನೆ, ಸ್ವಯಂ ತಾನೂ ಜನಿಸು (ಉತ್ಪನ್ನನಾಗು)ತ್ತಾನೆ. ಇದನ್ನು ಭಗವಂತನ **ತೃತೀಯ** (ಮೂರನೆಯ) ಜನ್ಮವೆನ್ನುತ್ತಾರೆ. ಎಂದು ಈ ರೀತಿಯಾಗಿ ಅನುಸಂಧಾನವನ್ನು ಮಾಡ ಬೇಕು.

ಆದುದರಿಂದಲೇ ಜ್ಞಾನಿಗಳೂ, ಬಾಂಧವರೂ, ಪೃಥಿವಿಯಲ್ಲಿ ಪುತ್ರ ಜನ್ಮವನ್ನು ಕೇಳಿ, ಪರಮ **ಸಂಭ್ರಮದಿಂದ** ವಾದ್ಯಘೋಷಣೆಗಳಿಂದಲೂ, ಗೋ, ಭೂ, ವಸ್ತ್ರ ಅಲಂಕಾರ, ದಕ್ಷಿಣಾದಿಗಳಿಂದ ಸಂತುಷ್ಟರಾದ ವಿಪ್ರೋತ್ತಮರ ಆಶೀರ್ವಚನಗಳಿಂದಲೂ, ಅಕ್ಷತ ಲಾಜಾ, ಮುತ್ತೈದೆಯರಿಗೆ ಬ್ರಾಹ್ಮಣರಿಗೆ ಅರಿಸಿನ ಕುಂಕುಮ, ಫಲ ಪುಷ್ಪಾದಿಗಳಿಂದಲೂ, ನೀರಾಜನ, ಆರತಿ, ಅಕ್ಷತೆ, ಮೇಳ, ತಾಳ, ವಾದ್ಯ ಗಾನಾದಿ ವೈಭವದಿಂದಲೂ **ಮಹೋತ್ಸವವನ್ನು** ಮಾಡುತ್ತಾರೆ.

ಅಜ್ಞ ಜನರಾದರೋ ಕೇವಲ ಪುತ್ರಜನ್ಮವೆಂದು ಮಾತ್ರ ತಿಳಿದು ಶಿಷ್ಟಾಚಾರ ಸಂಪರಾ ಪ್ರಾಪ್ತವಾದುದರಿಂದ ತಮ್ಮ ಪೂರ್ವಿಕರ ಪದ್ಧತಿಯನ್ನು ಅನುಸರಿಸಿ **ಉತ್ಸವವನ್ನು** (ಜನ್ಮ ದಿನ – ಹುಟ್ಟಿದ ಹಬ್ಬದ ಜಾತಕರ್ಮ ನಾಮಕರಣ ಮೊದಲಾದುವನ್ನು) ಮಾಡುತ್ತಾರೆ.

ಇಲ್ಲಿ ಕೇವಲ ಭಗವಂತನು ಸ್ವಯಮೇವ ಹುಟ್ಟಿದನು. ಇನ್ನು ತನ್ನ (ಸ್ವ)ಪೂಜೆಯೆಂಬ **ಪುರುಷಾಖ್ಯ ಯಜ್ಞವನ್ನು** ಉತ್ಪಾದನೆ ಮಾಡಿದ ಮೇಲೆ ಇನ್ನು ಬೇರೆ ಪೂಜೆ ಅಥವ ಯಜ್ಞವೆಂದರೇನು? ಆದುದರಿಂದ ತನ್ನಲ್ಲಿ ಭಗವತ್ಪೂಜಾತ್ಮಕವಾದ ಯಜ್ಞರೂಪತ್ವವನ್ನೂ ಸಹ ಅನುಸಂಧಾನ ಮಾಡಬೇಕು. ಅದು ಹೇಗೆಂದರೆ —

ಇದು ಪುರುಷ ಯಜ್ಞ ಸಾಮಾನ್ಯವಾದದು. ಪ್ರಸಿದ್ಧ ಯಜ್ಞದಲ್ಲಿ ಯಜ್ಞಾರಂಭದ **ಪೂರ್ವ**ಕಾಲದಲ್ಲಿ, ದೇವತಾ **ಸೋಮಾಭಿಷವಣಕ್ಕೆ ಪೂರ್ವ**ದಲ್ಲಿ "**ಸೋಷ್ಯತೀ**" ಎಂದು ವ್ಯವಹಾರವು. ಅಭಿಷಣವ ಅನಂತರದಲ್ಲಿ "**ಅಸೋಷ್ಟಿ**" ಎಂತಲೂ ವ್ಯವಹಾರವು. **ಸವನತ್ರಯವೂ**, ಅವುಗಳ ದೇವತೆಗಳೂ ಕ್ರಮವಾಗಿ **ವಸು, ರುದ್ರ, ಆದಿತ್ಯಾಖ್ಯ**ರೆಂದು

ಇರುವರು. ಅವರೆಲ್ಲರೂ **ಪುರುಷಯಜ್ಞ**ದಲ್ಲಿ ಪುರುಷೋತ್ಪತ್ತಿಯ ಪೂರ್ವ ಕಾಲಕ್ಕೆ **ನಾರಾಯಣನು** ದೇವತೆಯು. ತಂದೆಯ ಶರೀರದ ದೆಶೆಯಿಂದ ತಾಯಿಯ ಉದರವನ್ನು ಪ್ರವೇಶಿಸಿ ಪುರುಷನು ಹುಟ್ಟುವನೆಂಬ ಯಾವ ವ್ಯವಹಾರವು ಇದೆಯೋ ಅದೇ "**ಸೋಷ್ಯತಿ**" ಎಂಬ ವ್ಯವಹಾರವು. ತಾಯಿಯ ದೆಶೆಯಿಂದ ಉತ್ಪತ್ತಿಯಾಗಲು ಯಾವನು ಜನಿಸಿದನು ಎಂದು ವ್ಯವಹಾರವೋ ಅದೇನೇ "**ಸೋಷ್ಟೀ**" ಎಂಬ ವ್ಯವಹಾರವು. ಪುರುಷನಿಗೆ ನೂರು ವರ್ಷವು ಆಯುಸ್ಸು. ಅದಕ್ಕೆ ಸ್ವಲ್ಪ ಪಳಗಳಾಧಿಕ ಇಪ್ಪತ್ತು ಘಳಿಗೆ ಅಧಿಕ, ಹತ್ತು ದಿನಾಧಿಕ, ದಶಮಾಸಾತ್ಮಕ, ವಿಕ್ಷೆಯಿಂದ **ನೂರ ಹದಿನಾರು** (೧೧೬) ವರ್ಷಗಳಾಗುವುವು. ಅದರಲ್ಲೂ ಮೂರು ಭಾಗವಿರುವುದು.

1. ಮೊದಲನೆಯದು 24 (ಇಪ್ಪತ್ತು ನಾಲ್ಕು) ವರ್ಷಾತ್ಮಕವಾದುದು ಅದರ ಆಚೆ 44 (ನಲವತ್ತು ನಾಲ್ಕು) ವರ್ಷಾತ್ಮಕವಾದುದು ಇನ್ನೊಂದು. ಅದೂ ಆದಮೇಲೆ ತದನಂತರ 48 (ನಲವತ್ತೆಂಟು) ವರ್ಷಾತ್ಮಕವಾದ ಕಾಲವು ಮತ್ತೊಂದು. (ಹೀಗೆ 24 – 44 – 48 ಒಟ್ಟು 116.) (1) ಪ್ರಸಿದ್ಧ ಯಜ್ಞದಲ್ಲಿ **ಪ್ರಾತಃ ಸವನ**ವೆಂಬುದು ಇಪ್ಪತ್ತು ನಾಲ್ಕು ಅಕ್ಷರಗಳಿಂದ ಕೂಡಿದ ಗಾಯತ್ರಿ ಛಂದಸ್ಕ ಮಂತ್ರಗಳು. ಇವನೂ ಸಹ ಇಪ್ಪತ್ತು ನಾಲ್ಕು ವರ್ಷಾತ್ಮಕ ಕಾಲದಿಂದ ಕೂಡಿದ ಪ್ರಥಮ ಭಾಗವಾದ **ಪ್ರಾತಃಸವನವು**, ಅದಕ್ಕೆ ವಾಸುದೇವನು ಮುಖ್ಯ ದೇವತೆಯು. ತತ್ಪ್ರೇಶರುಗಳೇ ಯೋಗ್ಯಪ್ರಾಣಿ ಸಮೂಹವನ್ನು ಸುಖದಿಂದ ವಾಸಿಸುವಂತೆ ಮಾಡುತ್ತಾರಾದ್ದರಿಂದ **ವಸುನಾಮಕರು** ಅವಾಂತರ ದೇವತೆಗಳು.

2. ಹಾಗೆಯೇ ಪ್ರಸಿದ್ಧ ಯಜ್ಞದಲ್ಲಿ **ಮಾಧ್ಯಂದಿನ ಸವನವು** ನಲವತ್ತುನಾಲ್ಕು (44) ಅಕ್ಷರಾತ್ಮಕ **ತ್ರಿಷ್ಟುಪ್** ಛಂದಸ್ಕ ಮಂತ್ರದಿಂದ ಕೂಡಿದ್ದು. ಇದೂ ಕೂಡ 44 (ನಲವತ್ತುನಾಲ್ಕು) ವರ್ಷಾತ್ಮಕ ಕಾಲದಿಂದ ಕೂಡಿದುದು. ಎಂದು ಯಾವ ಮಧ್ಯಮ ಭಾಗವೋ ಅದು **ಮಾಧ್ಯಂದಿನ ಸವನವು.** ಅದಕ್ಕೆ ಸಂಕರ್ಷಣನು ಮುಖ್ಯ ದೇವತೆಯು. ತತ್ಪ್ರೇಶರೇ ಯೋಗ್ಯ ಜನರನ್ನು ರೋದನವುಳ್ಳವರನ್ನಾಗಿ ರೋದಿಸುವಂತೆ ಮಾಡುತ್ತಾರೆ. ಆದುದರಿಂದ ರುದ್ರನಾಮಕರು ಅವಾಂತರ ದೇವತೆಗಳು.

3. ಹಾಗೆಯೇ ಪ್ರಸಿದ್ಧ ಯಜ್ಞದಲ್ಲಿ ಸಾಯಂ ಸವನದಲ್ಲಿ 48 ನಲವತ್ತೆಂಟು ಅಕ್ಷರಗಳಿಂದ ಕೂಡಿದ **ಜಗತೀ ಛಂದಸ್ಕ** ಮಂತ್ರದಿಂದ **ಕೂಡಿದ್ದು ತೃತೀಯ** (ಮೂರನೆಯ) ಸವನವು.

ಈ ಪುರುಷಯಜ್ಞದಲ್ಲಿಯೂ ಸಹ 48 (ನಲವತ್ತೆಂಟು) ವರ್ಷದಿಂದ ಕೂಡಿದ ಕಾಲವು ಕೊನೆಯ ಚರಮ ಭಾಗವಾದ ತೃತೀಯ (ಮೂರನೆಯ) ಸವನವೆನಿಸಿದೆ. ಅದಕ್ಕೆ **ಪ್ರದ್ಯುಮ್ನನು** ಮುಖ್ಯ ದೇವತೆಯು. **ತತ್ವೇಶರೇ** ದಾನಾದಿಗಳನ್ನು ಮಾಡಿಸುವುದರಿಂದ **ಆದಿತ್ಯನಾಮಕರಾದ** ಅವಾಂತರ ದೇವತೆಗಳು.

ಪ್ರಸಿದ್ಧ ಯಜ್ಞದಲ್ಲಿ ಸವನತ್ರಯದಲ್ಲಿ ಆಯಾಯ ದೇವತೆಗಳಾದ **ವಸು** ಮೊದಲಾದವರು ಯಜಮಾನರಿಂದ **ಪ್ರಾರ್ಥಿತರಾಗಿ** ತಮ್ಮ ತಮ್ಮ ಅಧಿಷ್ಠಿತ ಕಾಲಗಳಲ್ಲಿ ಬಂದ ವಿಘ್ನಗಳನ್ನೆಲ್ಲಾ ನಿವಾರಿಸಿ, ಪರಿಹಾರ ಮಾಡಿ, ಯಜ್ಞವನ್ನು ಸಮಾಪನೆ ಮಾಡುತ್ತಾರೆ. ಇಲ್ಲಿಯೂ ಸಹ ತಮ್ಮ ತಮ್ಮಿಂದ ಅಧಿಷ್ಠಿತಗಳಾದ ಕಾಲದಲ್ಲಿ ಎಂದರೆ **ಪ್ರಾತಃ ಸವನದಲ್ಲಿ** "ಭೋ **ವಸುಗಳೇ,** ನೀವು ವಿಷ್ಣುಪೂಜಾತ್ಮಕ ಯಜ್ಞರೂಪನಾದ ನನಗೆ ಜ್ವರಾದಿ ಉಪದ್ರವಗಳಿಂದ ಹೇಗೆ ಲೋಪವಾಗದಂತೆ ನಡೆಯಬೇಕೋ ಹಾಗೆ ಇಪ್ಪತ್ತು ನಾಲ್ಕು ವರ್ಷಗಳ ಪರ್ಯಂತವಾಗಿ ಸಂರಕ್ಷಣೆ ಮಾಡಿರಿ. ಭಗವದ್ಭಕ್ತರಾದ, ಭಾಗವತರಾದ ನಿಮ್ಮ ಆಧಿಪತ್ಯದಲ್ಲಿ ಪೂಜೆಯ ವಿಚ್ಛೇದವಾಗುವುದು ಉಚಿತವಲ್ಲವು." ಎಂಬೀರೀತಿಯಲ್ಲಿ ಪ್ರಾರ್ಥಿತರಾದ "**ವಸು**" ನಾಮಕರಾದ ತತ್ವೇಶರು ರಕ್ಷಿಸುತ್ತಾರೆ.

ಇದೇ ರೀತಿಯಾಗಿಯೇ ಮುಂದಿನ ಉತ್ತರ ಸವನಗಳೆರಡರಲ್ಲೂ ಪ್ರಾರ್ಥಿತರಾದ, **ರುದ್ರರೂ, ಆದಿತ್ಯರುಗಳೆಂಬ** ತತ್ವೇಶರು ಅಲ್ಲಿ ಆಯಾ ಕಾಲಗಳಲ್ಲಿ ರಕ್ಷಿಸುತ್ತಾರೆ.

ಮತ್ತಾದರೋ ಪ್ರಸಿದ್ಧವಾದ ಯಜ್ಞದಲ್ಲಿ **ದೀಕ್ಷಾ, ಉಪಸದ, ಸ್ತುತ, ಶಸ್ತ್ರದಲ್ಲಿ ದಕ್ಷಿಣಾ, ಅವಭೃತ** ಎಂದು ಆರು (ಷಡಂಗ) ಅಂಗಗಳು ಇರುವುವು. ಅವು ಮುಂದೆ ತೋರಿಸಲ್ಪಟಿದೆ.

ಯಜ್ಞಾನಂತರ ಕಾಲವಲ್ಲಿ ಅನಿರುದ್ಧನು ದೇವತೆಯು. ಯಾವ ಜನ್ಮದಲ್ಲಿ ಈರೀತಿ ಅನುಸಂಧಾನ ಮಾಡಲು ಸಾಮರ್ಥ್ಯವನ್ನು ಈಶ್ವರನು ಕೊಡುತ್ತಾನೆಯೋ ಆ **ಜನ್ಮದಲ್ಲೇ** ಕಳೆದು ಹೋದ ಅಶೇಷ ದೇಹಗಳ ಮತ್ತು ಮುಂದೆ ಬರುವ ಸರ್ವ ಜನ್ಮಗಳಲ್ಲೂ ಹೀಗೆಯೇ ಅನುಸಂಧಾನವನ್ನು ಮಾಡಬೇಕು. ಇದರಿಂದ ಭಗವದ್ಭಕ್ತರ ಸರ್ವ ಜನ್ಮಗಳಲ್ಲೂ ಭಗವತ್ಪೂಜಾತ್ಮಕಗಳೇ ಆಗುವುವು. ಇದರಲ್ಲಿ ಸಂದೇಹವಿಲ್ಲ. (ಪಥಕ VIII ನೋಡಿರಿ)

ಪಥಕ VIII ಪುರುಷಾಯುರ್ಯಜ್ಞವು

ಪ್ರಸಿದ್ಧಯಜ್ಞ	ಪುರುಷಯಜ್ಞ
1. ಸೋಮಾಭಿಷಣ ಪೂರ್ವದಲ್ಲಿ (i) " **ಸೋಷ್ಯತಾ** "	ತಂದೆಯಿಂದ ತಾಯಿಯಲ್ಲಿ ಪ್ರವೇಶಿಸಿ ಹುಟ್ಟುವನೆಂಬುದು ಸೋಷ್ಯತಿ
2. ಅಭಿಷವಣ ಅನಂತರ (ii) ಅಸೋಷ್ಟಿ	ತಾಯಿಯಲ್ಲಿ ಜನಿಸಿದನೆಂಬುದು ಅಸೋಷ್ಟಿ
3. (a) ಪ್ರಾತಃಸವನ. 24 ವರ್ಣದ ಗಾಯತ್ರೀ ಛಂದಸು ಮಂತ್ರ	(a) ಪ್ರಾತಃಸವನ. 24 ವರ್ಷ ಪ್ರಥಮಭಾಗ ಪ್ರಾತಃಸವನ
4. ವಾಸುದೇವನು ಮುಖ್ಯದೇವತೆ	ವಾಸುದೇವನು ಮುಖ್ಯದೇವತೆ
5. ವಸುಗಳು ಅವಾಂತರ ದೇವತೆಗಳು..	ವಸುಗಳು ಅವಾಂತರ ದೇವತೆಗಳು
6. (b) ಮಾಧ್ಯಂದಿನಸವನ	(b) ಮಾಧ್ಯಂದಿನಸವನ
7. 44 ಅಕ್ಷರ ತ್ರಿಷ್ಟುಪ್ ಛಂದಸ್ಸಿನ ಮಂತ್ರಗಳು	44 ವರ್ಷಗಳು ಮಧ್ಯಮ. (2ನೇ ಘಟ್ಟ)
8. ಸಂಕರ್ಷಣ	ಸಂಕರ್ಷಣ
9. ರುದ್ರರು ಅವಾಂತರ ದೇವತೆಗಳು....	ರುದ್ರರು ಅವಾಂತರದೇವತೆಗಳು

(c) ಸಾಯಂಸವನ		(c) ಸಾಯಂಸವನ
10. 48 ವರ್ಣದ ಜಗತೀ ಛಂದಸ್ಸಿದ ಋಜ್ಮಂತ್ರಗಳು	....	48 ವರ್ಣಗಳು
11. ಪ್ರದ್ಯುಮ್ನನು	....	ಪ್ರದ್ಯುಮ್ನನು
12. ಆದಿತ್ಯರು ಅವಾಂತರ ದೇವತೆಗಳು		ಆದಿತ್ಯರು ಅವಾಂತರ ದೇವತೆಗ

3. ದೀಕ್ಷಾ
4. ಉಪಸದನ
5. ಸ್ತುತ
6. ಶಸ್ತ್ರ
7. ದಕ್ಷಣಾ

ಇವುಗಳ ವಿವರವನ್ನು ಮುಂದೆ ವಿವರಿಸಿರುವ "ಆಯುರ್ಯಜ್ಞ" ದಲ್ಲಿ ನೋಡುವುದು

ಎಂದು (ಸಪ್ತ ಸೋಪ್ಯತೀ ಅಪ್ತೋರ್ಯಾಮ ಸಹಿತವಾಗಿ) ಇರುವುದು.

ಭಗವದ್ಭಕ್ತರಿಗೆ ಸರ್ವಜಸ್ಮಾದಿಗಳೂ ಭಗವತ್ಪೂಜಾತ್ಮಕಳಾಗಿರು ವೆಂದು ತಿಳಿಯುವುದು.

ಅವಸ್ಥಾತ್ರಯ ನಿರ್ಣಯ

ಹೀಗೆ ಬಿಂದುರೂಪಿಯಾದ ಹರಿಯು ಎರಡನೆಯ ರೂಪದಿಂದ ಸ್ಥೂ ಶರೀರವನ್ನು ನಿರ್ಮಾಣಮಾಡಿ ಅದರಲ್ಲಿ ಪ್ರವೇಶಿಸಿ ಕಾರ್ಯ ಕಾರಣ ಪ್ರೇರ ರಾದ ಬ್ರಹ್ಮನನ್ನು ಪ್ರಾರಂಭಿಸಿ ಪುಷ್ಕರಾಂತರಾದ ದೇವತೆಗಳನ್ನೂ ಅಂ ದೇವತೆಗಳಿಗೆ ಶತೃಗಳಾದ ದೈತ್ಯರುಗಳನ್ನೂ ಪ್ರವೇಶ ಮಾಡಿಸಿ, ವ್ಯಾಪಾರಾ ಗಳನ್ನು ಮಾಡಿಸಲು ಮೊದಲು ಜಾಗ್ರದಾದಿ ಅವಸ್ಥಾತ್ರಯವನ್ನು ವ್ಯವ ಮಾಡಿರುತ್ತಾನೆ. ಅದರ ಕ್ರಮವು ಹೇಗೆಂದರೆ—

ಪ್ರಾರಂಭದಲ್ಲಿ ಅವಸ್ಥಾತ್ರಯವನ್ನು ಅತಿಕ್ರಮಿಸಿರುವ ಬಿಂಬರೂ ಯಾದ ಹರಿಯು ಲೀಲೆಯಿಂದ ಅವಸ್ಥಾತ್ರಯವನ್ನು ನಿರ್ಮಿಸಲು ಇಚ್ಛಿಸು ತ್ತಾನೆ. ಅದನ್ನು ಅನುಸರಿಸಿ ಬ್ರಹ್ಮಾದಿಗಳಿಗೆ ಇಚ್ಛೆಯು, ಅನಂತರ ಅ

ರುದ್ಧ, ಪ್ರದ್ಯುಮ್ನ, ಸಂಕರ್ಷಣ-ಅಪರ ಪರ್ಯಾಯ–ವಿಶ್ವ, ತೈಜಸ, ಪ್ರಾಜ್ಞಾತ್ಮಕ, ಬಿಂಬ ಗುಣತ್ರಯಯುಕ್ತ, ತದಾತ್ಮಿಕವಾದ ಬುದ್ಧಿಗೂ ಉದ್ಬೋಧವು.

ಅನಂತರ **ಬಿಂಬ** ಗುಣತ್ರಯದ ಸ್ವಕಾರ್ಯಬಿಂಬವಾದ ಬುದ್ಧಿಯನ್ನು **ಅಧಿಷ್ಠಾನ** ಮಾಡಿಕೊಂಡಿರುವ ಬ್ರಹ್ಮಾದಿಗಳ ಅಂಶಗಳ ಜೊತೆಯಲ್ಲಿ ಜೀವನ ಸ್ವರೂಪ ಮನಃ ಪ್ರಭೇದ ಭೂತವಾದ ಬುದ್ಧಿದ್ವಾರಾ ಸ್ಥೂಲ ಮನಃ ಪ್ರಭೇದ ಭೂತವಾದ ಬುದ್ಧಿಯಲ್ಲಿ ಪ್ರವೇಶವು.

ಅದಾದರೋ ಗುಣತ್ರಯೋಪಾದನಕತ್ವದಿಂದ ಗುಣತ್ರಯ ರೂಪವಾಗಿರುವುದು. ಅದಕ್ಕೂ ತನಗೆ ನಿಯಾಮಕರಾದ ವಿಶ್ವಾದಿ ರೂಪಗಳೂ ಇರುವುವು. ಅಲ್ಲಿ ಬಿಂಬ ಬುದ್ಧಿಯಾದ **ಪ್ರದ್ಯುಮ್ನ**ನೊಡನೆ ಸ್ಥೂಲ ಬುದ್ಧಿ ನಿಯಾಮಕನಾದ **ಪ್ರದ್ಯುಮ್ನ**ನ ಜೊತೆಯಲ್ಲಿ ಏಕೀಭಾವವು ಉಂಟಾಗುತ್ತದೆ. ಅದರಂತೆಯೇ ಬಿಂಬಗುಣತ್ರಯದ **ವಿಶ್ವಾದಿ**ಗಳಿಗೆ ಸ್ಥೂಲಬುದ್ಧಿ ಸತ್ವಾದಿ ಗುಣ ಪ್ರೇರಕರಾದ **ವಿಶ್ವಾ**ದಿಗಳೊಡನೆ ಏಕೀಭಾವವು. ಹಾಗೆಯೇ ಅವರ ಜೊತೆಯಲ್ಲೇ ಬಂದ ಬ್ರಹ್ಮಾದಿಗಳಿಗೆ ಇಲ್ಲಿರುವ ಬ್ರಹ್ಮಾದಿಗಳೊಡನೆ ಏಕೀಭಾವವು ಉಂಟಾಗುವುದು. ಅನಂತರ ವಿಶ್ವಾದಿಗಳೊಡನೆ ಬ್ರಹ್ಮಾದಿಗಳ ಜೊತೆಯಲ್ಲಿ ಗುಣತ್ರಯಾತ್ಮಿಕವಾದ ಬುದ್ಧಿಗೆ ಉದ್ಬೋಧವಾಗುವುದು. ಹಾಗೆ ಉದ್ಬುದ್ಧವಾದ ಬುದ್ಧಿಗೆ ಜಾಗ್ರತ, ಸ್ವಪ್ನ, ಸುಷುಪ್ತಿಗಳೆಂಬ ವೃತ್ತಿತ್ರಯಗಳು ಮೂರು (ಅವಸ್ಥೆಗಳು) ಉತ್ಪನ್ನವಾಗುವುವು

ಇಲ್ಲಿ ಸತ್ವಗುಣದ ದೆಶೆಯಿಂದ ಜಾಗರ (ಜಾಗ್ರದವಸ್ಥೆಯ)ವು ರಜೋಗುಣದಿಂದ ಸ್ವಪ್ನವೂ, ತಮೋಗುಣದಿಂದ ಸುಷುಪ್ತಿಯೂ ಉಂಟಾಗುವುದು. ಅವುಗಳನ್ನು ನಿಯಮನ ಮಾಡಲು, ವಿಶ್ವಾದಿ ಮೂರು ರೂಪಗಳೂ, ಬ್ರಹ್ಮಾದಿಗಳ ಪ್ರಾದುರ್ಭಾವ ಮತ್ತು ಅವುಗಳಲ್ಲಿ ಪ್ರವೇಶವೂ ಆಗುವುದು.

ಹಾಗೆಯೇ ಆಗಲೇ " **ಕಾಲಾಖ್ಯ** "ನಾದ ಹರಿಯು ಮತ್ತು ಬ್ರಹ್ಮಾದಿಗಳಿಗೆ ಎಲ್ಲಿ ಯಾವ ಜಾಗರವೋ ಆಗಲೇ ಅದೇ ಜಗ್ರದವಸ್ಥೆಯು. ಯಾವ ಕಾಲದಲ್ಲಿ ಸ್ವಪ್ನವೋ ಅದೇ ಸ್ವಪ್ನಾವಸ್ಥೆಯು. ಯಾವ ಕಾಲದಲ್ಲಿ ಎಲ್ಲಿ ಯಾವಾಗ ಸುಷುಪ್ತಿಯೋ ಅದು ಸುಷುಪ್ತ್ಯವಸ್ಥೆಯು.

ಜಾಗ್ರದಾದ್ಯುಪಲಕ್ಷಿತ ಕಾಲತ್ರಯವನ್ನು ನಿರ್ಮಾಣಮಾಡಿ ಅವುಗ
ನಿಯಾಮಕತ್ವದಿಂದ ಜಾಗ್ರತವೇ ಮೊದಲಾದ ಅವಸ್ಥಾನಾಮಕ ರೂಪತ್ರಯ
ಗಳ ಪ್ರಾದುರ್ಭಾವವು. ಅನಂತರ ವಿಶ್ವನ ದೆಶೆಯಿಂದ ವಿಶ್ವನೂ, ತೈಜಸನ
ದೆಶೆಯಿಂದ ತೈಜಸನೂ, ಪ್ರಾಜ್ಞನ ದೆಶೆಯಿಂದ ಪ್ರಾಜ್ಞನು ಈರೀತಿ ಮೂರು
ರೂಪಗಳು ಪ್ರಾದುರ್ಭವಿಸುವುವು. ಅಲ್ಲಿ ವಿಶ್ವನು ಬಲಗಣ್ಣಿನಲ್ಲಿ ಸ್ಥಿತನಾಗಿರು
ತ್ತಾನೆ. ತೈಜಸನು ಸ್ವಪ್ನಸ್ಥಾನವೆನಿಸಿದ ಕಂಠದಲ್ಲೂ ಪ್ರಾಜ್ಞನು ಹೃದಯ
ಸ್ಥಾನದಲ್ಲೂ ಇರುವರು.

ಅನಂತರ ಬಿಂಬನ, ನಾನಾವಿಧ ಜ್ಞಾನ, ಕರ್ಮ, ಸುಖಾದಿ ಇಚ್ಛೆ
ಯಲ್ಲಿ, ಬಿಂಬನ ಮನಸ್ಸೇ ಮೊದಲಾದ ಸರ್ವೇಂದ್ರಿಯಗಳು, ಉಕ್ತಗಳಾದ
ದೇವತಾಧಿಷ್ಠಿತಗಳಾಗಿ, ಜೀವನ ಮನಸ್ಸೇ ಮೊದಲಾದ ಸಕಲ ಇಂದ್ರಿಯ
ಗಳ ದ್ವಾರಾ, ಸ್ಥೂಲಗಳಾದ ಮನ ಆದಿ ಸರ್ವೇಂದ್ರಿಯಗಳಲ್ಲಿ ಪ್ರವೇಶಿ
ಸುವುವು.

ಇಲ್ಲಿ ವಿಶೇಷವನ್ನು ಇಂದ್ರಿಯ ವ್ಯಾಪಾರ ನಿರೂಪಣೆಯ ಪ್ರಕರಣದಲ್ಲಿ
ವಿಶದವಾಗಿ ಹೇಳಿರುವೆನು.

ಆಗ ಬಿಂಬ ಚಕ್ಷುಸ್ಸಿನ ಜೊತೆಯಲ್ಲಿ ಬಿಂಬ ವಿಶ್ವನ; ಆಗಮನವೂ, ಆತ
ನಿಗೆ ಸ್ಥೂಲವಾದ ಚಕ್ಷುಸ್ಸಿನಲ್ಲಿ ಸ್ಥಿತನಾಗಿರುವ ವಿಶ್ವದ ಜೊತೆಯಲ್ಲಿ ಏಕೀ
ಭಾವವೂ ಉಂಟಾಗುತ್ತದೆ.

ವಿಶ್ವನಿಗೆ ಎರಡು ಪಾದಗಳೂ, ನಾಲ್ಕು ಹಸ್ತಗಳೂ, ಒಂದು ಮಧ್ಯ
ಮುಖದಲ್ಲಿರುವ ಶುಂಡಾದಂಡವೂ (ಆನೆಯ ಸೊಂಡಿಲು) ಹೀಗೆ ಸಪ್ತಾಂಗವು
ಮಧ್ಯದಲ್ಲಿ ಗಜಾನನ ಮತ್ತು ಉಭಯ ಪಾರ್ಶ್ವಗಳಲ್ಲೂ ಒಂಭತ್ತು ಒಂಭತ್ತ
ರಂತೆ ಹದಿನೆಂಟು ಪುಮಾಕಾರ ಮುಖಗಳು; ಹೀಗೆ ಹತ್ತೊಂಭತ್ತು ಮುಖ
ಗಳೂ ಇರುವುವು.

ಇದರಂತೆಯೇ ತೈಜಸನಿಗೂ, ಸಪ್ತಾಂಗ, ಏಕೋನ ವಿಂಶತಿ ಮುಖ,
ಮಧ್ಯೆ ಗಜಮುಖಾಕಾರ, ಉಭಯ ಪಾರ್ಶ್ವಗಳಲ್ಲಿ ಒಂಭತ್ತು ಒಂಭತ್ತು
ಸಂಖ್ಯಾಕ ನರ ಮುಖಾಕಾರಗಳೂ ಇರುವುದೆಂದು ತಿಳಿಯುವುದು. ಈ ವಿಶ್ವ
ತೈಜಸ, ಪ್ರಾಜ್ಞರು ಕ್ರಮವಾಗಿ, ಜಾಗ್ರತ್, ಸ್ವಪ್ನ, ಸುಷುಪ್ತ್ಯವಸ್ಥೆಗಳ

ಪ್ರೇರಕರಾಗಿ ಜೀವರಿಗೆ ಅವಸ್ಥಾತ್ರಯದ ಅನುಭವಗಳನ್ನುಂಟುಮಾಡುತ್ತಾ **ಸ್ಥೂಲಭುಕ್, ಪ್ರವಿವಿಕ್ತಭುಕ್, ಆನಂದಭುಕ್** ಎಂದು ವಿಶ್ರುತ ರಾಗಿರುವರು.

****

ಪ್ರಾಣದೇವನ ವ್ಯಾಪಾರವು

ಈ ವಿಧವಾದ ವಿಶ್ವನು, ರಾಜನು ಸಣ್ಣ ಪುಟ್ಟ ದೇಶಗಳ ಅಧಿಪತಿ ಗಳಾದ ಸಾಮಂತರನ್ನು ನಿಯಮಿಸುವಂತೆ, ಮನಸ್ಸೇ ಮೊದಲಾದ ಸರ್ವೇಂ ದ್ರಿಯಗಳಲ್ಲೂ ತತ್ತದ್ರೂಪ ವಿಶೇಷಗಳನ್ನು ನಿಯಮನ ಮಾಡುತ್ತಾ, ಅವರು ಗಳಿಂದ ಜಾಗ್ರುದವಸ್ಥೆಯ ಕಾಲಕ್ಕೆ ಸಂಬಂಧಪಟ್ಟ ಸರ್ವ ವ್ಯಾಪಾರಗಳನ್ನೂ ಮಾಡಿಸುತ್ತಾನೆ.

ಆ ವ್ಯಾಪಾರಗಳೂ ಮತ್ತು ಅದಕ್ಕೆ ಮುಂಚೆ ಪಂಚಪ್ರಾಣದ ವ್ಯಾಪಾ ರವೂ ಈ ರೀತಿಯಾಗಿ ನಿರೂಪಿಸಲ್ಪಟ್ಟಿದೆ—

ಭಗವಾನ್ ಶ್ರೀಪತಿಯು ಜೀವದೇಹವನ್ನು ನಿರ್ಮಿಸಿ, ಆ ಜೀವನಿಗೆ ಈ ದೇಹದಲ್ಲಿ ಉತ್ಸರ್ಗದಿಂದ ಶತ (ನೂರು) ವರ್ಷ ಜೀವನವನ್ನೂ ನಿಯಮನ ಮಾಡಿ, ಅವನಿಗೆ ಮುಖ್ಯವಾಗಿ ಪ್ರಾಣಸತ್ವಾತ್ಮಕ ನಿಬಂಧನತ್ವವನ್ನು ನಿಯ ಮಿಸಿ, ಮುಖ್ಯಪ್ರಾಣನ ದಾಸಪಂಚಕರು ಪ್ರಾಣಾದಿಪಂಚ (ಐದು) ರಲ್ಲಿ ಇರು ತ್ತಿರಲು, ತನ್ನ ನಾರಾಯಣಾದಿ ಪಂಚರೂಪಾತ್ಮಕ ಪ್ರಾಣಾದಿ ಪಂಚರೂಪ ಗಳನ್ನು ಇಟ್ಟು ಅವರಿಂದ ಆ ವ್ಯಾಪಾರಗಳನ್ನು ಮಾಡುತ್ತಾನೆ. ಅದು ಹೇಗೆಂದರೆ—

ಹಂಸಮಂತ್ರ ಅದರ ಫಲವು

ಪ್ರಾಣನು 1. ವಾಯು, ಮುಖ, ನಾಸಾ, ಶ್ರೋತ್ರಗಳೆಂಬ ನಾಲ್ಕು ಸ್ಥಾನಗಳಲ್ಲಿ ಸ್ಥಿತನಾಗಿ ತತ್‌ದ್ವಾರಾ ಹೊರಕ್ಕೆ ಹೋಗುವ "ಸ" ಕಾರವನ್ನು ವ್ಯಕ್ತಿಮಾಡುತ್ತಾ ಉಚ್ಛ್ವಾಸವೆನಿಸುತ್ತದೆ.

2. ಪುನಃ ಶರೀರದ ಒಳಗೆ ಪ್ರವೇಶಿಸಿ "ಹ" ಕಾರವನ್ನು ವ್ಯಂಜನ (ವ್ಯಕ್ತ) ಮಾಡುತ್ತಾನೆ. ಅದು ನಿಃಶ್ವಾಸವೆಂದು ಕರೆಯಲ್ಪಡುತ್ತದೆ. ವಾಯುವು

ಹೀಗೆ ಗಮನಾಗಮನದ (ಹೋಗುವುದು ಬರುವುದು) ಭರದಿಂದ "ಹಂ
ಸೋಽಹಂ'' ಎಂದು ಆವರ್ತನೆಯಾಗುತ್ತದೆ. (ಇದು, ಇಂದು ಸೂರ್ಯೋ
ದಯದಿಂದ ನಾಳೆ ಸೂರ್ಯೋದಯದ ವರೆವಿಗೆ 24 ಗಂಟೆಯು, ಒಂದು ದಿ
ದಲ್ಲಿ, ಅಥವಾ 60 ಘಳಿಗೆಯ ಕಾಲದಲ್ಲಿ 21600 ಆಗಿ, **ಹಂಸಮಂತ್ರವೆ**
ಸಿರುವುದು)

ಅಲ್ಲಿ ಪ್ರಾಣವಾಯುವಿನಲ್ಲಿ ಮುಖ್ಯಾಭಿಮಾನಿಯು ಬ್ರಹ್ಮಾ
ವಾಯುರೂ, ಹಂಸರೂಪದಿಂದ ಇರುವರು. ಅದರಂತೆ ಹರಿಯು (ನಾರ
ಯಣನೂ) ಹಂಸರೂಪಿ ಪರಮಾತ್ಮನು ಇರುವನು, ಹೀಗೆ ಈ ಮೂವರು
ಪ್ರಾಣನಾಮಕರಾಗಿ ವಾಯುವನ್ನು ಶ್ವಾಸೋಚ್ಛ್ವಾಸ ರೂಪದಿಂದ ಪ್ರೇ
ಯಂತಿ—(ಪ್ರಕೃಷ್ಟನಯನ (ಪ್ರೇರಣೆ) ಮಾಡುತ್ತಾರೆ) ಎಂದು ಈ ರೀ
ಅನುಸಂಧಾನವನ್ನು ಮಾಡಬೇಕು.

ಹಂಸನು ಭಗವಾನನು ಅಹಂ (ನಾನು ಆದರೂ ಸಃ-ಅವನ ಪ್ರತಿಬಿಂಬನ
(ಹಂಸಃ ಭಗವಾನ್, ಅಹಂತು ಸಃ ತತ್ಪ್ರತಿಬಿಂಬನು) ಎಂದು ಅರ್ಥವನ್ನು
ತಿಳಿಯುವುದು. ಹೀಗೆ ಅನುಸಂಧಾನ ಮಾಡುವವನಿಗೆ ಅಹೋರಾತ್ರಿಯಲ್ಲಿ
ಜಪಮಾಡಿದ (a) ಅಖಂಡ ಧ್ಯಾನ ಫಲವೂ, ಶೀಘ್ರವಾಗಿಯೇ (b) ಮೋಕ್ಷ
ಲಕ್ಷಣವಾದ ಮಹಾಫಲವೂ ಪ್ರಾಣನಿಂದ ಕೊಡಲ್ಪಡುತ್ತದೆ.

ಪಾಯು ಮತ್ತು ಉಪಸ್ಥಗಳಲ್ಲಿ "ಅಪಾನ"ವಾಯುವು ಇದಾನೆ. ಅಲ್ಲಿ
ಅಪಾನವೆಂಬ ಹೆಸರಿನಿಂದ ಸ್ಥಿತನಾದ ವಾಸುದೇವನು ಮಲಮೂತ್ರಾದಿ
ಗಳನ್ನು ದೇಹದಿಂದ ಹೊರಕ್ಕೆ ನಿರಸನ ಮಾಡಿಸುತ್ತಾನೆ (ಹೊರಡಿಸುತ್ತಾನೆ.)

ನಾಭಿದೇಶದಲ್ಲಿ "ಸಮಾನ" ವಾಯುವು ಇದಾನೆ. ಅವನಲ್ಲಿಯೂ
ಸಮಾನನೆಂಬ ಹೆಸರಿನಿಂದ ಸ್ಥಿತನಾಗಿರುವ ಸಂಕರ್ಷಣನು ಜೀವನು ಭುಂಜಿ
(ತಿಂದ) ಸಿದ ಅನ್ನವನ್ನು ಮೂರು ಭಾಗವಾಗಿ ಮಾಡಿ ಅದರಲ್ಲಿ ಸ್ಥೂಲತರ
ವಾದುದನ್ನು ಪುರೀಷ (ಅಮೇಧ್ಯ)ಕ್ಕೆ ಇಟ್ಟು, "ಮಧ್ಯಮ"ದಿಂದ ಮಾಂಸವನ್ನು
ಯಥಾಯೋಗ್ಯವಾಗಿ ಬೆಳೆಯಿಸಿ ವೃದ್ಧಿಮಾಡಿ "ಅಣುತಮ"ವಾದುದನ್ನು
ಇಂದ್ರಿಯಗಳ ಉಪಚಯ ಬೆಳವಣಿಗೆಯ ಅಭಿವೃದ್ಧಿಯನ್ನು ಯಥಾ ಯೋಗ್ಯ

ವಾಗಿ ಮಾಡುತ್ತಾನೆ. ಇದರಿಂದ ಇಂದ್ರಿಯಗಳಿಂದ ತಮ್ಮ ವ್ಯಾಪಾರವನ್ನು ಮಾಡಲು ಅವು ಸಮರ್ಥವಾಗುವುವು.

ಎಪ್ಪತ್ತೆರಡು (72000) ಸಾವಿರ ನಾಡಿಗಳಲ್ಲಿ ವ್ಯಾನನಾಮಕನಾದ ಅನಿರುದ್ಧನೆಂಬ ಹೆಸರಿನಿಂದ ಹರಿಯು ಇದಾನೆ. ಅವನು "ವಾಯು ಸಂಚಾರ ವಿಲ್ಲದಿದ್ದರೆ ಶರೀರವು ನಾಶವಾಗುತ್ತದೆ ಎಂದು ತಿಳಿದು, ಆದರ ರಕ್ಷಣೆಗಾಗಿ ನಾಡೀದ್ವಾರಾ ಸಂಚರಿಸುತ್ತಾ ಪ್ರಾಣಾಪಾನರ ಸಂಧಿಯನ್ನು (ಅವರಿಬ್ಬರೂ ಸಂಧಿಸಿ ಸೇರುವಂತೆ) ಪ್ರವರ್ತಿಸುವಂತೆ ಮಾಡುತ್ತಾನೆ. ಯಾವಾಗ ಈ ಪುರುಷನು ಮಾತನಾಡುತ್ತಾನೆಯೋ, ವೇದಪಾರಾಯಣವನ್ನು ಮಾಡುತ್ತಾನೆಯೋ ಸಾಮಗಾನ ಮಾಡು (ಹಾಡು) ತ್ತಾನೆಯೋ, ಯಜ್ಞಕ್ಕಾಗಿ ಅರಣಿ (ಎರಡು ಸೌದೆಗಳ ಮಥನ ಮಾಡು (ಕಡೆಯು) ತ್ತಾನೆಯೋ, ಯುದ್ಧಾಭಿಮುಖವಾಗಿ ರಣರಂಗಕ್ಕೆ ಹೋಗುತ್ತಾನೆಯೋ, ದೃಢಕರವಾದ ಧನುಸ್ಸನ್ನು ಆರೋಪಿಸುವುದು, ಬಾಣ ಬಿಡುವುದು, ಗುರುತರ (ಭಾರ) ವಾದ ಶಿಲೆಯೋ ಮೊದಲಾದ ವಸ್ತುಗಳನ್ನು ಎತ್ತುವ ವೀರ್ಯ (ಬಲ) ಕರ್ಮವನ್ನು ಮಾಡುತ್ತಾನೆಯೋ, ಅವೆಲ್ಲವೂ (ವ್ಯಾನನದೇ) ಆಗಿರುತ್ತದೆ. ಪ್ರಾಣವಾಯುವನ್ನೂ, ಅಪಾನವಾಯುವನ್ನೂ ತಡೆದು ಈ ವ್ಯಾಪಾರಗಳನ್ನು ಮಾಡುತ್ತಾನೆ.

ಇಲ್ಲಿ ಪ್ರಾಣಾದಿ ಪಂಚಕವು, ಅವುಗಳ ಪಂಚವಿಧ ಭಗವದ್ರೂಪವೂ ಮುಖ್ಯ ಪ್ರಾಣರೂಪವೂ, ಮುಖ್ಯ ಪ್ರಾಣಪುತ್ರರೂಪರಾದ ಗರುಡಾದಿ ರೂಪಗಳೂ ಮುಖ್ಯಾಽಽ ಮುಖ್ಯಪಂಚಕಗಳೆನಿಸಿರುವುವು—

(a) ಪ್ರಾಣನು—(b) ಶೇಷನು
ಅಪಾನನು—ಗರುಡನು
ವ್ಯಾನನು—ಮುಖ್ಯವಾಯುವು
ಉದಾನನು—ರುದ್ರನು
ಸಮಾನನು—ಇಂದ್ರನು ಹೀಗೆ (a) ಮುಖ್ಯ (b) ಅಮುಖ್ಯ ಪಂಚಕರೆನಿಸಿರುವರು.

1. ನಾರಾಯಣ 2. ವಾಸುದೇವ 3. ಸಂಕರ್ಷಣ 4. ಪ್ರದ್ಯುಮ್ನ 5. ಅನಿರುದ್ಧರು ಪ್ರಸಿದ್ಧವಾದ ಭಗವದ್ರೂಪ ಪಂಚಕವು.

ವ್ಯಾನಸಲ್ಲಿ – ಸಂಕರ್ಷಣನಿಂದ ಸಂಧಿಕಾರ್ಯವು ಮಾಡಲ್ಪಡುತ್ತಿರ
ಪ್ರಾಣಾಪಾನರಲ್ಲಿ ನಾರಾಯಣ ವಾಸುದೇವರು ಲೀಲೆಯಿಂದ ನಿರುದ್ಧರಾ
(ತಡೆಯು) ವರಂತೆ ಆಗುವರು. ಪಂಚಕ ಚತುಷ್ಟಯವೂ ನಿರುದ್ಧವೇ ಆ
ತ್ತದೆ. ನಿಂತುಹೋಗುತ್ತದೆ.

ವ್ಯಾನನಿಂದ ಮುಖ್ಯ ವಾಯುವಿನಿಂದ ಕಾರ್ಯವು ಮಾಡಲ್ಪಡುತ್ತಿರ
ಪ್ರಾಣಾಪಾನರೂ, ಭಗವಂತರಿಬ್ಬರೂ ಮುಖ್ಯವಾಯುವೂ ಲೀಲೆಯಿಂದ
ಪ್ರಾಣಪುತ್ರರೆನಿಸಿದ ಶೇಷ ಗರುಡರೂ, ಹೀಗೆ ಪಂಚಕ ತ್ರಯವೂ ನಿರುದ್ಧ
ಆಗುತ್ತಾರೆ. ಕಾರ್ಯವು ನಿಂತೇ ಹೋಗುತ್ತದೆ.

ವ್ಯಾನನಿಂದ ಗರುಡನಿಂದ ಕಾರ್ಯವು ಮಾಡಲ್ಪಡುತ್ತಿರಲು ಪಂಚ
ಚತುಷ್ಟಯವು ಲೀಲೆಯಿಂದಲೇ, ದಾಸ ಪಂಚಕವೂ, ನಿರುದ್ಧವೇ ಆಗುತ್ತ

ವ್ಯಾನ ವಾಯು ಸುತನಿಂದ ಸಂಧಿಕಾರ್ಯವು ಮಾಡುತ್ತಿರಲು ಪಂಚ
ಚತುಷ್ಟಯವು ಲೀಲೆಯಿಂದಲೇ ವಾಯು ಸುತರು ಇಬ್ಬರೂ ನಿರುದ್ಧರಾ
(ನಿಂತುಹೋಗು)ತ್ತಾರೆ.

ಜಡವರಿತು ಸರ್ವತ್ರ ನಿರುದ್ಧವೇ ಆಗಿರುತ್ತದೆ–ಇದರಂತೆಯೇ ಅನ್ಯತ್ರ
ದಲ್ಲೂ ತಿಳಿಯುವುದು.

ಸುಷುಮ್ನಾನಾಡಿಯಲ್ಲಿ "ಉದಾನವಾಯು"ವು ಇದಾನೆ. ಅ
ಉದಾನ ನಾಮಕನಾದ, ಪ್ರದ್ಯುಮ್ನನೆಂಬ ಹರಿಯು ಇದಾನೆ. ಆತನು ಜೀ
ರಿಗೆ ಜೀವನ ಹೇತುವು. ಬದುಕಲು ಮುಖ್ಯ ಕಾರಣನು. ಮೃತರಾದ
ರನ್ನು ನಾಡೀದ್ವಾರಾ ಊರ್ಧ್ವ ಲೋಕಕ್ಕೆ ಕರೆದು ಒಯ್ಯುತ್ತಾನೆ. ಹೀ
ಹರಿಯೇ ತನ್ನ ಪೂಜಾತ್ವೇನ ವಾಯುಪಂಚಕರನ್ನು ಸಂಚಾರ ಮಾಡಿಸ
ತ್ತಾನೆ.

1. ಹಾಗೆಯೇ ಪ್ರಾಣ (ನಾಮಕ) ನಾರಾಯಣನು ಪ್ರಾಣನಲ್ಲಿ
(ಸ್ಥಿತನಾಗಿ) ನಿಂತುಕೊಂಡು ಸ್ವವಿಷಯಕವಾದ ಕರ್ಮಗಳನ್ನು ಮಾಡ
ತ್ತಾನೆ.

2. ಅಪಾನ (ನಾಮ) ವಾಸುದೇವನು ಅಪಾನದಲ್ಲಿದ್ದು ಅನ್ಯಕರ್ಮ
ಗಳನ್ನು ತ್ಯಜಿಸುತ್ತಾನೆ.

3. ವ್ಯಾನಾಖ್ಯ ಸಂಕರ್ಷಣನು ವ್ಯಾನನಲ್ಲಿ ಸ್ಥಿತನಾಗಿ ಅಲ್ಲಿರುವ ಪ್ರತಿಬಂಧಕಗಳನ್ನು ನಿರಾಸನ ಮಾಡು (ಹೋಗಲಾಡಿ) ತ್ತಾನೆ.

4. ಉದಾನ ನಾಮ ಪ್ರದ್ಯುಮ್ನನು ಉದಾನನಲ್ಲಿ ಸ್ಥಿತನಾಗಿ ನಿಂತು ಯೋಗ ಕರ್ಮಗಳನ್ನು ಮಾಡುತ್ತಾನೆ.

5. ಸಮಾನ ಎಂಬ ಅನಿರುದ್ಧನು ಸಮಾನನಲ್ಲಿ ಸ್ಥಿತನಾಗಿ, ದೇಹ, ಇಂದ್ರಿಯ, ಮನಸ್ಸುಗಳನ್ನು ನಯನ (ನಿಯಮನ) ಮಾಡುತ್ತಾನೆ.

ಪ್ರಾಣರಲ್ಲಿ ಭಗವದುಪಾಸನೆ ಮಾಡುವವನಿಂದ ಭಗವಂತನ 1. ಆಯತನ, 2. ಪ್ರತಿಷ್ಠಾ, 3. ರಹಸ್ಯನಾಮ ಮತ್ತು ಅವುಗಳ, 4. ಪ್ರವೃತ್ತಿ ನಿಮಿತ್ತಗಳೆಂಬ ಈ ನಾಲ್ಕನ್ನೂ ಅವಶ್ಯಕವಾಗಿ ತಿಳಿಯಲ್ಪಡಬೇಕು.

ಅಲ್ಲಿ 1. ಪ್ರಾಣನೇ ಆಯತನವು. ಅಲ್ಲಿರುವ 2. ರಮಾದೇವಿಯು ಪ್ರತಿಷ್ಠಾ ಎಂದರೆ ಉಪಾಸನೆಗೆ ಪ್ರತಿಮೆಯು.

3. "ಪ್ರಿಯ:" ಎಂಬುದು ರಹಸ್ಯನಾಮವು. ಪ್ರಾಣಿಗಳಿಂದ ಮಾಡಲ್ಪಡುವ ಭೋಜನಕ್ಕೆ ಸ್ವ (ತನ್ನ) ಪ್ರೀತ್ಯರ್ಥವಾಗಿ, ಭೋಜನಪ್ರಿಯತ್ವವಿರುವುದರಿಂದಲೇ ಅದರ (4) ಪ್ರವೃತ್ತಿನಿಮಿತ್ತವು.

ಆದುದರಿಂದಲೇ ಅಜ್ಞರೂ ಸಹ ಪ್ರಾಣಿಗಳಲ್ಲಿರುವ ವಿಷ್ಣುವಿನ ಇಚ್ಛೆಯಿಂದಲೇ ಭೋಜನಾರ್ಥವಾಗಿ ಚೌರ್ಯಾದಿ (ಕಳ್ಳತನ ಮೊದಲಾದವು) ಗಳನ್ನು ಮಾಡುತ್ತಾರೆ. ಭೋಜನಾದಿ ಸಮಯದಲ್ಲಿ ಹೇಗೆ ಅನುಸಂಧಾನ ಮಾಡಬೇಕೆಂಬುದನ್ನು ಮುಂದಿನ ಪ್ರಕರಣದಲ್ಲಿ ನೋಡಿ.

ಭೋಜನ ಮತ್ತು ವೈಶ್ವಾನರ ವಿದ್ಯೆ

ಭಗವದಂಗಗಳ ದೆಶೆಯಿಂದ ದೇವತೆಗಳು ತಮಗೆ ಉತ್ಪತ್ತಿಗೆ ಕಾರಣನಾದ ಪರಮಾತ್ಮನ ಅಂಗವನ್ನು ಸೇವಿಸಿ ಚಿಂತಿಸುತ್ತಾನೆ.

ಪೃಥಿವೀ ಮತ್ತು ಅಗ್ನಿಯು ಭಗವಂತನ ಮುಖದಿಂದ ಜನಿಸಿದರು. ಮುಖದಿಂದ ಭೋಗಪಡಲು ಪೃಥಿವಿಯು ಓಷಧಿ ವನಸ್ಪತಿಗಳನ್ನು ಸೃಜಿಸು

ತ್ತಾನೆ. ಅಗ್ನಿಯು ಅವುಗಳನ್ನೆಲ್ಲ ತಂದ ತಂದಂತೆ ಬೇಯಿಸುತ್ತಾನೆ. ಜಠರದಲ್ಲಿ ಭುಂಜಿಸಿದ ಪದಾರ್ಥಗಳನ್ನು ಪಚನ (ಜೀರ್ಣ) ಮಾಡುತ್ತಾನೆ.

ಭೋಜ್ಯ ಪದಾರ್ಥಗಳಲ್ಲಿ ಸರ್ವತ್ರ ತಪ್ಪದೆ ಅವಿಶೇಷದಿಂದ **ನಾರಾಯಣ** ಮತ್ತು **ಅನಿರುದ್ಧರೂ** ಬ್ರಹ್ಮನನ್ನು ಆರಂಭಿಸಿ ಪುಷ್ಕರಾಂತರಾದ ಸರ್ವ ದೇವತೆಗಳೂ ಇರುತ್ತಾರೆ ವಿಶೇಷವಾಗಿ ಅಲ್ಲಿ—

೧. ಅನ್ನದಲ್ಲಿ .... ಕೇಶವನು ಮತ್ತು ಸೋಮನು
೨. ಪರಮಾನ್ನದಲ್ಲಿ .... ನಾರಾಯಣ – ಭಾರತೀದೇವಿಯು
೩ ಭಕ್ಷ್ಯದಲ್ಲಿ .... ಮಾಧವ – ಸೂರ್ಯನು
೪. (ಘೃತ) ತುಪ್ಪದಲ್ಲಿ .... ಗೋವಿಂದ – ಲಕ್ಷ್ಮೀದೇವಿ
೫. (ಕ್ಷೀರ) ಹಾಲಿನಲ್ಲಿ .... ವಿಷ್ಣು – ಸರಸ್ವತೀದೇವಿ
೬. ಮಂಡ (ದಲ್ಲಿ) .... ಮಧುಸೂದನ – ಚತುರ್ಮುಖ
೭. (ದಧಿ) ಮೊಸರಿನಲ್ಲಿ .... ವಾಮ – ಸೋಮ – ವರುಣ
೮. (ಸೂಪ) ತೊವ್ವೆ .... ಶ್ರೀಧರ – ಗರುಡ
೯. (ಪತ್ರಶಾಕ) ಎಲೆ, ಸೊಪ್ಪು ತರಕಾರಿಗಳಲ್ಲಿ .... ಹೃಷೀಕೇಶ – ಮಿತ್ರ
೧೦. ಫಲ, ಶಾಕ (ಹಣ್ಣು ಕಾಯಿ)ಗಳಲ್ಲಿ .... ಪದ್ಮನಾಭ – ಶೇಷ
೧೧. (ಆಮ್ಲ) ಹುಳಿಯಾದ ಪದಾರ್ಥದಲ್ಲಿ .... ದಾಮೋದರ – ಪಾರ್ವತೀದೇವಿ
೧೨. (ಅನಾಮ್ಲ) ಹುಳಿ ಇಲ್ಲದ ಪದಾರ್ಥದಲ್ಲಿ .... ಸಂಕರ್ಷಣ – ರುದ್ರನು
೧೩. ಬೆಲ್ಲ, ಸಕ್ಕರೆ ಮೊದಲಾದ ಸಿಹಿ (ಮಧುರ) ದ್ರವ್ಯಗಳಲ್ಲಿ.... ವಾಸುದೇವನು – ಶಕ್ರನು
೧೪. ಉಪಸ್ಕರ (ಇತರ)ಗಳಲ್ಲಿ .... ಪ್ರದ್ಯುಮ್ನನು – ಬೃಹಸ್ಪತಿಯು
೧೫. ಕಟು (ಖಾರ) ಮೊದಲಾದವುಗಳಲ್ಲಿ .... ಅನಿರುದ್ಧ – ಯಮನು

೧೬. ಇಂಗು, ಏಲಕ್ಕಿ, ಪಚ್ಚಕರ್ಪೂರ, ಕೇಸರ, ಲವಂಗ, ಜಾಕಾಯಿ, ಪತ್ರಿ, ಮೊದಲಾದ ಎಲ್ಲ ಇತರ ಸುಗಂಧ ದ್ರವ್ಯಗಳಲ್ಲಿ	ಪುರುಷೋತ್ತಮ	ಶ್ರೀದೇವಿಯು
೧೭. ಚೋಷ್ಯ (ಚಾಡಿಸಿ–ನಂಜಿಕೊಳ್ಳುವ)ಪೇಯ–ಕುಡಿಯುವ, ಪಾನಮಾಡುವ ಲೇಹ್ಯ–		
೧೮. ನೆಕ್ಕುವ ತಿನ್ನುವ ಖಾದ್ಯ ಅಗಿದು ತಿನ್ನುವ ಪದಾರ್ಥಗಳಲ್ಲಿ ಮತ್ತು ಪಕ್ವಾನ್ನಗಳಲ್ಲಿ	ಅಧೋಕ್ಷಜನು	ಬುಧನೂ
೧೯. ಎಳ್ಳು, ಕುಂಬಳಕಾಯಿ, ಉದ್ದು (ಮಾಂಸ) ಮಾಷ ಆದಿ ಬೇಳೆಗಳಿಂದ ನಿರ್ಮಿತ ಪದಾರ್ಥಗಳಲ್ಲಿ	ನೃಸಿಹ್ಮನೂ	ದಕ್ಷ (ಪ್ರಜೇಶ)ನೂ
೨೦. ಮಾಷ (ಉದ್ದಿನ ಒಡೆ ಮೊದಲಾದಗಳಲ್ಲಿ	ಅಚ್ಯುತನೂ	ಮನುವೂ
೨೧. ಲವಣದ (ಉಪ್ಪಿನ)ಲ್ಲಿ	ಜನಾರ್ದನ	ನಿಋುತಿಯು
೨೨ ಫಲದಲ್ಲಿ	ಉಪೇಂದ್ರ	ಪ್ರಾಣನು
೨೩. ತಾಂಬೂಲದಲ್ಲಿ	ಶ್ರೀಹರಿ	ಗಂಗಾದೇವಿಯು
೨೪. ಸ್ವಾದೂದಕದಲ್ಲಿ	ಶ್ರೀಕಷ್ಣ	ಬುಧನು
೨೫. ಸರ್ವಶುದ್ಧ ದ್ರವ್ಯಗಳಲ್ಲಿ	ಹಂಸ	ಪುಷ್ಕರನು

* * * * * * * *

1. ಸ್ಥಾಲಿ (ಪಾತ್ರೆ)ಯಲ್ಲಿ	ಭಗವಾನ್	ವಹ್ನಿಯು
2. ಕಾರೀಷ (ಕರಿ–ಇಜ್ಜಲು) ಕಾಷ್ಠ ಕಟ್ಟಿಗೆ ಮೊದಲಾದವುಗಳಲ್ಲಿ	ಸಂಕರ್ಷಣನೂ	ವಸಂತನು
3. ಅಡಿಗೆ ಮಾಡುವವರಲ್ಲಿ	ವಿಶ್ವಂಭರನೂ	ಶ್ರೀದೇವಿಯು

4. ಪಾತ್ರೆಗಳಲ್ಲಿ ಆನಂದನೂ ವಾರುಣೀದೇವಿ
5. ಭೋಜನ ಪಾತ್ರೆಗಳಲ್ಲಿ ಸತ್ಯನು ದುರ್ಗಾದೇವಿಯು
6. ಅದರ ಕೆಳಗಿರುವ ಮಂಡಲದಲ್ಲಿ ವರಾಹ ಭೂಮಿದೇವಿ ಮೊದಲಾದವರೆಲ್ಲರೂ ಅಲ್ಲಲ್ಲಿ ಸ್ಥಿತರಾಗಿರುವರು.
7. ಭೋ (ಕ್ತೃಗಳು) ಜನ ಮಾಡತಕ್ಕವರಲ್ಲಿ ಸಂಕರ್ಷಣ ಪ್ರದ್ಯುಮ್ನರೂ ಬ್ರಹ್ಮಾದಿ ಪುಷ್ಕರಾಂತ ದೇವತೆಗಳೂ ಸ್ಥಿತರಾಗಿರುವರು.
8. ಅವಕಾಶಪ್ರದನು ವಾಸುದೇವನು

ವೈಶ್ವಾನರ ವಿದ್ಯೆ

ಅನಂತರ ಕ್ರೋಡಾತ್ಮಕನಾದ ವೈಶ್ವಾನರನನ್ನು ಹೀಗೆ ಧ್ಯಾನ ಮಾಡಬೇಕು

1. ಸ್ವರ್ಗಾಧಾರನಾದ ಅತಿ ತೇಜಸ್ಸುಳ್ಳವನಾದುದರಿಂದ ತೇಜಃ ಎಂಬ ಹೆಸರುಳ್ಳದ್ಯುನಾಮಕನು ವೈಶ್ವಾನರನ ಶಿರಸ್ಸು (ತಲೆ)
2. ಆಯುಷ್ಯವನ್ನು ತಂದು ಕೊಡುವುದರಿಂದ ಆದಿತ್ಯಾಖ್ಯನಾಗಿ ಆದಿತ್ಯನಿಗೆ ಆಶ್ರಯನೂ ಸರ್ವ ವಿಷಯಕನಾದುದರಿಂದ ವಿಶ್ವರೂಪಾಖ್ಯನು ವೈಶ್ವಾನರನ ಚಕ್ಷುಃ (ಕಣ್ಣು)
3. ಆ ಹವನೀಯ ಅಗ್ನಿಯ ಆಧಾರನು ವೈಶ್ವಾನರನ ಮುಖವು
4. ದಕ್ಷಿಣಾಗ್ನ್ಯಾಧಾರನು ವೈಶ್ವಾನರನ ಮನಸ್ಸು
5. ಗಾರ್ಹಪತ್ಯಾಧಾರನು ವೈಶ್ವಾನರನ ಹೃದಯವು

6. ವೇದ್ಯಾಧಾರನು	ವೈಶ್ವಾನರನ	ಉರ್ಃಸು
7. ದರ್ಭಾಧಾರಗಳು	ವೈಶ್ವಾನರನ	ಲೋಮಗಳು
8. ಜ್ಞಾನ ಮತ್ತು ಆಯು ರೂಪತ್ವದಿಂದ ವಾಯು ಎಂಬ ಹೆಸರುಳ್ಳವನು	ವೈಶ್ವಾನರನಿಗೆ ಆಶ್ರಯುವು	ವಾಯುವು
9. ಸರ್ವಶಕ್ಯ ಕರ್ಮಗಳನ್ನು ಮಾಡುವುದರಿಂದಲೂ, ಪೃಥುನ್ ವರ್ತ್ಮ (ಮಾರ್ಗ) ನಾಮಕನು	ವೈಶ್ವಾನರನ	ಪ್ರಾಣವು
10. ದೀಪನಾದುದರಿಂದ "ಆಕಾಶ" ನಾಮಕನೂ ಅದಕ್ಕೆ ಆಶ್ರಯ ವಾಗಿ ವಿಸ್ತೃತತಯಾ ಬಹುಳ ನಾಮವುಳ್ಳವನು	ವೈಶ್ವಾನರನ–ಮಧ್ಯದೇಹವು	ಆಕಾಶವು
11. ವ್ಯಾಪ್ತನಾದುದರಿಂದ "ಆಪಃ" ಎಂದು ಉಕ್ತನಾದ ಅಪಗಳಿಗೆ ಆಶ್ರಯನಾಗಿ ಅತಿರತಿಕರ ನಾದುದರಿಂದ " ರಯಿ " ನಾಮಕನಾದವನು	ವೈಶ್ವಾನರನ	ಬಸ್ತಿ ಎನಿಸಿದ ನಾಭಿಯ ಅಧೋಭಾಗವು ರಯಿ
12. ಅಪಾನ ವಾಯುವಿಗೆ ಆಧಾರನೂ ಕಟಿ ಮತ್ತು ಪಾಯು ರೂಪನೂ ಆದವನು	ವೈಶ್ವಾನರನ	ಅಪಾನ ವಾಯುವು
13. ಪ್ರಥನಾತ್ ಮತ್ತು ವಿಸ್ತೃತನಾದುದರಿಂದಲೂ ಪೃಥಿವೀ ನಾಮಕಗಳಾಗಿ ಪೃಥ್ವಿಗೆ ಆಶ್ರವಾದವು	ವೈಶ್ವಾನರನ	ಪ್ರತಿಷ್ಠಿತಗಳು

ಪ್ರತಿಷ್ಠಿತಗಳಾಗಿರುವುದರಿಂದ
ಪ್ರತಿಷ್ಠಿತ ನಾಮಕಗಳಾದವು ವೈಶ್ವಾನರನ ಪ್ರತಿಷ್ಠಿತಗಳ
ಎರಡು ಪಾದಗಳು

ಈ ರೀತಿಯಾಗಿ ವೈಶ್ವಾನರನನ್ನು ಭೋಜನ ಮಾಡುವವನು ತನ ಉದರದಲ್ಲಿ ಧ್ಯಾನಿಸಿ ಆತನ ದ್ವಾರಪಾಲಕರನ್ನು ಈ ಕೆಳಗೆ ನಿರೂಪಿಸಿ ವಂತೆ ಚಿಂತಿಸಿ ಧ್ಯಾನವನ್ನು ಮಾಡಬೇಕು.

೧. ಪೂರ್ವ ದ್ವಾರಪಾಲಕನು ಪ್ರಾಣಾಭಿಮಾನೀ ಸೂರ್ಯನ
೨. ಪಶ್ಚಿಮ ,, ಅಪಾನಾಭಿಮಾನಿಯಾದ ಅಗ್ನಿಯು
೩. ದಕ್ಷಿಣ ,, ವ್ಯಾನಾಭಿಮಾನೀ ಚಂದ್ರನ
೪. ಊರ್ಧ್ವ ,, ಉದಾನಾಭಿಮಾನಿ ಮುಖ್ಯ ವಾಯುವ
೫. ಉತ್ತರ ,, ಸಮಾನಾಭಿಮಾನಿ ಇಂದ್ರನ

ಇಷ್ಟುಮಾತ್ರವೇ ಅಲ್ಲದೆ ಶ್ರೀ ಪ್ರಾಣ, ಭಾರತಿಯರು ಸರ್ವತ್ರ ವಿಶೇಷವೇನೂ ಇಲ್ಲದೆ ಎಲ್ಲ ದ್ವಾರಗಳಲ್ಲೂ ಪಾಲಕರಾಗಿರುವರೆಂದು ತಿಳಿಯ ವುದು.

ಅನಂತರ, 1 ಪ್ರಾಣಾಯ ಸ್ವಾಹ, 2 ಅಪಾನಾಯ ಸ್ವಾಹ 3 ವ್ಯಾನಾಯ ಸ್ವಾಹ, 4 ಉದಾನಾಯ ಸ್ವಾಹ, 5 ಸಮಾನಾಯ ಸ್ವಾಹ ಎಂಬ ಮಂತ್ರಗಳಿಂದ ಪಂಚಪ್ರಾಣಾಹುತಿಗಳನ್ನು (ಬ್ರಹ್ಮಣೇ ಸ್ವಾಹ ಎಂತಲೂ ಭಗವಂತನನ್ನು ಧ್ಯಾನಿಸಿ) ಹೋಮವನ್ನು ಮಾಡಬೇಕು.

ಅನಂತರದಲ್ಲಿ ಜಠರಾಗ್ನಿಯಲ್ಲಿ ಪ್ರತಿಷ್ಠಿತನಾಗಿರುವ ವೈಶ್ವಾನರನ ಪ್ರಾಣಿಗಳಿಂದ ಕೊಡಲ್ಪಟ್ಟು ಪ್ರಾಣಾದಿಗಳ ದ್ವಾರಾ ತನ್ನಲ್ಲಿ ಬಂದ, ಭಕ್ಷ್ಯ ಭೋಜ್ಯ, ಲೇಹ್ಯ, ಚೋಷ್ಯ ಭೇದದಿಂದ ಚತುರ್ವಿಧಗಳಾದ ಅನ್ನವನ್ನೂ ಪಾನೀಯವನ್ನೂ ಸಹ ಅಗ್ನಿಯಿಂದ ಉದ್ದೀಪಕರಾದ ನಾರಾಯಣ ವಾಸು ದೇವಾತ್ಮಕ ಪ್ರಾಣಾಪಾನರಿಂದ ಅಧಿಷ್ಠಿತರಾದ ಪ್ರಾಣಾಪಾನರಿಬ್ಬರಿಂದಲೂ ಯುಕ್ತರಾಗಿ ಪಚನ (ಜೀರ್ಣ) ಮಾಡುತ್ತಾರೆ. ಹಾಗೆ ಪಚನ ಮಾಡಿದ ವಸ್ತು ಗಳನ್ನು ಸಮಾನ ವಾಯುವಿನಲ್ಲಿ ಸ್ಥಿತನಾಗಿರುವ ಸಮಾನ ನಾಮಕ ಅನಿ ರುದ್ಧನಲ್ಲಿ ಒಯ್ದು ಕೊಡುತ್ತಾನೆ. ಆತನಾದರೋ ಆ ಅನ್ನವನ್ನು ಮೂರು

ವಿಭಾಗಮಾಡಿ ಸ್ಥೂಲತಮವಾದುದನ್ನು ಪುರೀಷ (ಅಮೇಧ್ಯ)ಕ್ಕೆ ಇಟ್ಟು, ಮಧ್ಯಮವೂ, ಅಣುತಮವೂ ಎಂಬ ಇನ್ನೆರಡು ಭಾಗಗಳನ್ನು ತೆಗೆದುಕೊಂಡು ಧಾರಣೆ, ಪೋಷಣೆ, ಚೇಷ್ಟೆಯೇ ಮೊದಲಾದ ಶರೀರ ವ್ಯಾಪಾರಗಳನ್ನು ನಿರ್ವಹಿಸಲು, ಶರೀರದ ಅಂಗ ಪ್ರತ್ಯಂಗಗಳನ್ನು ವ್ಯಾಪಿಸಿ ಅನಂತ ಭಗವದ್ರೂಪಗಳೂ, ಬ್ರಹ್ಮಾದಿ ಪುಷ್ಕರಾಂತ ರೂಪಗಳೂ ಎಲ್ಲಿ ಇವೆಯೋ, ಅಲ್ಲಲ್ಲಿಯೇ ತನ್ನಿಂದ ಅಧಿಷ್ಠಿತವಾದ ಸಮಾನ ವಾಯುವಿನ ಜೊತೆಯಲ್ಲಿಯೇ ಹೋಗಿ ಸಮರ್ಪಿಸುತ್ತಾನೆ.

ಈ ಭಾಗದ್ವಯವೂ ಸಹ ಚೇತನಾ ಚೇತನಾತ್ಮಕವಾದುದು. ಅಲ್ಲಿ ಮಧ್ಯಮಭಾಗದಲ್ಲಿ ಯಾವ ಸ್ವರೂಪಾತ್ಮಕಗಳಾದ ರಸಾದಿಗಳಿವೆಯೋ ಅವುಗಳನ್ನೇ ಭುಂಜಿಸಿ ಅನುಭವಿಸುತ್ತಾನೆ. ಭಗವಂತನು ಯಾವುವು ರಮಾದಿ ಸ್ವರೂಪಾತ್ಮಕಗಳಾದವುಗಳಿವೆಯೋ ಅವುಗಳನ್ನೂ ಸಹ ಅವರಲ್ಲಿ ಕೃಪೆಯಿಂದ ಸ್ವೀಕರಿಸುತ್ತಾನೆ. ಅವುಗಳಲ್ಲಿರುವ **ಸ್ವಸ್ವರೂಪ ಭೂತ ಭೋಗವೇ** " ಸ್ವೀಕರಣ "ವೆಂಬುದು.

ಹೀಗೆ ಭಗವಂತನಿಂದ ಸ್ವೀಕೃತಗಳಾದ ಸ್ವಸ್ವರೂಪಗಳಾದ ರಸಾದಿಗಳನ್ನು ರಮಾದೇವಿಯೇ ಮೊದಲಾದವರು ಸ್ವೀಕರಿಸುತ್ತಾನೆ. ಹಾಗೆಯೇ ತಮ್ಮ ತಮ್ಮಗೆ ಅಧಮ ಸ್ವರೂಪಾತ್ಮಕವಾದವುಗಳನ್ನು ಸ್ವೀಕಾರ ಮಾಡುತಾರೆ. ಇಲ್ಲಿಯೂ ಸಹ ತತ್ತದ್ಗತ ಸ್ವಸ್ವರೂಪ ಭೋಗವೇ " ಸ್ವೀಕರಣ " ವೆಂದು ಪ್ರಸಿದ್ಧವಾಗಿದೆ.

ಹೀಗೆ ಸ್ವಯಂ ಸ್ವಯೋಗ್ಯವಾದುದನ್ನು ಭುಂಜಿಸಿ, ಲಕ್ಷ್ಮ್ಯಾದಿಗಳಿಗೂ ಅವರಕಿಂತ ಅವರಾದ ದೇವತಾ ಪರ್ಯಂತವಿರುವವರಿಗೂ, ಅವರವರಿಗೆ ಯೋಗ್ಯವಾದವುಗಳನ್ನು ಕೊಟ್ಟು ಉಳಿದ ಪ್ರಾಕೃತ (ರಸದಿಂದ) ರಸಾದಿಗಳಿಂದ ದೇಹದ ಮಾಂಸ ಮೊದಲಾದವುಗಳ ಉಪಚಯವ (ಅಭಿವೃದ್ಧಿಯು) ನ್ನು ಮಾಡುತ್ತಾನೆ.

ಇದರಂತೆಯೇ **ಅಣುತಮ**ವಾದ ಭಾಗದಲ್ಲಿಯೂ ಭಗವಂತನು ಸ್ವಯೋಗ್ಯವಾದ ಭಾಗವನ್ನು ಭೋಗಿಸಿ, ಲಕ್ಷ್ಮೀದೇವಿಯನ್ನಾರಂಭಿಸಿ ಪುಷ್ಕರ ಪರ್ಯಂತವಿರುವ ದೇವತೆಗಳಿಗೆ ಅವರವರಿಗೆ ಯೋಗ್ಯವಾದ ರಸವನ್ನು

ಕೊಟ್ಟು, ಉರ್ವರಿತವಾದ (ಉಳಿದ) ರಸದಿಂದ ಪ್ರಾಕೃತವಾದ ರಸಾದಿ ಳಿಂದ **ಇಂದ್ರಿಯಾದಿಗಳ** ಬೆಳವಳಿಗೆಯ (ಉಪಚಯುವ)ನ್ನು ಯಥ ಯೋಗ್ಯವಾಗಿ ಮಾಡುತ್ತಾನೆ. ಅದರಿಂದ ಶರೀರೇಂದ್ರಿಯುಗಳಲ್ಲಿ ತವ ತವ್ಮು (ಗೆ ಯೋಗ್ಯವಾದ) ವ್ಯಾಪಾರ ಮಾಡಲು ಶಕ್ತಿ ಸಾಮರ್ಥ್ಯಗಳುಂಟ ಗುವುವು. ಆದುದರಿಂದಲೇ ಅಲ್ಲಲ್ಲಿ ಅನ್ನಾದಿಗಳ **ಸಮೀಕರಣ** ದಿಂ (ಮಾಡ ವುದರ ದೆಸೆಯಿಂ)ದ "**ಸಮಾನ**" ಎಂದು ಕರೆಯುತ್ತಾನೆ.

ಈ ರೀತಿಯಾಗಿ ವೈಶ್ವಾನರನ್ನು ತಿಳಿದ ಯಾವ ಅಧಿಕಾರಿಯು ಸ್ವಯ ವೃಷ್ಟಾನ್ನವನ್ನು ಭುಂಜಿಸುತ್ತಾನೆಯೋ ಭೋಜನವನ್ನು ಮಾಡಿಸುತ್ತಾ ನೆಯೋ, ಅಥವಾ ಯಾವ ಚಂಡಾಲಾದಿಗಳಿಗೂ ಉಚ್ಛಿಷ್ಟವನ್ನಾದರೂ ಕೊಡ ತ್ತಾನೆಯೋ, ಅವೆಲ್ಲವೂ ಆ ಸಾಕ್ಷಾದ್ವೈಶ್ವಾನರಲ್ಲೇ ಹುತವಾದುದಾಗುತ್ತದೆ

ಹೀಗೆ ಸರ್ವ ಪ್ರಾಣಿಗಳಿಂದ ತಿನ್ನಲ್ಪಡುವ ಅನ್ನವು ಮುಖ್ಯಪ್ರಾಣನಿ ಅನ್ನವೂ, ಕುಡಿಯುವ ನೀರು ಮುಖ್ಯಪ್ರಾಣನಿಗೆ ವಸ್ತ್ರವೂ ಆಗುವುದೆಂದು ತಿಳಿಯುವುದು. ಅದು ಯಾವ ಭೋಜನದ ಪ್ರಾರಂಭದಲ್ಲಿ "**ಅಮೃತೋ ಪಸ್ತರಣಮಸಿ**" ಹೇ ಅಮೃತನೇ, ನೀನು ಪ್ರಾಣನಿಗೆ ಉಪಸ್ತರಣ ರೂಪ ವಸ್ತ್ರವು (ಹಾಸಲ್ಪಟ್ಟಿರುವ)ವು ಆಗಿದ್ದೀ ಎಂದು ಪ್ರಾರ್ಥಿಸಿ, ಯಾವ ಜಲವ ಕುಡಿಯ (ಪಾನ ಮಾಡ)ಲ್ಪಡುತ್ತದೆಯೋ ಅದು ಉಪಸ್ತರಣಾಖ್ಯವಾದ ವಸ್ತ್ರವು. ಯಾವುದು ಭೋಜನಾನಂತರದಲ್ಲಿ (ಊಟವಾದ ಕೊನೆಯಲ್ಲಿ) "**ಅಮೃತಾಪಿಧಾನಮಸಿ**" ಎಲೈ, ಅಮೃತನೇ, ನೀನು ಪ್ರಾಣನಿಗೆ ಪಿಧಾನಮಸಿ ಎಂದು ಪ್ರಾರ್ಥಿಸಿ ಕುಡಿದು ಪಾನಮಾಡುವ ನೀರು ಯಾವುದೋ ಆ ಆಚಮನೋದಕವು ಆಚ್ಛಾದನ ವಸ್ತ್ರವೆಂದು ಅನುಸಂಧಾನ ಮಾಡ ಬೇಕು.

"ಯದಿದಂ ಕಿಂಚ ಆಶ್ವಭ್ಯ ಆಕ್ರಿಮಿಭ್ಯ ಆಕೀಟಪತಂ—
—ಗೇಭ್ಯಸ್ತತೇ ಅನ್ನಮಾಪೋ ವಾಸಃ"

ಸರ್ವ ಪ್ರಾಣಿಗಳು ತಿನ್ನುವುವೆಲ್ಲವೂ ಸರ್ವಾಂತರ್ಯಾಮಿಯಾದ ನಿನಗೆ ಅನ್ನವು ಪಾನಮಾಡುವ ನೀರು ನಿನಗೆ ವಸ್ತ್ರವು ಎಂದು ತಿಳಿದು—

"ತದ್ವಿದ್ವಾಂಸಃ ಶ್ರೋತ್ರಿಯೋ ಅಶಿಷ್ಯತ ಆಚಾಮಂ—
—ತ್ಯಶಿತ್ವಾ ಚಾಚಾಮಂತೇ"

ಇದನ್ನು ತಿಳಿದು ವೇದಾಧ್ಯಯನ ಮಾಡತಕ್ಕ ಬ್ರಾಹ್ಮಣರು ಭೋಜನ ಮಾಡುವುದಕ್ಕೆ ಮೊದಲು ಆಪೋಶನ ತೆಗೆದುಕೊಳ್ಳುತ್ತಾರೆ ಊಟದ ಕೊನೆಗೂ ಉತ್ತರಾಪೋಶನವನ್ನು, ಪ್ರಾಣನ ಆಸ್ತರಣ ಉಪಸ್ತರಣ, ವಿಧಾನ, ವಸ್ತ್ರಬುದ್ಧಿಯಿಂದ, ತೆಗೆದುಕೊಳ್ಳುತ್ತಾರೆ. ಇಂಥಾ ಜ್ಞಾನಿಗೆ ಫಲವು—

ಪ್ರಾಣಸ್ಯ ವಸ್ತ್ರಬುದ್ಧ್ಯಾ ತು ಭೋಜನೋಭಯತಃ ಪಿಬೇತ್ ।
ಸ್ವರ್ಗೇ ಮುಕ್ತೌ ತಥಾ ದಿವ್ಯವಸ್ತ್ರಲಾಭೀ ಭವತ್ಯಲಂ ॥

ಸ್ವರ್ಗ, ಮುಕ್ತಿಗಳಲ್ಲೂ ಯಥೇಚ್ಛವಾಗಿ ದಿವ್ಯ ವಸ್ತ್ರ ಲಾಭವು ಆಗುವುದು.

ವಾಯುವು ವೈಶ್ವಾನರ ದೇವರನ್ನು ಸರ್ವ ವೇದಗಳಿಂದಲೂ ಸ್ತೋತ್ರ ಮಾಡುತ್ತಾನೆ. ಆ ಧ್ವನಿಯು ಕಿವಿಗಳನ್ನು ಮುಚ್ಚಿಕೊಂಡರೆ ಸಮುದ್ರ, ನದೀ, ಅಗ್ನಿಜ್ವಲನ ಶಬ್ದದಂತೆ ಕೇಳಲ್ಪಡುತ್ತದೆ.

“ ಅಯಮಗ್ನಿರ್ವೈಶ್ವಾನರೋ ಯೋಽಯಮಂತಃ ಪುರುಷೇ
ಯೇನೇದಮನ್ನಂ ಪಚ್ಯತೇ ಯದಿದಮದ್ಯತೇ ತಸ್ಯೈಷ
ಘೋಷೋ ಭವತಿ ಯಮೇತತ್ಕರ್ಣಾವಪಿಧಾಯ ಶೃಣೋತಿ
ಸ ಯದೋತ್ಕ್ರಮಿಷ್ಯನ್ ಭವತಿ ನೈನಂ ಘೋಷಂ ಶೃಣೋತಿ ”

ಜೀವನೊಳಗಿರುವ ಹರಿಯು ಜಠರಾಗ್ನಿಯಲ್ಲಿದ್ದು ಪ್ರಾಣಿಗಳ ಶರೀರವನ್ನು ಪ್ರೇರಿಸಿ ವೈಶ್ವಾನರಾಗ್ನಿಯೆಂದು ಹೆಸರುಳ್ಳವನಾಗಿ, ತಿಂದ ಅನ್ನವನ್ನು ಪಚನ ಮಾಡು (ಜೀರ್ಣೀಕರಿಸು)ವನು. ಕಿವಿಗಳನ್ನು ಮುಚ್ಚಿಕೊಂಡರೆ ಯಾವ ಧ್ವನಿಯನ್ನು ಕೇಳುತ್ತಾನೆಯೋ ಅದು ವಾಯುದೇವನು ಮಾಡುವ ವಿಷ್ಣುವಿನ ಸ್ತೋತ್ರವು. ಶ್ರೀಹರಿಯು ಶರೀರದಿಂದ ಮುಖ್ಯಪ್ರಾಣ ಮತ್ತು ಜೀವನೊಡನೆ ಹೊರಟುಹೋಗುವಾಗ ಈ ಧ್ವನಿಯು ಕೇಳುವುದಿಲ್ಲ. **ಅದೇ ಮರಣ ಸೂಚಕವು**.

ತಸ್ಯ ವಿಷ್ಣೋಸ್ತುತಿರಿಯಂ ಕ್ರಿಯತೇ ವಾಯುನಾ ಸದಾ ।
ಕರ್ಣೌ ಪಿಧಾಯ ಯಾ ನಿತ್ಯಂ ಶ್ರೋತುಂ ಶಕ್ಯಾಽಖಿಲೈಃಸದಾ ॥

ಕಿವಿಗಳನ್ನು ಮುಚ್ಚಿಕೊಂಡಾಗ ಸದಾ, ಯಾವಧ್ವನಿಯು ಕೇಳಲ್ಪಡುತ್ತದೆಯೋ ಅದು ವಾಯುದೇವನು ಮಾಡುವ ವಿಷ್ಣುವಿನ ಸ್ತೋತ್ರವು ಎಂದು “ **ತಂತ್ರಮಾಲಾ** ” ವಚನವು ಆದುದರಿಂದಲೇ ವಾಯುವಿನಿಂದ ಉರು **ಗಳ**

ಣಾತ್ ವಿಶೇಷವಾಗಿ ಸ್ತುತಿಸಲ್ಪಡುವುದರಿಂದ ವೈಶ್ವಾನರಿಗೆ ಉದರ
ಎಂದೂ ಹೆಸರು. ಶರೀರದಲ್ಲಿ ಯಾವ ಶಾಖ (ಔಷ್ಣ್ಯ)ವು ತೋರಿ ಕಾಣ
ಲ್ಪಡುತ್ತದೆಯೋ, ಅದೂ ಅಗ್ನಿಯಲ್ಲಿರುವ ಪ್ರಾಣಸ್ಥ ವೈಶ್ವಾನರನದೆ
ಆಗಿರುವುದು. ಆದುದರಿಂದ ವೈಶ್ವಾನರನನ್ನು "ದೃಷ್ಟಂ" "ಶ್ರುತಂ"
ಎಂದು ಉಪಾಸನೆ ಮಾಡತಕ್ಕದ್ದು.

ಹೀಗೆ ಹೃದಯದಲ್ಲಿ ಮೂರು ರೂಪಗಳಿಂದ ಸ್ಥಿತನಾಗಿದ್ದಾನೆ—

(1) ಹೃದಯವನ್ನು ವ್ಯಾಪಿಸಿಕೊಂಡು ಸ್ಥಿತನಾಗಿ ಹೃದಯನಾಮ
ನಾಗಿ ಜೀವರಿಗೆ ಅವಾಸಭೂತನಾಗಿ "ಸ್ಥಾನೇಶನು" ಎನಿಸಿದ ಪ್ರಾದೇಶ
ಪರಿಮಿತ ನಾಮಕನಾದವನು ಆದ್ಯ (ಮೊದಲನೆಯ)ನು.

(2) ಹೃತ್ಕರ್ಣಿಕೆಯ ಮೂಲದಲ್ಲಿದ್ದುಕೊಂಡು, "ಮೂಲೇಶ"
ನಾಮಕನಾಗಿ ಅಂಗುಷ್ಠಾಗ್ರ ಪ್ರಮಾಣಕನೂ ಸದಾ ಜೀವಾಧಾರಕನೂ
ಹೃದಯ ಮಧ್ಯದಲ್ಲಿರುವವನೂ ಆದುದರಿಂದಲೇ ಹೃದಯ ನಾಮಕನೂ
ಆದವನೇ ಎರಡನೆಯವ (ರೂಪ)ನು.

(3) ಹೃತ್ಕರ್ಣಿಕೆಯ ಅಗ್ರದಲ್ಲಿ ಸ್ಥಿತನಾದ "ಅಗ್ರೇಶ" ನಾಮಕನು
ಹೃದಯ ಮಧ್ಯದಲ್ಲಿ ಇರೋಣದರಿಂದ ಹೃದಯ ನಾಮಕನಾಗಿ ಅಗುಷ್ಠ
ಪ್ರಮಾಣವುಳ್ಳವನಾಗಿ "ಸುಷುಪ್ತಿ" ಕಾಲದಲ್ಲಿ ಜೀವರಿಗೆ ಪ್ರವೇಶ ಸ್ಥಾನ
ಭೂತನೂ ಪುನಃ ಪ್ರಬೋಧವ (ಎಚ್ಚರಿಕೆಯ)ನ್ನು ಕೊಟ್ಟು ಜೀವರನ್ನು
ಬಹಿಃಜಾಗ್ರದವಸ್ಥೆಗೆ ತರುವವನು ಮೂರನೆಯ ರೂಪವೆಂದು ತಿಳಿಯುವುದು.

ಹೃದಯದಲ್ಲಿರುವ ಲೋಹಿತ ಪಿಂಡವೇ ಹೃತ್ಕಮಲವೆಂದು ಹೇಳಲ್ಪಡು
ತ್ತದೆ. ಅಲ್ಲಿ ನಿಂತು ಜೀವನು ತಿಂದ ಅನ್ನದಲ್ಲಿ ಜೀವೇಂದ್ರಿಯಗಳಿಗೆ ಗೋಚರ
ಗಳಾದ ಗಂಧಾದಿ ಸಾರಭೂತವಾದುದು ಯಾವುದು ಉಂಟೋ ಅದು ಜೀವೋ
ಪಕಾರಕತ್ವದಿಂದ, ಒಂದು ಕೂದಲನ್ನು ಸಹಸ್ರ ಭಾಗವಾಗಿ ಸೀಳಿದರೆ ಅಂಥ
ವಿಭಾಗದಲ್ಲಿ ಒಂದಂಶವು ಎಷ್ಟು ಪರಿಮಿತಿಯುಳ್ಳದೋ ಅಂಥ ಅಷ್ಟು ಅಣೋ
ರಣ ಪರಿಣಾಮದಿಂದ ಇರುವ ನಾಡಿಗಳಲ್ಲಿ ಶುಕ್ಲಾದಿ (ಬಿಳಿ, ಕೆಂಪು, ನೀಲ,
ಕೃಷ್ಣ) ನಾನಾ ವರ್ಣವುಳ್ಳವನಾಗಿ ಭಗವಾನನು ಇರುವನು, ನಿಹಿತನಾಗಿದಾ
ನೆಂಬ ಕಾರಣದಿಂದ "ಹಿತಾ" ನಾಮಕ ನಾಡಿಗಳು ಪರಿತಃ ಸುತ್ತಲೂ ಇರು

ವುವು. ಅವುಗಳ ದ್ವಾರಾ ಬರುತ್ತಾನೆ. ಅದನ್ನು "ವಿರಾಟ್" ನಾಮಕನಾಗಿ ಲಕ್ಷ್ಮೀದೇವಿಯರ ಜೊತೆಯಲ್ಲಿ ಭುಂಜಿಸಿ ಅನುಭವಿಸುತ್ತಾನೆ. ಭೋಗಿಸುತ್ತಾನೆ. ಅದೇ ಆತನಿಗೆ ಅನ್ನವು.

ಹೀಗೆ ಹೃತ್ಕಮಲದ ಸುತ್ತಲೂ ಜಾಲಕದಂ (ಬಲೆಯಂ) ತೆ ಇರುವ "ವಪಾ" ರೂಪವು. "ವಯಾ" ಯಾವುದಿದೆಯೋ ಅದೇ ಆತನಿಗೆ ವಸ್ತ್ರವು.

ಹೃದಯದ ದೆಶೆಯಿಂದ ಊರ್ಧ್ವ ಭಾಗದಲ್ಲಿ ಸ್ಥಿತವಾದ ನಾಡಿಯೇ ಸಂಚಾರ ಮಾರ್ಗವು. ಮುಖ್ಯಪ್ರಾಣನು ಅದರ ನಿಕಟ (ಸಮೀಪ)ದಲ್ಲೇ ಸ್ಥಿತನಾಗಿ ಸರ್ವವೇದಗಳಿಂದಲೂ ಸದಾ ಭಗವಂತನನ್ನು ಸ್ತುತಿ ಮಾಡುತ್ತಿರುತ್ತಾನೆ. ಅದೇ ಸ್ತುತಿಯೇ ಕರ್ಣಗಳೆರಡನ್ನೂ ಕೈಗಳಿಂದ ಮುಚ್ಚಿಕೊಂಡು ಎಲ್ಲರಿಂದಲೂ ಕೇಳಲ್ಪಡುತ್ತದೆ.

ಆತನಿಗೆ ಪೂರ್ವದಿಕ್ಕಿನಲ್ಲಿ	"ಇಂದ್ರನು"	ಆತನ ಪತ್ನಿ ಶಚೀದೇವಿ
ಆಗ್ನೇಯ ಕೋಣದಲ್ಲಿ	"ಅಗ್ನಿಯು"	ಆತನ ಪತ್ನಿ ಸ್ವಾಹಾ:
ದಕ್ಷಿಣದಲ್ಲಿ	"ಯಮನು"	ಆತನ ಪತ್ನಿ–ಶ್ಯಾಮಲಾ
ನೈರುತ್ಯ ಕೋಣದಲ್ಲಿ	"ನಿಋತಿಯು"	ಆತನ ಪತ್ನಿಯು
ಪಶ್ಚಿಮದಲ್ಲಿ	"ವರುಣ"	ಆತನ ಪತ್ನಿ–ಗಂಗೆಯು
ವಾಯುವ್ಯ ಕೋಣದಲ್ಲಿ	"ವಾಯು"	ಆತನ ಪತ್ನಿಯು
ಉತ್ತರದಲ್ಲಿ	"ಚಂದ್ರ"	ಆತನ ಭಾರ್ಯೆ-ರೋಹಿಣಿಯು
ಈಶಾನ್ಯ ಕೋಣದಲ್ಲಿ	"ರುದ್ರ"	ಆತನ ಭಾರ್ಯೆ ಪಾರ್ವತಿಯು
ಊರ್ಧ್ವ ಭಾಗದಲ್ಲಿ	"ಬ್ರಹ್ಮಾ"	ಅವರ ಭಾರ್ಯೆಯರು
	"ವಾಯುರು"	ಸರಸ್ವತೀ. ಭಾರತೀ.
ಅಧೋ ಭಾಗದಲ್ಲಿ	"ಶೇಷ"	ಅವರ ಭಾರ್ಯೆಯರು
	"ಕಾಮರು"	ವಾರುಣೀ – ರತೀದೇವಿ

ಮತ್ತು ಉಪಾಸ್ಯನಾದ ಭಗವಂತನಿಗೆ "ಆಯತನಂ" "ಪ್ರತಿಷ್ಠಾ" ಎಂಬ ರಹಸ್ಯ ನಾಮಗಳನ್ನೂ ಮತ್ತು ಅವುಗಳ ಪ್ರವೃತ್ತಿ ನಿಮಿತ್ತವನ್ನೂ ಈ ರೀತಿ ಚತುಷ್ಟಯ (ನಾಲ್ಕು)ನ್ನೂ ಉಪಾಸಕನು ಸರಿಯಾಗಿ ತಿಳಿದುಕೊಳ್ಳಬೇಕು.

ಅಲ್ಲಿ "ಹೃದಯಾ"ಖ್ಯನಾದ ಭಗವಂತನ ಮೂರು ರೂಪಗಳಿಗೂ ಹೃದ ಯವೇ "ಆಯುತನ"ವು ರಮಾದೇವಿಯು. "ಪ್ರತಿಷ್ಠಾ" "ಸ್ಥಿತಿಃ" ಎಂದು ರಹಸ್ಯ ನಾಮದಿಂದ ಕರೆಯಿಸಿಕೊಳ್ಳಲ್ಪಡುವಳು.

1. "ಅಲ್ಲಿ ಸ್ಥಾನೇಶ"ನ ವಿಷಯದಲ್ಲಿ ಜೀವರಿಗೆ ಸರ್ವದಾ ಸ್ಥಿತಿಯನ್ನು ಕೊಡುವುದರಿಂದ ತತ್ಪದ ಪ್ರವೃತ್ತಿ ನಿಮಿತ್ತವು. ಆದುದರಿಂದಲೇ ಆತನಿಗೆ "ಸ್ಥಾನೇಶ"ನೆಂದು ನಾಮವು.

2. "ಮೂಲೇಶ"ನ ವಿಷಯದಲ್ಲಿ ಅಲ್ಲಿ ಧಾರಕತ್ವದಿಂದ ಸ್ಥಿತಿ ಕಾರಣತ್ವ ವಿರುವುದರಿಂದ ತತ್ಪದ ಪ್ರವೃತ್ತಿ ನಿಮಿತ್ತವನ್ನೂ ತಿಳಿಯುವುದು.

3. "ಅಗ್ರೇಶ"ನ ವಿಷಯದಲ್ಲಿ ಸುಷುಪ್ತಿಯಲ್ಲಿ ಜೀವರನ್ನು ಪ್ರವೇಶಿಸುವುದರಿಂದ ಸ್ಥಿತಿ ಹೇತುತ್ವವೂ ತತ್ಪದ ಪ್ರವೃತ್ತಿನಿಮಿತ್ತವೆಂದೂ ತಿಳಿಯುವುದು.

ಬಿಂಬನಿಗಾದರೋ "ಹೃದಯ" ಶಬ್ದವಾಚ್ಯನಾದ "ಸ್ಥಾನೇಶನೇ ಆಯುತನ"ವು. ರಮಾ, ಮುಖ್ಯ ಪ್ರತಿಮೆಯು. ಅನಂತರ ಮುಖ್ಯಪ್ರಾಣನು. ತದನು ಕ್ರಮವಾಗಿ ಪುಷ್ಕರಾಂತರಾದ ದೇವತೆಗಳು, ಆಮೇಲೆ ಜೀವರು ಆತನಿಗೆ "ಹರಿ"ಯು ಎಂದು ರಹಸ್ಯ ನಾಮವು.

ಅನಿಷ್ಟ (ಪಾಪದೋಷ)ಗಳನ್ನು ಪರಿಹರಿಸುತ್ತಾನಾಗಿ "ಹರಿ"ಯೆಂದೂ, ಆತ್ಯಂತಿಕಾನಿಷ್ಟನಿವೃತ್ತಿರೂಪ "ಮೋಕ್ಷ"ದಾತೃತ್ವವು "ಹರಿ"ಪದ ಪ್ರವೃತ್ತಿ ನಿಮಿತ್ತವು.

ಪಾಪಪರಿಹಾರಕತ್ವದಿಂದಲೂ, ಮೋಕ್ಷ ಪ್ರದತ್ವದಿಂದಲೂ "ಹರಿಃ" ಎಂದು ನಾಮವು. ಇಂಥಾ ಶ್ರೀ ಹರಿಯು ಹೀಗೆ ಜೀವರಿಗೆ ಇಷ್ಟದಾನ ಮಾಡುವುದಕ್ಕೋಸ್ಕರವೇ ಉತ್ತಮವಾದ "ಶ್ವೇತದ್ವೀಪ"ವೆಂದು ಹೆಸರುಳ್ಳ ಸ್ಥಾನವನ್ನೂ, ಚಿದಾನಂದರಸಾತ್ಮಕ ಸುಧಾವನ್ನು ಶ್ರವಿಸುವ "ಅಶ್ವತ್ಥ"ವನ್ನೂ, ಪುನಃ ಪುನಃ ಪರಿತ್ಯಾಗ ಶೂನ್ಯ ವಾಗಿರುವುದರಿಂದಲೇ, "ಅಪರಾಜಿತ" ನಾಮಕ ಪುರವನ್ನೂ, ಆ ಪ್ರಭು ನಿರ್ಮಿತವಾದ ಯಥೇಚ್ಛೆಯಂತೆ ಪಾದ ಪ್ರಸರಣೋಪಯೋಗಿತ್ವದಿಂದ ತನಗೆ ಸಮವಾದ ಅಳತೆಯು (ಪರಿಮಾಣ) ವುಳ್ಳ ಚಿತ್ ಸುವರ್ಣಮಯವಾದ "ವಿಮಿತಿ" ಎಂಬ ಪರ್ಯಂಕ (ಮಂಚ)ವನ್ನೂ, ಅಲೌಕಿಕವಾದ ಅನ್ನ, ವಸನವೇ ಮೊದಲಾದ ವಿವಿಧ ಭೋಗ ಭವನವನ್ನೂ,

"ಅರ""ಣ್ಯ" ಎಂಬ ಸುಧಾ ಸಮುದ್ರ "ಸರೋವರ"ಗಳನ್ನೂ, ಪ್ರಮದಾತಿರೇಕ ದಿಂದ, ಅನವರತವೂ, ಎಡಬಿಡದೆ ಅಮರಗಣಗಳಿಂದ ಆಚರಿಸಲ್ಪಡುತ್ತಿರುವ ಸ್ವಕೀಯ (ತನ್ನ) ಗುಣಗಣಗಳ ಮನಸೋಪಾಸನೆ, ವಾಚಾ ವರ್ಣನ ಮತ್ತು ಕಾಯದಿಂದ ಪ್ರಹ್ವೀ ಭಾವ ಭಕ್ತಿಗಳಿಂದ ಸವಿನಯವಾಗಿ ಅವಲೋಕನಗಳೆಲ್ಲ ವನ್ನೂ ತ್ಯಜಿಸಿಬಿಟ್ಟು,—ಭರತಖಂಡ ರೂಪವಾದ "ಕರ್ಮಸ್ಥಾನ"ಕ್ಕೆ ನವ ದ್ವಾರಗಳಿಂದ ಮಲಗಳನ್ನು ಶ್ರವಿಸುವ ಈ ದೇಹಾಖ್ಯ "ಅಶ್ವತ್ಥ"ವನ್ನು ಕ್ಷಣ ಭಂಗುರತಯಾ ನಾಶಹೊಂದುವ ಪುನಃ ಪುನಃ ಪರಿತ್ಯಜ್ಯಮಾನವಾದ "ಹೃದಯ"ವೆಂಬ "ಪುರ"ವನ್ನು. ಅಲ್ಲಿರುವ ಲೋಹಿತ (ಮಾಂಸ) ಪಿಂಡರೂಪ ಅಣುಪರ್ಯಂಕ ಅಲ್ಪವಾದ ಕಟು (ಖಾರ, ಕಹಿ) ಲವಣಾದಿ ರಸಭೋಗವನ್ನು, ಕಥಂಚಿತ್, ಎಲ್ಲೋ ಅಲ್ಪ ಸ್ವಲ್ಪವುಟ್ಟಿಗೆ ಉಪಾಸನೆಯನ್ನು, ಪ್ರತಿ ಶ್ಲೋಕ ದಲ್ಲೂ ಅಬದ್ಧ ಸ್ತವನವನ್ನೂ, ಕಾಯ ಪ್ರವಣಗತ ಆಭಾಸ ದರ್ಶನವನ್ನೂ ಸಹ ಅನುಕಂಪದಿಂದಲೇ ಭಕ್ತಾನುಗ್ರಹಾರ್ಥವಾಗಿ, ಸ್ವೀಕರಿಸುತ್ತಾ, ಈ ಶರೀರದಲ್ಲಿ ಕೃಪೆಯಿಂದ ವಾಸಿಸುತ್ತಿದ್ದಾನೆ.

ಇಂದ್ರಿಯ ವ್ಯಾಪಾರ

ಶ್ರೀಹರಿಗೆ ಯಾವಾಗ ಮನಸ್ಸಿನಿಂದ ವಿಹಾರ ಮಾಡಬೇಕೆಂದು ಇಚ್ಛೆ ಯುಂಟಾಗುತ್ತದೆಯೋ, ಆಗ ಬಿಂಬ ಮನಸನಾದ ಅನಿರುದ್ಧನಿಗೆ "ಬ್ರಹ್ಮ" ನನ್ನು ಮೊದಲು ಮಾಡಿಕೊಂಡು "ಪುಷ್ಕರನ"ವರೆವಿಗಿರುವ ದೇವತೆಗಳ ದ್ವಾರಾ, ಜೀವಸ್ವರೂಪ ಭೂತವಾದ ಮನಸ್ಸನ್ನು ತೆಗೆದುಕೊಂಡು ಬಾಹ್ಯ ವಾದ ಮನಸ್ಸಿನಲ್ಲಿ ಪ್ರವೇಶವು ಉಂಟಾಗುತ್ತದೆ.

ಅನಂತರ ಬಿಂಬದ ಮಸಿನ ಅನಿರುದ್ಧನ ಬಾಹ್ಯಮನಸ್ಸಿನಲ್ಲಿ ಸ್ಥಿತನಾದ ಅನಿರುದ್ಧನಿಂದ ಏಕೀಭಾವವಾಗುವುದು. ಬ್ರಹ್ಮಾದಿ ಪುಷ್ಕರಾತರಾದ ದೇವತೆ ಗಳಿಗೂ ಸಹ ಬಾಹ್ಯಮನಸ್ಥರಾದ ಬ್ರಹ್ಮಾದಿ ಪುಷ್ಕರಾಂತರಾದ ದೇವತೆ ಗಳೊಡನೆ ಏಕೀಭಾವವು ಆಗುವುದು.

ಜೀವನ ಮನಸ್ಸಾದರೋ ಬಾಹ್ಯ ಮನಸ್ಸಿನೊಡನೆ ಮಿಶ್ರೀಭಾವ ವಾಗ
ವುದು. ಅಗ ವೃತ್ತಿಗಳ ಅಭಿವ್ಯಕ್ತಿಯು. ಅಲ್ಲಿ ಬಾಹ್ಯ ಮನಸ್ಸಾದರೊ
ಅನೇಕ ವಿಧವಾದದು.

(a) 1. ಮನಸ್ಸು, 2. ಬುದ್ಧಿ, 3. ಅಹಂಕಾರ, 4. ಚಿತ್ತ
5. ಚೇತನ. ಎಂದು ಐದು ವಿಧವು.

(b) 1. ಕಾಮ, 2. ಸಂಕಲ್ಪ, 3. ವಿಚಿಕಿತ್ಸಾ, 4. ಶ್ರದ್ಧಾ
5. ಅಶ್ರದ್ಧಾ, 6. ಧೃತಿ, 7. ಅಧೃತಿ, 8. ಹ್ರೀಃ, 9. ಭೀಃ, 10. ಗೀಃ
ಎಂದು ಹತ್ತು ವಿಧವು.

(c) 1. ವಿಮಲ, 2. ಉತ್ಕರ್ಷಿಣಿ, 3. ಜ್ಞಾನಾ, 4. ಕ್ರಿಯಾ
5. ಯೋಗಾ, 6. ಪ್ರಹ್ವಿ, 7. ಸತ್ಯಾ, 8. ಈಶಾನಾ, 9. ಅನುಗ್ರಹಾ
ಎಂದು ನವ ವಿಧವು.

(d) 1. ಕಾಲ, 2. ಮಾಯಾ, 3. ನಿಯತಿ, 4. ಮತಿ, 5. ವಿದ್ಯಾ
6. ಕಾಲ, 7. ಪ್ರವೃತಿ, 8. ಸ್ಫೂರ್ತಿ, 9. ಸಂವಿತ್, 10. ಪ್ರತಿಷ್ಠಾ
11. ಶಕ್ತಿಃ. ಎಂಬ ಭೇದದಿಂದ ಹನ್ನೊಂದು ವಿಧವಾದದು.

ಹಾಗೆಯೇ 6. ಶತ, 7. ಸಹಸ್ರಾದಿ. ವಿಧಗಳೆಂದು ಉಕ್ತವಾಗಿದೆ.
ಇದರಂತೆಯೇ ಜೀವಸ್ವರೂಪ ಭೂತವಾದ ಮನಸ್ಸೂ ಅನೇಕ ವಿಧವಾದುದು.
ಅದರತೆಯೇ ಅವುಗಳಿಗೆ ನಿಯಾಮಕಗಳಾದ ಬಿಂಬ ಮನಸ್ಸೂ ಕೂಡ ಅನೇಕ
ವಿಧಗಳಾದವು.

ಅದರಲ್ಲಿ ಅನಿರುದ್ಧಾದಿ ಪಂಚರೂಪಗಳೇ ಬಿಂಬನ ಮನೋ ಬುದ್ಧ್ಯಾದಿ
(ಅಹಂಕಾರ, ಚಿತ್ತ ಚೇತನ) 1. ಐದಕ್ಕೂ ಸಹ, 2. ಮತ್ಸ್ಯಾದಿ ದಶ
ರೂಪಗಳೇ ಕಾಮಾದಿ ಹತ್ತು, 3. ವಿಮಲಾದಿ ಒಂಭತ್ತು, 4. ಕಲಾ
ಮೊದಲ್ಗೊಂಡು ಹನ್ನೊಂದಕ್ಕೂ ನವ, (ದಶ+ಏಕಂ) (ಏಕಂ+ದಶಂ)
ಹನ್ನೊಂದು ಎಂದು. 6. ನಾರಾಯಣಾದಿ (ನಾರಾಯಣಃ, ನರಃ, ಶೌರಿಃ
ಇತ್ಯಾದಿ) ಶತರೂಪಗಳೇ ಶತಕವು, 7. ವಿಶ್ವಂ, ವಿಷ್ಣುರ್ವಷಟ್ಕಾರಃ,
ಇತ್ಯಾದಿ ಸಹಸ್ರ ರೂಪಗಳೇ ಸಹಸ್ರ ವಿಧವು ಇತ್ಯಾದಿ ತಿಳಿಯುವುದು.

ಅಲ್ಲಿ ಸ್ವರೂಪ ಮನೋ ಮಿಶ್ರಿತಗಳಿಂದ ಬಾಹ್ಯ ಮನಸ್ಸುಗಳಿಂದ ಯಾವಾಗ ಮನಸ್ಸು ಮೊದಲಾದ ಭೇದದಿಂದ **ಐದು** ವಿಧಗಳೂ, ಕ್ಷಾಮಾದಿ ಭೇದದಿಂದ ದಶವಿಧಗಳೂ, ವಿಮಲಾದಿ ಭೇದದಿಂದ **ನವ**ವಿಧಗಳೂ, ಕಾಲಾದಿ ಭೇದದಿಂದ **ಏಕಾದಶ** (ಹನ್ನೊಂದು) ವಿಧಗಳೂ, ಶತಾರ್ಥ ವಿಷಯಕದಿಂದ **ಶತ** ವಿಧಗಳೂ, ಸಹಸ್ರಾದಿ ಪದಾರ್ಥ ವಿಷಯಕತಯಾ **ಸಹಸ್ರಾದಿ** ವಿಧ ಗಳೂ ಆದ ವೃತ್ತಿಗಳು, ಉತ್ಪನ್ನವಾಗುವುವೋ, ಆಗ ಅವುಗಳ ನಿಯಾಮಕ ತಯಾ **ಅನಿರುದ್ಧಾದಿಗಳ** ದೆಶೆಯಿಂದ ಅನಿರುದ್ಧಾದಿ ರೂಪಗಳೂ, ಮತ್ಸ್ಯಾದಿಗಳಿಂದ ಮತ್ಸ್ಯಾದಿಗಳು, ನಾರಾಯಣಾದಿಗಳ ದೆಶೆಯಿಂದ ನಾರಾ ಯಣಾದಿಗಳು ವಿಶ್ವಾದಿಗಳ ದೆಶೆಯಿಂದ ವಿಶ್ವಾದಿಗಳು ಇತ್ಯಾದಿ ರೂಪಗಳಿಂದ **ಐದು ಹತ್ತು** ಹನ್ನೊಂದು, ನೂರು, ಸಹಸ್ರವೇ ಮೊದಲಾದ ಸಂಖ್ಯಾಕಗ ಳಾದ ಮನೋಬುದ್ಧಿ ಮೊದಲಾದ (ತತ್ತತ್) ಆಯಾ ವೃತ್ತಿ ನಿಯಾಮಕ ಗಳಾಗಿಯೇ ಪ್ರಾದುರ್ಭವಿಸುವುವು.

ಇದೇ ರೀತಿಯಾಗಿ **ಬ್ರಹ್ಮನನ್ನು** ಪ್ರಾರಂಭಿಸಿ, ಪುಷ್ಕರನ ಕೊನೆಯು ವರೆವಿಗೆ ದೇವತೆಗಳ ರೂಪಗಳೂ ಪ್ರಾದುರ್ಭವಿಸುವುವು. ಯಾವಾಗ ವೃತ್ತಿ ಗಳು ವಿಲೀನವಾಗುತ್ತವೆಯೋ, ಆಗ ಭಗವಂತನ ಮತ್ತು ಬ್ರಹ್ಮಾದಿಗಳ ರೂಪಗಳೂ ಸ್ವಯಂ ತಮ್ಮ ವ್ಯಂಜಕ ರೂಪಗಳೊಡನೇಯೇ ಏಕೀಭವಿ ಸುವುವು.

ಹೀಗೆ ಯಾವ ರೀತಿಯಲ್ಲಿ ಮನಸ್ಸಿನಲ್ಲಿ ಭಗವಂತನ ಮತ್ತು ಬ್ರಾಹ್ಮಾ ದಿಗಳ ರೂಪಗಳು ಇವೆಯೋ ಮನೋವಿಷಯಗಳಲ್ಲೂ ಅವು ಇರುವುವು.

ಅಲ್ಲಿ ಕದಾಚಿತ್ ಲೀಲೆಯಿಂದ ವಿಷಯಗಳಲ್ಲಿರುವ ರೂಪಗಳು ಅಯ ಸ್ಕಾಂತವು ಕಬ್ಬಿಣದ ಚೂರನ್ನು ಎಳೆಯುವಂತೆ, ಮನಸ್ಸು ತನ್ನ ಅಭಿಮುಖ ಮಾಡಿಕೊಂಡು ಅಲ್ಲಲ್ಲಿ ಪರಿಭ್ರಮಿಸುತ್ತದೆ. ಮಸ್ಸಿನಲ್ಲಿರುವ ರೂಪಗಳೂ ಮನಸ್ಸಿನೊಡನೆಯೇ ತನ್ನ ಅನೂಕೂಲ್ಯದಿಂದ ಅಲ್ಲಲ್ಲಿ ಭ್ರಮಿಸು (ಅಲೆಯು) ತ್ತದೆ.

ಆದುದರಿಂದಲೇ ಶ್ರವಣ ಸಮಯದಲ್ಲಿ '' ಮನಸ್ಸಿನಿಂದ ಬೇರೆಯಾದು ದನ್ನು ಸ್ಮರಿಸಬೇಡ '' ಮನಸ್ಸಿಟ್ಟು ಕೇಳು. ಎಂದು ದೊಡ್ಡವರಿಂದ ಬೋಧಿತ

ರಾಗಿ ಪ್ರತಿ (ವಕ್ತೃತರರು) ಹೇಳುವವರಾಗುತ್ತಾರೆ. "ತತ್ತದ್ವಿಷಯದಲ್ಲಿರುವ ಸೌಂದರ್ಯಾದಿಗಳನ್ನು ನೋಡಿ ಹೀಗೆ ಬಲಾತ್ಕಾರದಿಂದ ಅಲ್ಲಲ್ಲಿ ನನ್ನ ಮನಸ್ಸು ಭ್ರಮಿಸಿ ಓಡುತ್ತದೆ. ಆ ವಿಷಯದಲ್ಲಿ ಆಗ ನಾನೇನು ಮಾಡಲಿ?" ಎಂದು ಉತ್ತರವನ್ನು ಕೊಡುತ್ತಾನೆ.

ಒಂದು ಕಾಲದಲ್ಲಿ ಮನಸ್ಸಿನಲ್ಲೇ ಸ್ಥಿತವಾಗಿರುವ ರೂಪಗಳು, ಹೇಗೆ ಬಹು ಕಾಲಾನಂತರ ಮನೆಗೆ ಬಂದ ಅತಿ ಪ್ರಿಯನಾದ ಬಂಧುವನ್ನು ನೋಡಲು, ವೇಗದಿಂದ ಮನೆಯ ದೆಶೆಯಿಂದ ಬೇರೆ ಬಂಧುವನ್ನು ನಿರೀಕ್ಷಿಸಲು ಹೇಗೆ ತಾನೆಯೇ ಹೋಗುತ್ತಾನೆಯೋ, ಅದರಂತೆಯೇ ವಿಷಯಗಳಲ್ಲಿರುವ ಸ್ವರೂಪಗಳನ್ನು ನೋಡಲು ಸ್ವಯಮೇವ ಅಲ್ಲಲ್ಲಿ ಹೋಗುತ್ತಾನೆ. ಹೋಗಿ ಅವರನ್ನು ಆಲಿಂಗಿಸಿ ಪುನಃ ಹಿಂದಿರುಗಿ ಬರುತ್ತಾನೆ.

ಇದೇ ರೀತಿಯಾಗಿ ಬಹ್ಮಾದಿ ರೂಪಗಳೂ ಸಹ ಹೀಗೆ ಮನಸ್ಸಿನಲ್ಲಿರುವ ಅನಿರುದ್ಧನು ಪ್ರತಿಕ್ಷಣವೂ ಕಾಮವೇ ಮೊದಲಾದ ಅನೇಕ ವಿಕಾರಗಳನ್ನು ಉತ್ಪಾದನೆ ಮಾಡಿ, ತದಾತ್ಮಕ ಸ್ವರೂಪಗಳನ್ನೂ ಅನುಭವಿಸುತ್ತಾನೆ. ಹಾಗೆಯೇ ಅವುಗಳ ದ್ವಾರಾ, ವಿಷಯಗಳಲ್ಲಿರುವ ಮತ್ತು ಅವುಗಳಲ್ಲಿ ಸ್ಥಿತವಾಗಿರವ ರಮಾ ಬ್ರಹ್ಮಾದಿ ರೂಪಗಳನ್ನೂ ಸಹ ಅನುಭವಿಸುತ್ತಾನೆ. ರಾಮಾ ಬ್ರಹ್ಮರೂಪ ಭೋಗವೆಂಬುದು (ತತ್ತದ್ಗತ) ಅವುಗಳಲ್ಲಿರುವ ಸ್ವಸ್ವರೂಪ ಭೋಗವೇನೆ ಆಗಿರುವುದು.

ಇವರಂತೆಯೇ ರಮಾ ದೇವಿಯೂ ಸಹ ವೃತ್ತಿಗಳಲ್ಲಿರುವ ಸ್ವಸ್ವರೂಪ ಭೋಗವೇ ಬ್ರಹಾದಿರೂಪ ಭೋಗವೆಂಬುದು. ಇದೇ ಪ್ರಕಾರವಾಗಿಯೇ ಬ್ರಹ್ಮಾದಿಗಳಲ್ಲಿಯೂ ಅನುಸಂಧಾನ ಮಾಡಬೇಕು.

ಹೀಗೆ ಭಗವಾನ್ ಸ್ವಯಂ ತಾನು ಸ್ವಯೋಗ್ಯವಾದುದನ್ನು ಸ್ವೀಕರಿಸಿ (ಭುಂಜಿಸಿ) ಅನುಭವ ಮಾಡಿ, ರಮಾದೇವಿ, ಬ್ರಹ್ಮರನ್ನು ಆರಂಭಿಸಿ ಪುಷ್ಕರಸೇವಕರಾಗಿರುವ ದೇವತೆಗಳಿಗೆ ಅವರವರಿಗೆ ಯೋಗ್ಯವಾದ ಭೋಗವನ್ನು ಕೊಟ್ಟು, ಅನಂತರ ಉರ್ವರಿತ (ಉಳಿದದ್ದು) ವಾದುದನ್ನು ಜೀವ ಮನೋ ಗೋಚರವಾದುದನ್ನು ಅವನಿಗೆ ಕೊಡುತ್ತಾನೆ.

ಇಲ್ಲಿ ಯದ್ಯಪಿ ಸರ್ವದೇವತೆಗಳೂ ಸರ್ವ ವ್ಯಾಪಾರ ನಿರ್ವಾಹಕರಾ
ರೂ ಸಹ (ಕ್ವಚಿತ್, ಕ್ವಚಿತ್,) ಕೆಲವು ವೇಳೆಗಳಲ್ಲಿ ವ್ಯಾಪಾರ
ರ್ವಹಕ ವಿಶೇಷವುಳ್ಳವರೂ ಆಗುತ್ತಾರೆ. ಅದು ಹೇಗೆಂದರೆ—

ಮನಸ್ಸಿನಲ್ಲಿ "ನಾನು" "ನನ್ನದು" ಎಂಬ ಈ ಎರಡು ವೃತ್ತಿಗಳಿಗೂ
ರಕನು "ರುದ್ರನು." ಸ್ಥೂಲ ವಿಷಯದಲ್ಲಿ ಮನಃ ಪ್ರೇರಕರು ಚಂದ್ರ,
ದ್ರ, ರುದ್ರ, ವರುಣರು. ಅದರಲ್ಲೂ ಯಜ್ಞವೇ ಮೊದಲಾದ ಕರ್ಮ
ಲ್ಲಿ ಚಂದ್ರ ಇಂದ್ರರೂ, ವಾಪೀ ಕೂಪ, ತಟಾಕ ಮೊದಲಾದ ನಿರ್ಮಾಣ
ರ್ಯಗಳಲ್ಲಿ ವರುಣನೂ, ಪ್ರೇರಕರು.

ಸೂಕ್ಷ್ಮ ವಿಷಯದಲ್ಲಿ ಮನಃ ಪ್ರೇರಕರು ಬ್ರಹ್ಮಾ, ವಾಯು, ಶೇಷ,
, ಗರುಡರು. ಅದರಲ್ಲಿಯೂ ಜ್ಞಾನ ಭಕ್ತ್ಯಾದಿಗಳಲ್ಲಿ ಬ್ರಹ್ಮಾ ಮತ್ತು
ಖ್ಯ (ವಾಯು) ಪ್ರಾಣರೂ, ಶಾಸ್ತ್ರ ವ್ಯಾಖ್ಯಾನದಲ್ಲಿ ಶೇಷನೂ, ಮನನ
(ಚಿಂತನೆಯಲ್ಲಿ) ಶಿವನೂ, ಧ್ಯಾನದಲ್ಲಿ ಗರುಡನೂ, ಹಾಗೆಯೇ ವೇದಾ
ರ್ಥನ ಶ್ರವಣದಲ್ಲಿಯೂ ಗರುಡನೂ, ಪಾಂಚರಾತ್ರ ಶ್ರವಣದಲ್ಲಿ ಶೇಷನೂ
ರಕರು. ಇತ್ಯಾದಿಯನ್ನು ತಿಳಿಯುವುದು.

ಮನಸ್ಸಿನಲ್ಲಿ ಭಗವದುಪಾಸಕನಿಂದ "ಆಯತನಂ" "ಪ್ರತಿಷ್ಠಾ" ಎಂಬ
ಮಗಳು ಮತ್ತು ಅವುಗಳ "ಪ್ರವೃತ್ತಿ" ಮತ್ತು "ನಿಮಿತ್ತ"ಗಳನ್ನೂ ಈ
ಲ್ಕನ್ನು ಆವಶ್ಯಕವಾಗಿ ತಿಳಿಯಬೇಕು. ಇಲ್ಲಿ ಮನಸ್ಸಿನಲ್ಲಿ ಸ್ಥಿತನಾದ
ರುದ್ಧನಿಗೆ ಮನವೇ "ಆಯತನ"ವು. ಅಲ್ಲಿರುವ "ರಮಾ" ಪ್ರತಿಮೆಯು
ತಿಷ್ಠಾ" ಎನಿಸಿರುವಳು.

ಜ್ಞಾನೇಂದ್ರಿಯಗಳಿಂದ ಭೋಗಪ್ರಕಾರ

"ಆನಂದಃ" ಎಂಬುವ ರಹಸ್ಯ ನಾಮವು. ಆನಂದವನ್ನು ಕೊಡುವುದು,
ನ್ನು ಕೊಡಲು ಪ್ರವೃತ್ತಿ ನಿಮಿತ್ತವೇ ಆನಂದನೆನಿಸಲು ಕಾರಣವು.
ದರಿಂದಲೇ ಪುರುಷನು ಸ್ತ್ರೀಯನ್ನು ಸೇರಲು ಅಪೇಕ್ಷಿಸುತ್ತಾನೆ. ಸ್ತ್ರೀ
ನ್ನು ಹೊಂದಿ ಸಂಬಂಧ ಮಾಡುತ್ತಾನೆ. ಅನಂತರ ಪುತ್ರನು ಹುಟ್ಟುತ್ತಾನೆ.
ಹುಟ್ಟಿದ ಮಗನು ತಂದೆಗೆ ಆನಂದವನ್ನು ಕೊಡುತ್ತಾನೆ.

ಯಾವಾಗ ಬಿಂಬರೂಪಿಯಾದ ಹರಿಯು "ಶ್ರೋತ್ರೇಂದ್ರಿಯ"ದಿ
(ಕಿವಿಯಿಂ)ದ ಆಖ್ಯಾನ ರೂಪ ಶಬ್ದಗಳನ್ನು ಕೇಳಿ ಅನುಭವಿಸಲು ಇಚ್ಛಿಸ
ತ್ತಾನೆಯೋ, ಆಗ ಬಿಂಬ ಶ್ರೋತ್ರೇಂದಿಯವುಳ್ಳ ವಾಸುದೇವನಿಗೆ ಬ್ರಹ್ಮಾ
ದೇವತೆಗಳಿಂದ ಅಧಿಷ್ಠಿತಗಳಾದ ಜೀವಶ್ರೋತ್ರೇಂದ್ರಿಯ ದ್ವಾರಾ, ಬಾಹ
ಶ್ರೋತ್ರ ಪ್ರವೇಶವು ಉಂಟಾಗುತ್ತದೆ ಅನಂತರ ಬಿಂಬ ಶ್ರೋತ್ರೇಂದ್ರಿಯ
ನಾದ ವಾಸುದೇವನಿಗೆ ಬಾಹ್ಯಶ್ರೋತ್ರೇಂದ್ರಿಯದಲ್ಲಿ ಸ್ಥಿತನಾದ ವಾಸುದೇ
ನೊಡನೇ ಏಕೀಭಾವವು ಉಂಟಾಗುವುದು. ಇದರಂತೆಯೇ ಬ್ರಹ್ಮಾದಿಗಳಿಗೂ
ಬಾಹ್ಯಶ್ರೋತ್ರದಲ್ಲಿ ಸ್ಥಿತರಾದ ಸ್ವಸ್ವರೂಪಗಳೊಂದಿಗೆ ಏಕೀಭಾವವು. ಜೀ
ಸ್ವರೂಪ ಶ್ರೋತ್ರೇಂದ್ರಿಯಕ್ಕಾದರೋ ಬಾಹ್ಯ ಶ್ರೋತ್ರೇಂದ್ರಿಯದಿಂ
ಮಿಶ್ರೀಭಾವವು. ಆ ಮೇಲೆ ಶಬ್ದಾನುಭವವು. ಈ ವಿಧವಾದ ಪ್ರನಾಡಿ
ಯನ್ನೇ (ಕ್ರಮವನ್ನೇ) ಅನ್ಯತ್ರದಲ್ಲೂ ಅನುಸಂಧಾನ ಮಾಡತಕ್ಕದ್ದು.

ವರ್ಣಾತ್ಮಕ, ಧ್ವನ್ಯಾತ್ಮಕ ಶಬ್ದಗಳು

ಶಬ್ದಗಳು "ವರ್ಣಾತ್ಮಕ"ವೆಂತಲೂ "ಧನ್ಯಾತ್ಮಕ"ವೆಂತಲೂ ಎರಡು
ವಿಧವು. ಇವೆರಡರಲ್ಲೂ ತತ್ತಚ್ಛಬ್ದವಾಚ್ಯಗಳಾದ ಭಗವದ್ರೂಪಗಳು ಇವೆ.

ವಾಸುದೇವ ನಾಮಕನಾದ ಶ್ರೀಹರಿಯಿಂದ ಶ್ರೋತ್ರೇಂದ್ರಿಯದಿಂದ
ಗ್ರಹಿಸಲ್ಪಡುವ ವಿಷಯರೂಪಗಳು ಸುಖಪ್ರದಗಳಾಗಿವೆ. ಹೀಗೆ (ಅದರ)
ತತ್ಪ್ರಕಾಶ್ಯವಾದ ಗುಣ, ಕ್ರಿಯ, ವೃತ್ತಿ ಮೊದಲಾದ ರೂಪಗಳು
ಯಾವುವಿವಿಯೋ, ಅವು ಮನಸ್ಸಿನಿಂದ ಅನುಭವಿಸಲ್ಪಡುತ್ತವೆ. ಇಲ್ಲಿ
ವರ್ಣಾತ್ಮಕಗಳಾದ ಶಬ್ದಗಳು ಸಾಕ್ಷಾತ್ತಾಗಿಯೇ ಗುಣಕ್ರಿಯಾದಿಗಳನ್ನು
ಪ್ರಕಾಶಮಾಡುವುವು. ಧ್ವನ್ಯಾತ್ಮಕಗಳಾದರೋ ತತ್ತದ್ವಾಚ್ಯ ವರ್ಣಗಳ
ಅಭಿವ್ಯಕ್ತ (ವ್ಯಂಜಕ)ತ್ವದಿಂದ, ಪರಂಪರೆಯಿಂದ ಪ್ರಕಾಶ ಮಾಡುವುವು.
ಅದು ಹೇಗೆಂದರೆ—

ದಧಿ (ಮೊಸರು ಕಡೆಯುವ) ಮಥನ ಶಬ್ದವು "ಅಂತನಾದ"ವೆಂಬ
ವರ್ಣ ವಿಶೇಷವನ್ನು ವ್ಯಕ್ತಮಾಡಿ ಅದರ ಮೂಲಕ ಹರಿಯು ಅನ್ಯಭೀಷಕತ್ವ
ವನ್ನು ಪ್ರಕಾಶಮಾಡುತ್ತದೆ. ಗಜದ ಶಬ್ದವು ಅಂತರ್ನಾದ ವರ್ಣದಂತೆಯೇ
"ಸ್ವರಿತ"ವೆಂಬ ವರ್ಣವನ್ನು ಅಭಿವ್ಯಕ್ತಮಾಡಿ ಆ ಮೂಲಕ "ಹಿಂ"ಕಾ

ಸಹಿತವಾದ ಭೀಷಕತ್ವವನ್ನು ಪ್ರಕಾಶವಮಾಡುತ್ತದೆ. ಹೀಗೆಯೇ ಜಲಪೂರ್ಣವಾದ ಮಹಾವಂತ್ರ ಶಬ್ದವೂ ಪಾದ ಭೂಷಣ (ಕಾಲಂದಿಗೆ, ಪೈಜನ, ಝುಳಿ, ಕಾಲು ಉಂಗರ, ಪಿಲ್ಲೆಗಳ) ಶಬ್ದವೂ ಸ್ವರಿತ ಸ್ವಹಿತ ಅಂತರ್ನಾದ ವರ್ಣವನ್ನು ವ್ಯಂಜಸ (ವ್ಯಕ್ತ) ಮಾಡಿ "ಹಿಂ"ಕಾರ ಸಹಿತವಾದ ಭೀಷಕತ್ವವನ್ನೇ ಪ್ರಕಾಶವಮಾಡುವುವು.

ಚಕೋರಿ ಪಕ್ಷಿಯು ಶಬ್ದವು ಗೃಹಗೋಧಾ ಶಬ್ದವೂ, ಅರಣ್ಯಗೋಧಾ ಶಬ್ದವೂ ಸಹ ಕಂಠಗತ ಶಬ್ದದಂತೆ ಪ್ರಸಿದ್ಧ ವರ್ಣವನ್ನು ಅಭಿವ್ಯಕ್ತಮಾಡಿ, ಅದ್ಭುತತ್ವವನ್ನು ಪ್ರಕಾಶವಮಾಡುತ್ತದೆ. ನದೀ ಘೋಷ (ಹರಿಯುವ) ಶಬ್ದವು ನಾದಾಖ್ಯ ವರ್ಣವನ್ನು ವ್ಯಕ್ತಮಾಡಿ ಸರ್ವಶ್ರೇಷ್ಠತ್ವವನ್ನು ಪ್ರಕಾಶ ಮಾಡುತ್ತದೆ. ಸಮುದ್ರಘೋಷವು ನಾದವನ್ನು ಅಭಿವ್ಯಕ್ತಮಾಡಿ ಸರ್ವದರ ದೆಶೆಯಿಂದ (ಶ್ರೈಷ್ಟ್ಯಂ) ಶ್ರೇಷ್ಠತ್ವವನ್ನೂ "ಹುಂ" ಕಾರಾಖ್ಯ ವರ್ಣವನ್ನೂ ವ್ಯಕ್ತಮಾಡಿ ಮತ್ತು ಪರಾಭಿಭವ ಶಕ್ತಿಮತ್ವವನ್ನೂ ಪ್ರಕಾಶಮಾಡಿ ತೋರಿಸುತ್ತದೆ. ಅಲ್ಪವಾದ ಮೇಘ ಶಬ್ದವು "ಓಂ"ಕಾರವೆಂಬ ನಾಮವನ್ನು ಅಭಿವ್ಯಕ್ತಮಾಡಿ ಅಧಿಕೋಚ್ಚತ್ವವನ್ನು ಪ್ರಕಾಶಿಸುತ್ತದೆ. ಮಹಾಮೇಘ ಶಬ್ದವು ನಾದಸಹಿತವಾದ "ಓಂ"ಕಾರವನ್ನು ಅಭಿವ್ಯಕ್ತಮಾಡಿ ಅತಿಶಯಿತವಾದ ಅಧಿಕೋಚ್ಚತ್ವವನ್ನು ಪ್ರಕಾಶಪಡಿಸುತ್ತದೆ. ಭೇರೀ ಶಬ್ದವು ಅನುದಾತ್ತವೆಂಬ ವರ್ಣವನ್ನು ವ್ಯಕ್ತಮಾಡಿ ಔದಾರ್ಯವನ್ನು ಪ್ರಕಾಶಿಸುತ್ತದೆ. ಘಂಟಾದಿ ಶಬ್ದಗಳು "ಸ್ವರಿತ"ವೆಂಬ ವರ್ಣವನ್ನು ವ್ಯಂಜನಮಾಡಿ ಅನ್ಯ ನೀಚತ್ವವನ್ನು ಪ್ರಕಾಶ ಮಾಡುತ್ತದೆ. ಸ್ವರ್ಣ ಚಂಚ್ವಾದಿ ಶಬ್ದಗಳು "ಉದಾತ್ತ"ವೆಂಬ ವರ್ಣವನ್ನು ಅಭಿವ್ಯಕ್ತಮಾಡಿ ಪರಮಾತ್ಮನ ಉಚ್ಚಸ್ಥಿತಿಯನ್ನು ಪ್ರಕಾಶ ಮಾಡುತ್ತವೆ.

ಶ್ವಾಸೋಚ್ಛ್ವಾಸಾದಿ ಶಬ್ದಗಳು "ಮಂದ್ರ"ವೆಂಬ ವರ್ಣವನ್ನು ವ್ಯಂಜ್ಯಮಾಡಿ ತೋರಿಸಿ ಏಕ ಪ್ರಕಾರತ್ವವನ್ನೂ, ಪ್ರಚಯಾಖ್ಯವರ್ಣವನ್ನೂ ಅಭಿವ್ಯಕ್ತಮಾಡಿ ಚಾಂಚಲ್ಯವನ್ನು ಪ್ರಕಾಶಿಸುತ್ತದೆ. ಇದೇ ರೀತಿಯಾಗಿ ಇತರ ಎಲ್ಲಾ ಧ್ವನ್ಯಾತ್ಮಕಗಳಾದ ಶಬ್ದಗಳೂ ಯಥಾ ಯಥವಾಗಿ ಗುಣ ಕ್ರಿಯಾ ಕೃತ್ಯಾದಿಗಳನ್ನು ಪ್ರಕಾಶಿಸುವುವು.

ಹೀಗೆಯೇ ರಮಾ ದೇವಿಯುದನ್ನು ಆರಂಭಿಸಿ ಇತರ ಅವರರಾದ
ದೇವತೆಗಳ ಪರ್ಯಂತವಾಗಿ ಆಯಾ ದೇವತೆಗಳಿಗೆ ಆಯಾ ಪದಾಥ
ರೂಪಗಳು ಇರುವುವು. ಅಂಥಾ ಆ ಶಬ್ದನಾಮಗಳನ್ನೂ ಎಲ್ಲವನ್ನ
ವಂತನು ಸ್ವೀಕರಿಸುತ್ತಾನೆ. ತತ್ತದ್ಗತ ಅವುಗಳಲ್ಲಿ ಅಲ್ಲಲ್ಲಿ ಇರುವ ಸ್ವ
ಭೋಗವೇ ಸ್ವೀಕಾರವೆಂಬುದು. ಈ ರೀತಿಯಾಗಿ ಭಗವಂತನಿಂದ ಸ್ವ
ಗಳಾದ ಸ್ವಸ್ವರೂಪಗಳಾದ ಶಬ್ದಾದಿಗಳನ್ನು ರಮಾದಿ ದೇವತೆಗಳು ಸ್ವೀ
ಭೋಗಿಸುತ್ತಾರೆ. ಇಲ್ಲಿ ಶಬ್ದವೆಂಬುದು ಚೇತನಾಚೇತನಾತ್ಮಕ ರಾಶಿ
ತಿಳಿಯುವುದು.

ಅದು ಶ್ರೋತ್ರ ದೇಶಕ್ಕೆ ಬಂದರೆ (ಕಿವಿಯಿಂದ ಕೇಳಲ್ಪಟ್ಟರೆ)
ಬಂದ ವಿಷಯುವನ್ನು ಬಂಧುವಿನಂತೆ ಆಲಂಗಿಸಿ ಸ್ವಯೋಗ್ಯವಾದ ಭ
ವಸ್ತುವನ್ನು ಸ್ವಯಂ ಭೋಗಿಸಿ, ಅನುಭವಿಸಿ, ಲಕ್ಷ್ಮ್ಯಾದಿಗಳ ದೆಶೆಯಿಂದ
ರಾದ ದೇವತಾ ಪರ್ಯಂತವಾಗಿ ಅವರವರಿಗೆ ಯೋಗ್ಯವಾದ ಭೋಗ್ಯ
ಗಳನ್ನು ಕೊಟ್ಟು ಉಳಿದ (ಉರ್ವರಿತವಾದ)ವನ್ನು ಜೀವನ ಇಂದ್ರಿಯ
ಯೋಗ್ಯವಾದ ಪ್ರಾಕೃತಭೋಗವನ್ನು ಅವನಿಗೆ ಅನುಗ್ರಹಿಸಿ (ಪ್ರಯ
ಕೊಡುತ್ತಾನೆ. ಅದು ಹೀಗೆ ಹೇಳಿದೆ.—

ಸರ್ವಚೇತನಾಧಿಷ್ಟಿತ ಜೀವನಿಂದ ಶ್ರುತವಾದುದು, ಅವನ ಸ
ಕಾರಣವಾಗುತ್ತಿದೆ. ಅದು ಸುಖವೇ ಆಗುವುದು, ರೂಪಾದಿ ನಾಲ್ಕ
ಇದರಂತೆಯೇ ಭೋಗಪ್ರಕಾರವನ್ನು ಅನುಸಂಧಾನ ಮಾಡತಕ್ಕದ್ದು.

ಇಲ್ಲಿ ಸರ್ವ ದೇವತೆಗಳೂ ಸರ್ವ ಪ್ರೇರಕತ್ವವಿದ್ದಾಗ್ಯೂ ವಿಶಿಷ್ಯ
ಕತ್ವವೂ ಇರುವುದು. ಅದು ಏನೆಂದರೆ—

ವೇದ ಶ್ರವಣದಲ್ಲಿ ಶ್ರೋತ್ರಪ್ರೇರಕನು **ಚಂದ್ರನು**. ಷಡಂಗ ಶ್ರವ
ವರುಣನು ಪ್ರೇರಕನು. ಸ್ಮೃತಿ ತಂತ್ರ ಶ್ರವಣದಲ್ಲಿ ಪ್ರೇರಕನು, **ಯು**
ಕಾಮಶಾಸ್ತ್ರ ಶ್ರವಣದಲ್ಲಿ **ಮಿತ್ರನು**, ನೀತಿಶಾಸ್ತ್ರ ಶ್ರವಣದಲ್ಲಿ ಪ್ರೇ
ಕುಬೇರನು ಇತ್ಯಾದಿ. ಇಲ್ಲಿ ಚಂದ್ರನೂ ವರುಣಾದಿ ನಾಲ್ಕು ದಿಗ್
ಗಳೂ ಶ್ರೀಹರಿಯ ಶ್ರೋತ್ರೇಂದ್ರಿಯದಿಂದ ಹುಟ್ಟಿರುವುದರಿಂದ ಒಂದೇ
ದಿಂದಲೇ ಅಲ್ಲಿ ಸ್ಥಿತರಾಗಿ ತಮ್ಮ ತಂದೆಯಾದ **ವಾಸುದೇವನಿಂದ** ಪ್ರ

ಮಾಣರಾಗಿ ಷಡಂಗ ಶ್ರವಣವೇ ಮೊದಲಾದ ಆಯಾಯ ವ್ಯಾಪಾರಗಳಲ್ಲಿ ಸೇವೆಗೋಸ್ಕರವಾಗಿ ಸಾಹಾಯ್ಯವನ್ನು ಮಾಡುತ್ತಾರೆ. ರೂಪಾಂತರದಿಂದಲೂ ಹೊರಗೆ ನಿಂತುಕೊಂಡು ಶ್ರೋತ್ರನಾಮಕನೂ ಶ್ರೋತ್ರಾಂತರ್ಗತನೂ ಆದ ಪಿತೃವಾದ ವಾಸುದೇವನನ್ನೂ ಪರಿಚರ್ಯೆಯಿಂದ ಸೇವಿಸುತ್ತಾನೆ.

ಅಲ್ಲಿ ಶ್ರೋತ್ರವಿಷಯತ್ವಕ್ಕೆ ನಾನಾವಿಧವಾಗಿ ಉತ್ಪನ್ನವಾಗುವ ಶಬ್ದಗಳನ್ನು ತಿಳಿಯಲು ಅವಕಾಶವನ್ನು ವರುಣದೇವನೇ ಮೊದಲಾದ ನಾಲ್ಕು ದಿಕ್ ದೇವತೆಗಳೂ, ಕೊಡುತ್ತಾರೆ. ದಿಕ್ಕುಗಳು ಅಪ್ರಾಕೃತ ಆಕಾಶ ಭಾಗವಾಗಿರುವುವು. ಚಂದ್ರನಾದರೋ ಶ್ರವಣಾದಿಗಳಲ್ಲಿ ಕಾಲ ವಿಶೇಷಾಖ್ಯ ಅಂಗವಿವೇಚಕನು. ಶುಕ್ಲಪಕ್ಷಾದಿ ಕಾಲವು ಮುಖ್ಯ ಪ್ರಾಣಾದಿಗಳಿಂದ ನಿಯಮ್ಯವಾದವೆಂದು ಅನುಸಂಧಾನ ಮಾಡುವುದು. ಆರೀತಿ ಅನುಷ್ಠಿತವಾದ ಶ್ರವಣ ಮೊದಲಾದವುಗಳಿಗೆ ಮಹಾ ಫಲವು ಇರುವುದು.

ಇಲ್ಲಿ ಶ್ರೋತ್ರದಲ್ಲಿ ವಾಸುದೇವೋಪಾಸನೆಯಲ್ಲಿ ಶ್ರೋತ್ರವು "ಆಯತನ"ವೆಂಬ ರಮಾ ದೇವಿಯು ಮತ್ತು "ಪ್ರತಿಷ್ಠಾ" "ಅನಂತ" ಎಂತಲೂ ರಹಸ್ಯನಾಮವು. ಸರ್ವವ್ಯಾಪಿಯಾದುದರಿಂದ ಅನಂತತ್ವವು ತತ್ತತ್ಪದ ಪ್ರವೃತ್ತಿನಿಮಿತ್ತವು. ದಿಕ್ಕುಗಳಿಗೆ ಅನಂತತ್ವವಿರುವುದರಿಂದ ಅವುಗಳಲ್ಲಿ ಸ್ಥಿತವಾಗಿರುವ ಭಗವದ್ರೂಪವೂ ಅನಂತವಾಗಿ ಅದೇ ಶ್ರೋತ್ರದಲ್ಲಿ ಸ್ಥಿತವಾಗಿರುವುದು.

ಬಿಂಬನಿಗೆ ಯಾವಾಗ ರೂಪಾತ್ಮ ಭೋಗೇಚ್ಛೆಯು ಹುಟ್ಟುತ್ತದೆಯೋ ಆಗ ಬಿಂಬನ ಎಡ ಬಲ ಕಣ್ಣುಗಳಲ್ಲಿರುವ ಅನಿರುದ್ಧ ಪ್ರದ್ಯುಮ್ನರು ಬಾಹ್ಯ ಚಕ್ಷುಃಸ್ಥಿತ ಅನಿರುದ್ಧ ಪ್ರದ್ಯುಮ್ನರೊಡನೆ ಏಕೀಭಾವವನ್ನು ಈ ಮೊದಲೇ ನಿರೂಪಿಸಿದಂತೆ ತಿಳಿಯುವುದು. ಚಕ್ಷುಯೋಗ್ಯರೂಪಾದಿಗಳ ಭೋಗ ಪ್ರಕಾರವು ಮೊದಲಿನಂತೆಯೇ. ಚಕ್ಷುಸ್ಸುಗಳಲ್ಲಿರುವ ಅನಿರುದ್ಧ ಪ್ರದ್ಯುಮ್ನರನ್ನೂ ಇದೇರೀತಿಯಾಗಿ ಧ್ಯಾನಿಸಲ್ಪಡಬೇಕು.

"ಕಂ ಪಿಬ" ಉದಕವನ್ನು ಪಾನಮಾಡಿ ನಾಳಸಂಬಂಧಿ ನಳಿನಾಯತ ಲೋಚನಗಳೆರಡೂ ಸರ್ವರಿಗೂ ಸಮತ್ವದಿಂದ "ಸಾಮ" ನಾಮಕಗಳು. ಜ್ಞಾನ ರೂಪಗಳಾದುದರಿಂದ "ದೃಕ್" ನಾಮವುಳ್ಳವು, ಯಾಜ್ಞ

ಸ್ವರೂಪವುಳ್ಳವರಾದುದರಿಂದ "**ಯಜುಃ**" ಎಂಬ ನಾಮವುಳ್ಳವರು ಸವ
ರಿಗೂ ಉತ್ಕ್ರಾಪಕರಾದುದರಿಂದ "**ಉಕ್ಥಂ**" ಎನಿಸಿದವರು. ಸರ್ವ ಪಾ
ಗಳಿಂದ ರಹಿತರು ಪಾಪ ಪರಿಹಾರಕರಾದುದರಿಂದ "**ಉತ್**" ಎಂಬ ಹೆಸ
ಳ್ಳವರು. **ವಾಣೀ ಪ್ರಾಣರು**ಗಳಿಂದ ಸರ್ವದಾ ಸ್ತೂಯಮಾನರೂ, ಮತ್ತ
ಅತಿ ದೀಪ್ತತ್ವದಿಂದಲೂ "ಇಂಧ"ನಾಮಕರು ಪಾರೋಕ್ಷ್ಯವಾಗಿ "ಇಂದ್ರ
ಎಂದು ಕರೆಯಲ್ಪಟ್ಟು ದಿವ್ಯದೃಷ್ಟಿಗೆ ಗೋಚರರೂ, ವಿಶೇಷವಾಗಿ ರಾಜ
ನಾತ್ ಪ್ರಕಾಶಿಸುದರಿಂದ "**ವಿರಾಟ್**" ನಾಮಕ ಈ ಎರಡು ರೂಪಗಳಿಂ
ಸಹಿತರಾಗಿ "**ಸಂಯತಿ ವಾಮಾನಿ**" ಸೌಂದರ್ಯವನ್ನು ಉಂಟ
ಮಾಡುತ್ತಾನೆ ಮತ್ತು ಮಂಗಳಗಳನ್ನು ಉಂಟುಮಾಡುವರಾಗಿ, "**ಸಂಯ
ದ್ವಾಮ**" ಎಂಬ ಹೆಸರುಳ್ಳವರು, ಇವರಿಬ್ಬರೂ ಸಮಸ್ತ ಪದಾರ್ಥಗಳಿಂ
ಅಸಂಗರು ಸಂಬಂಧರಹಿತರು, ಅಸಂಗನಾದ ಭಗವಂತನ ಸ್ಥಾನತ್ವಇರುವ
ದರಿಂದಲೇ ಈ ಚಕ್ಷಸ್ಸು ಸಮಸ್ತ ಉದಕಾ (ಎಣ್ಣೆ, ತುಪ್ಪ ಮೊದಲಾದ
ಪದಾರ್ಥಾ)ದಿಗಳಿಂದ ಸಂಬಂಧವಿಲ್ಲದೆ, ಅಂಟದೆ, ಲೇಪವಿಲ್ಲದೆ ಇರುವುದು

ಕಣ್ಣುಗಳಲ್ಲಿ ವಾಮನಿ, ಭಾಮನಿ ಉಪಾಸನೆ

ಅಲ್ಲಿ ಎಡಗಣ್ಣಿನಲ್ಲಿ ಸ್ಥಿತನಾದ ಅನಿರುದ್ಧ ನಾಮಕ ಭಗವಂತನಿ
ಸೌಂದರ್ಯವನ್ನು (**ವಾಮಾನಿ-ನಯತಿ**) ಸೌಂದರ್ಯಪ್ರಧಾನರಾ
ಸ್ತ್ರೀಯರನ್ನು ಪ್ರೇರಿಸುತ್ತಾನೆ ಆದರಿಂದ "**ವಾಮನಿಃ**" ಎಂದು ನಾಮವು

ದಕ್ಷಿಣಾಕ್ಷಿ (ಬಲಗಣ್ಣಿನ)ಯಲ್ಲಿರುವ ಭಗವಾನ್ ಪ್ರದ್ಯುಮ್ನನಿ
"**ಭಾಮನಿಃ**" ಎಂದು ನಾಮವು. (**ಭಾಮ**=ತೇಜಃ+**ನಯತಿ**) ಓಜ
(**ತೇಜಃ**) ಪ್ರಧಾನರಾದ ಪುರುಷ ಸಮೂಹವನ್ನು ಪ್ರೇರಣೆ ಮಾಡುತ್ತಾನೆ

ಈರೀತಿಯಾಗಿ ಮೇಲೆ ಹೇಳಿದ ರೀತಿಯಿಂದ ಅನಿರುದ್ಧ ಪ್ರದ್ಯುಮ್ನ
ಜ್ಞಾನಿಗಳಿಗೆ ಸರ್ವಪಾಪಗಳ ಅಲೇಪ (ಸಂಬಂಧವಾಗದಿರುವುದು) ಸವ
ಮಂಗಳ ಪ್ರಾಪ್ತಿಯೂ, ಇಹ ಮತ್ತು ಪರಲೋಕಗಳಲ್ಲೂ ಬಹು ಸ್ತ್ರೀ
ಭೋಗವೂ, ಬಹುಜನ **ಸೇವಕ ಸಂಪತ್ತಿ**ಯೂ ಉಂಟಾಗುವುದೆಂದು
ಫಲವು ಉಕ್ತವಾಗಿದೆ.

ಇಲ್ಲಿ ಶ್ರೀಹರಿಗೆ ಚಕ್ಷುರಿಂದ್ರಿಯದಿಂದ ಉತ್ಪನ್ನರಾದ "**ದ್ಯೌಃ-ಆದಿತ್ಯಃ**" ಎಂಬ ಇವರಿಬ್ಬರೂ ಒಂದೇ ರೂಪದಿಂದ ಅಲ್ಲಿಯೇ ಸ್ಥಿತರಾಗಿ ಸೇವೆಗೋಸ್ಕರವಾಗಿ ಸಾಹಾಯ್ಯವನ್ನು ಆಚರಿಸುತ್ತಾ ರೂಪಾಂತರದಿಂದ ಹೊರಗಡೆ ಇದ್ದು ತಂದೆಯಾದ ಚಕ್ಷುಸ್ಸನ್ನು ಪರಿಚರ್ಯೆ ಮಾಡುತ್ತಾರೆ.

ಅಲ್ಲಿ ವೃಷ್ಟ್ಯಾದಿಗಳನ್ನು ನೋಡಿ ತಂದೆಯು ಪ್ರೀತನಾಗುವನೆಂದು ದರ್ಶನಾರ್ಥವಾದ ಭೋಗಾರ್ಥವಾಗಿ **ದ್ಯುಲೋಕಾಭಿಮಾನಿಯು** ವೃಷ್ಟಿ ಮೊದಲಾದುವುಗಳನ್ನು ಕೊಡುವಳು.

ಪ್ರಕಾಶವಿಲ್ಲದ (ಪಕ್ಷದಲ್ಲಿ)ವನಿಗೆ, ಶುಕ್ಲ ನೀಲ ಮೊದಲಾದ ರೂಪಗಳ, ಘಟ ಪಟಾದಿ ದ್ರವ್ಯ (ಪದಾರ್ಥ)ಗಳ, ಅಥವಾ ಇತರ ಎಲ್ಲ ಚಕ್ಷುದರ್ಶನ ಯೋಗ್ಯ ವಸ್ತುಗಳನ್ನು ನೋಡುವುದು ಹೇಗೆ ಆದೀತು? ಅದು ಅವಶ್ಯಕವೆಂತಲೇ **ಆದಿತ್ಯನು** ಎಲ್ಲವನ್ನು ತೋರಿಸಲು ಪ್ರಕಾಶವನ್ನುಂಟುಮಾಡುತ್ತಾನೆ.

ಚಕ್ಷುಸ್ಸಿನಲ್ಲಿ ಅನಿರುದ್ಧ ಪ್ರದ್ಯುಮ್ನ, ವಿಶ್ವರ ಉಪಾಸನೆಯಲ್ಲಿ ಚಕ್ಷುಸ್ಸಿಗೆ **ಆಯತನವು ರಮಾದೇವಿಯು** ಚಕ್ಷುಸ್ಸಿನಿಂದ ನೋಡುವುದರಿಂದ ನೋಡಿದವನಿಗೇ ಸತ್ಯವನ್ನು ಹೇಳುವನೆಂದು ಸತ್ಯತಯಾ ಸರ್ವಸಮ್ಮತನಾಗುವನು. ಆದುದರಿಂದಲೇ ಕಣ್ಣಿನಿಂದ ನೋಡಿದವನನ್ನು ಕುರಿತು "ನೀನು ನೋಡಿದೆಯಾ?" ಎಂದು ಕೇಳುತ್ತಾರೆ. ಆತನು ಹೇಳುತ್ತಾನೆ "ನಾನು ಇದನ್ನು ಕಂಡೆನು" ಎನ್ನುತ್ತಾನೆ. ಅದು ಸತ್ಯವಾಗುತ್ತದೆ.

ಕಣ್ಣಿನಲ್ಲಿ ಗೋವತ್ಸ ಉಪಾಸನೆ

ಹೀಗೆಯೇ ದಕ್ಷಿಣಾಕ್ಷಿ (ಬಲಗಣ್ಣಿನ)ಲ್ಲಿ **ಗೋವತ್ಸ**ರೂಪ ಉಪಾಸನೆಯನ್ನೂ ಆವಶ್ಯಕವಾಗಿ ಮಾಡಬೇಕು. ಅದು ಹೇಗೆಂದರೆ—

ಭಗವಂತನು ಲೀಲಾಮಾತ್ರದಿಂದ ಭಕ್ತರನ್ನು ಅನುಗ್ರಹಿಸಲು ಈ ರೀತಿ **ಗೋವತ್ಸರೂಪ**ದಿಂದ ಶರೀರದಲ್ಲಿ ಇದಾನೆ.

ಹೇಗೆ ಲೋಕದಲ್ಲಿ ಒಬ್ಬ ಧನಿಕನಿಗೆ ಒಂದು ವಿಸ್ತಾರವಾದ ಮನೆಯು ಅದರಲ್ಲಿ ಒಂದು ಸಣ್ಣ ಮನೆ (ಕೋಣೆ) ಅದರಲ್ಲೂ ಒಂದು ಚಿಕ್ಕಮನೆ ಹೀಗೆ ಆ **ಗೋಷ್ಠಿ**ಯಲ್ಲಿ ಮೊದಲನೆಯದರಲ್ಲಿ ಗೋವುಗಳನ್ನು ಕಟ್ಟುತ್ತಾರೆ.

ಇನ್ನೊಂದರಲ್ಲಿ ಕರುಗಳನ್ನು (ವತ್ಸಗಳನ್ನು) ಕಟ್ಟಲು ಯೋಗ್ಯವಾದಗೂಟ ಮತ್ತು ಹಗ್ಗಗಳನ್ನು ಇಟ್ಟಿರುವರು.

ಹೀಗೆಯೇ ಇಲ್ಲಿ "**ಭಗವಂತನೇ**" ಶಂಕುವು, "**ಲಕ್ಷ್ಮೀ**" ದೇವಿಯೇ ಹಗ್ಗವು, "**ಲಿಂಗಶರೀರ**"ವೇ ಸಂಕುಚಿತವಾದ (ಚಿಕ್ಕ ಮನೆಯಂತಿರುವ) ಸ್ಥಾನವು ಅದರ ಮೇಲೆ ಇರುವ "ಸ್ಥೂಲ ಶರೀರವೇ" ವಿಸ್ತೃತವಾದ (ಒಂದು ಕೊಠಡಿ ಮನೆಯು) ಸ್ಥಾನವು ಅಲ್ಲಿ "**ವಾಯು ದೇವರೇ**" ವತ್ಸ (ಕರುವಿನ) ರೂಪದಿಂದ ಇರುವನು.

ಈ ರೀತಿಯಾದ **ಗೋ** ಮತ್ತು **ವತ್ಸ**ರಿಬ್ಬರೂ ರಾತ್ರಿಯಲ್ಲಿ ಸ್ವ (ತಮ್ಮ) ಸ್ಥಾನದಲ್ಲಿ ಸ್ಥಿತರಾಗಿದ್ದುಕೊಂಡು, ಹಗಲು ಆ ವಾಯುದೇವನು ಶಂಕುವಿನಿಂದಲೂ ಹಗ್ಗದಿಂದಲೂ (ಭಗವಂತ ಮತ್ತು ರಮಾ ದೇವಿಯರಿಂದ ಕೂಡಿ) ಬದ್ಧನಾಗಿಯೇ "**ದಕ್ಷಿಣಾಕ್ಷಿ**" ರೂಪವನ್ನು ಹಿಡಿದು ಸ್ಥಾನಾಂತರಕ್ಕೆ ಹೋಗುತ್ತಾನೆ. ಆಗ ವಿಲಕ್ಷಣವಾದ ಗೋವತ್ಸನನ್ನು ಹುಲ್ಲು ಮೊದಲಾದುವನ್ನು ತಿನ್ನಲು ಬಂದ ಅತಿ ನೂತನವಾದ ಆ ವತ್ಸವನ್ನು (ಕರುವನ್ನು) ನೋಡಿ ಹೇಗೆ (ಲೋಕವು) ಜನರು ಲಾಲಿಸುತ್ತಾರೆಯೋ, ಹಾಗೆಯೇ ಹರಿಯ ಆಜ್ಞೆಯಿಂದ ವಾಗಾದಿ ಸ್ಥಾನಾದಿಗಳಲ್ಲಿ ಪ್ರೇರಣೆಯಿಂದ ವಾಗಾದಿ ಸ್ಥಾನಗಳಲ್ಲಿ ಪ್ರೇರಣೆಯಿಂದ ಸ್ಥಿತರಾದ "**ಭಾರತೀದೇವಿಯೇ**" ಮೊದಲಾದ ಎಂಟು (8) ಜನ ದೇವತೆಗಳು ರೂಪಾಂತರಗಳನ್ನು ಇಲ್ಲಿ ಇಟ್ಟು ಬಂದು ಆತನನ್ನು ಹೊಂದಿ, ಪುನಃ ಇಲ್ಲಿಯೇ ನಿಂತು ಮೋಕ್ಷಾರ್ಥವಾಗಿ **ಶಿಶು** (ಶಿಶುರೂಪಿ ವಾಯು)ವನ್ನು ಹರಿಯನ್ನೂ ಉಪಾಸನೆ ಮಾಡುತ್ತಾರೆ.

ಕಂ – ನೀರನ್ನು – ಶಯಾನ್ಸ್ವೈವ – ಮಲಗಿ ಇದ್ದಲ್ಲೇ – **ಪಿಬತಿ**, ಪಾನ ಮಾಡಿ ಕುಡಿಯುತ್ತಾಳಾದುದರಿಂದ ಪೃಥ್ವಿಯು "**ಕಸ್ಯಪ**" ನಾಮವುಳ್ಳವಳಾಗಿ ಚಕ್ಷುಸ್ಸಿನಲ್ಲಿರುವ ಉದಕ ಗಮನ (ಹರಿದು ಹೋಗುವ) ಅದರ – ಕೆಳಭಾಗದಲ್ಲಿದ್ದು "**ಸಸ್ಥೂಣಂ ಸದಾಮಾನಂ**" ಗೂಟ ಮತ್ತು ಹಗ್ಗದಿಂದ ಕೂಡಿದ **ಶಿಶು** (ವಾಯು)ವನ್ನು ಉಪಾಸನೆ ಮಾಡುತ್ತಾರೆ.

ಅತ್ತೃತ್ವಾತ್ (ತಿನ್ನುವುದರಿಂದ) "ಅತ್ರಿ"ನಾಮವುಳ್ಳ **ಉಮಾ** ದೇವಿಯು ಉಪರಿ (ಮೇಲೆ) ಭಾಗದಲ್ಲಿರುವ ಉದಕ ಮಾರ್ಗದಲ್ಲಿ ಸ್ಥಿತಳಾಗಿ ಉಪಾಸಿಸುತ್ತಾಳೆ.

ವೃಷ್ಟಿಯಿಂದ **ವಾಜಂ**-ಅನ್ನವನ್ನು-**ಭರೇತ್** - ಕಾಪಾಡಿ ವೃದ್ಧಿಮಾಡುವುದರಿಂದ "**ಭರದ್ವಾಜ**" ನಾಮಕನು "**ಪರ್ಜನ್ಯನು**" ಕಣ್ಣಿನಲ್ಲಿರುವ ಉದಕದಲ್ಲಿ ಸ್ಥಿತನಾಗಿ ಉಪಾಸನೆಯನ್ನು ಮಾಡುತ್ತಾನೆ.

ಸ್ವಪ್ರಕಾಶದಿಂದ ವಿಶ್ವದ ಜ್ಞಾನವನ್ನು ಉಂಟುಮಾಡಿ ಸಂತೋಷಕಾರಿಯಾದುದರಿಂದ "**ವಿಶ್ವಾಮಿತ್ರ**" ನಾಮಕನಾದ "**ಆದಿತ್ಯನು**" ಕಣ್ಣಿನಲ್ಲಿದುಂಡಗಿರುವ ಮಂಡಲ ಮಧ್ಯದಲ್ಲಿ (ಕಣ್ಣು ಗುಡ್ಡಿನ ಮಧ್ಯೆ) ಕಪ್ಪಾಗಿರುವ **ಕನೀನಕಾ** (ಪಾಪ)ದಲ್ಲಿ ಸ್ಥಿತನಾಗಿ ಉಪಾಸಿಸುತ್ತಾನೆ.

ಅತಿಶಯಿತ ಜ್ಞಾನತ್ವದಿಂದ "**ಗೌತಮ**" ನಾಮಕನಾದ "**ಅನಿರುದ್ಧ**"ನು ಅಕ್ಷಿಯ(ಕಣ್ಣಿನ)ಲ್ಲಿರುವ ಕೆಂಪು ರೇಖೆಗಳಲ್ಲಿ ಸ್ಥಿತನಾಗಿ ಉಪಾಸನೆ ಮಾಡುತ್ತಾನೆ.

ಜಾತಂ ಅತ್ತೀತಿ ಹುಟ್ಟಿದವುಗಳನ್ನು ತಿನ್ನುತ್ತಾನೆಂದು "**ಜಮದಗ್ನಿ**" ನಾಮಕನಾದ "**ಅಗ್ನಿಯು**" ಕಣ್ಣಿನಲ್ಲಿರುವ ಕೃಷ್ಣವರ್ಣದಲ್ಲಿ ಸ್ಥಿತನಾಗಿ ಭಗವಂತನನ್ನೂ ಉಪಾಸನೆ ಮಾಡುತ್ತಾನೆ.

ವಸಂತಾಂ-ವಾಸ ಮಾಡುವವರಲ್ಲಿ **ಉತ್ತಮತ್ವಾತ್** ಉತ್ತಮನು ಶ್ರೇಷ್ಠನೂ ಆದುದರಿಂದ "**ವಶಿಷ್ಠ**" ನಾಮಕನಾದ "**ಇಂದ್ರನು**" ಕಣ್ಣಿನ ಶುಕ್ಲ ವರ್ಣದಲ್ಲಿ ಸ್ಥಿತನಾಗಿ ಉಪಾಸನೆ ಮಾಡುತ್ತಾನೆ.

ಭಾರತೀ ದೇವಿಯೂ ಆವಾಯುವಿನ ಸಮೀಪದಲ್ಲೇ ಸ್ಥಿತರಾಗಿದ್ದುಕೊಂಡು ಉಪಾಸನೆ ಮಾಡುತ್ತಾರೆ.

ಇಂಥಾ **ಗೋವತ್ಸ** ಜ್ಞಾನದಿಂದ ಇಂದ್ರಿಯಾಭಿಮಾನಿಗಳಾದ ಅಸುರರ ಭಾದೆಯು ಉಂಟಾಗುವುದಿಲ್ಲವು.

ಯಾವಾಗ ಬಿಂಬನಿಗೆ "**ಸ್ಪರ್ಶಾತ್ಮ**" ಭೋಗದ ಅಪೇಕ್ಷೆಯು ಉಂಟಾಗುತ್ತದೆಯೋ ಆಗ **ಸಂಕರ್ಷಣ** ನಾಮ (ಭಗವಂತನಿಂಬ) ತ್ವಗಿಂದ್ರಿಯದಿಂದ ಬ್ರಹ್ಮಾದಿ ದೇವಾಧಿಷ್ಠಿತವಾದ ಜೀವ ತ್ವಗಿಂದ್ರಿಯ ಮಿಶ್ರವಾದ ಬಾಹ್ಯ ತ್ವಗಿಂದ್ರಿಯದಿಂದ ಸರ್ವ ಸುಖಗಳನ್ನು ಅನುಭವಿಸುತ್ತಾನೆ.

ಯಾವಾಗ ಮಧುರವೇ ಮೊದಲಾದ ರಸಾತ್ಮಕ ಸ್ವರೂಪ ಭೋಗೇಚ್ಛೆಯು ಉಂಟಾಗುತ್ತದೆಯೋ ಆಗ **ಸಂಕರ್ಷಣಾಖ್ಯ** ರಸೇಂದ್ರಿಯದಿಂ(ನಾಲಿಗೆಯಿಂ)ದ, ಜೀವನ ರಸನೇಂದ್ರಿಯ ದ್ವಾರಾ ರಸಗಳನ್ನು ಅನುಭವಿಸುತ್ತಾನೆ.

ಯಾವಾಗ ನಾನಾವಿಧ **ಗಂಧಾತ್ಮಕ** ಭೋಗೇಚ್ಛೆಯು ಉಂಟಾಗುತ್ತದೆಯೋ ಆಗ **ಪ್ರದ್ಯುಮ್ನಾಖ್ಯ**ನಾದ ಘ್ರಾಣೇಂದ್ರಿಯದಿಂದ ಜೀವಘ್ರಾಣೇಂದ್ರಿಯಾಧಿಷ್ಠಾನದಿಂದ ಸುಗಂಧಗಳನ್ನು ಆಘ್ರಾಣಿಸಿ ಅನುಭವಿಸುತ್ತಾನೆ.

ಇಲ್ಲಿ ಶ್ರೀಹರಿಯು ಘ್ರಾಣೇಂದ್ರಿಯದಲ್ಲಿ ಹುಟ್ಟಿದ ವಾಯು ಮತ್ತು ಅಂತರಿಕ್ಷಗಳೆರಡು ಒಂದೇ ರೂಪದಿಂದ ಅಲ್ಲಿಯೇ ರೂಪಾಂತರದಿಂದ ಹೊರಗೂ ನಿಂತು ತಮಗೆ ಜನಕ (ಉತ್ಪಾದಕ)ನಾದ ತಂದೆಯನ್ನು ಪರಿಚರ್ಯೆ ಮಾಡಿ ಸೇವಿಸುತ್ತಾರೆ. ಇಲ್ಲಿ ಭೂತ ವಾಯುವು ಆಘ್ರಾಣ (ವಾಸನೆ ನೋಡುವುದು) ವೆಂಬ ಭೋಗದಿಂದ ಪುಣ್ಯ ಗಂಧವ(ಸುವಾಸನೆಯ)ನ್ನು ಬೀಸಿ ತಂದು ಕೊಡುತ್ತಾನೆ. ಅಂಥಾ ಗಂಧವನ್ನು ತರಲು ವಾಯುವಿನ ಸಂಚಾರಕ್ಕಾಗಿ, "ಅಂತರಿಕ್ಷ" ನಾಮಕನಾದ "ವಿಷ್ಣೇಶ"ನು ಅವಕಾಶವನ್ನು ಕೊಡುವನು.

ಇಲ್ಲಿ ಜ್ಞಾನೇಂದ್ರಿಯಗಳಿಂದ ವಿಷಯಭೋಗ ಪ್ರಕಾರವು, ಶ್ರೋತ್ರದಿಂದ ಶಬ್ದ ಭೋಗದಲ್ಲಿ ತೋರಿಸಿದ ರೀತಿಯಂತೆಯೇ ಅನುಸಂಧಾನವನ್ನು ಮಾಡಬೇಕು.

ಕರ್ಮೇಂದ್ರಿಯಗಳಿಂದ ಕ್ರಿಯಾಭೋಗ ಪ್ರಕಾರವು

ಭಗವಂತನು ಜೀವರಿಗೆ ಮೋಕ್ಷವನ್ನು ಕೊಡಲು, ಸಾಧನವನ್ನು ಮಾಡಿಸಲು, ಸ್ಥೂಲ ಶರೀರವನ್ನು ಕೊಟ್ಟು ಅವನಿಂದ ಕೊಡಲ್ಪಟ್ಟ "ಶತಸಂವತ್ಸರ" ಮೊದಲಾದ ಜೀವನವನ್ನು ಅವರ ಮುಖ್ಯ ಪ್ರಾಣನಲ್ಲಿ ಏಕನಿಬಂಧತ್ವವನ್ನೂ ಮಾಡಿದನೆಂದು ಉಕ್ತವಾಯಿತು. ಆಗ ಅಲ್ಲಿ ಭಗವದಾಜ್ಞೆಯಿಂದ ಪ್ರಾಣಿಗಳಿಗೆ ಪ್ರಾಣಧಾರಣೆಯಲ್ಲಿ ಪ್ರವೃತ್ತನಾದವನಿಗೆ ತನ್ನ ಅಂತಸ್ಥನಾದ "ವಾಸುದೇವ"ನಿಂದ ಪ್ರೇರಿತನಾದ ಆ ಪ್ರಾಣನಾಯಕನ ಪರಮಾನುಗ್ರಹದಿಂದ ಬದುಕಿದ ಜೀವನಿಗೆ ಕದಾಚಿತ್ ವಾಸುದೇವನಿಂದ ಪ್ರೇರಿತಳಾದ

ಭಾರತೀದೇವಿಯ ಪ್ರಸಾದದ ದೆಶೆಯಿಂದ ಮೋಕ್ಷಾದಿ ಪುರುಷಾರ್ಥವು ದೆಶೆಯು ಉತ್ಪನ್ನವಾಗುತ್ತದೆ.

ಪುರುಷಾರ್ಥಾಪೇಕ್ಷೆಯುಳ್ಳವನು ವಸ್ತು, ತತ್ಸಾಧನಾ, ಅಪರೋಕ್ಷಜ್ಞಾನ, ಮೊದಲಾದವುಗಳ ಸಂಪಾದನೆಗಾಗಿ ಕರ್ಮಗಳನ್ನು ಮಾಡಲು ಉದ್ಯುಕ್ತನಾಗುತ್ತಾನೆ.

ಅಲ್ಲಿ ಪುರುಷಾರ್ಥವು ಸಿದ್ಧಿಸಲು ಎಷ್ಟು ಕರ್ಮಗಳನ್ನು ಮಾಡಬೇಕೋ ಅವುಗಳು ಸಮಾಪ್ತಿ ಪರ್ಯಂತವಾಗಿ ಅಖಂಡವಾಗಿ ಅಂಥ ಪುರುಷಾರ್ಥದ ಸ್ಮೃತಿಯು, ಅನುಚಿಂತೆಯಿಂದ ಆಗಬೇಕು. ಅನ್ಯಥಾ ಪುರುಷಾರ್ಥಾಂತರವು ಸ್ಮರಿಸಲ್ಪಟ್ಟರೆ ಆದರ ಸಾಧನದಲ್ಲಿ ಪ್ರವೃತ್ತಿಯು ಇದ್ದರೂ, ಅನುಷ್ಠಾನ ಮಾಡಿದ ಸಾಧನಗಳ ವೈಫಲ್ಯವೂ ಫಲಾರಾಹಿತ್ಯವೂ, ವಿರುದ್ಧ ಫಲವೂ ಆವಶ್ಯಕ ಪುರುಷಾರ್ಥದ ಅಸಿದ್ಧಿಯೂ ಆ (ಗುವುದು) ಗಬೇಕಾದೀತು.

ಆದುದರಿಂದ ಆ ಪುರುಷಾರ್ಥ ವಿಷಯಕವಾದ "**ಅಖಂಡಸ್ಮೃತಿ**" ಯನ್ನು **ಸಂಕರ್ಷಣ**ನಿಂದ ಪ್ರೇರಿತನಾದ **ಹರನು** ಕೊಡುತ್ತಾನೆ. ಅಂಥ ಸ್ಮೃತಿಯಿಂದ ಯುಕ್ತನಾದ ಪುರುಷನು ಸಂಕಲ್ಪಾದಿ ಪೂರ್ವ ಕರ್ಮಗಳನ್ನು ಮಾಡುತ್ತಾನೆ. ಅದರ ಕ್ರಮವು ಹೇಗೆಂದರೆ—

ಸಾಮಾನ್ಯವಾಗಿ ಯೋಗ್ಯತೆಯನ್ನು ಅತಿಕ್ರಮಿಸದಂತೆ, ಪ್ರಕೃತ ಉಪಯುಕ್ತ ಸರ್ವ ಪದಾರ್ಥ ವಿಷಯಕ ಜ್ಞಾನವು ಪೂರ್ವದಲ್ಲೇ ಆವಶ್ಯಕವು. ಆ ರೀತಿಯಾದ ಜ್ಞಾನವು "**ನಾರಾಯಣ**"ನಿಂದ ಪ್ರೇರಿತನಾದ "**ಚಂದ್ರನು**" ಚೇತನಾಖ್ಯ ಮನಸ್ಸಿನಿಂದ ಹುಟ್ಟುವಂತೆ ಮಾಡುತ್ತಾನೆ. ಆ ಜ್ಞಾನವೂ ಬಲಾಧೀನವಾದುದು ದುರ್ಬಲದಿಂ (ಸಾದವನಿಂ)ದ ಗುರುಸೇವೆ ಮಾಡಲಾದವುಗಳಿಂದ ಜನಿಸುವ **ಜ್ಞಾನವನ್ನು** ಸಂಪಾದಿಸಲು, ಶಕ್ಯವಿಲ್ಲವೆಂಬುದು ಪ್ರಸಿದ್ಧವಾದೆ.

ಬಲವು ಅನ್ನಾಧೀನವಾದದು. ಆಹಾರವನ್ನು ತಿಂದವನೇ ಬಲಿಷ್ಠನಾಗಿರುವುದು ಈಗಲೂ ಕಂಡುಬರುತ್ತಿದೆ. ಅನ್ನವು **ಆಪ್** ಅಧಿನವಾದದು. ವೃಷ್ಟ್ಯಾದಿಗಳಿಂದ ಅನ್ನಾದಿ ಆಹಾರ ವೃದ್ಧಿಯೆಂಬುದು ಕಂಡುಬಂದಿದೆ. ಅಂಥ **ಆಪ** (ನೀರು)ವು **ತೇಜೋಧೀ**ನವಾದುದು. ಸೆಖೆಯೂ ಘರ್ಮವೂ (ಬೆವರು)

ಮೊದಲಾದವು ಕಂಡು ಬರುವುದು. ತೇಜಸ್ಸುಗಳು ತಾವು ತಾವು ನಿಲ್ಲಲು
ಅವಕಾಶವನ್ನು ಅಪೇಕ್ಷಿಸುತ್ತವೆ. ಆದುದರಿಂದ ನಾರಾಯಣನಿಂದ ಆಜ್ಞಪ್ತ
ಳಾದ " **ಉಮಾ** "ದೇವಿಯಿಂದ ಪ್ರೇರಿತವಾದ " **ಆಕಾಶವು** " ಅವಕಾಶ
ವನ್ನು ಕೊಡುತ್ತದೆ. ಅಲ್ಲಿ ತೇಜಸ್ಸುಗಳು ಯಥಾವಕಾಶದಲ್ಲಿ ವಾಸಿಸುತ್ತವೆ.
"**ಸಂಕರ್ಷಣ**"ನಿಂದ ಪ್ರೇರಿತನಾದ "**ಪುರಂದರೇಂದ್ರ**"ನು ತೇಜಸ್ಸುಗಳನ್ನು
ನಿಯಮಿಸಿ, ಅವುಗಳಿಂದ ಉದಕ (ಅಪ)ಗಳನ್ನು ಸೃಷ್ಟಿ ಮಾಡುತ್ತಾನೆ.
ಅನಂತರ ಪ್ರದ್ಯುಮ್ನನಿಂದ ಪ್ರೇರಿತನಾದ ಅಹಂಕಾರಿಕ ಪ್ರಾಣನು ಅಪ
ಗಳಿಂದ ಅನ್ನವನ್ನು ಉತ್ಪಾದನೆ ಮಾಡುತ್ತಾನೆ. ಅನಂತರ ಅನಿರುದ್ಧ ರೂಪ
ದಿಂದ ಪ್ರೇರಿತನಾದ "**ಪ್ರವಹ**" (ವಾಯುವು)ನು ತನ್ನಿಂದ ಅಭಿಮನ್ಯ
ಮಾನವಾದ ಬಲದಿಂದ ಗುರುಸೇವಾದಿಗಳನ್ನು ಮಾಡಿಸುತ್ತಾನೆ. ಜ್ಞಾನ
ವನ್ನು ಚನ್ನಾಗಿ ಉತ್ಪಾದನೆ ಮಾಡುತ್ತಾನೆ.

ಈ ಕ್ರಮದಿಂದ ಪ್ರಕೃತ ಉಪಯುಕ್ತ ಸರ್ವ ಪದಾರ್ಥಗಳ ವಿಷಯ
ದಲ್ಲಿ ಚಂದ್ರಾಭಿಮನ್ಯವಾದ ಜ್ಞಾನದಲ್ಲಿ (ಪ್ರವೃತ್ತರಾಗಲು?) ಕರ್ಮಗ
ಳನ್ನು ಮಾಡಿಸಲು ಅನಿರುದ್ಧನಿಂದ ಪ್ರೇರಿತನಾದ "**ವರುಣನು**" **ಮನಆಖ್ಯ**
ಮನಸ್ಸಿನಿಂದ ಮನಸಾ ಅನುಸಂಧಾನುರೂಪ ಧ್ಯಾನವನ್ನು ಕೊಡುತ್ತಾನೆ.

ಅನಂತರ ವರುಣನಿಂದ ಪ್ರೇರಿತವಾದ ಧ್ಯಾನದಿಂದ ಸಂಸ್ಕಾರವು ಉದ್ಬೋ
ಧವಾಗಲು ಪೂರ್ವದಲ್ಲಿ ಅನುಭವಿಸಿದ ಪದಾರ್ಥಗಳ ವಿಷಯಕವಾದ "**ಖಂಡ**
ಸ್ಮರಣೆ"ಯನ್ನು ವಾಸುದೇವನಿಂದ ಪ್ರೇರಿತನಾದ "**ಅಗ್ನಿ**"ಯು " **ಚಿತ್ತಾ**
(ಖ್ಯವಾದ)ವೆಂಬ ಮನಸ್ಸಿನಿಂದ ಹುಟ್ಟಿಸುತ್ತಾನೆ. ಆಮೇಲೆ ಅಗ್ನಿಯ
ಪ್ರೇರಣೆಯಿಂದ ಕರ್ತವ್ಯ ಮತ್ತು ಅಕರ್ತವ್ಯಗಳ ಸ್ಮೃತಿಯಲ್ಲಿ, ಅಕರ್ತವ್ಯ
ವಾದುದನ್ನು ತ್ಯಜಿಸಿ, ಕರ್ತವ್ಯವಾದ ವಿಷಯದಲ್ಲಿ ಮಾತ್ರ ಅನಿರುದ್ಧನಿಂದ
ಪ್ರೇರಿತನಾದ " **ಮಿತ್ರನು** " " ಮನಃ " ಎಂದು ಹೆಸರುಳ್ಳ ಮನಸ್ಸಿನಿಂದ
" ಇದನ್ನು ನಾನು ಮಾಡುತ್ತೇನೆ " ಎಂದು ಸಂಕಲ್ಪವನ್ನು ಉಂಟುಮಾಡಿ
ಕೊಡುತ್ತಾನೆ.

ಹೀಗೆ ಮಿತ್ರನಿಂದ ಪ್ರೇರಿತನಾಗಿ, ಒಂದು ಕಾರ್ಯದಲ್ಲಿ ಮಾಡಬೇಕೆಂಬ
ಸಂಕಲವು ಪ್ರದ್ಯುಮ್ನನಿಂದ ಪ್ರೇರಿತನಾದ ಪರ್ಜನ್ಯನು, ಯಾವ ಒಂದು ದೇಶ

ದಲ್ಲಿ, ಯಾವ ಕಾಲದಲ್ಲಿ, ಯಾವ ಸಾಧನಗಳಿಂದ ಇದನ್ನು ಸಾಧಿಸುತ್ತೇನೆ ಎಂದು ವಿಚಾರಪೂರ್ವಕವಾಗಿ ಆಲೋಚಿಸಿ "ಈದೇಶ ಕಾಲಗಳಲ್ಲಿ, ಇಂಥಾ ಸಾಧನಗಳಿಂದ, ಸಾಧನೆ ಮಾಡುವೆನು" ಎಂದು ನಿಶ್ಚಯ ಬುದ್ಧಿಯನ್ನು ಉಂಟುಮಾಡುತ್ತಾನೆ.

ಅನಂತರ ವಾಸುದೇವನಿಂದ ಪ್ರೇರಿತಳಾದ ಅಗ್ನಿ ಭಾರ್ಯೆ "**ಸ್ವಾಹಾ** ದೇವಿಯು ವಾಗೀಂದ್ರಿಯವನ್ನು ಪ್ರೇರಿಸಿ "ಈ ದೇಶದಲ್ಲಿ, ಈ ಕಾಲದಲ್ಲಿ ಈ ಸಾಧನ ಸಮೂಹಗಳಿಂದ ಇದನ್ನು ನಾನು ಮಾಡುತ್ತೇನೆ." ಎಂಬ (ಶಬ್ದ ಸಮೂಹ) ವಾಕ್ಯವನ್ನು ತಾನು ನಿಶ್ಚಯ ಮಾಡಿದುದನ್ನು ಉಚ್ಚಾರಣೆ ಮಾಡಿ ಮಿತ್ರಾದಿಗಳನ್ನು ತಿಳಿಸು (ಅಧ್ಯಾಪನೆ ಮಾಡಿಸು)ತ್ತಾನೆ.

ಆಮೇಲೆ ಅಶ್ವಿಭಾರ್ಯೆಯಾದ "**ಉಷಾ**"ದೇವಿಯು ಪ್ರದ್ಯುಮ್ನನಿಂದ ಪ್ರೇರಿತಳಾಗಿ ಶಬ್ದಗಳಿಂದ ಪದಾರ್ಥಗಳನ್ನು ಪ್ರಕಾಶಿಸಿ ತೋರಿಸುತ್ತಾಳೆ. ಅನಂತರ ಈ ಪುರುಷನು ಕರ್ಮಗಳನ್ನು ಮಾಡುತ್ತಾನೆ. ಇಲ್ಲಿ "**ಉಷೆ**" ಯನ್ನು ಆರಂಭಿಸಿ "**ಪ್ರಾಣ**" ಪರ್ಯಂತ ಹದಿನೈದು ದೇವತೆಗಳಲ್ಲಿ ಉಷಾ ದೇವಿಯು ಸ್ವಾಹಾದೇವಿಯ(ಕಿಂತ) ಉತ್ತಮಳು ಆಕೆಯು ದೆಶೆಯಿಂದ ಪರ್ಜನ್ಯ ಮೊದಲಾದ ರೂಪಗಳಿಂದ ಪೂರ್ವ ಪೂರ್ವದವರಿಗೆ ಉತ್ತಮೋತ್ತ್ವವನ್ನು ತಾರತಮ್ಯಾನುಸಾರ, ತಿಳಿಯುವುದು. ಈರೀತಿ ಹೇಳಿದಂತೆ ಪೂರ್ವ ಪೂರ್ವ ಪ್ರೇರಕರಿಗೆ ಉತ್ತಮೋತ್ತಮರಾದವರಿಗೆ ಕಾರ್ಯಸಿದ್ಧಿಯು.

ಕರ್ಮಾಭಿಮಾನಿಗಳ ತಾರತಮ್ಯ ಜ್ಞಾನದಿಂದ ಮುಕ್ತಿಕ್ರಮ

ಈ ಕ್ರಮದಿಂದ ಭಗವದಿಂದ್ರಿಯ ಚ್ಛುರಿತ ತನ್ನ ಸ್ವರೂಪೇಂದ್ರಿಯ ಚ್ಛುರಿತ ಐದು ಕರ್ಮೇಂದ್ರಿಯಗಳಿಂದಲೂ ಭಗವತ್ಪೂಜಾತ್ಮಕಗಳಾದ ಕರ್ಮಗಳನ್ನು (ಳಿಂದ) ಮಾಡಿ ಅಂಥಾ ಕರ್ಮಗಳಿಂದ ಶುದ್ಧಾಂತಃಕರಣಕ್ಕೆ ಮೊದಲಿನಕ್ಕಿಂತಲೂ ವಿಶೇಷ ಜ್ಞಾನವನ್ನು "**ಚಂದ್ರನು**" ಕೊಡುತಾನೆ. ಅನಂತರದಲ್ಲಿ "**ಪ್ರವಹ**"ನು ಯುಕ್ತಿಗಳಿಂದ ವಿಚಾರಮಾಡಿ ಯುಕ್ತಿಜನ್ಯವಾದ ನಿರ್ಣಯವನ್ನು ವ್ಯವಸ್ಥೆ ಮಾಡಿ ಕೊಡುತ್ತಾನೆ. ಅನಂತರ ಆರೀತಿಯಾದ ತತ್ಸದೃಶ ನಿರ್ಣಯದಿಂದ ಜನ್ಯವಾತಿ ರತಿಯನ್ನು **ಅನಿರುದ್ಧನು** ಕೊಡುತ್ತಾನೆ. ಅನಂತರದಲ್ಲಿ ಆರತಿಯಿಂದ ಹುಟ್ಟುವ ವಿಷಯಾಲಂ ಬುದ್ಧಿ

ರೂಪವಾದ ತೃಪ್ತಿ ಲಕ್ಷಣವನ್ನು ಅಹಂಕಾರಿಕ ಪ್ರಾಣನು ಕೊಡುತ್ತಾನೆ
ಅನಂತರ **ಪುರಂದರನೆಂಬ** ಇಂದ್ರನು ಅಸ್ಥಿರವಾದ ಪ್ರತಿಭೆಯನ್ನು "ಸ್ಥಿರ"
ಮಾಡಿ ಕೊಡುತ್ತಾನೆ. ಅನಂತರ ಮಹಾದೇವನು ಜ್ಞಾನರೂಪವಾದ ಅಖಂ
ಸ್ಮೃತಿಯನ್ನು ಕೊಡುತ್ತಾನೆ. ಆಮೇಲೆ ಭಾರತೀದೇವಿಯು ಜೀವರಿಗೆ
ಅವರವರಿಗೆ ಯೋಗ್ಯವಾದ ಭಗವದಪರೋಕ್ಷ ಜ್ಞಾನವನ್ನು ಹುಟ್ಟಿಸುತ್ತಾಳೆ
ಅನಂತರ **ಮುಖ್ಯಪ್ರಾಣನು** ಪ್ರಕೃಷ್ಟ ಸುಖರೂಪ ಸ್ವಸ್ವರೂಪಾನಂದಾವಿ
ರ್ಭಾವ ಲಕ್ಷಣವಾದ **ಮುಕ್ತಿಯನ್ನು** ಕೊಡುತ್ತಾನೆ.

ತತ್ವಾಭಿಮಾನಿಗಳ ಅಭಿವ್ಯಕ್ತಿ ಕ್ರಮ

ಇಲ್ಲಿ ದೇಹದಲ್ಲಿ ತತ್ವಗಳ ಅಭಿವ್ಯಕ್ತಿಯು ಅಧಮಾಧಮ ಕ್ರಮದಿಂದಲೇ
ಆಗುವುದೆಂದು ಸ್ಥಿತವಾಗಿರುವುದರಿಂದ ಮೊದಲು ಜ್ಞಾನವು ಅನಂತರ ಯುಕ್ತಿ
ಜನ್ಯ ನಿರ್ಣಯ ಇತ್ಯಾದಿ ರೂಪದಿಂದ ಅಪರೋಕ್ಷದವರೆವಿಗಿರುವ ತತ್ವ ಸಮೂ
ಹದ ಅಭಿವ್ಯಕ್ತಿಯು "ಅಧಮಾಧಮ" ಕ್ರಮದಿಂದಲೇ ಆಗುವುದೆಂದು ತಿಳಿ
ಯುವುದು. ಆದುದರಿಂದಲೇ ವಿಜ್ಞಾನಾದಿಗಳಿಗೆ ಅಭಿಮಾನಿಗಳಾದ ಚಂದ್ರ
ಮೊದಲಾದವರಿಗೆ ಪೂರ್ವ ಪೂರ್ವದಿಂದಲೂ ಪ್ರಾಣಾದಿಗಳಿ ಉತ್ತರೋತ್ತರ
ದಿಂದಲೂ ಅಭಿವ್ಯಕ್ತಿಯು.

ಅಂತಃಕರಣ

ಅಲ್ಲಿ ಯಾವಾಗ ಬಿಂಬನಿಗೆ **ವ್ಯಾಹರಣ** ಕ್ರಿಯೆಯೆಂಬ ಸ್ವಸ್ವರೂಪ
ಭೋಗೇಚ್ಛೆಯು ಉಂಟಾಗುತ್ತದೆಯೋ, ಆಗ ನಾರಾಯಣಾಖ್ಯ ಬಿಂಬನಿಗೆ
ಚೇತನಾಪರ ಪರ್ಯಾಯವಾದ ಅಂತಃಕರಣವು ಬ್ರಹ್ಮಾದಿ ದೇವತಾಧಿಷ್ಠಿತ
ವಾಗಿ ಜೀವಸ್ವರೂಪ ಚೇತನಾಪರಪರ್ಯಾಯ ಅಂತಃಕರಣ ದ್ವಾರಾ ಬಾಹ್ಯ
ಚೇತನಾಖ್ಯವಾದ ಅಂತಃಕರಣವನ್ನು ಪ್ರವೇಶಿಸಿ ಅಲ್ಲಿರುವ ನಾರಾಯಣ
ನಿಂದ ಏಕೀಭವಿಸಿ ಪ್ರಕೃತ ಕಾರ್ಯಕಾರಣಗಳಿಗೆ ಉಪಯುಕ್ತವಾದ ಸರ್ವ
ಪದಾರ್ಥಗಳ **ಜ್ಞಾನವನ್ನು** ಉಂಟುಮಾಡುತ್ತಾನೆ. ಅದನ್ನು ನಿಯಮನ
ಮಾಡುವುದಕ್ಕೂ ಬಿಂಬಚೇತನಾಭಿವ್ಯಕ್ತನಾದ ನಾರಾಯಣಾಖ್ಯನನ್ನೂ
ಅರೀತಿಯಾದ ಜ್ಞಾನವನ್ನು ಸರ್ವ ದೇವತಾಧಿಷ್ಠಿತವಾದಾಗ್ಯೂ ವಿಶೇಷತಃ

ಚಂದ್ರಾಧಿಷ್ಠಿತವಾದ ಜೀವಸ್ವರೂಪ ಚೇತನಾಭಿವ್ಯಕ್ತ, ತಾದೃಶ ಸ್ವರೂಪ ಜ್ಞಾನದ್ವಾರಾ ಅಲ್ಲಿ ಸ್ಥಿತವಾಗಿರುತ್ತಾನೆ.

ಮ ನ ಸ್ಸು

ಅನಂತರ ಅನಿರುದ್ಧಾಖ್ಯ ಯುಕ್ತ ದೇವತೆಯಿಂದ ಅಧಿಷ್ಠಿತ ಬಿಂಬ ಮುನಸ್ಸು, ಜೀವಸ್ವರೂಪ ಮನಸ್ಸಿನ ದ್ವಾರಾ ಬಾಹ್ಯ ಮನಸ್ಸನ್ನು ಪ್ರವೇಶ ಮಾಡಿ, ಅಲ್ಲಿರುವ ಅನಿರುದ್ಧನೊಡನೆ ಏಕೀಭವಿಸಿ, ಪೂರ್ವದಲ್ಲಿ ಅನುಭೂತ ಗಳಾದ ಪದಾರ್ಥಗಳ ಸಂಸ್ಕಾರದಿಂದ ಉದ್ಬೋಧನ ಮಾಡಲು ಸಮರ್ಥ ವಾಗಿ ಮನಸ್ಸಿನಿಂದ ಅನುಸಂಧಾನ ರೂಪ ಧ್ಯಾನವನ್ನು ಹುಟ್ಟಿಸುತ್ತದೆ. ಹಾಗೆಯೇ ಬಿಂಬ ಮನಸ್ಸಿನಿಂದ ಪ್ರಾದುರ್ಭೂತವಾದ ಅನಿರುದ್ಧಾಖ್ಯನೆಂದು ಹೇಳಿದ ರೂಪದ ಧ್ಯಾನವು ವಿಶೇಷವಾಗಿ ವರುಣನಿಂದ ಅಧಿಷ್ಠಿತವಾದ ಜೀವ ಸ್ವರೂಪಭೂತ ಧ್ಯಾನದ ದ್ವಾರಾ, ಅಲ್ಲಿ ಸ್ಥಿತನಾಗಿ ಅದನ್ನು ನಿಯಮನ ಮಾಡುತ್ತಾನೆ.

ಚಿ ತ್ತ

ಹೀಗೆ ವರುಣಾಧಿಷ್ಠಿತನಾದ ಅನಿರುದ್ಧಾಖ್ಯನ ಧ್ಯಾನದಿಂದ ಸಂಸ್ಕಾರವು ಉದ್ಬೋಧವಾಗುತ್ತಿರಲು, ವಾಸುದೇವಾಖ್ಯ ಬಿಂಬ ಚಿತ್ತವು ಉಕ್ತದೇವತಾ ಧಿಷ್ಠಿತವಾದ ಜೀವನ ಚಿತ್ತದ್ವಾರಾ, ಬಾಹ್ಯ ಚಿತ್ತವನ್ನು ಪ್ರವೇಶಿಸಿ, ಅಲ್ಲಿ ರುವ ವಾಸುದೇವನ ಜೊತೆಯಲ್ಲಿ ಏಕೀಭೂತನಾಗಿ ಕರ್ತವ್ಯ ಮತ್ತು ಅಕ ರ್ತವ್ಯ ವಿಷಯಕವಾದ ಖಂಡಸ್ಮೃತಿಯನ್ನು ಹುಟ್ಟಿಸು (ಉತ್ಪಾದನೆ ಮಾಡು) ತ್ತಾನೆ.

ಹಾಗೆಯೇ ಬಿಂಬ ಚಿತ್ತದಿಂದ ಅಭಿವ್ಯಕ್ತವಾಗುವ ವಾಸುದೇವನ ಉಕ್ತ ರೂಪವಾದ ಸ್ಮೃತಿಯು, ವಿಶೇಷವಾಗಿ ಅಗ್ನಿಯನ್ನು ಅಧಿಷ್ಠಾನ ಮಾಡಿ ಕೊಂಡು, ಅದನ್ನು ನಿಯಮಿಸಲು. ಜೀವ ಚಿತ್ತಾಭಿವ್ಯಕ್ತವಾದ ಉಕ್ತರೂಪ ಸ್ಮೃತಿಯ ದ್ವಾರಾ ಅಲ್ಲಿ ಸ್ಥಿತವಾಗಿರುತ್ತದೆ. ಹೀಗೆ ಅಗ್ನಿಯಿಂದ ಅಧಿಷ್ಠಿತ ವಾದ ವಾಸುದೇವನ ಪ್ರೇರಣೆಯಿಂದ ಕರ್ತವ್ಯಾ ಕರ್ತವ್ಯ ಸ್ಮೃತಿಯು ಉಂಟಾಗುತ್ತಿರಲು, ಪುನಃ ಅನಿರುದ್ಧಾಖ್ಯ ಬಿಂಬ ಮನಸ್ಸು, ಬ್ರಹ್ಮಾದಿ

ದೇವತಾಧಿಷ್ಠಿತನಾದ ಜೀವನನ್ನು, ಮನಸ್ಸಿನ ದ್ವಾರಾ ಬಾಹ್ಯ ಮನಸ್ಸನು ಪ್ರವೇಶಿಸಿ, ಅಲ್ಲಿರುವ ಅನಿರುದ್ಧನೊಡನೆ ಏಕೀಭವಿಸಿ ಅಕರ್ತವ್ಯವಾದು (ಮಾಡಬಾರದ)ದನ್ನು ಬಿಟ್ಟು ಬಿಟ್ಟು, ಕರ್ತವ್ಯವಾದ ವಿಷಯದಲ್ಲೇ "ಇದನ್ನು ನಾನು ಮಾಡುತ್ತೇನೆ." ಇತ್ಯಾದಿ ರೂಪ ಸಂಕಲ್ಪವನ್ನು ಉಂಟು ಮಾಡುತ್ತಾನೆ.

ಸಂಕಲ್ಪ

ಹಾಗೆಯೇ ಬಿಂಬ ಮನೋಭಿವ್ಯಕ್ತನಾದ ಅನಿರುದ್ಧನೆಂಬ ಸಂಕಲ್ಪವು ವಿಶೇಷವಾಗಿ ಮಿತ್ರಾಧಿಷ್ಠಿತವಾಗಿ ಅದನ್ನು ನಿಯಮಿಸಲು ಜೀವ ಮನೋಭಿವ್ಯಕ್ತ ಸಂಕಲ್ಪದ್ವಾರಾ ಅಲ್ಲಿ ಸ್ಥಿತವಾಗಿರುತ್ತದೆ.

ಹಾಗೆಯೇ "ಮಿತ್ರಾಧಿಷ್ಠಿತ"ನಾದ ಅನಿರುದ್ಧನು ಪೂರ್ವಭಾವಿಯಾದ ದೇಶ, ಕಾಲ, ಸಾಧನಾದಿ ವಿಷಯಕವಾದ ಜಿಜ್ಞಾಸೆಯನ್ನು ಮನಸ್ಸಿನಲ್ಲಿ (ಹುಟ್ಟಿಸಿ) ಉತ್ಪಾದನೆ ಮಾಡುತ್ತಾನೆ.

ಅಧ್ಯವಸಾಯ

ಅನಂತರ ಪ್ರದ್ಯುಮ್ನನೆಂಬ ಬಿಂಬ ಬುದ್ಧಿಯು ದೇವತೆಯಿಂದ ಅದಿಷ್ಠಿತವಾಗಿ ಜೀವ ಬುದ್ಧಿದ್ವಾರಾ ಬಾಹ್ಯ ಬುದ್ಧಿಯುನ್ನು ಪ್ರವೇಶಿಸಿ, ಅಲ್ಲಿರುವ ಪ್ರದ್ಯುಮ್ನನ ಜೊತೆಯಲ್ಲಿ ಏಕೀಭವಿಸಿ "ಈ ದೇಶದಲ್ಲಿ, ಈ ಕಾಲದಲ್ಲಿ, ಈ ಸಾಧನಗಳಿಂದ ನಾನು ಮಾಡುತ್ತೇನೆ." ಎಂಬ ಅಧ್ಯವಸಾಯುವನ್ನು ಹುಟ್ಟಿಸುತ್ತಾನೆ. ಹಾಗೆ ಬಿಂಬ ಬುದ್ಧಿಯಿಂದ ಅಭಿವ್ಯಕ್ತವಾದ ಪ್ರದ್ಯುಮ್ನಾಖ್ಯ ಅಧ್ಯವಸಾಯವು ವಿಶೇಷವಾಗಿ ಪರ್ಜನ್ಯಾದಿಷ್ಠಿತವಾಗಿ ಅದನ್ನು ನಿಯಮನ ಮಾಡಲು ಜೀವ ಬುದ್ಧಿಯಿಂದ ಅಭಿವ್ಯಕ್ತ ಅಧ್ಯವಸಾಯ(ದ ಮೂಲಕ) ದ್ವಾರಾ ಅಲ್ಲಿ ಸ್ಥಿತವಾಗಿರುತ್ತದೆ.

ವಾಗಿಂದ್ರಿಯ ಭೋಗ

ಅನಂತರ ವಾಸುದೇವಾಖ್ಯ ಬಿಂಬ ವಾಗಿಂದ್ರಿಯವು ದೇವತಾಧಿಷ್ಠನಾದುದನ್ನೂ ಸಹ ವಿಶೇಷತಃ "ಸ್ವಾಹಾದಿಂ" (ದೇವಿಯಿಂ)ದ ಅಧಿಷ್ಠಿತವಾಗಿ, ಜೀವನ ವಾಗಿಂದ್ರಿಯ ದ್ವಾರಾ ಬಾಹ್ಯ ವಾಗಿಂದ್ರಿಯವನ್ನು ಪ್ರವೇಶಿಸಿ, ಅಲ್ಲಿರುವ ವಾಸುದೇವನೊಡನೇ ಏಕೀಭವಿಸಿ ಎಲ್ಲ ದೇವತೆಗಳೂ ಇದು

ತ್ತಿರಲು ವಿಶೇಷವಾಗಿ "**ಸಾಹಾ**"ವನ್ನು ನಿಮಿತ್ತ ಮಾಡಿಕೊಂಡು "ಈ ದೇಶ ಕಾಲ, ಈ ಸಾಧನಗಳಿಂದ ಇದನ್ನು ಮಾಡುತ್ತೇನೆ." ಇತ್ಯಾದಿ ರೂಪ ಶಬ್ದ ಸಮೂಹವನ್ನು ಯಥಾಧ್ಯವಸಾಯವನ್ನು ಉಚ್ಚರಿಸುತ್ತಾರೆ.

ಅನಂತರದಲ್ಲಿ ಈ ಪುರುಷನು ಸಾಧುವಾಗಲಿ ಅಥವಾ ಅಸುಧುವೇ ಆಗಲಿ, ಲೌಕಿಕವಾಗಲಿ, ವೈದಿಕವಾಗಲಿ ಸಮಸ್ತ ಶಬ್ದ ಸಮೂಹವನ್ನು ವ್ಯವಹಾರ ಮಾಡುತ್ತಾನೆ. ಅಲ್ಲಿ ಯಾವ ವ್ಯನಹರಣವೆಂಬ ಕ್ರಿಯೆಗಳಿವೆಯೋ, ಅವೇ "**ವಾಗಿಂದ್ರಿ**"ಯಕ್ಕೆ ವಿಷಯವು. ಅಲ್ಲಿಯಾದರೋ, ಆಯಾ ನಾಮಾತ್ಮಕಗಳಾದ, ವಾಸುದೇವನ ಮತ್ತು ದೇವತೆಗಳ ರೂಪಗಳು, ಶ್ರೀಹರಿಯ ವಾಗಿಂದ್ರಿಯದ ವಿಷಯ ಭೂತಗಳಾಗಿರುವುವು. ಅಲ್ಲಿ ಆವರವರ "**ಭೋಗಪ್ರಕಾರ**"ವಾದರೋ ವಾಗಿಂದ್ರಿಯದಲ್ಲಿ ಸ್ಥಿತನಾಗಿರುವ ವಾಸುದೇವ ಮತ್ತು ಬ್ರಹ್ಮಾದಿ ದೇವತಾ ಸಮೂಹಗಳ ಜ್ಞಾನ ಮತ್ತು ಇಂದ್ರಿಯಗಳ ವಿಷಯ ಭೋಗ ಪ್ರಕಾರದಂತೆಯೇ ಎಂದು ತಿಳಿಯುವುದು.

ಹೀಗೆಯೇ ಉತ್ರರತ್ರ (ಮುಂದೆಯೂ) ಸಹ ಕರ್ಮೇಂದ್ರಿಯ ಚತುಷ್ಟಯದ(ನಾಲ್ಕರ)ಲ್ಲೂ ತತ್ತದಿಂದ್ರಿಯ ವಿಷಯ ಭೂತಗಳಾದ, ತತ್ತತ್ ಕ್ರಿಯಾತ್ಮಕಗಳಾದ ವ್ಯಾಪಾರಗಳನ್ನೇ ಭಗವಾನನು ಅನುಭವಿಸುತ್ತಾನೆ. ಬ್ರಹ್ಮಾದಿಗಳೂ ಹಾಗೇನೇ ಅನುಭವಿಸುವರು. ವಿಶೇಷವು ಅಲ್ಲಲ್ಲೇ ತೋರಿಸಲ್ಪಡುವುದು.

ಹಾಗೆಯೇ ವ್ಯಾಹರಣ ಕ್ರಿಯಾಭಿಮುಖದಲ್ಲಿ "**ಧ್ವನ್ಯಾತ್ಮಕ**"ಗಳಾದ ಶಬ್ದಗಳು ಉತ್ಪನ್ನವಾಗುವುವು. ಅಲ್ಲಿಯೂ ಸಹ ಅಯಾ ನಾಮಗಳ ಭಗವಂತನ ಮತ್ತು ದೇವತೆಗಳ ರೂಪಗಳು ವ್ಯಕ್ತವಾಗುವುವು. "**ಧ್ವನಿಗಳೂ**" ವರ್ಣಾತ್ಮಕಗಳಾದ ಶಬ್ದಗಳನ್ನು ವ್ಯಂಜನ (ವ್ಯಕ್ತ) ಮಾಡುವುವು.

ಅಲ್ಲಿಯೂ ಸಹ ಆಯಾ ನಾಮಗಳು ಭಗವಂತನ ಮತ್ತು ದೇವತೆಗಳ ರೂಪಗಳನ್ನು ಅಭಿವ್ಯಕ್ತ ಮಾಡಿ, ಆಯಾ ವಾಚ್ಯಗಳಾಗಿ ಸಮ್ಯಕ್ ಸ್ಥಿತಗಳಾಗಿರುವುವು. ಅದು ಹೇಗೆಂದರೆ—

ಉದಾಹರಣೆಗಾಗಿ

"**ವಿಷ್ಣವೇ ನಮಃ**" ಇತ್ಯಾದಿಗಳಲ್ಲಿ ನು ಎಂಬುವ ಪೂರ್ವ ವರ್ಣದಲ್ಲಿ ವರಾಹನೂ ವಾಸುದೇವನೂ ಷ ಎಂಬ ಉತ್ತರ ವರ್ಣದಲ್ಲಿ ವಾಮನನೂ,

ಸಂಕರ್ಷನೂ ಷಷ್ಠ ಎಂಬ ಸಂಹಿತೆಯಲ್ಲಿ ನೃಸಿಂಹನೂ, ಪ್ರದ್ಯುಮ್ನನು ಇರುವರು.

ಹಾಗೆಯೇ 1. ಲಕ್ಷ್ಮೀನಾರಾಯಣಾತ್ಮಕವು, 2. ನಾರಾಯಣ ವಾಯ್ವಾತ್ಮಕವು, 3. "ವಾಯು" ಸರ್ವ ದೇವಾತ್ಮಕವೂ, 4. ಸರ್ವದೇವತಾ ಶಂಕರಾತ್ಮಕವು, 5. ಶಂಕರ ಬ್ರಹ್ಮಾತ್ಮಕವು ಹೀಗೆಂದು, ಅರ್ಧನಾರೀ (ನರಾತ್ಮಕ) ರೂಪ ಪಂಚಕವೂ ಸಹ ಇರುವುವು.

ಹಾಗೆಯೇ ಅಷ್ಟಾವಯವಾತ್ಮಕ ಭಗವದ್ವಾಚ್ಯವಾದ ಓಂ ಎಂಬ ಪ್ರಣವದಲ್ಲಿರುವ ಅ ಅಕಾರದಲ್ಲಿ ವಿಶ್ವನೂ ಉ ಕಾರದಲ್ಲಿ ತೈಜಸನೂ ಮಕಾರದಲ್ಲಿ ಪ್ರಾಜ್ಞನೂ ನಾದ ದಲ್ಲಿ ಅನಿರುದ್ಧನೂ, ಬಿಂದುವಿನಲ್ಲಿ ಪ್ರದ್ಯುಮ್ನನೂ ಘೋಷದಲ್ಲಿ ಸಂಕರ್ಷಣನೂ, ಶಾಂತದಲ್ಲಿ ವಾಸುದೇವನೂ, ಅತಿಶಾಂತದಲ್ಲಿ ನಾರಾಯಣನೂ ಇರುವರು.

ಅಹಮೇಕೋಽಖಿಲಗುಣವಾಚಕಃ ಪ್ರಣವೋ ಮಮ ।
ಅಕಾರಾದ್ಯತಿಶಾಂತಾಂತಃ ಸೋಽಯಮಷ್ಟಾಕ್ಷರೋ ಮತಃ ॥
ಸ ವಿಶ್ವತೈಜಸಪ್ರಾಜ್ಞತುರೀಯಾತ್ಮಾಂತರಾತ್ಮನಾಂ ।
ಪರಮಾತ್ಮಜ್ಞಾನಯುಜಾಂ ಮದ್ರೂಪಾಣಾಂ ಚ ವಾಚಕಃ ॥

ಇದರಂತೆಯೇ ನಾರಾಯಣಾಷ್ಟಾಕ್ಷರದಲ್ಲೂ "ಓಂ ನಮೋ ನಾರಾಯಣಾಯ" ಎಂಬಲ್ಲಿ ವಿಶ್ವ, ತೈಜಸ, ಪ್ರಾಜ್ಞ, ತುರೀಯ, ಆತ್ಮ, ಅಂತರಾತ್ಮ, ಪರಮಾತ್ಮ, ಜ್ಞಾನಾತ್ಮಕಗಳೆಂಬ ಎಂಟು ರೂಪಗಳೂ ಅಭಿವ್ಯಕ್ತವಾಗಿ ಅಡಗಿರುವುವು, ಹೀಗೆಯೇ ವಾಸುದೇವ ದ್ವಾದಶಾಕ್ಷರದಲ್ಲೂ ಕೇಶವಾದಿ ದಾಮೋದರಾಂತ ಹನ್ನೆರಡು ಮೂರ್ತಿಗಳೂ, ಗಾಯತ್ರಿಯಲ್ಲಿ ಕೇಶವನನ್ನು ಪ್ರಾರಂಭಿಸಿ ಕೃಷ್ಣಾಂತವಾಗಿ ಇಪ್ಪತ್ತು ನಾಲ್ಕು ಮೂರ್ತಿಗಳನ್ನು ತಿಳಿಯುವುದೂ ಒಂದು ಕ್ರಮವಿರುತ್ತದೆ. ಪ್ರಣವಾರ್ಥವಾದ ವ್ಯಾಹೃತಿ ಪ್ರತಿಪಾದ್ಯ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ರೂಪಗಳನ್ನೂ 1. ಮಹೋಲ್ಕ, 2. ಕೃದ್ಧೋಲ್ಕ, 3. ವೀರೋಲ್ಕ, ದ್ಯುಲ್ಕ, 5. ಸಹಸ್ರೋಲ್ಕಗಳನ್ನೂ ಹಾಗೆಯೇ ವ್ಯಾಹೃತ್ಯರ್ಥಗಳಾದ ಪುರುಷಸೂಕ್ತ ಋಗಾದಿಗಳ ಮಂತ್ರಗಳ ದೇವತಾಭಿವ್ಯಕ್ತಿ ಮತ್ತು ಉಪಾಸ್ಯ ಮೂರ್ತಿಗಳನ್ನೂ ತಿಳಿಯುವುದು.

ಇವೆಲ್ಲವನ್ನೂ ನಮ್ಮ "ಪ್ರಣವಾರ್ಥ ಪ್ರಕಾಶ ಭಾಸ್ಕರೋದಯ" ಎಂಬ ಗ್ರಂಥದಲ್ಲಿ ವಿವರಿಸಿರುವೆವು.

ಹಾಗೆಯೇ "ಹಿಂ ಕಾರ" ಸಂಹಿತೆ ವಾಕ್ಯದಲ್ಲಿ ಪ್ರದ್ಯುಮ್ನನು ಮೂರ್ತ್ಯಂತರ ಪ್ರತಿಪಾದಕ ಶಬ್ದಾಂತರ ದರ್ಶನ ಪರ್ಯಂತ ಸ್ಥಿತನಾಗಿರುತ್ತಾನೆ.

ಇದರಂತೆ ಉತ್ತರತ್ರದಲ್ಲೂ ಆಕಾರ ಸಂಹಿತೆಯಲ್ಲಿ ನಾರಾಯಣನೂ ಪ್ರ ಸಂಯುತದಲ್ಲಿ ವರಾಹನೂ, ಉದ್ಯುಕ್ತದಲ್ಲಿ ನಾರಾಯಣನೂ, ಪ್ರತ್ಯುಕ್ತದಲ್ಲಿ ಅನಿರುದ್ಧನೂ, ಉಪಯುಕ್ತದಲ್ಲಿ ನೃಹಿಂಹನೂ, ಋಗ್ವೇದದಲ್ಲಿ ವಾಸುದೇವನೂ, ಯಜುರ್ವೇದದಲ್ಲಿ ಸಂಕರ್ಷಣನೂ, ಸಾಮವೇದದಲ್ಲಿ ಪ್ರದ್ಯುಮ್ನನೂ, ತಥರ್ವಣವೇದ, ಇತಿಹಾಸ ಪುರಾಣಗಳಲ್ಲಿಯೂ ಅನಿರುದ್ಧನೂ, ಸರ್ವ ವೇದಗಳಲ್ಲೂ **ನಾರಾಯಣನು** ಇರುವರೆಂದು ತಿಳಿಯುವುದು.

ಲೌಕಿಕ ಅಲೌಕಿಕ ಶಬ್ದ (ರಾಶಿಗಳಲ್ಲಿ) ಘಟಿಕಗಳಾದ ಐವತ್ತು ಕ್ಷ ವರ್ಣ ಐವತ್ತೊಂದು (ಏಕ ಪಂಚಾಶದ್ವಣ) ಅಕ್ಷರಗಳಲ್ಲಿ—

ಅಜ ಆನಂದ ಇದ್ರೇಶ ಉಗ್ರ ಊರ್ಜ ಋತಂಭರಾಃ
ಋೂಘುಲ್ಯಶೌ ಲ್ಯಜಿರೇಕಾತ್ಮ್ಯೈರ ಓ ಜೌೋಭೃದೌರಸಃ
ಅಂತೋಽರ್ಥಗರ್ಭಃ ಕಪಿಲಃ ಖಪತಿರ್ಗರುಡಾಸನಃ
ಘರ್ಮೋ ಙಸಾರಶ್ಚಾರ್ವಂಗೋ ಛಂದೋಗಮ್ಯೋ ಜನಾರ್ದನಃ
ಝೂಟತಾರಿಜಮುಷ್ಟಂಕೀ ಠಳಕೋ ಡರಕೋ ಢರೀ
ಣಾತ್ಮಾ ತಾರಸ್ಥಪೋ ದಂಡೀ ಧ್ವನೀ ನಮ್ಯಃ ಪರಃ ಫಲೀ
ಬಲೀ ಭಗೋ ಮನುರ್ಯಜ್ಞೋ ರಾಮೋ ಲಕ್ಷ್ಮೀಪತಿರ್ವರಃ
ಶಾಂತಸಂವಿತ್ ಷಡ್ಗುಣಶ್ಚ ಸಾರಾತ್ಮಾ ಹಂಸಳಾಳುಕಾ
ಪಂಚಾಶನ್ಮೂರ್ತಯಸ್ತ್ವೇತಾ ಮನೂಕಾರಾದಿ ಲಕ್ಷಕಾಃ

(ನೃಸಿಂಹಃ ಕ್ಷಸ್ಯ ದೇವತಾ)

ಅಜನಿಂದ ಪ್ರಾರಂಭಿಸಿ ಳಾಳುಕ ಮತ್ತು ನೃಸಿಂಹಮೂರ್ತಿಗಳನ್ನು ತಿಳಿದು ಧ್ಯಾನಿಸುವುದೆಂದನು ಇನ್ನೊಂದು ಕ್ರಮವು "ತಂತ್ರಸಾರದಲ್ಲಿ" ಉಕ್ತವಾಗಿದೆ.

ಮತ್ತು ಸೂರ್ಯನಲ್ಲಿ ಲೀನವಾಗುವುದರಿಂದ (ಅಡಗಿರುವುದರಿಂದ) "ಅರ್ಕಲಿ" ನಾಮಕಗಳಾದ ಮೂರನೂರ ಅರವತ್ತು (ಷಷ್ಟ್ಯುತ್ತರ ಶ... ತ್ರಯ) ರೂಪಗಳಿರುವುದನ್ನೂ ತಿಳಿಯುವುದು.

ಹೀಗೆ ವರ್ಣಾತ್ಮಕಗಳೂ, ಶಬ್ದಾತ್ಮಕಗಳೂ, ಚೇತನಾ ಚೇತನಾತ್ಮ... ಪ್ರಪಂಚದ ಸೃಷ್ಟಿ, ಸ್ಥಿತಿ, ಸಂಹಾರಾದಿಗಳಲ್ಲಿ ಪ್ರವೃತ್ತಗಳಾಗಿ, ಅಲ್ಲಲ್ಲಿ ಇದ್ದು... ಕೊಂಡು, ಆಯಾ ವಸ್ತುಗಳಿಗೆ ಅವುಗಳಲ್ಲಿ ಸತ್ತಾದಿ ಪ್ರದಗಳಾಗಿ, ತತ್ತ... ತ್ಕ್ರಿಯಾ ಪ್ರವರ್ತಕಗಳೂ, ಆಯಾಯ ಆಕಾರಗಳೂ, ತತ್ತಚ್ಛಬ್ದವಾಚ್ಯ... ಗಳೂ, ಆಗಿ ಭಗವದ್ರೂಪಗಳು ಹಾಗೆಯೇ ತದ್ಗುಣ ಕರ್ಮಗಳನ್ನೂ ಪ್ರಕಾಶ... ಪಡಿಸುವವು. ಆ ಇವುಗಳೆಲ್ಲವನ್ನೂ ತನ್ನ ಮನಸ್ಸಿನಿಂದ ಭಗವಂತನ... ಅನುಭವಿಸುತ್ತಾನೆ.

ಗ್ರ ಹ ಣೇ ಚ್ಛೆ

ಯಾವಾಗ ಬಿಂಬನಿಗೆ ಗ್ರಹಣೇ (ತೆಗೆದುಕೊಳ್ಳಬೇಕೆಂಬ ಇ)ಚ್ಛೆಯು... ಟಾಗುತ್ತದೆಯೋ ಆಗ ವಾಸುದೇವಾಖ್ಯ ಬಿಂಬವು ಪಾಣೀಂದ್ರಿಯವನ್ನು... ದೇವತಾದಿಷ್ಠಿತ ಜೀವನ ಹಸ್ತೇಂದ್ರಿಯದ್ವಾರಾ ಬಾಹ್ಯೇಂದ್ರಿಯವನ್ನು... ಪ್ರವೇಶ ಮಾಡಿ, ಅಲ್ಲಿರುವ ವಾಸುದೇವನೊಡನೆ ಏಕೀಭವಿಸಿ, ಹಸ್ತಸಾಧ... ಗಳಾದ ಗ್ರಹಣಾದಿ ವ್ಯಾಪಾರಗಳನ್ನು ಮಾಡುತ್ತಾನೆ.

ಅಲ್ಲಿ ಯಾವ ತೆಗೆದುಕೊಳ್ಳುವುದೆಂಬ (ಗ್ರಹಣಾದಿ ರೂಪ) ಕ್ರಿಯೆಯು... ಇದೆಯೋ ಅವೇನೇ "ಹಸ್ತೇಂದ್ರಿಯ" ವಿಷಯಗಳು ಅಲ್ಲಿ ಆಯಾ... ನಾಮಕಳಾಗಿ, ವಾಸುದೇವನ ಮತ್ತು ದೇವತೆಗಳ ರೂಪಗಳು ಅಭಿವ್ಯಕ್ತ... ಳಾಗುವವು. ಅವುಗಳೇ ಬಿಂಬನ ಹಸ್ತೇಂದ್ರಿಯ ವಿಷಯಗಳು. ಅವುಗ... ಭೋಗಪ್ರಕಾರವೂ ಈ ಮೊದಲೇ ಹೇಳಿದಂತೆಯೇ ಎಂದು ತಿಳಿಯುವುದು...

ಗ ಮ ನೇ ಚ್ಛೆ

ಯಾವಾಗ ಬಿಂಬನಿಗೆ (ಹೋಗಬೇಕೆಂಬ) ಗಮನೇಚ್ಛೆಯು ಉಂಟಾ... ಗುತ್ತದೆಯೋ ಆಗ ಸಂಕರ್ಷಣನೆಂಬ ಬಿಂಬನ ಪಾದೇಂದ್ರಿಯವು ದೇವತಾ... ಧಿಷ್ಠಿತವಾದ ಜೀವಬಿಂಬ ಪಾದೇಂದ್ರಿಯ ದ್ವಾರಾ ಬಾಹ್ಯ ಪಾದೇಂದ್ರಿಯ... ವನ್ನು ಪ್ರವೇಶಿಸಿ, ಅಲ್ಲಿರುವ ಸಂಕರ್ಷಣನೊಡನೆ ಏಕೀಭವಿಸಿ ಗಮನಕ...

ಮೊದಲಾದ ವ್ಯಾಪಾರಗಳನ್ನು ಮಾಡುತ್ತಾನೆ. ಆ ಗಮನಾದಿ ಕ್ರಿಯೆಗಳೇ ಪಾದೇಂದ್ರಿಯಗಳ ವಿಷಯಗಳು ಅಲ್ಲಿಯೂ ಬಿಂಬ ಪಾದೇಂದ್ರಿಯ ವಿಷಯಗಳು, ಆಯಾ ನಾಮಕಗಳಾದ ಸಂಕರ್ಷಣನ ಮತ್ತು ದೇವತೆಗಳ ರೂಪಗಳು ಪ್ರಾದುರ್ಭವಿಸುತ್ತವೆ.

ವಿಸರ್ಜನೇಚ್ಛೆ

ಯಾವಾಗ ಬಿಂಬನಿಗೆ ಮಲ ಮೂತ್ರಾದಿಗಳನ್ನು ವಿಸರ್ಜನೆ ಮಾಡಬೇಕೆಂಬ ಇಚ್ಛೆಯು ಉಂಟಾಗುತ್ತದೆಯೋ ಆಗ ಬಿಂಬನಾದ ಪ್ರದ್ಯುಮ್ನ(ನೆಂಬುವ)ನ ಪಾಯು ಇಂದ್ರಿಯವೂ ನಾರಾಯಣಾಖ್ಯ ಉಪಸ್ಥ ಇಂದ್ರಿಯವೂ, ದೇವತಾಧಿಷ್ಠಿತವಾದ ಜೀವನ ಪಾಯೂಪಸ್ಥ ದ್ವಾರಾ, ಬಾಹ್ಯ ಪಾಯೂಪಸ್ಥೆಯನ್ನು ಪ್ರವೇಶಿಸಿ, ಅಲ್ಲಿರುವ ಪ್ರದ್ಯುಮ್ನ ನಾರಾಯಣರಿಬ್ಬರಿಂದ ಏಕೀಭವಿಸಿ, ವಿಶೇಷವಾಗಿ "**ಅಪಾನವಾಯು**"ದ್ವಾರಾ, ಮಲ ಮೂತ್ರ ವಿಸ(ರ್ಗ)ರ್ಜನೆಯನ್ನು ಮಾಡುವರು. ಅಲ್ಲಿ ವಿಸರ್ಗ ಕ್ರಿಯೆಗಳೇ ಪಾಯೂಪಸ್ಥೆಗಳಿಗೆ ವಿಷಯವು. ಅಲ್ಲಿ ಮಲವಿಸರ್ಗ ಕ್ರಿಯೆಗಳಲ್ಲಿ ಪ್ರದ್ಯುಮ್ನನ ಮತ್ತು ಮೂತ್ರ ವಿಸರ್ಗ ಕ್ರಿಯೆಗಳಲ್ಲಿ ನಾರಾಯಣನ ಮತ್ತು ದೇವತೆಗಳ ರೂಪಗಳು ಪ್ರಾದುರ್ಭವಿಸುವವು. ಅವುಗಳನ್ನೇ ಕ್ರಮವಾಗಿ ಶ್ರೀಹರಿಯ **ಪಾಯೂಪಸ್ಥೇಂದ್ರಿಯ** ಭೋಗ್ಯವಾದವುಗಳೆಂದು ತಿಳಿಯುವುದು.

ಆನಂದೇಚ್ಛೆ

ಯಾವಾಗ ಬಿಂಬನಿಗೆ "**ಸ್ತ್ರೀ ಸಂಭೋಗೇಚ್ಛೆಯೋ**" ಆಗಲೇ ಪ್ರತಿಬಿಂಬನಾದ ಜೀವನಿಗೂ ಸಹ ಅದರ ಇಚ್ಛೆಯುಂಟಾಗುವುದು. ಯಾವಾಗ ಶ್ರೀಹರಿಯು ಉಪಮಂತ್ರಣಾದಿಗಳನ್ನು ಮಾಡುತ್ತಾನೆಯೋ, ಆಗ ಜೀವನೂ ಅದನ್ನು ಮಾಡುತ್ತಾನೆ. ಹರಿಯ ಉಪಮಂತ್ರಣಾದಿಗಳೂ ಸಹ ಅನಿರುದ್ಧಾದಿ ರೂಪಗಳೇನೆ, ಆವೇ ದೇವತಾಧಿಷ್ಠಿತಗಳಾದ ಜೀವೋಪಮಂತ್ರಣಾದಿ ದ್ವಾರಾ, ಬಾಹ್ಯೋಪಮಂತ್ರಣಾದಿಗಳಲ್ಲಿ ಪ್ರವೇಶಿಸಿ, ಅಲ್ಲಿರುವ ಅನಿರುದ್ಧ ರೂಪಗಳೊಡನೆ ಏಕೀಭವಿಸಿ, ಉಪಮಂತ್ರಣಾದಿ ಪ್ರವರ್ತಕಗಳಾಗುವುವು. ಅಲ್ಲಿ ಆಗ 1. ರಮಣ ಮಾಡಲು **ರತಿಕ್ರೀಡೆ ನಡೆಯಿಸಲು**

ಸಂಭಾಷಣಾರೂಪ ಮಂತ್ರಣವನ್ನೂ ಅನಿರುದ್ಧನೂ 2. ಸುಖಾನುಭವರೂ
ಜ್ಞಾಪನವನ್ನೂ ಪ್ರದ್ಯುಮ್ನನೂ, 3. ಸ್ತ್ರೀಯ ಜೊತೆಯಲ್ಲಿ ಶಯನವ
ಸಂಕರ್ಷಣನೂ 4. ಭಾರ್ಯಾಭಿಮುಖ್ಯೇನ (ಹೆಂಡತಿಯ ಅಭಿಮುಖವಿದು
ಮುಖಮಾಡಿ) ಶಯನ (ಮಲಗುವುದು) ವಾಸುದೇವನೂ 5. ಮೈಥು
ಕಾಲವು ಮತ್ತು ಅದರ ಸಮಾಪ್ತಿಯು ನಾರಾಯಣನೂ ಎಂದು ಈ
ರಲ್ಲೂ ಕ್ರಮವಾಗಿ ಅನಿರುದ್ಧಾದಿ ಪಂಚ ರೂಪಗಳು ಧ್ಯಾನಿಸಲ್ಪಡಬೇಕು.

ಅದರಂತೆ ಅನಿರುದ್ಧಾದಿ ರೂಪಗಳೇ ಹಂಗೆ **ವೇದಿ** ಮೊದಲಾದ
ಅವೇ ಇಲ್ಲಿ **ಆತ್ಮವಿದ್ಯಾದಿ**ಗಳಲ್ಲಿ ಸ್ಥಿತವಾದವುಗಳೆಂದು ತಿಳಿಯುವುದು.

ಅಲ್ಲಿ ಸ್ತ್ರೀ 1. ಉಪಸ್ಥೆಯು "ವೇದಿಯು" ಅಲ್ಲಿರುವ 2. ಲೋ
ಗಳು "ಬರ್ಹಿ" (ಹಾಸುವ ದರ್ಭೆ)ಗಳು, ಅಲ್ಲಿರುವ 3. ಚರ್ಮವ
"ಕೃಷ್ಣಾಜಿನ" ಸ್ಥಾನೀಯವಾದುದು ಅಲ್ಲಿ ಅವೆರಡರ ಮಧ್ಯೆ, 4. ದೀ
ಪಾದ ಅಗ್ನಿಯು ರೇತೋ ಹೋಮ ಸ್ಥಾನೀಯವಾಗಿರುತ್ತದೆ. ಆ ಎರ
ಮುಷ್ಕಗಳೇ "**ಸೋಮಾಭಿಷಣ**" "**ಫಲಕಸ್ಥಾನೀ**"ಯಗಳೆಂದು ಅನ
ಸಂಧಾನವನ್ನು ಮಾಡಬೇಕು.

ಹಾಗೆಯೇ ಅಲ್ಲಿ ವಾಸುದೇವಾದಿ ಪಂಚ ರೂಪಗಳಿಂದ "**ಯೋ**
ಕ್ಲಿಪ್ತ್ಯಾ"ದಿಗಳನ್ನು ಭಗವಂತನ ಜನ್ಮತ್ರಯಗಳನ್ನೂ ಅನುಸಂಧಾ
ಮಾಡಬೇಕು.

ಹೀಗೆ ರಮಣ ಮಾಡಿದ ನಂತರ ಗರ್ಭೋತ್ಪತ್ತಿಯಲ್ಲಿ ಭಗವತ್ಸನ್ನಿಧಾ
ವಿಶೇಷ ಪಾತ್ರತ್ವವಿರುವುದರ ದೆಶೆಯಿಂದ ಪರಮಾದರದಿಂದ ಆ (ಸ್ತ್ರೀಯ
ಕೆಯು ಗೌರವಿಸಿ ಸಂಭಾವಿಸಲ್ಪಡಬೇಕು. ಹಾಗೆಯೇ ಪುತ್ರೋತ್ಪತ್ತಿ
ಅನಂತರದಲ್ಲೂ ಪುತ್ರನೂ (ಕುಮಾರನೂ) ಸಹ ಅದೇ ರೀತಿಯಲ್ಲಿ ಆದೃತನ
ಸಂಭಾವಿತನೂ (ಮಾತಾ) ಪಿತೃಗಳಿಂದ ಆಗಿರುವನು.

ಜ್ಞಾನಿಗಳಿಗೆ ಇವರ ಉಭಯರ ಸಂಭಾವನೆಯೂ ಭಗವತ್ಸಂಭಾವನ
ಪೂಜೆಯೇ ಆಗಿರುವುದು ಎಂದು ತಿಳಿಯುವುದು,

ಇಲ್ಲಿ ಸ್ವಾಭಾವಿಕಗಳಾದ ಜೀವನ ಜ್ಞಾನ, ಇಚ್ಛಾದಿ ಗುಣಗಳಲ್ಲ
ಕ್ರಿಯೆಗಳಲ್ಲೂ ಸಹಾ ವಿಷ್ಣುವಿನ ಜ್ಞಾನೇಚ್ಛಾದಿ ಗುಣಗಳೂ, ಕ್ರಿಯೆಗಳೂ

ಪ್ರೇರಕತ್ವದಿಂದ ಇರತ್ತದೆ. ಆ ಈ ಸ್ವಭಾವಿಕಗಳಾದ ಗುಣಗಳನ್ನೂ ಕ್ರಿಯೆಗಳನ್ನೂ ಕಾರಣ ಮಾಡಿಕೊಂಡು ತಮ್ಮದೇ ಆದ ಆಗಾಗ ಉತ್ಪನ್ನವಾಗುವ ದ್ರವ್ಯಗಳಲ್ಲೂ, ಗುಣಗಳಲ್ಲೂ, ಕ್ರಿಯೆಗಳಲ್ಲೂ ಸಹ "ಅಂತರ್ಯಾಮಿತ್ವ"ದಿಂದಲೂ, ಅವುಗಳ ಪ್ರವರ್ತಕತ್ವದಿಂದಲೂ ಆಯಾ ಆಕಾರ ಆಯಾ ನಾಮಗಳಿಂದಲೂ ಅವುಗಳ ಪ್ರಾದುರ್ಭಾವವು.

ಅವುಗಳು ನಷ್ಟವಾಗಲು ಅವುಗಳ ರೂಪಗಳು ಅವು ಶಕ್ತ್ಯಾತ್ಮನಾಗಿರುವುವು. ಅವವುಗಳ ನಾಶ ಮೊದಲಾದ ಕ್ರಿಯೆಗಳಲ್ಲೂ, ನಿಯಾಮಕಗಳಾದ ಅಂತರ್ಗತ ರೂಪಗಳು ಪ್ರಾದುರ್ಭವಿಸುವುವು. ಅವುಗಳಿಂದ ಅಧಿಷ್ಠಿತಗಳಲ್ಲದ ಯಾವುದೊಂದು ಚೇತನಾಽಚೇತನವಾದರೂ ಇಲ್ಲವೇ ಇಲ್ಲವು.

ಈ ರೀತಿಯಾಗಿ ರಮಾದೇವಿಯೂ ಸಹ ಸರ್ವಾಂತರ್ಗತಗಳಾದ ತನ್ನರೂಪಗಳಿಂದ ಶ್ರೀಹರಿಯನ್ನು ಪೂಜಿಸುತ್ತಾಳೆ. ಇದರಂತೆಯೇ ಬ್ರಹ್ಮನೂ ಕೂಡ ಸರ್ವಾಂತರ್ನಿಯಾಮಕನಾಗಿ ಅನಂತರೂಪವುಳ್ಳವನು. ಹೀಗೆಯೇ ವಾಯುವೂ ಅನಂತರೂಪಿಯು ಇದೇ ಪ್ರಕಾರವಾಗಿ ಇತರ ದೇವತೆಗಳೂ ಸಹ ಯಥಾಯಥವಾಗಿ ಅನಂತ ರೂಪಗಳಿಂದ ಶ್ರೀಹರಿಯನ್ನು ಪೂಜಿಸಿ ಸೇವಿಸುತ್ತಾರೆ.

ಹೀಗೆ ಇಂದ್ರಿಯ ವ್ಯಾಪಾರ ನಿರೂಪಣೆಯು

— ಇತಿಶಂ —

ದೇಹದಲ್ಲಿ ತತ್ವಗಳ ಕಾರ್ಯಗಳು

ಈ ಶರೀರವು ಸರ್ವವೂ ತತ್ವಾತ್ಮಕವಾಗಿರುವುದರಿಂದಲೇ ಸಾಮಾನ್ಯವಾಗಿ ಸರ್ವ ವ್ಯಾಪಾರಗಳೂ ತತ್ವಾತ್ಮಕಗಳೇ ಆಗಿವೆ. ಆದರೂ ವೈಶೇಷ್ಯದಿಂದ ಆಯಾ ತತ್ವಗಳ ವಿಶೇಷ ವ್ಯಾಪಾರಗಳನ್ನೂ ಅವುಗಳೆಲ್ಲದರ ಲಕ್ಷಣಗಳನ್ನೂ, ತತ್ತನ್ನಿಯಾಮಕಗಳನ್ನೂ ಭಗವಂತನ ಮತ್ತು ದೇವತೆಗಳ ರೂಪವಿಶೇಷಗಳನ್ನೂ ಆವಶ್ಯಕವಾಗಿ ತಿಳಿಯಬೇಕು. ಅದು ಹೇಗೆಂದರೆ—

ಅವ್ಯಕ್ತ, ಮಹತ್, ಅಹಂಕಾರ, ಬುದ್ಧಿ, ದಶ (10) ಇಂದ್ರಿಯಗಳ ಮನಸ್ಸು (5) ಐದು ಮಾತ್ರಾ (5) ಐದು ಭೂತಾತ್ಮಕಗಳೆಂದು ಹೀಗೆ ಒಟ್ಟು ಇಪ್ಪತ್ತೈದು ತತ್ವಗಳು.

ಅವ್ಯಕ್ತವು, ಸತ್ವ, ರಜಃ, ತಮೋಗುಣಾತ್ಮಕವು. ಇದರಲ್ಲಿ **ಸತ್ವ ಕಾರ್ಯಗಳು** ಶಮ, ದಮ, ತಿತಿಕ್ಷಾ, ತಪಸ್ಸು, ಸತ್ಯ, ದಯಾ, ಸ್ಮೃತಿ, ತುಷ್ಟಿ, ತ್ಯಾಗ, ಸ್ಪೃಹಾ, ಕ್ಷಮಾ, ಧೃತಿ, ಸ್ತುತಿ, ಜ್ಞಾನ, ಸುಖ, ಜಾಗರಣ ಮೊದಲಾದುವು. ಸ್ವಚ್ಛತ್ವ, ಶಾಂತತ್ವಗಳು ಸತ್ವದ ಸ್ವಾಭಾವಿಕ ಗುಣಗಳು. ಅಲ್ಲಿ ಸತ್ವವು ಸ್ವಚ್ಛವಾಗಿರುವುದರಿಂದ ಅದು ಜ್ಞಾನವನ್ನೂ ಶಾಂತತ್ವವಾದುದರಿಂದ ಸುಖವನ್ನೂ ಉತ್ಪಾದನೆ ಮಾಡು (ಹುಟ್ಟಿಸು)ತ್ತದೆ.

ಪ್ರಕಾಶ ಶಕ್ತಿಯೂ ಸತ್ವದ ಸ್ವಾಭಾವಿಕ ಗುಣವು. ಆದುದರಿಂದ ಈ ರೀತಿಯಾಗಿ ಪಂಚೇಂದ್ರಿಯಗಳಿಂದ ಪ್ರಕಾಶವು **ಸ್ವಾತ್ವಿಕ ಜ್ಞಾನವನ್ನು** ಹುಟ್ಟಿಸಿ ಅದರ ಮೂಲಕ ಜೀವನನ್ನು ಬಂಧಿಸು (ಕಟ್ಟಿಹಾಕು)ತ್ತದೆ. ಅಲ್ಲಿ ಶಮಾದಿಗಳೆಲ್ಲದರಲ್ಲೂ ಸರ್ವತ್ರ ಆಯಾ ನಾಮಕಗಳಾದ ಅನಿರುದ್ಧ ರೂಪಗಳು ನಿಯಾಮಕಗಳಾಗಿ ಇವೆಯೆಂದು ಧ್ಯಾನಿಸಬೇಕು.

ವಿ. ಸೂ.—ಹಾಗೆಯೇ **ಸ್ಥೂಲ ಶರೀರದ** ಸೃಷ್ಟಿ ಪ್ರಕರಣದಲ್ಲಿ ಹೇಳಿದ ತತ್ವದೇವತೆಗಳ ರೂಪವನ್ನು ತಿಳಿದು ಧ್ಯಾನಿಸಬೇಕು. ಹೀಗೆಯೇ ಉತ್ತರತ್ರ ಮುಂದೆಯೂ ಸಹ ತಿಳಿಯುವುದು.

ಕಾಮ, ಈಹಾ, ದಮ, ತೃಷ್ಣಾ, ಸ್ತಂಭ, ಆಶೀಃ ಭಿದಾ ಅಲ್ಪ ದುಃಖವು. ಉತ್ಸಾಹ, ಯಶಸ್ಸು, ಪ್ರೀತಿ, ಧಾರ್ಷ್ಟ್ಯವು, ವೀರ್ಯ, ಬಲ, ಉದ್ಯೋಗ, ಚಾಂಚಲ್ಯ, ಶ್ರೀಃ, ಸ್ವಪ್ನ ಇತ್ಯಾದಿಗಳೆಲ್ಲವೂ, **ರಜೋಗುಣದ** ಕಾರ್ಯಗಳೆಂದು ತಿಳಿಯುವುದು. ಸ್ನೇಹವನ್ನುಂಟುಮಾಡುವುದು ಅದರ ಸ್ವಾಭಾವಿಕವಾದ ಲಕ್ಷಣವು. ಕ್ರಿಯಾ ಶಕ್ತಿಯೂ ಸಹ ರಜೋಗುಣದ ಸ್ವಭಾವವು.

ಆದುದರಿಂದಲೇ ಪಂಚೇಂದ್ರಿಯಗಳಿಂದಲೂ ರಜೋಗುಣವು ಕ್ರಿಯೆಗಳನ್ನು ಉತ್ಪಾದನೆ ಮಾಡಿ ಆ ಮೂಲಕವಾಗಿ ಕರ್ಮಗಳಿಂದ ಜೀವನನ್ನು ಬಂಧನ ಮಾಡುತ್ತದೆ. ಇಲ್ಲಿ ಕಾಮಾದಿಗಳಲ್ಲಿ ಸರ್ವತ್ರ ನಿಯಾಮಕತ್ವ

ದಿಂದ ಸ್ಥಿತಗಳಾದ, ಕಾಮಾದಿ ನಾಮಕಗಳಾಗಿ "ಪ್ರದ್ಯುಮ್ನನ ರೂಪ" ಗಳನ್ನು ಧ್ಯಾನ ಮಾಡಬೇಕು.

ತಮೋ ಗುಣದ ಕಾರ್ಯಗಳು, ಕ್ರೋಧ, ಲೋಭ, ಅನೃತ (ಸುಳ್ಳು ಹೇಳುವುದು) ಹಿಂಸೆ, ಕಾಪಟ್ಯ, ಡಂಭ, ಅಕ್ಷಮಾ, ಕಲಹ, ಶೋಕ, ಮೋಹ, ವಿಷಾದ, ಆರ್ತಿ, ನಿದ್ರೆ, ಆಶೆ, ಭಯ, ಅನುದ್ಯಮ, ಪ್ರಮಾದ, ಸುಷುಪ್ತಿ ಇತ್ಯಾದಿಗಳು **ಅಜ್ಞಾನ** ಮತ್ತು **ಮಿಥ್ಯಾ** ಜ್ಞಾನವನ್ನು ಹುಟ್ಟಿಸುವುವು ಅದರ ಸ್ವಾಭಾವಿಕ ಲಕ್ಷಣವು.

ಆವರಣ ಶಕ್ತಿಯೂ ತಮೋಗುಣದ ಸ್ವಭಾವವು. ಆದುದರಿಂದಲೇ ಸ್ವಪ್ರಕಾಶಕನಾದ ಜೀವನಿಗೂ ಅದರ ಆವರಣವು, ತಮೋಗುಣವು, ಪ್ರಮಾದ, ಆಲಸ್ಯ, ನಿದ್ರೆಗಳನ್ನು ಹುಟ್ಟಿಸಿ ಅವುಗಳ ಮೂಲಕವಾಗಿ ಜೀವನನ್ನು ಬಂಧಿಸಿ ಕಟ್ಟಿಹಾಕುತ್ತದೆ. ಇಲ್ಲಿ ಕೋಪಾದಿಗಳಲ್ಲಿ ಸರ್ವತ್ರ **ಸಂಕರ್ಷಣ** ರೂಪಗಳು ನಿಯಾಮಕಗಳಾಗಿರುವುವೆಂದು ಧ್ಯಾನ ಮಾಡಿ ತಿಳಿಯಬೇಕು.

ಇನ್ನು ಮಿಶ್ರಿತ ಗುಣ ಕರ್ಮಗಳು

ಧರ್ಮ, ಅರ್ಥ, ಕಾಮಾದಿಗಳಲ್ಲಿ ನಿಷ್ಠೆ, ಶ್ರದ್ಧಾದಿಗಳು ಸ್ವಧರ್ಮಾಚರಣೆ ಮೊದಲಾದುವು, ಇಲ್ಲಿ ಸರ್ವತ್ರ ಅನಿರುದ್ಧಾದಿ ಮೂರು (**ಅನಿರುದ್ಧ ಪ್ರದ್ಯುಮ್ನ ಸಂಕರ್ಷಣ**) ರೂಪಗಳು ನಿಯಾಮಕರೆಂದು ಧ್ಯಾನಿಸಬೇಕು. ಯದ್ಯಪಿ ಪೂರ್ವೋಕ್ತಗಳಾದ ಶಮಾದಿಗಳೂ ಮಿಶ್ರಿತ ಗುಣ ಕಾರ್ಯಗಳೇ ಆದರೂ, ಅಲ್ಲಿ ಸತ್ವಾದಿ ಗುಣ ಪ್ರಧಾನವಿರುವುದರಿಂದ, ಮಿಶ್ರತತ್ವವಾದುದರಿಂದ ವೈಶೇಷ್ಯದಿಂದ ಶಮಾದಿಗಳೂ ಮತ್ತು ಅವುಗಳ ಗುಣಕಾರ್ಯಾಣಿ (ಕಾರ್ಯಗಳು) ಎಂದು ಹೇಳಲ್ಪಟ್ಟಿದೆ.

ಅವು ಪುನಃ **ಸಮಪ್ರಧಾನ** ಭಾವದಿಂದ ಮಿಶ್ರಿತ ಗುಣ ಕಾರ್ಯಗಳೆಂದು ಭೇಧವು. ಆದುದರಿಂದ **ರಜಸ್ಸು ತಮಸ್ಸಿನಿಂದ** ಪ್ರತಿಬಂಧಿಸಿ, ಕದಾಚಿತ್ ಸತ್ವಮಾತ್ರದಿಂದ ಕೇವಲ **ಜ್ಞಾನಸುಖ** ಪರಂಪರೆಯಿಂದ ಹುಟ್ಟುತ್ತದೆ. ಕೆಲವು ವೇಳೆ **ತಮಸ್ಸು ಸತ್ವ**ಗಳು ಪ್ರತಿಬದ್ಧವಾಗಿ ರಜೋಮಾತ್ರದ ದೆಶೆಯಿಂದ ಕೇವಲ **ತೃಷ್ಣಾ** ಸಂಗದ ದ್ವಾರಾ **ಕರ್ಮ ಪರಂಪ**

ರೆಯು ಕದಾಚಿತ್ ರಜಃ ಸತ್ವಗಳು ಪ್ರತಿಬದ್ಧವಾಗಿ ತಮೋ ಮಾತ್ರದಿಂದ, ಕೇವಲ, ಪ್ರಮಾದ ಆಲಸ್ಯ, ನಿದ್ರೆ ಮೊದಲಾದುವುಗಳ ಪರಂಪರೆಯು.

ಸತ್ವಾದಿ ಗುಣತ್ರಯವು ಸ್ಥೂಲವೆಂತಲೂ, ಸೂಕ್ಷ್ಮವೆಂತಲೂ ಎರಡು ಬಗೆಯವು. ಅದರಲ್ಲಿ ಸೂಕ್ಷ್ಮದ ಸತ್ವಗುಣದ ದೆಶೆಯಿಂದ ಭಗವದ್ ಜ್ಞಾನವನ್ನುಂಟುಮಾಡುವ ಭಕ್ತ್ಯಾದಿಗಳು ಹುಟ್ಟುತ್ತವೆ. ರಜಸ್ಸಿನಿಂದಾದರೋ ಭಗವತ್ಪೂಜಾತ್ಮಕಗಳಾದ ಕರ್ಮಗಳು. ತಮಸ್ಸಿನಿಂದಾದರೋ ಭಗವದ್ವಿಷಯದಲ್ಲಿ ಅಜ್ಞಾನ, ಮಿಥ್ಯಾಜ್ಞಾನ ಮೊದಲಾದುವು ಹುಟ್ಟು (ಉಂಟಾಗು)ವುವು. ಅದೂ ಸಹ ಭಗವದಿಚ್ಛೆಯಿಂದ, ಸಂಸ್ಕಾರ ಕರ್ಮಾದಿಗಳನ್ನು ನಿಮಿತ್ತ ಮಾಡಿಕೊಂಡು ಪ್ರಾಪ್ತವಾದದ್ದನ್ನು ಅಥವ ನಿವೃತ್ತವಾದು (ಹೊರಟುಹೋದುದನ್ನು, ಅದರ ವಿಷಯದಲ್ಲಿ ಯಾವನು ದ್ವೇಷ ಮಾಡುವುದಿಲ್ಲವೋ "**ಯೋ ನ ದ್ವೇಷ್ಟಿ ನ ಕಾಂಕ್ಷತಿ**" ಬೇಕೆಂದು ಆಶೆಯಿಂದ ಅಪೇಕ್ಷಿಸುವುದಿಲ್ಲವೋ ಅವನೊಬ್ಬನೇ "**ಗುಣಾತೀತನು**" ಎಂದು ಹೇಳಿಸಿಕೊಳ್ಳಲ್ಪಡುತ್ತಾನೆ.

ಮಹತ್ತತ್ವ

ಮಹತ್ವದಲ್ಲಿ ಸತ್ವಾಂಶಗಳು ಬಹಳವಾಗಿರುವುದರಿಂದ ಮಹತ್ತತ್ವವು ಜ್ಞಾನ ಪ್ರಧಾನವಾದುದು. ಚಿತ್ತವು ಮಹತ್ತತ್ವನ ಕಾರ್ಯವು. ಚಿತ್ತದಿಂದ ಸ್ಥಿರವಾದ ಸ್ಮೃತಿಯು ಉತ್ಪನ್ನವಾಗುತ್ತದೆ. ಸ್ವಚ್ಛತ್ವವು, ಅವಿಕಾರತ್ವವೂ, ಶಾಂತತ್ವವೂ, ಚಿತ್ತದ ಸ್ವಾಭಾವಿಕಗಳಾದ ಗುಣಗಳು. ಅದರಲ್ಲಿ ಸ್ವಚ್ಛತ್ವವು ನಿರ್ಮಲತ್ವವು, ಅವಿಕಾರತ್ವ, ಸ್ತಿಮಿತವಾದ ಉದಕದಂತೆ ಅಲ್ಪ ಕ್ರಿಯಾವತ್ವವು, ಶಾಂತತ್ವವು, ಪ್ರಸನ್ನತ್ವವು ಇವೆ. ಇಲ್ಲಿ ಸರ್ವತ್ರ **ವಾಸುದೇವನ** ರೂಪಗಳನ್ನು ಧ್ಯಾನ ಮಾಡಬೇಕು. ಅವು ಧ್ಯೇಯಗಳಾಗಿವೆ.

ಅಹಂಕಾರತತ್ತ್ವ

ಅಹಂಕಾರತ್ವದಲ್ಲಿ ರಜೋಂಶಗಳು ಬಾಹುಳ್ಯದಿಂದ ಇರುವುದರಿಂದ ಕ್ರಿಯಾಪ್ರಧಾನಕವಾದುದು ಅಹಂಕಾರ ತತ್ವವು. ಅದು **ವೈಕಾರಿಕ, ತೈಜಸ, ತಾಮಸ** ಭೇದದಿಂದ ತ್ರಿವಿಧಗಳಾಗಿರುವುವು. ವೈಕಾರಿಕಾದಿ

ತ್ರೈವಿಧ್ಯದಲ್ಲಿಯೂ ಸಹ ಶಾಂತತ್ವಾದಿಗಳಿಗೆ ವ್ಯಂಜಕಗಳಾದ **ಸತ್ವಾದಿ** ಗುಣಗಳನ್ನು ವ್ಯತಿಕರ ವಿಶೇಷದ ದೆಶೆಯಿಂದ ನೋಡಬೇಕು.

ವೈಕಾರಿಕ ಅಹಂಕಾರದ ಮನೋ ರೂಪದಿಂದ ಪೃಥಿವೀ ಕಾರಣವಾದುದರಿಂದ ಮನೋವ್ಯಾಪಿತ್ವದಿಂದ ದೇಹಾದಿಗಳಲ್ಲಿ **ಅಹಂ, ಮಮತೆ**ಗಳು ನಾನು, ನನ್ನದು ಎಂಬುದು ಹುಟ್ಟುವುದರಿಂದ ಉತ್ಪಾದನೆಯಿಂದ ಕತೃತ್ವವೆಂಬುದು ಅದರ ಲಕ್ಷಣವು.

ತೈಜಸಾಹಂಕಾರ ಕಾರಣಕಗಳಾದ ಇಂದ್ರಿಯಗಳ **ಕರಣತ್ವ**ದ ದೆಶೆಯಿಂದ ಇಂದ್ರಿಯಾಭಿಮಾನಿಗಳಿಂದ ನಿಯಮಿಸಲ್ಪಡುವ ಇಂದ್ರಿಯಗಳ ದ್ವಾರಾ ಜ್ಞಾನವನ್ನು ಹುಟ್ಟಿಸುವುದರಿಂದ **ಕರಣತ್ವವು ತೈಜಸಾಹಂಕಾರ** ಲಕ್ಷಣವೆಂದು ತಿಳಿಯುವುದು.

ತಾಮಸಾಹಂಕಾರ ಕಾರಣಗಳಾದ **ಪಂಚಭೂತ**ಗಳ ಕಾರ್ಯಾಪರ ಪರ್ಯಾಯವಾದದು ಯಾವುದು ದೇಹಾಕಾರದಿಂದ ಪರಿಣತತ್ವವಾಗುವುದರಿಂದಲೇ ಕಾರ್ಯತ್ವವು ತಾಮಸಾಹಂಕಾರ ಲಕ್ಷಣವು. ದೇಹವು ಪಂಚ ಮಹಾ ಭೂತಗಳ ಕಾರ್ಯರೂಪವಾದ ಪರಿಣಾಮದ ಕಾರ್ಯವಾಗಿದೆ.

ಹೀಗೆಯೇ ಶಾಂತತ್ವವೂ ವೈಕಾರಿಕದ್ದೇ ಆಗಿದೆ. ಅದರ ಕಾರ್ಯ (ಭೇದ)ಗಳಿಂದ ದೇವ ಪಿತೃಗಳಿಗೆ ಭಗವನ್ನಿಷ್ಠೆಯಿಂದ ಕೂಡಿದ ಶಾಂತತ್ವ ರೂಪವು ಕಂಡುಬರುತ್ತದೆ.

ತೈಜಸದ್ದಾದರೋ ಘೋರತ್ವವು. ಅದರ ಕಾರ್ಯಗಳಾದ ಇಂದ್ರಿಯಗಳಲ್ಲಿ ಘೋರ ಪದಾರ್ಥ ವಿಷಯಕಗಳಾದ ನಾನಾ ವಿಧಗಳಾದ ಘೋರ ಕರ್ಮಗಳನ್ನು ಹುಟ್ಟಿಸುವುದು ಕಂಡುಬರುತ್ತದೆ.

ಮೂಢತ್ವವು ತಾಮಸಾಹಂಕಾರದ್ದೇ ಆಗಿದೆ. ವೈಕಾರಿಕ ತೈಜಸಗಳ ಪ್ರಕಾಶಾದಿ ರೂಪ ಸ್ವಕಾರ್ಯ ಜನಕತ್ವವು ಎಲ್ಲಿಯವರೆವಿಗಿದೆಯೋ ಅಲ್ಲಿಯವರೆವಿಗೆ ದೇಹದ ದೆಶೆಯಿಂದ ತಾಮಸಾಹಂಕಾರ ಕಾರ್ಯವು ಆವರಕವಾಗಿದೆ. ಇಲ್ಲಿ ಸರ್ವತ್ರ **ಸಂಕರ್ಷಣಾಖ್ಯ** ರೂಪಗಳು ಧ್ಯೇಯವಾಗಿವೆ. ಇಲ್ಲಿ ಸಂಕರ್ಷಣನನ್ನು ಸರ್ವತ್ರ ಧ್ಯಾನ ಮಾಡಬೇಕು.

ಬುದ್ಧಿತತ್ವ ಕಾರ್ಯಗಳು

ಇಂದ್ರಿಯಗಳಿಂದ ದ್ರವ್ಯಗಳು ಸ್ಫುರಿಸುತ್ತಿರಲು ಉತ್ಪನ್ನವಾಗುವ ವಿಷಯ ಜ್ಞಾನವು, 1. ಸ್ಥಿರ, 2. ಸಂಶಯ, 3. ವಿಪರ್ಯಯ, 4. ನಿಶ್ಚಲ, 5. ಚಾಂಚಲ್ಯ, 6. ಸ್ಮೃತಿ, 7. ಜ್ಞಾನವು ಮೊದಲಾದುವು. ಇಲ್ಲಿ ಇಂದ್ರಿಯಗಳಿಂದ ದ್ರವ್ಯ ಸ್ಫುರಣ ರೂಪವಾದುದಾವುದೋ ಅದು ಸಾಮಾನ್ಯ (ವಾಗಿ) ಜ್ಞಾನವು. ಅದು ಮನಸ್ಸಿನಲ್ಲಿ ಹುಟ್ಟುವುದು. ಇಲ್ಲಿ ಪ್ರದ್ಯುಮ್ನನ ರೂಪಗಳನ್ನು ಧ್ಯಾನಿಸಬೇಕು.

ಜ್ಞಾನ ಕ್ರಿಯಾ ಭೇದದಿಂದ ಇಂದ್ರಿಯಗಳು ಎರಡು ವಿಧವು ಎಂದರೆ **ಜ್ಞಾನೇಂದ್ರಿಯ, ಕರ್ಮೇಂದ್ರಿಯ**ಗಳೆಂದು ದ್ವಿವಿಧವಾಗಿರುವುವು.

ಅಲ್ಲಿ ಜ್ಞಾನೇಂದ್ರಿಯಕ್ಕೆ ಪ್ರೇರಕತ್ವದಿಂದ ಬುದ್ಧಿಗೆ ಉಮಾ ದೇವಿಯರ ದೆಶೆಯಿಂದಜ್ಞಾನಶಕ್ತಿಯು. ಕರ್ಮೇದ್ರಿಯ ಪ್ರೇರಕತ್ವದಿಂದ ಕ್ರಿಯಾಶಕ್ತಿಯು ಅಹಂಕಾರಕ ಪ್ರಾಣನದು. ಅಲ್ಲಿರುವ ನಭೋ (ಅವಕಾಶ) ವಿಶೇಷ ಗುಣ ವಿಷಯವು. ಶ್ರೋತ್ರೇಂದ್ರಿಯವು. ವಾಯುವಿಶೇಷ ಗುಣವಿಷಯಕವಾದ ಇಂದ್ರಿಯವು. ತ್ವಕ್ ಇತ್ಯಾದಿ ರೂಪದಿಂದ ಇಂದ್ರಿಯಗಳ ಲಕ್ಷಣಗಳನ್ನು ತಿಳಿಯುವುದು. ಇಂದ್ರಿಯಗಳಲ್ಲಿ ಉಕ್ತವಾದ ರೂಪಗಳು ಧ್ಯೇಯಗಳು. ಅವುಗಳನ್ನು ಧ್ಯಾನಿಸಬೇಕು.

ಮನಸ್ತತ್ವ ಕಾರ್ಯಗಳು

1. ಸಂಕಲ್ಪ, 2. ವಿಕಲ್ಪ, 3. ನಾನಾ ವಿಧಗಳಾದ ಕಾಮ, 4. ಚಂಚಲ, 5. ಸಂಶಯ ಮೊದಲಾದವುಗಳು. 1. ಅಭಿಧೇಯೈಕ ನಿಷ್ಟತ್ವ, 2. ಭಗವದ್ ಜ್ಞಾಪಕತ್ವ, 3. ಆಕಾಶೈಕ ನಿಷ್ಟತ್ವವೆಂಬುವ ಮೂರೂ ಶಬ್ದ ಮಾತ್ರದ ಲಕ್ಷಣವು.

ಶಬ್ದವು 1. ವರ್ಣಾತ್ಮಕ, 2. ಧ್ವನ್ಯಾತ್ಮಕಗಳೆಂದು ಎರಡು ವಿಧವು. ಇದರಲ್ಲಿ ಮೊದಲನೆಯದಾದ ವರ್ಣಾತ್ಮಕ ಶಬ್ದವು ನಿತ್ಯವಾದದು. ಎರಡನೆಯ ಧ್ವನ್ಯಾತ್ಮಕ ಶಬ್ದವು ಆಕಾಶೋಪಾದನಕ ವಾದುದು.

ಜೀವರುಗಳ 1. ಸಂಚಾರ (ಹೋಗುವುದು ಬರುವುದು ಓಡಾಡುವುದು) ಕ್ಕೋಸ್ಕರ ಅವಕಾಶವನ್ನು ಕೊಡುವುದು, 2. ಅಂತಃ ಬಹಿಃ (ಒಳಗೆ ಹೊರಗೆ)

ದಿಕ್ ಮೊದಲಾದ (ದಿಗಾದಿ) ರೂಪತ್ವವೂ, 3. ಪ್ರಾಣಾಪಾನಾದಿಗಳಿಗೂ ಇಂದ್ರಿಯಗಳಿಗೂ ಜೀವರುಗಳಿಗೆ ಆವಾಸಪ್ರದಾನತ್ವವೆಂದು ಈ ಮೂರೂ ಸಹ ಆಕಾಶದ ಸ್ವಾಭಾವಿಕ ಲಕ್ಷಣವು. ಇಲ್ಲಿ ಸರ್ವತ್ರ ವಾಸುದೇವನ ರೂಪಗಳು.

1. ಮೃದುತ್ವ, 2. ಕಠಿಣತ್ವ, 3. ಶೀತತ್ವ, 4. ಉಷ್ಣತ್ವ, 5. ವಾಯು ಮಾತ್ರವೆಂದು ಈ ಐದೂ **ಸ್ಪರ್ಶದ** ಸ್ವರೂಪ ಲಕ್ಷಣವು. 1. ಚಲನವನ್ನು ಮಾಡುವುದು, 2. ಪ್ರತ್ಯೇಕಗಳಾಗಿರುವವುಗಳನ್ನು ಏಕೀಕರಣ ಮಾಡುವುದು, 3. ಸರ್ವ ವಸ್ತು ವ್ಯಾಪ್ತಿಯು, 4. ಎಲೆಯೇ ಮೊದಲಾದ ಪದಾರ್ಥ (ದ್ರವ್ಯ) ಶಬ್ದಗಳ ನೇತೃತ್ವ, ಮತ್ತು 5. ಸರ್ವೇಂದ್ರಿಯಗಳ ಅಂತಃ (ಒಳಗೆ ಇರುವಿಕೆ) ಸ್ಥಿತತ್ವವೆಂದು ಈ ಐದೂ **ವಾಯುವಿನ** ಸ್ವಾಭಾವಿಕವಾದ ಲಕ್ಷಣವು. ಇಲ್ಲಿ ಸರ್ವತ್ರ "**ಸಂಕರ್ಷಣನ**" ರೂಪಗಳನ್ನು ಧ್ಯಾನಿಸುವುದು. ಅವು ಧ್ಯೇಯವು.

1. ದ್ರವ್ಯಾಕೃತಿತ್ವ, 2. ಪ್ರಕಾಶಿತ್ವ, 3. ವ್ಯಕ್ತಿತ್ವದಿಂದ ಇರುವುದು (ಸ್ಥಿತಿಯು) 4. ಉಗ್ರತ್ವವೆಂದು ಈ ನಾಲ್ಕು "**ರೂಪದ**" ಸ್ವಾಭಾವಿಕ ಲಕ್ಷಣವು.

1. ದ್ಯೋತನ, 2. ಪಾಕಕರಣ, 3. ರಸವನ್ನು ರುಚಿಸಿ, ತಿನ್ನುವುದು, 4. ಭಕ್ಷಣೆ, 5. ಹಿಮನಿವಾರಣೆ, 6. ಶುಷ್ಕೀ (ಒಣಗಿಸುವುದು) ಕರಣ, 7. ಹಸಿವೆ ಬಾಯಾರಿಕೆಗಳನ್ನು ಉಂಟುಮಾಡುವುದು, ಎಂಬುದಾಗಿ ಈ ಏಳೂ "**ತೇಜಸ್ಸಿನ**" ಸ್ವಾಭಾವಿಕ ಲಕ್ಷಣವು. ಇಲ್ಲಿ ಸರ್ವತ್ರ "**ಪ್ರದ್ಯುಮ್ನನ**" ರೂಪಗಳು ಧ್ಯೇಯವು.

ಭೌತಿಕ ಪದಾರ್ಥಗಳ ವಿಕಾರದಿಂದ 1. ಕಷಾಯ, 2. ಮಧುರ, 3. ತಿಕ್ತ (ಒಗರು), 4. ಕಟು, 5. ಆಮ್ಲ ಇತ್ಯಾದಿ ಅನೇಕ ಪ್ರಕಾರವಾಗಿ "**ರಸವು**" ಭೇದವುಳ್ಳದ್ದು. ಮತಾಂತರದವರಿಂದ ಹೇಳಲ್ಪಡುವ ಷಡ್ವಿಧ (ಷಡ್ರಸ)ವೆಂಬ ನಿಯಮವಿಲ್ಲವು.

1. ಆರ್ದ್ರೀಕರಣತ್ವ (ತೋಯ್ದು ಹಸಿಯಾಗಿ ಮಾಡುವುದು) 2. ಪಿಂಡೀಕರಣ, 3. ತರ್ಪಕತ್ವ, 4. ಜೀವನಕ್ಕೆ (ಹೇತುತ್ವವು) ಕಾರಣವು

5. ಕೇವಲ ಅಂತರ ದುಃಖವು .... ಬುದ್ಧ್ಯಭಿಮಾನಿ ಅಸುರನಿಗೆ
6. ನಾನು ನೀಚನಾಗಿದ್ದೇನೆ .... "ಅಹಂ" ಎಂಬ ಅಭಿಮಾನ
ಇತ್ಯಾದಿ ಅನುಸಂಧಾನದಿಂದ ಉಳ್ಳ ಅಸುರನಿಗೆ
ಜನಿಸುವ ದುಃಖವು
7. ಅತೀತವಾದ (ಕಳೆದುಹೋದ) .... ಚಿತ್ತಾಭಿಮಾನಿ ಅಸುರನಿಗೆ
ಸ್ಮೃತಿಯಿಂದ ಜನಿಸುವ ದುಃಖವು
8. ಈ ಎಲ್ಲ ದುಃಖವೂ ಒಟ್ಟಿಗೆ .... ಜೀವಮಾನಿಯಾದ ಅಸುರಾಧವ
ಸಮುದಾಯದಿಂದ (ಶ್ರೇಷ್ಠ) ಕಲಿಗೆ ಎಂದು ತಿಳಿಯುವುದು

ಈ ರೀತಿ ದೇಹೇಂದ್ರಿಯಗಳ ಅಭಿಮಾನದಿಂದ ಜೀವನಿಗೂ ಸಹ ಕಿಂಚಿತ್ ದುಃಖವಾಗುತ್ತದೆ.

ಇಲ್ಲಿ — ನೇ ಪುಟದಲ್ಲಿ ಹೇಳಿದ ಪುರುಷಯಜ್ಞದಲ್ಲಿ ಅಶನಾಯಾ ಪಿಪಾಸಾ (ಹಸಿವು ಬಾಯಾರಿಕೆ)ಗಳಿಂದಲೂ, ಜನ್ಮಾದಿಗಳಿಂದಲೂ, ಅಧಿ ವ್ಯಾಧಿಗಳೆನಿಸಿದ. ಮನೋವ್ಯಥೆ ಮತ್ತು ದೇಹಸಂಬಂಧ ರೋಗಾದ್ಯುಪದ್ರವ ಗಳಿಂದಲೂ, ಉತ್ಪನ್ನವಾಗುವ ಕಷ್ಟ (ಅವಸ್ಥೆಯು) ಸ್ಥಿತಿಯು "ದೀಕ್ಷಾ" ಎಂದು ಅನುಸಂಧಾನವನ್ನು ಮಾಡಬೇಕು. ಸ್ವಾಯಂಭುವ ಮನುವಿನ ಭಾರ್ಯೆ "ಶತರೂಪಾದೇವಿಯು" ಇದಕ್ಕೆ ಅಭಿಮಾನಿಯು. ಅಶನ, ಪಾನ, ಸುಖಾವಸ್ಥೆ ಇತ್ಯಾದಿಗಳು ಯಜಮಾನನ ವ್ಯಾಪಾರರೂಪವಾದ "ಉಪಸದನ" ಸಂಜ್ಞಕಗಳಾಗಿವೆ.

ಹಾಸ (ನಗುವುದು), ತಾಂಬೂಲಾದಿಗಳನ್ನು ಭಕ್ಷಣೆ ಮಾಡು (ತಿನ್ನು)ವುದು, ಮೈಥುನ, ಗಮನಾಗಮನ, ರಸ (ಸಿಹಿರಸ)ವನ್ನು ಹೊಂದುವುದು, ಸಂಪರ್ಕನ (ಸ್ಪರ್ಶಿಸುವುದು)ವೇ ಮೊದಲಾದ ಸರ್ವ ವ್ಯಾಪಾರಗಳೂ "ಸ್ತುತ ಶಸ್ತ್ರಾತ್ಮಕ"ಗಳೆಂದು ತಿಳಿಯುವುದು. ಅವನ್ನು ಋಕ್ಕುಗಳಲ್ಲಿ ಸಾಮಗಾನವು "ಸ್ತೋತ್ರವು" ಕೇವಲ ಮಂತ್ರ ಪಾಠವಾದರೋ "ಶಸ್ತ್ರವು" ಎಂದು ಭೇದವುಳ್ಳದ್ದಾಗಿದೆ. ಕಾಯ ಕ್ಲೇಶಾದಿ ರೂಪವಾದ, ವೇದಾಭ್ಯಾಸಾದಿ ರೂಪವಾದ ಚಿಂತನೆಯೆಂಬುದೂ, ವಿದ್ಯಾದಿಗಳ ದಾನ, ಅನ್ನಾದಿಗಳನ್ನು ದಾನ ಕೊಡುವುದೆಂಬುದು ಮನೋ, ವಾಕ್, ಕಾಯ, ಕರಣ ವೃತ್ತಿ

ಗಳ **ಏಕಾಗ್ರತೆಯು "ಆರ್ಜವವು"** ನಿಷ್ಠುರ ಭಾಷಣವಿಲ್ಲದಿರುವ, ಛಾದೆ ಇಲ್ಲದಿರುವ, ಹಿಂಸೆಯಿಂದ ರಹಿತವಾದ, **ಅಹಿಂಸೆ** ಮತ್ತು **ಸತ್ಯವಾಕ್ಯ** ಮೊದಲಾದವುಗಳು "**ದಕ್ಷಿಣೆಯು**" ಎಂದು ಅನುಸಂಧಾನವನ್ನು ಮಾಡಬೇಕು. ಇದಕ್ಕೆ ಅಭಿಮಾನಿಯು "**ಸ್ವಾಯಂಭುವ ಮನು**" ವೆಂದು ತಿಳಿಯುವುದು.

ಹೀಗೆ ಇದು ತತ್ವಕಾರ್ಯ ಪ್ರಕರಣವು

****

ಸ್ವಪ್ನಾವಸ್ಥೆ

ಜಾಗ್ರದವಸ್ಥೆಯ ವ್ಯಾಪಾರ ಮನೋರಥಗಳಲ್ಲಿ ಭಗವಂತನು ಜೀವನ ಪ್ರಯತ್ನದಿಂದಲೇ ಸ್ಥೂಲ ಅಸ್ಥೂಲ (ಸೂಕ್ಷ್ಮ) ಭೇದಭಿನ್ನವಾದ ಆನೆ, ಕುದುರೆ ಮೊದಲಾದ ಪದಾರ್ಥಗಳನ್ನು ನಿರ್ಮಿಸಿ, ಲೀಲೆಯಿಂದ ಸ್ವಯಂ ತಾನೂ ಸಹ ಆಯಾ ನಾಮದಿಂ (ಹೆಸರಿನಿಂ)ದ, ಆಯಾ ಆಕಾರದಿಂದ, ಅಲ್ಲಲ್ಲಿ ಪ್ರಾದುರ್ಭೂತನಾಗಿ, ಬಹುರೀತಿಯಲ್ಲಿ ವಿಹಾರ ಮಾಡಿದ ನಂತರ, ಈಗ ಜೀವನು ಪ್ರಯತ್ನವನ್ನು ಬಿಟ್ಟಿದ್ದರೂ, ಕೇವಲ ತಾನೇ ಸ್ವೇಚ್ಛೆಯಿಂದಲೇ ಸಂಸ್ಕಾರ ಮೂಲಕವಾಗಿ ಪದಾರ್ಥಗಳನ್ನು ನಿರ್ಮಾಣ ಮಾಡಿ, ಅವುಗಳಿಗೆ ನಿಯಾಮಕನಾಗಿ ತಾನೂ ಸಹ ಅವುಗಳಲ್ಲಿ ಪ್ರಾದುರ್ಭವಿಸಿ ವಿಹಾರ ಮಾಡಲಿಚ್ಛಿಸುತ್ತಾನೆ.

ಹಾಗೆಯೇ ಜಾಗ್ರದವಸ್ಥೆಯಲ್ಲಿ ಸಮಸ್ತ ಜ್ಞಾನೇಂದ್ರಿಯಗಳಿಂದಲೂ ಪ್ರಾಯಃ ಅಮಂಗಳ ವಸ್ತು ವಿಷಯಕ ಜ್ಞಾನದಿಂದ ಉತ್ಪನ್ನವಾದ (ಹುಟ್ಟಿದ) ದುಃಖದಿಂದ ಕೂಡಿದವನನ್ನು, ಕರ್ಮೇಂದ್ರಿಯಗಳಿಂದಲೂ ಒಂದು ಕ್ಷಣಕಾಲವೂ ಬಿಡದಂತೆ ನಾನಾವಿಧಗಳಾದ ಕರ್ಮಗಳನ್ನು ಮಾಡಿ, ಅತಿ ಶ್ರಾಂತನಾದ ಜೀವನನ್ನು ನೋಡಿ ಪರಮಾನುಗ್ರಹದಿಂದ ಅವನಿಗೆ ಆನಂದವನ್ನು ಕೊಡಲು "**ಸುಷುಪ್ತಿ**" (ಗಾಢ ನಿದ್ರೆ)ಯನ್ನು ಹೊಂದಿಸಿ ಕೊಡಲು ಜೀವನನ್ನು ತೆಗೆದುಕೊಂಡು ಹೃದಯಸ್ಥಾನಕ್ಕೆ ಹೋಗುತ್ತಾ ಮಧ್ಯ ಮಾರ್ಗದಲ್ಲಿ ಕಂಠಸ್ಥಾನವನ್ನು ಹೊಂದಿ (ಸೇರಿ) ಅಲ್ಲಿಯೇ ಕೆಲವು

ಜಾಗ್ರದವಸ್ಥೆಯಲ್ಲಿ ಸ್ವಶಾಂತರ್ಗತವಾದ ಸ್ವರೂಪಗಳು ಅನುಭವಿ ಸಲ್ಪಡುವುವು. ಇಲ್ಲಾದರೋ ಈ ಸ್ವಪ್ನಾವಸ್ಥೆಯಲ್ಲಿ ಅದಕ್ಕೆ ವಿಪರೀತ ಸ್ವಭಾವದ ದೆಸೆಯಿಂದ ಪದಾರ್ಥಾಂತಗತಗಳಾದ ಸ್ವರೂಪಗಳು. ಆದುದ ರಿಂದ ಅಲ್ಲಿ ಶಬ್ದವು ಕಿವಿಯಿಂದಲೂ ರೂಪವು ಕಣ್ಣಿನಿಂದಲೂ ಇದೇ ಮೊದಲಾದ ರೀತಿಯಲ್ಲಿ ವಿಷಯೇಂದ್ರಿಯ ವಿಭಾಗದಿಂದ ಅನುಭವಿಸಲ್ಪಟ್ಟ ಇಲ್ಲಾದರೋ ಸರ್ವ ವಿಷಯಗಳೂ **ಮನಸ್ಸಿನಿಂದಲೇ ಭೋಗಿಸ** ಲ್ಪಡುತ್ತವೆ.

ಕೆಲವುವೇಳೆ ಕಾಲ ವಿಶೇಷದಲ್ಲಿ ರಥ, ಅಶ್ವ, ಮೋಟಾರು, ವಿಮಾನ ರೈಲು ಮೊದಲಾದುವುಗಳನ್ನು ಸೃಷ್ಟಿಮಾಡಿ, ಜೀವನ ಜೊತೆಯಲ್ಲೇ ತಾನು ಸನ್ನಿಹಿತನಾಗಿ ಸ್ಥಿತನಾಗಿ, ತತ್ಕಾಲದಲ್ಲಿ ಸ್ಪಷ್ಟವಾದ ಕುರು. ಪಾಂಚಾಲ ಹಸ್ತಿನಾವತಿ, ಕಾಶಿ, ರಾಮೇಶ್ವರಾದಿ ದೇಶಗಳಲ್ಲಿ ಮೇರು, ಮಂದರ, ಹಿಮ ವತ್ಪರ್ವತ, ವಿಂಧ್ಯ, ವೇಂಕಟಾದ್ರಿ, ನೀಲಾದ್ರಿ, ಮೊದಲಾದ ಸ್ಥಾನ ವಿಶೇಷ ಗಳಲ್ಲಿ ವಸಂತಾದಿ ಕಾಲ ವಿಶೇಷಗಳಲ್ಲಿ ತಾದೃಶವಾದ ಪುತ್ರ, ಮಿತ್ರ, ಕಳತ್ರ, ನಂಟರಿಷ್ಟರು, ಗುರುಗಳು, ಹಿರಿಯರು ಮೊದಲಾದವರೊಡನೆ ಸೇರಿಕೊಂಡೇ ಕ್ರೀಡಿಸುತ್ತಾ, ಜೀವನನ್ನು ಆನಂದಗೊಳಿಸಿ, ಸಂತೋಷದಿಂದ ಕ್ರೀಡಿಸುವಂತೆ ಮಾಡುತ್ತಾನೆ. ಇಲ್ಲಿ ಸಕಲ ಕ್ರೀಡೆ (ವ್ಯಾಪಾರ)ಗಳೂ ಜಾಗ್ರದವಸ್ಥೆಯಂ ತೆಯೇ ಅನುಸಂಧಾನ ಮಾಡಲ್ಪಡುತ್ತವೆ. ಪರಂತು ಅಲ್ಲಿ ಜಾಗ್ರದವಸ್ಥೆಯಲ್ಲಿ ಬಾಹ್ಯಪದಾರ್ಥಗಳಿಂದ, ಇಲ್ಲಾದರೋ ಸ್ವಪ್ನದಲ್ಲಿ ದೃಷ್ಟ ಶ್ರುತ, (ನೋಡಿದ ಕೇಳಿದ) ಪದಾರ್ಥ ವಿಷಯಕ **ಸಂಸ್ಕಾರ ಉಪಾದಾನ**ಕಗಳಿಂದ ಅಂತಯೇ **ದಿಂ**ದಲೇ (ಮನಸಾ) ಭೋಗವೆಂಬ ಭೇದವಿರುವುದು.

> ಮನೋಗತಾಂಶ್ಚ ಸಂಸ್ಕಾರಾನ್ ಸ್ವೇಚ್ಛಯಾ ಪರಮೇಶ್ವರಃ।
> ಪ್ರದರ್ಶಯತಿ ಜೀವಾಯ ಸಃ ಸ್ವಪ್ನ ಇತಿ ಗೀಯತೇ ||

ಈ ರೀತಿಯಾಗಿ ಭಗವಂತನು ತತ್ಕಾದಲ್ಲೇ ಈ ಜೀವನಿಗೆ ತೋರಿಸಿ (ಎಲ್ಲವನ್ನೂ ಅನುಭವಕ್ಕೆ ತಂದು ಕೊಟ್ಟು) ಅಚಿಂತ್ಯವಾದ ತನ್ನ (ಸ್ವ)ಶಕ್ತಿ ಯಿಂದಲೇ ಎಲ್ಲವನ್ನೂ ಪುನಃ ತತ್ಕಾಲದಲ್ಲೇ, ಅರ್ಥಜ್ಞಾನಾತ್ಮಕ ಸ್ವಪ್ನ ವನ್ನು ತಿರೋಧಾದ (ಮರೆಯುವಂತೆ) ಮಾಡುತ್ತಾನೆ.

ಇದು "**ಸ್ವಪ್ನಾವಸ್ಥೆ**"ಯೆಂದು ಹೇಳಲ್ಪಟ್ಟಿದೆ. ಈ ಅವಸ್ಥೆಯಲ್ಲಿ ಕ್ಷುರಾದಿ ಇಂದ್ರಿಯಗಳಿಗೆ ಅಭಿಮಾನಿಗಳಾದ ಸೂರ್ಯನೇ ಮೊದಲಾದ ಲ್ಲ ತತ್ವಾಭಿಮಾನಿಗಳೂ ತಮ್ಮ ತಮ್ಮ ನೋಡುವುದು, ಕೇಳುವುದು, ಾತನಾಡುವುದು ಮೊದಲಾದ ವ್ಯಾಪಾರಗಳನ್ನೆಲ್ಲ ಪರಿತ್ಯಜಿಸಿ (ಬಿಟ್ಟು ಟ್ಟು) ಕೇವಲ ಮನೋಭಿಮಾನಿಯಾದ ರುದ್ರದೇವರ ಅಧೀನದಲ್ಲಿ ಸುಪ್ತ ದವ (ನಿದ್ರಿಸುವ)ರಂತೆ ಇರುವರು. ಇದನ್ನೇ ಸೂರ್ಯಾದಿಗಳಿಗೆ ರುದ್ರನಲ್ಲಿ **ಲಯ**"ವೆನ್ನುವುದು.

+++++++

ಸು ಷು ಪ್ತಿ

ಹೀಗೆ ಬಿಂಬರೂಪಿಯಾದ ಹರಿಯು ಮಾರ್ಗ ಮಧ್ಯದಲ್ಲಿ "**ತೈಜಸ**" ಬ ರೂಪದಿಂದ ಕೆಲವು (ಸ್ವಲ್ಪ) ಕಾಲ ವಿಹರಿಸಿ ಜೀವರಿಗೇ ಅತ್ಯಂತಿಕ ಖವನ್ನು ಕೊಡಲು "**ಸುಷುಪ್ತಿ**" (ಗಾಢ ನಿದ್ರೆ)ಯನ್ನು ಹೊಂದಿಸಿ ಡಲು ಇಚ್ಛಿಸುತ್ತಾನೆ. ಆಗಲೇ ಮುಖ್ಯಪ್ರಾಣನಲ್ಲಿ ಚಕ್ಷುರಾದಿ ಅಭಿ ಾನಿಗಳಾದ ಸೂರ್ಯರೇ ಮೊದಲಾದ ದೇವತೆಗಳಿಗೆ ಮನೋಭಿಮಾನಿ ಾದ ರುದ್ರನ ಜೊತೆಯಲ್ಲೇ ಐಕ್ಯರೂಪವಾದ "**ಲಯವು**" ಉಂಟಾಗು ದು.

ಅನಂತರ "**ಮುಖ್ಯಪ್ರಾಣ**"ನು ಜೀವನನ್ನು ತೆಗೆದುಕೊಂಡು ತೈಜಸಾ ನಾದ ಹರಿಯ ಜೊತೆಯಲ್ಲಿ "**ಹೃದಯ**" ಸ್ಥಾನಕ್ಕೆ ಹೋಗುತ್ತಾನೆ. ನಂತರದಲ್ಲಿ ಯಾವಾಗಲಾದರೂ ಕದಾಚಿತ್ ಜೀವನಿಗೆ ಮೋಹವನ್ನುಂಟು ಾಡುತ್ತಾನೆ. ಆಗ ಭಗವಂತನೊಡನೆ ಜೀವನಿಗೆ "**ಅರ್ಥಪ್ರಾಪ್ತಿ**"ಯು ೀವಲ ದುಃಖಾನುಸಂಧಾನ ಮಾತ್ರವಲ್ಲದೆ, ಜೀವ, ಕಾಲ, ಅಜ್ಞಾ ಾದ್ಯನು ಸಂಧಾನವೂ ಸಹ ಇರುತ್ತದೆ. ಇದನ್ನು "**ಮೋಹಾವಸ್ಥೆ**" ನ್ನುತ್ತಾರೆ.

ಹೃದಯದಲ್ಲಿ **ಹೃದಯನಾಡಿಯು** ಇದೆ. ಅದರಲ್ಲಿ **ಕಮಲ**ವಿದೆ. ಮಲದ ಕರ್ಣಿಕಾಮೂಲದಲ್ಲಿ ಜೀವನ ಸರ್ವದಾ ಅವಾಸಸ್ಥಾನ (ಇರುವಿ

ಕೆಯು)ವು. ಅಲ್ಲಿರುವ ಅಂಗುಷ್ಟಪ್ರಮಾಣನಾದ "ಮೂಲೇಶ"ನು ;
ಜೀವರಿಗೆ ಆಧಾರನು. ಸುಪ್ತಿಯಲ್ಲಾದರೋ ಕರ್ಣಿಕಾಮೂಲವನ್ನು
ಅಗ್ರಕ್ಕೆ ಹೋಗುತ್ತಾನೆ. ಆಗ ಅಲ್ಲಿರುವ "ಅಗ್ರೇಶನು" ಆಧಾರನು
ವಿಶೇಷವೇನೆಂದರೆ—

ಜಾಗ್ರದವಸ್ಥೆಯಲ್ಲಿ ಜೀವನು ಹೃದಯದಲ್ಲಿದ್ದಾಗ್ಯೂ. ವಿಶೇಷ
ಧಾನವು ಚಕ್ಷುಸ್ಸು ಮೊದಲಾದುವುಗಳಲ್ಲಿ ಪ್ರಕಾಶಿಸಿ ಕಂಡುಬರುತ್ತದೆ.
ಲಾದರೋ, ಈ ಸುಷುಪ್ತಿಯು. ಅವಸ್ಥೆಯಲ್ಲಿ ಸರ್ವಪ್ರಕಾಶಗಳ ಉಪಸ
ವೆಂಬ (ಅದಸ್ಥಾನ) ಸ್ಥಿತಿಯು ಆದುದರಿಂದ ಯಾವುದೊಂದು
ಇಂದ್ರಿಯಗಳ ವ್ಯಾಪಾರವೂ ಇರುವುದಿಲ್ಲವು. ಅನಂತರ ಪ್ರಾಜ್ಞನಾ
ಅಗ್ರೇಶನ ಅತ್ಯಂತ ಸಮೀಪದಲ್ಲಿ ಸ್ಥಿತನಾದ ಜೀವನು ತೈಜಸನ ಅಂತ
ನಾಗುತ್ತಾನೆ ಅದರಿಂದ ಅಂಥ ಭಗವತ್ಸನ್ನಿಧಾನ ವಿಶೇಷದಿಂದ ಜೀ
ಸ್ವರೂಪಭೂತವಾದ ಸುಖವು ಅಭಿವ್ಯಕ್ತವಾಗುತ್ತದೆ. ಆ ರೀತಿಯದ
ನುಭವವುಳ್ಳಜೀವನು ಜಾಗ್ರದಾದ್ಯವಸ್ಥೆಗಳಲ್ಲಿ ಬಂದು ಅನುಭವಿಸಿದ ಶ್ರ
ಚಿಂತಾ, ಸಂತಾಪ ಮೊದಲಾದವೆಲ್ಲದನ್ನು ಮರೆತು ಅವುಗಳ ವಿಸ್ಮೃತಿಯಿ
ಕೇವಲ ಆನಂದಪೂರ್ಣ ನಿರ್ಭರನಾದ ಮುಕ್ತನಂತೆ ಇರುತ್ತಾನೆ.
ತನನ್ನೂ ಕಾಲವನ್ನೂ, ಅಜ್ಞಾನವನ್ನೂ ಸುಪ್ತ್ಯದಸ್ಥೆಯ ಸುಖವ
ನಿದ್ರೆಯಿಂದ ಎಚ್ಚೆತ್ತಮೇಲೆ ತಿಳಿಯುತ್ತಾರೆ. ಇವುಗಳ ಹೊರ್ತು
ಇನ್ನಾವುದನ್ನೂ ಜೀವನು ತಿಳಿಯುವುದಿಲ್ಲವು. ಇದನ್ನು ಸುಪ್ತ್ಯ
ಎನ್ನುತ್ತಾರೆ. ಇದೇ ಸುಷುಪ್ತ್ಯವಸ್ಥೆಯು.

ಸುಷುಪ್ತಿ ಕಾಲದಲ್ಲಿ ಪ್ರಾಣಾದಿ ಪಂಚರೂಪಿಯಾದ (ಪ್ರಾಣ, ಅಪ
ವ್ಯಾನ, ಉದಾನ, ಸಮಾನರೆಂಬ ಇದು ರೂಪಗಳು) ವಾಯುದೇವ
ಶರೀರಧಾರಣೆಯನ್ನು ಮಾಡುತ್ತಾನೆ.

ಇದನ್ನು ಈರೀತಿ ಭಾವಿಸಬೇಕು. ಅದು ಹೇಗೆಂದರೆ—

ಪ್ರಸಿದ್ಧ ಯಜ್ಞದಲ್ಲಿ ಗಾರ್ಹಪತ್ಯ, ಆಹವನೀಯ, ದಕ್ಷಿಣಾಗ್ನಿ ಎ
ದಾಗಿ ಮೂರು ಅಗ್ನಿಗಳು—ಹಾಗೆಯೇ 2. ಅಧ್ವರ್ಯು, ಉದ್ಗಾತೃ, ಂ
ಮಾನ, ಆಹುತಿ, ಅವುಗಳ ಫಲ, 3. ಪುರೋಽನುವಾಕ್ಯಾ, ಯಾಜ್ಯಾ, ಶ

ತ್ತು ಋಕ್ ಎಂಬೀರೀತಿ ಇರುವ್ರವು. ಆ ಇವುಗಳೆಲ್ಲವನ್ನೂ ಇಲ್ಲಿಯೂ ನುಸಂಧಾನ ಮಾಡಬೇಕು. ಅಲ್ಲಿ ಯಜ್ಞದಲ್ಲಿ ಗಾರ್ಹಪತ್ಯಾಗ್ನಿಯು ಶ್ಚಿಮ ಭಾಗದಲ್ಲಿರುವುದು. ಇಲ್ಲಿಯೂ ಅಪಾನ ವಾಯುವು, ಪಶ್ಚಾದ್ಭಾಗ ಲ್ಲಿರುವುದರಿಂದ ಅವನೇ ಗಾರ್ಹಪತ್ಯನು. ಆಹವನೀಯನು ಗಾರ್ಹಪತ್ಯದ ಶಿಯಿಂದ ಪ್ರಕರ್ಷ ನಯನವುಳ್ಳವನಾಗಿ ಪ್ರಣೀಯನಾಗಿರುವನು. ಣನೂ (ಪ್ರಾಣವಾಯುವೂ) ಸಹ ಅಹವನೀಯನಿಂದ ಪ್ರಣಯನವುಳ್ಳ ನು. ಊರ್ಧ್ವಕ್ಕೆ ಒಯ್ಯಲ್ಪಡುತ್ತಾನೆ. (**ಊರ್ಧ್ವಂ ಪ್ರಾಣಮುನ್ನ ಯತಿ**) ಆದುದರಿಂದ ಪ್ರಣಯನ ಸಾಮ್ಯದಿಂದ **ಆಹವನೀಯನು** ಕ್ಷಿಣಾಗ್ನಿಯಾದರೋ ಚರು ಮೊದಲಾದ ಹೋಮ ಸಾಧನವಾಗುವುದು. ಗೆಯೇ **ವ್ಯಾನನೂ** ಸಹ ಶರೀರದ ಒಳಗಿರುವ ಸರ್ವ ನಾಡಿಗಳಲ್ಲಿ ಚಾರ(ಣ) ದೂಡುವುದರಿಂದ ಹೋಮಸಾಧನವೆನಿಸಿದ ದಕ್ಷಿಣಾಗ್ನಿಯು.

ಅಧ್ವರ್ಯುವು ಆಯಾ ಕಾಲಕೃತ ಹವಿಸ್ಸುಗಳನ್ನು ಭಗವಂತನು ವಿಭಜನೆ ಾಡಿ ಅವುಗಳ ಔಚಿತ್ಯದಿಂಹ ದೇದತೆಗಳಿಗೆ ಒಯ್ದು ಕೊಡುತ್ತಾನೆ.

ಸಮಾನ (ವಾಯುವೂ)ನೂ ಉಚ್ಛ್ವಾಸ ನಿಃಶ್ವಾಸ ರೂಪ ಆಹುತಿ ಗಳನ್ನು ಸಮವಾಗಿ ನಯನ ಮಾಡುತ್ತಾನಾದುದರಿಂದ ಅಧ್ವರ್ಯುವು.

ಉದ್ಗಾತನು (ಸಾದುದ) ಉದ್ಗಾನದಿಂದ ಯಜಮಾನನಗೆ ಇಷ್ಟವಾದು ನ್ನು ಕೊಡಿಸುವವನು; ಮನೋರಥ ಪ್ರಾಪಕನು ಆಗಿದಾನೆ.

ಉದ್ಗಾನವಾದರೋ ನಿರಂತರವೂ ಜೀವರೂಪ ಯಜಮಾನನನ್ನು ಷುಮ್ನದ (ನಾಡಿಯ)ಲ್ಲಿರುವ ಭಗವಂತನಲ್ಲಿ ಹೊಂದಿಸುತ್ತಾನೆ. ಜೀವನು ಹ್ಮನಾಡಿಯಲ್ಲಿರುವ ಭಗವಂತನ ಪ್ರಾಪ್ತಿಯುಳ್ಳವನಾಗುತ್ತಾನಾಗಿ ದ್ಗಾತನು.

ಪ್ರಾಣನೇ ಪುರೋಽನುವಾಕನು. **ಅಪಾನನೇ** ಯಜ್ಞನು. **ವ್ಯಾನನೇ** ಸ್ಯ"ವೆನಿಸಿರುವನು. ಯಾವನು ಈರೀತಿಯಾಗಿ ತಿಳಿಯುತ್ತಾನೆಯೋ ಗೆಅ ಇಂಥ ಯಜ್ಞ ಮಾಡಿದ ಫಲವು ದೊರೆಯುತ್ತದೆ. ನಿರಂತರವೂ ಹರಿಯೊಡನೆ ಒಟ್ಟಿಗೆ ಜೊತೆಯಲ್ಲಿ [illegible]ವ ಮಹಾ ಫಲವೂ ಲಭಿಸು ದೆ. ಹಾಗೆಯೇ ಈರೀತಿಯಾಗಿಯೂ ಅನುಸಂಧಾನವನ್ನು ಮಾಡಬೇಕು.

ಯಾವಾಗ ಮಹಾಪ್ರಳಯದಲ್ಲಿ ಭೂತಾಗ್ನಿಯು ನಾಶವಾಗುತ್ತದೆಯೋ
ಆಗ ಅದು ಅದರ ಅಭಿಮಾನಿಯಾದ ವಾಯುವಿನಲ್ಲಿ ಲೀನವಾಗು
ಯಾವಾಗ ಸೂರ್ಯನು ಅಸ್ತಮಾನವನ್ನು ಹೊಂದುತ್ತಾನೆಯೋ ಆಗ ತ
ಮಾನಿಯೂ ಸಹ ಅಲ್ಲೇ ವಾಯುವಿನಲ್ಲೇ ಲೀನವಾಗುತ್ತಾನೆ. ಯಾ
ಚಂದ್ರನೂ ಅಸ್ತಮಾನ ಹೊಂದುತ್ತಾನೆಯೋ ಆಗ ಆತನೂ ಅಲ್ಲಿ
ವಾಯುವಿನಲ್ಲಿಯೇ ನಾಶಹೊಂದಿ ಲೀನವಾಗುತ್ತಾನೆ. ಯಾವಾಗ ಅಲ್ಲಲ್ಲಿ
ನಾಗಿರುವ ಆಪ (ಉದಕ)ಗಳು ನಾಶವಾಗುವುವೋ ಆಗ ಅವುಗಳ ಅಭಿವ
ಗಳೂ ಅಲ್ಲೇ ವಾಯುವಿನಲ್ಲೇ ಲೀನರಾಗುವರು. ಹೀಗೆ ಅಗ್ನಿ, ಸೂ
ಚಂದ್ರ ಅಬಭಿಮಾನಿ ವರುಣರೆಂಬ ಈ ನಾಲ್ಕು ದೇವತೆಯಗ ಸಂಹರ್ತೃ
(ಸಂಹಾರ ಮಾಡುವುದರಿಂದ) "**ಸಂವೃಕ್ತೇ**"ಎಂದು "**ಸಂವರ್ಗನಾ**
ಕನು ಹೀಗೆ **ಅಧಿದೈವತವು.**

ಇನ್ನು **ಅಧ್ಯಾತ್ಮವು.** ಯಾವಾಗ ಜೀವನು ಸ್ವಾಪವುಳ್ಳವನಾಗು (
ಮಾಡು)ತ್ತಾನೆಯೋ, ಆಗ ವಾಗಭಿಮಾನಿಯಾದ ಅಗ್ನಿಯು, ಪ್ರಾಣನ
ಲೀನವಾಗುತ್ತಾನೆ. ಚಕ್ಷುರಭಿಮಾನಿ ಸೂರ್ಯನೂ, ಶ್ರೋತ್ರಾಭಿವ
ಚಂದ್ರನೂ (ದಿಗ್ ದೇವತೆಗಳೂ) ಮನೋಭಿಮಾನಿ ಕಾಮನೂ
ಮೂವರೂ ಅಲ್ಲೇ ಪ್ರಾಣನಲ್ಲೇ ಲೀನರಾಗುತ್ತಾರೆ. ಈರೀತಿಯಾಗಿ
ನಾಲ್ವರು ದೇವತೆಗಳ ಸಂಹರ್ತೃತ್ವದಿಂದ **ಪ್ರಾಣನು ಸಂವರ್ಗನಾಮ**

ಹಾಗೆಯೇ ಸಕಲ ಭಕ್ತರ ಸರ್ವ ದೋಷಗಳನ್ನೂ ದೂರಮಾಡು
ನಾಗಿ ಪ್ರಾಣನೂ "**ದೂಃ**" ಎಂಬ ಹೆಸರುಳ್ಳವನು (**ದೂರ್ನಾಮಕ**

ಸ್ವಯಂ ಹೋಗುತ್ತಿದ್ದಂತೆ (ಬೀಸಿ ಸಂಚಾರಮಾಡುತ್ತಾ) ವಾಯ
ಸರ್ವವನ್ನೂ ಪವಿತ್ರವನ್ನಾಗಿ ಮಾಡುತ್ತಾನಾಗಿ "**ಯಜ್ಞ**"ನಾಮಕ
ಆಗಿದ್ದಾನೆ.

ಹೀಗೆ ಅಧ್ಯಾತ್ಮ ಮತ್ತು ಅಧಿದೈವ ಭೇದದಿಂದ ಎಂಟು ಮೂರ್ತಿ
ವಾಯುವಿನ ರೂಪದ್ವಯ (ಎರಡು ರೂಪ)ಗಳೂ ಅಂತು ಒಟ್ಟು ಹತ್ತು
ಗಳು, ದಶದಿಕ್ಕುಗಳಲ್ಲಿ ಸ್ಥಿತನಾಗಿ ಪ್ರಾಣನೆನಿಸಿ ವಾಯುವನ್ನೂ
ನಾತ್ – ಪ್ರಕಾಶನಾದುದರಿಂದ ವಿರಾಟ್ ಎನಿಸಿದ **ವಿರಾಣ್ನಾ**
ವಾದ ಹರಿಯು (ವೃಂಕ್ತೇ) ಸರ್ವ ಸಂಹಾರಕನಾಗುತ್ತಾನೆಂದು—

"ವಾಯುಸ್ತು ಸರ್ವದೇವಾತ್ಮಾ ವಾಯೋರಾತ್ಮಾ ಜನಾರ್ದನಃ ।
ನ ತಸ್ಯ ಕಶ್ಚಿದಾತ್ಮಾಸ್ತಿ ಸ ವಿರಾಡಧಿರಾಜನಾತ್ ॥"

ಎಂದು ಅನುಸಂಧಾನವನ್ನು ಮಾಡುವವನು ಪೃಥ್ವೀಮಂಡಲದಲ್ಲಿ **ಪ್ರಾಣಿ** ಗಳಿಂದ ಅನವರತ (ಸದಾ) ಮಾಡಲ್ಪಡುವ ಪುಣ್ಯಫಲವನ್ನು ತನ್ನ ಯೋಗ್ಯತೆಗೆ ತಕ್ಕಂತೆ (ಸ್ವಯೋಗ್ಯ) ಸರ್ವವನ್ನೂ ಅನಾಯಾಸದಿಂದ ಪಡೆದು ಅನುಭವಿಸುತ್ತಾನೆ. **ಅಪರೋಕ್ಷ ಜ್ಞಾನವನ್ನೂ ಪಡೆಯುತ್ತಾನೆ.**

ಈ **ರೀತಿಯಾಗಿ** ಭಗವಂತನು ತನ್ನಲ್ಲಿ ಸುಪ್ತನಾದ ಪರಮಾನಂದವುಳ್ಳ ಜೀವನಿಗೆ, ವಿಸ್ಮೃತ ಜಾಗ್ರದಾದಿ ಅವಸ್ಥೆಗಳಿಂದ ಜನಿಸಿದ ಸಮಸ್ತ ದುಃಖಗಳನ್ನೂ ಪುನಃ ಹೊಂದಿ ಪಡೆಯನು ಪುನಃ ಜಾಗರವ (ಎಚ್ಚರಿಕೆ ಜಾಗ್ರದವಸ್ಥೆಯು)ನ್ನು ಕೊಡಲು ಜೀವನನ್ನು **ಪ್ರಬೋಧ** ಮಾಡುತ್ತಾನೆ. ಸುಷುಪ್ತಿ, ಸ್ವಪ್ನಾವಸ್ಥೆಗಳಿಂದ ಅವುಗಳನು ಹೋಗಲಾಡಿಸಿ ಎಚ್ಚರಿಸಿ **ಜಾಗ್ರದವಸ್ಥೆಗೆ** ತರುತ್ತಾನೆ. ಎಂದರೆ **ತೈಜಸನು** ಪ್ರಾಜ್ಞನಿಂದ ಬೇರೆಯಾಗಿ ಪ್ರಾಣದೇವನೊಂದಿಗೆ ಕೂಡಿ ಜೀವನನ್ನು ತೆಗೆದುಕೊಂಡು **ಕಂಠದೇಶ** (ಸ್ಥಾನ)ಕ್ಕೆ ಬಂದು ಪೂರ್ವದಂತೆ ಸ್ವಪ್ನಗಳನ್ನು ತೋರಿಸಿ ಅವನನ್ನು ಉದ್ಬೋಧನೆ ಮಾಡುತ್ತಾನೆ. ಅನಂತರ **ವಿಶ್ವನು** ತೈಜಸನಿಂದ ಬೇರೆಯಾಗಿ, **ಸೂರ್ಯಾದಿ** ಇಂದ್ರಿಯಾಭಿಮಾನಿ ದೇವತೆಗಳ ಜೊತೆಯಲ್ಲಿ ದಕ್ಷಿಣಾಕ್ಷಿ (ಬಲಗಣ್ಣಿನ) ಸ್ಥಾನಕ್ಕೆ ಬಂದು ಪೂರ್ವದಂತೆಯೇ ಜಾಗ್ರದವಸ್ಥೆಯಲ್ಲಿ ಸರ್ವ ವ್ಯಾಪಾರಗಳನ್ನೂ ಮಾಡುತ್ತಾನೆ. ಸೂರ್ಯನೇ ಮೊದಲಾದ ದೇವತೆಗಳೂ ಸಹ ಸರ್ವೇಂದ್ರಿಯಗಳಲ್ಲಿ ತಮ್ಮ ತಮ್ಮ ಸ್ಥಾನಗಳಲ್ಲಿ ಸ್ಥಿತರಾಗಿ ಇದ್ದುಕೊಂಡು ತಮ್ಮ ತಮ್ಮ (ಸ್ವ-ಸ್ವ-)ವ್ಯಾಪಾರಗಳನ್ನು ಮಾಡುತ್ತಾನೆ.

ಅನಂತರ ಪುನಃ ಶ್ರಾಂತನಾದ ಜೀವನಿಗೆ ಭಗವಂತನು ಸ್ವಪ್ನ (ದ್ವಾರ) ಮೂಲಕ ಸುಷುಪ್ತಿ (ಗಾಢನಿದ್ರೆ)ಯನ್ನು ಹೊಂದಿಸಿ ಪುನಃ ಅವನನ್ನು ಉದ್ಬೋಧನೆ ಮಾಡುತ್ತಾನೆ. ಎಚ್ಚರಿಸಿ ತಿಳುವಳಿಕೆ ಕೊಡುತ್ತಾನೆ. ಹೀಗೆ **ಪ್ರತಿದಿನವೂ** ಜಾಗ್ರದಾದ್ಯವಸ್ಥೆಗಳಲ್ಲಿ ಭಗವಂತನಿಂದ ಅನುಗೃಹೀತನಾಗಿ ಜೀವನು ಅವನಲ್ಲಿ ಸ್ಥಿತನಾಗಿ ಸುಖ ದುಃಖಗಳನ್ನು ಪಡೆದು ಸ್ವಯಂ ಅನುಭವಿಸಿ ಭುಂಜಿಸುತ್ತಾನೆ, (ಉಣ್ಣುತ್ತಾನೆ).

ಆ ಭಗವಂತನು ಶ್ರವಣ ಮಾಡಿ (ಕೇಳಿ)ದರೆ ಜೀವನು ಶ್ರವಣ ಮಾಡು (ಕೇಳು)ತ್ತಾನೆ. ನೋಡಿದರೆ, ನೋಡುತ್ತಾನೆ. ವಾಸನೆ ನೋಡಿದರೆ ವಾಸನೆ ನೋಡುತ್ತಾನೆ. ರುಚಿ ನೋಡಿದರೆ, ಸ್ವಯಂ ಜೀವನೂ ರುಚಿ ನೋಡು ತ್ತಾನೆ. ಭಗವಂತನು ಸ್ಪರ್ಶ ಮಾಡಿದರೆ ಜೀವನು ತಾನು ಮುಟ್ಟುತ್ತಾನೆ. ಮಾತನಾಡಿದರೆ ಮಾತನಾಡುತ್ತಾನೆ. ತೆಗೆದುಕೊಂಡರೆ ತೆಗೆದುಕೊಳ್ಳುತ್ತಾನೆ. ಹೋದರೆ ತಾನೂ ಹೋಗುತ್ತಾನೆ. ವಿಸರ್ಜನೆ ಮಾಡಿದರೆ ವಿಸರ್ಜಿಸು ತ್ತಾನೆ. ಆನಂದಪಟ್ಟರೆ ಆನಂದಪಡುತ್ತಾನೆ. ಪ್ರಾಣಿತಿ, ಪ್ರಾಣಿತಿ, ಸರಿ ಯಾಗಿ ಚನ್ನಾಗಿ ನಯನಮಾಡಿದರೆ ಜೀವನೂ ಅವನಂತೆ ಪ್ರಣಯನ ಮಾಡು ತ್ತಾನೆ. ಬದುಕಿದ್ದರೆ ಬದುಕಿ ಜೀವಿಸಿರುತ್ತಾನೆ. ಹುಟ್ಟಿದರೆ ಹುಟ್ಟುತ್ತಾನೆ. ಸಾಯಬೇಕೆಂದರೆ ಸಾಯಲಿಚ್ಛಿಸುತ್ತಾನೆ. ಸಾಯುತ್ತಾನೆ. ಮುಕ್ತನಾದರೆ ಮುಕ್ತನಾಗುತ್ತಾನೆ. ವ್ಯುತ್ಕ್ರ್ಯವನ್ನು ಅನುಭವಿಸಿದರೆ ವ್ಯುತ್ಕ್ರ್ಯವನ್ನು ಅನು ಭವಿಸುತ್ತಾನೆ. ಕ್ರೀಡಿಸಿದರೆ ಕ್ರೀಡಿಸುತ್ತಾನೆ, ಹೆಚ್ಚಿಗೆ ಹೇಳುವುದರಿಂದೇನಿದೆ? ಜೀವನು ಭಗವಂತನ **ಪ್ರತಿಬಿಂಬಿತನಾದುದರಿಂದ, ಬಿಂಬನಾದ ಬಿಂಬ ರೂಪೀ** ಭಗವಂತನ ಗುಣ ಕ್ರಿಯಾದಿಗಳಿಂದಲೇ ಅಸ್ವತಂತ್ರನಾದ ಜೀವನು ಗುಣಕ್ರಿಯಾದಿಗಳುಳ್ಳವನಾಗುತ್ತಾನೆ.

ಹೀಗೆ ಸುಷುಪ್ತಿ ವಿಚಾರವು

✢✢✢✢✢✢✢✢

ಗ ಮ ನಾ ಗ ಮ ನ

ಭಗವಾನ್ ಶ್ರೀಹರಿಯು ಜನನ, ಮರಣ, ಚಿಂತಾ, ಸಂತಾಪ ಮೊದ ಲಾದ ಸಮಸ್ತ ದೋಷ ಗಂಧ ವಿಧುರ (ಲೇಪರಹಿತ)ನಾದಾಗ್ಯೂ, ಸಮಸ್ತ ಸದ್ಗುಣಪರಿಪೂರ್ಣನಾದರೂ, ಕೇವಲ ಲೀಲಾಮಾತ್ರದಿಂದಲೇ ಹಾಗೆ ಪ್ರದ ರ್ಶನ ಮಾಡುತ್ತಾ ಜೀವನ ಜೊತೆಯಲ್ಲಿ ಸ್ವೇಚ್ಛೆಯಿಂದ ಪರಿಕಲ್ಪಿತವಾದ ಸಂಪತ್ಸರನೇ [illegible] ಕಾಲದಲ್ಲಿ ಕ್ರೀಡಿಸಲು ಜಾಗ್ರದಾದಿ ಅವಸ್ಥೆಗಳಲ್ಲಿ ವಿಹರಿಸಿ, ಜೀವನಿಗೆ [illegible] ಜನನ [illegible] ವಾದ ಮತ್ತು ಚಿಂತೆ ಸಂತಾಪ, ಕರ್ಮಲೇಪ, ಮೊದಲಾದ ಅಶೇಷ ದೋಷ

ಗಳಿಂದ ದುಷ್ಟವಾದ ಆದುದರಿಂದಲೇ ಅತಿ ನಿಕೃಷ್ಟವಾದ, ಸರ್ವತ್ರ ಜೀವನ, ಕಷ್ಟಗಳನ್ನೇ ಕಂಡು "**ಸುಷುಪ್ತಿ**"ಯಲ್ಲಿ ಪ್ರತಿದಿನವೂ ಆನಂದವನ್ನು ಕೊಟ್ಟಾಗ್ಯೂ ಅದು ಅಲ್ಪ ಕಾಲೀನವಾದುದರಿಂದ ಅದರಿಂದ ಅಲಂ (ಸಾಕೆಂಬ) ಬುದ್ಧಿಯನ್ನು ಪಡೆಯದೆ, ಚಿರ (ಬಹು) ಕಾಲೀನವಾದ ಆನಂದ ಸಂತತಿ (ಪರಂಪರೆ)ಯನ್ನು ಕೊಡಲು, ಅವನನ್ನು ಯಾವಾಗ ಭೂಲೋಕದ ದೆಶೆಯಿಂದ ಸ್ವರ್ಗಲೋಕಕ್ಕೆ ಕರೆದುಕೊಂಡು ಹೋಗಲು ಇಚ್ಛಿಸುತ್ತಾನೆಯೋ ಕಣ್ಣಿನಲ್ಲಿಯೂ ಹೃದಯದಲ್ಲಿಯೂ **ಮರಣನಿಮಿತ್ತ ದರ್ಶಪ್ರತಿಬಂಧಕ** ತಯಾ ಸಂಸ್ಥಿತನಾಗಿರುವ **ಅನಿರುದ್ಧನು** ದೇಹವನ್ನು ಬಿಟ್ಟು ಹೊರಡುತ್ತಾನೆ. ಅನಂತರ ಚಕ್ಷುಸ್ಸಿನಲ್ಲಿರುವ ಅನಿರುದ್ಧನು ಹೊರಟುಹೋಗಲು ಆದಿತ್ಯನು ಚಂದ್ರನಂತೆ ರಶ್ಮಿರಹಿತನಾಗಿ ಕಾಣಿಸುತ್ತಾನೆ. ರಶ್ಮಿಗಳು ಪ್ರಾದುರ್ಭವಿಸುವುದಿಲ್ಲವು. ದ್ಯುಲೋಕವು ಆಕಾಶವು ಲೋಹಿತ ವರ್ಣವಾಗಿ ಕಂಡು, ಮಂಜಿಷ್ಟೇತ್ಯಾದಿ ಹೇಳಿದಂತೆ, ಮರಣಸೂಚಕಗಳಾದ ಪ್ರತ್ಯಕ್ಷ ದರ್ಶನಗಳುಂಟಾಗುವುವು. ಹೃದಯದಲ್ಲಿ ಸ್ಥಿತನಾದ ಅನಿರುದ್ಧನು ಹೊರಟು ಹೋದುದರಿಂದ ಪುರುಷನನ್ನು ಕಪ್ಪಗೆ ಕೃಷ್ಣವರ್ಣವನ್ನೂ ಕಾಣುತ್ತಾನೆ. "**ಸ ಏನಂ ಹಂತಿ**" ಇತ್ಯಾದಿ ಹೇಳಿರುವಂತೆ "**ಸ್ವಪ್ನದರ್ಶನ**"ಗಳೂ ಆಗುವುವು. ಅವುಗಳನ್ನು ನೋಡಿ ಮರಣವನ್ನು ನಿಶ್ಚಯಿಸಿಕೊಂಡು, ಧೈರ್ಯದಿಂದ, "ಭಗವಂತನು ಈ ಭೂಮಿ, ದೇಹ, ಗೇಹ ಮೊದಲಾದವು ಹೇಯವಾದವುಗಳೆಂದು ಅವುಗಳಿಂದ ಬಿಡುಗಡೆ ಮಾಡಿ, ತ್ಯಜಿಸಿ, ಪರಮಾನಂದ ಪ್ರಧಾನ ಮಾಡಲು ನನ್ನನ್ನು ಲೋಕಾಂತರಕ್ಕೆ ಕರೆದುಕೊಂಡು ಒಯ್ಯುತ್ತಿದ್ದಾನೆಂದು" ಪರಮ ಸಂಭ್ರಮದಿಂದ ತಿಳಿದು, ಆಗ ವಾಗಾದಿ ದೇವತೆಗಳ ಉತ್ಪತ್ತಿ ವೈಪರೀತ್ಯ (ಎಂದರೆ ವ್ಯುತ್ಕ್ರಮದಿಂದ)ವನ್ನು ಜೀವನು ಚಿಂತನೆ ಮಾಡುತ್ತಾನೆ. ತಥಾಪಿ ಉತ್ಪತ್ತಿಯು ಸರ್ವಗತನಾದ ಪರಬ್ರಹ್ಮನ ದೆಶೆಯಿಂದ ಹೃದಯದಲ್ಲಿರುವ ಹರಿಯ ಬಹಿಃ (ಹೊರಗೆ) ಪ್ರಾದುರ್ಭವವು. ಅವನ ದೆಶೆಯಿಂದ **ಮೂಲಪ್ರಾಣಸ್ಯ ಸಂಭವಃ** (ಉತ್ಪತ್ತಿಯು) ಅವನ ದೆಶೆಯಿಂದ, ಪಂಚಪ್ರಾಣರಾದ ಪ್ರಾಣಾಪಾನರ ದೆಶೆಯಿಂದ ಸಮಾನ ಮತ್ತು ಉದಾನರ ಸಂಭವವು. ವ್ಯಾನನ ದೆಶೆಯಿಂದ ಅಪಾನನ, ಅಪಾನನ ದೆಶೆಯಿಂದ ಪ್ರಾಣನ, ಪ್ರಾಣನ ದೆಶೆಯಿಂದ ರುದ್ರನ, ರುದ್ರನ ದೆಸೆಯಿಂದ

ಉಮಾದೇವಿಯರು ಹೀಗೆ ಏವಂ (ಪ್ರಕಾರವಾಗಿ) ಉತ್ಪನ್ನರಾದವರಿಗೆ ದೇವತೆಗಳಿಗೆ ಉತ್ಪತ್ತಿಕ್ರಮದ ವಿಪರೀತಕ್ರಮ (ವ್ಯುತ್ಕ್ರಮ)ದಿಂದ **ಲಯವು** (ಧೇಯಯವು) ಚಿಂತಿಸಲ್ಪಡಬೇಕು. ಅದು ಹೇಗೆಂದರೆ—

ಲಯಚಿಂತನೆ

ಉಮಾದೇವಿಗೆ ರುದ್ರನಲ್ಲಿ ಲಯವು. ರುದ್ರನಿಗೆ ಪ್ರಾಣನಲ್ಲಿ, ಪ್ರಾಣನಿಗೆ ಅಪಾನನಲ್ಲಿ, ಅಪಾನನಗೆ ವ್ಯಾನನಲ್ಲಿ, ವಾನೋದಾನರಿಗೆ ಪ್ರಾಣಾಪಾನವ್ಯಾನರಲ್ಲಿ. ಈ ಐವರಿಗೂ **ಮೂಲಪ್ರಾಣ**ನೆನಿಸಿದ ಹೃದಿಸ್ಥಿತನಾದ **ಹರಿಯಲ್ಲಿ** ಅಂಥ ಹರಿಗೂ ಸರ್ವಗತನಾದ ತನ್ನದೇ ಆದ ಪರಬ್ರಹ್ಮನಿಲ್ಲೆಂದು **ತಿಳಿಯು**ವುದು.

ಪುರುಷಯಜ್ಞ

ಅನಂತರ ಪ್ರಕಾಂತವಾದ **ಪುರುಷಯಜ್ಞ**ದಲ್ಲಿ ಶರೀರ ತ್ಯಾಗರೂಪ ಮರಣವನ್ನೇ ಅವಭೃತಸ್ನಾನವೆಂದು ತಿಳಿಯಬೇಕು. ಅಲ್ಲಿ ಭಾವನೆ ಮಾಡಬೇಕಾದುದು ಈ ಮಂತ್ರತ್ರಯವು.

" ಅಥ ತಮಸ್ಯ ಚ್ಯುತಮಸಿ । ಪ್ರಾಣಂ ಶಂಸಿತಮಸೀತಿ । ಹೇ ಭಗವಂಸ್ತ್ವಂ
ಸ್ವರೂಪೇಣಾಕ್ಷಯೋಽಸಿ । ಗುಣೈರಚ್ಯುತೋಽಸಿ । ಮುಖ್ಯಪ್ರಾಣಾದ
ಪ್ಯಧಿಕಸುಖೋಽಸಿ । "

" ಎಲೈ ಭಗವಂತನೇ ನೀನು ಸರೂಪದಿಂದ ಅಕ್ಷಯನು, ಗುಣಗಳಿಂದ ಅಚ್ಯುತನು, ಮುಖ್ಯಪ್ರಾಣನ ದೆಶೆಯಿಂದ ಅಸಂಖ್ಯಾಕ ಆನಂತ ಸುಖವುಳ್ಳವನಾಗದ್ದಿ " ಎಂಬ ಅರ್ಥವನ್ನು ಅನುಸಂಧಾನ ಮಾಡಿ, ಅಂಥಾ " ಈ ಸರ್ವೋತ್ತಮನು ನನ್ನ ಶರೀರವನ್ನು ಸೃಜಿಸಿದನು, ರಕ್ಷಣೆ ಮಾಡಿದನು. ಆತನೇ ಈಗ ಬಾಲಕ್ರೀಡನ ಸಾಧನದಂತೆ (ಮಕ್ಕಳ ಆಟದ ಸಾಮಾನಿನಂತೆ) ಈ ಜೀರ್ಣವಾದ ಶರೀರವನ್ನು ಸಂಹರಿಸಿ, ಅಭಿನವ ಮತ್ತೊಂದು ಹೊಸ ಶರೀರವನ್ನು ಉತ್ಪಾದನೆ ಮಾಡಿ ವಿಹಸೆಸಲು, ಅದಕ್ಕಾಗಿಯೇ ಲೋಕಾಂತರಕ್ಕೆ ಹೋಗುತ್ತಾನೆ. ನಾನಾದರೋ ಪ್ರತಿಬಿಂಬ (ಅವನ ಅಧೀನ)ನಾಗಿರುವುದರಿಂದ ಛಾಯೆಯಂತೆ ಅವನನ್ನು ಅನುಸರಿಸಿ ಹೋಗುತ್ತೇನೆ " ಇತ್ಯಾದಿ ರೂಪ ಸೃಷ್ಟಿ, ಸ್ಥಿತಿ, ಸಂಹಾರಾದಿ ಕರ್ತೃತ್ವವನ್ನು ಅನುಸಂಧಾದ ಮಾಡುತ್ತಾ

ಸರ್ವಾತ್ಮನಾ ಶ್ರೀಹರಿಯ ಚರಣಾರವಿಂದ ಮಕರಂದದಲ್ಲಿ ತನ್ನ ಮನಸ್ಸನ್ನು ಇಟ್ಟು ಪುರುಷ ಯಜ್ಞವನ್ನು ಸಮಾಪನೆ ಮಾಡಬೇಕು.

ಧ್ಯಾನ ಸ್ನಾನ

ಅನಂತರದಲ್ಲಿ “ನನ್ನ ಶಿರಃ ಕಪಾಲದ ಮೇಲ್ಭಾಗದಲ್ಲಿ, ಚತುರ್ಭುಜನೂ, ಶಂಖಚಕ್ರ ಗದಾಧರನೂ, ಪೀತಾಂಬರವನ್ನು ಧರಿಸಿ, ವನಮಾಲೆಯಿಂದ ವಿಭೂಷಿತನಾಗಿ, ಸರ್ವಾಭರಣಾಲಂಕಾರಭೂಷಿತನಾಗಿ, ಅಶೇಷ ಪರಿವಾರದಿಂದ ಕೂಡಿದ, ಸರ್ವಲಕ್ಷಣ ಸಂಪನ್ನನಾದ ವಾಸುದೇವನು ಸದಾ ಸಂಸ್ಥಿತನಾಗಿದ್ದಾನೆ. ಆತನ ಧ್ವಜ, ವಜ್ರ, ಅಂಕುಶಾದಿ ಚಿಹ್ನೆಗಳಿಂದ ಕೂಡಿದ ಪಾದಗಳಿಂದ ನಿಃಸೃತವಾಗಿ ಹರಿದು ಬರುವ ಉದಕದ ಧಾರೆಯು ಬ್ರಹ್ಮರಂಧ್ರ ಮಾರ್ಗದಿಂದ ಶರೀರವನ್ನು ಪ್ರವೇಶಿಸುತ್ತಾ ಮೂರು ಭಾಗವಾಗುವುದು. ಅಲ್ಲಿ ಒಂದು ಭಾಗದಿಂದ ವಾಮ (ಎಡ) ಭಾಗದಲ್ಲಿರುವ ನಾಡಿಗಳನ್ನು ಪ್ರವೇಶಿಸಿ “ಗಂಗಾ” ಎಂಬ ಸಂಜ್ಞೆ (ಹೆಸರ) ಯನ್ನು ಪಡೆಯುವುದು. ಇನ್ನೊಂದು ಭಾಗದಿಂದ ಬಲ ಭಾಗದಲ್ಲಿರುವ ದಕ್ಷಿಣ ನಾಡಿಗಳನ್ನು ಪ್ರವೇಶಿಸಿ “ಯಮುನಾ” ಎಂಬ ಸಂಜ್ಞೆಯನ್ನು ಪಡೆಯುವುದು. ಮೂರನೆಯ ಭಾಗದಿಂದ, ಪ್ರಭೇದದಿಂದ ಕೂಡಿದ ಸುಷುಮ್ನಾ ನಾಡಿಯನ್ನು ಪ್ರವೇಶಿಸಿ “ಸರಸ್ವತೀ” ಎಂದು ಕರೆಯಲ್ಪಡುತ್ತದೆ. ಈ ರೀತಿಯಾಗಿ ಶ್ರೀ ವಾಸುದೇವನ ಚರಣ ಕಮಲೋದಕವು ಮೂರು ಭಾಗಗಳಿಂದ ಅಂತಃ ಶುದ್ಧಿಯನ್ನು ಮಾಡುತ್ತಿದೆ” ಯೆಂದು ಚಿಂತನೆಯನ್ನು ಮಾಡಬೇಕು.

ಈ ರೀತಿಯಾಗಿ ರಾಗದ್ವೇಷಾದಿ ಅಂತರ್ಮಲ ಪರಿಹಾರಕವಾದ ಮೂರುವರೆ ಕೋಟಿ ತೀರ್ಥಗಳ ಸ್ನಾನದಕಿಂತಲೂ ಅನಂತಗುಣಾಧಿಕವೂ, ಅಪಮೃತ್ಯು ಪರಿಹಾರಕವೂ. ಆದ ಧ್ಯಾನ ಸ್ನಾನವನ್ನು ಮಾಡಿ ಉಕ್ತರೀತಿಯಿಂದ ತನ್ನ ಬಿಂಬರೂಪಿಯಾದ ಹರಿಯನ್ನೇ ಚಿಂತನೆ ಮಾಡಬೇಕು.

ಉತ್ಕ್ರಾಂತಿ ವಿಚಾರ

ಅನಂತರ – ಪ್ರಾಜ್ಞನಾಮಕನಾದ ಕರ್ಣಿಕಾಗ್ರ ಸ್ಥಿತನಾದ ಹರಿಯು ಜೀವನನ್ನು ತೆಗೆದುಕೊಂಡು ಲೀಲೆಯಿಂದ ಅವನನ್ನು ಆರೋಹಣ ಮಾಡಿ,

ಪಟ್ಟಣದಿಂದ ಮಹಾರಾಜನು ಹೊರಡುವಂತೆ ಶರೀರದ ದೆಶೆಯಿಂದ ಬೇರೆ ನಾಡಿಗಳಿಂದ ಹೊರಕ್ಕೆ ಹೊರಡುತ್ತಾನೆ. ಅನಂತರ ಅಮಾತ್ಯ, ಮಂತ್ರಿ ಮೊದಲಾದ ಪ್ರಜೆಗಳಂತೆ, ಮುಖ್ಯ ಪ್ರಾಣನೇ ಮೊದಲಾದ ಸರ್ವದೇವತೆಗಳೂ ಮಹಾರಾಜೋಪಚಾರಗಳಿಂದ ಸೇವಿಸುತ್ತಾ ಆ ಹರಿಯನ್ನು ಅನುಸರಿಸಿ ಹೋಗುತ್ತಾರೆ.

ಇಲ್ಲಿ ಜೀವನು ಸ್ಥೂಲ ಶರೀರವನ್ನು ಪರಿತ್ಯಾಗಮಾಡಿ ಹೊರಡುತ್ತಾ ಉತ್ತರ (ಮುಂದಿನ) ದೇಹಾರಂಭಕಗಳಾದ ಭೂತ ಸೂಕ್ಷ್ಮಗಳಿಂದಲೂ, ಇಂದ್ರಿಯ ಸೂಕ್ಷ್ಮಗಳಿಂದಲೂ ಪರಿವೇಷ್ಟಿನಾಗಿಯೇ ಹೋಗುತ್ತಾನೆ.

ಪೂರ್ವದಲ್ಲಿ ಪರಿತ್ಯಜ್ಯಮಾನ ದೇಹದಲ್ಲಿ ಸ್ಥಿತರಾದ ದೇವತೆಗಳು ಸೂಕ್ಷ್ಮಾಭಿಮಾನಿಗಳು, ಸ್ಥೂಲಾಭಿಮಾನಿಗಳೆಂದು ಎರಡು ವಿಧರಾದವರು. ಅದರಲ್ಲಿ ಮೊದಲನೆಯದಾದ ಸ್ವಾಭಿಮತಗಳಾದ ಸ್ಥೂಲಾವಯವಭೂತಗಳಾದ ಸೂಕ್ಷ್ಮಗಳನ್ನು ಬಿಟ್ಟು ಉತ್ತರದೇಹ ಪಡೆಯಲು ಬೀಜಭೂತಗಳಾದ ಸೂಕ್ಷ್ಮಗಳನ್ನು ಅಧಿಷ್ಠಾನಮಾಡಿಕೊಂಡು ಜೀವನ ಜೊತೆಯಲ್ಲಿ ಆ ದೇವತೆಗಳೂ ಹೋಗುವರು. ಪುನಃ ಜೀವ ರೇತಸ್ಸಿನಲ್ಲಿ ಸಂಗತರಾಗಿ ಹೋಗಲು ಸ್ವಾಭಿಮತಗಳಾದ ಅ (ತಮ್ಮ) ವರಿಂದ ನವೀನ ದೇಹವೂ ಇಂದ್ರಿಯಗಳೂ ನಿರ್ಮಿಸಲ್ಪಡುತ್ತದೆ. ಎರಡನೆಯದಾದರೋ ಸ್ವಾಭಿಮತಗಳಾದ ಸ್ಥೂಲ ಶರೀರೇಂದ್ರಿಯಗಳನ್ನು ಪರಿತ್ಯಜಿಸಿ, ಅಧಿದೈವಗತವಾದ ಸ್ವ ಮೂಲ ರೂಪವನ್ನು ಹೊಂದಿ, ಅಲ್ಲಿಂದ ಇವುಗಳಿಂದ ಆರಬ್ಧವಾಗುತ್ತಿರಲು ಸ್ಥೂಲ ದೇಹವು ತಮ್ಮ ತಮ್ಮ ಸ್ಥಾನಗಳನ್ನು ಪುನಃ ಮೂಲರೂಪದ ದೆಶೆಯಿಂದ ವಿಭಕ್ತಗಳಾ (ಬೇರೆಯಾ) ಗಿ, ಸ್ವರೂಪಗಳಿಂದ ಪ್ರವೇಶಮಾಡಿ ಜೀವೋಪಕಾರಕರಾಗುವರು. ಇಲ್ಲಿ ಸ್ಥೂಲದೇಹದಲ್ಲಿ ಪರಮಾತ್ಮನನ್ನು ಆರಂಭಿಸಿ ಸರ್ವ ದೇವತೆಗಳೂ ತಮ್ಮ ತಮ್ಮ ಮೂಲ ರೂಪವನ್ನು ಕುರಿತು ಹೋಗುತ್ತಾರೆ, ಪುನಃ ನವೀನ ಶರೀರವು ಪ್ರಾಪ್ತವಾಯಿತೆಂದರೆ ಮತ್ತೆ ಪುನಃ ಬರುತ್ತಾರೆಂದು ತಿಳಿಯುವುದು.

ತತ್ವಗಳ–ತತ್ವಾಭಿಮಾನಿಗಳ–ಲಯವು

ದೇವತೆಗಳಿಂದಲೂ ಜೀವನಿಂದಲೂ ಪರಿತ್ಯಕ್ತಗಳಾದ ಸ್ಥೂಲ ಶರೀರೇಂದ್ರಿಯಗಳು ಯಥಾಯಥವಾಗಿ ಸ್ವಕಾರಣಗಳಲ್ಲಿ ಲೀನವಾಗುತ್ತವೆ. ಅಲ್ಲಿ ಶರೀರದಲ್ಲಿ ಗಂಧವಿಶಿಷ್ಟ ಪೃಥಿವಿಯು ಬಾಹ್ಯ ಪೃಥಿವಿಯಲ್ಲಿ ಲಯ ಹೊಂದುತ್ತದೆ. ಶ್ಲೇಷ್ಮ(ಮೂತ್ರ) ಕೀವು ರಕ್ತ ಮೊದಲಾದ ಕಾರ್ಯವಿಶಿಷ್ಟ ಆಪಗಳು ಬಾಹ್ಯಽಪಗಳಲ್ಲಿ ಸೇರಿ ಲೀನವಾಗುವುವು. ಔಷ್ಣಗುಣ ವಿಶಿಷ್ಟವಾದ ತೇಜಸ್ಸು ಬಾಹ್ಯ ತೇಜಸ್ಸಿನಲ್ಲೂ, ಶ್ವಾಸೋಚ್ಛ್ವಾಸ ಮೊದಲಾದ ಕಾರ್ಯ ವಿಶಿಷ್ಟ ವಾಯುವು ಬಾಹ್ಯ ವಾಯುವಿನಲ್ಲೂ, ಶರೀರಾ (ದ ಒಳಗಿರುವ) ವಚ್ಛಿನ್ನ ಆಕಾಶವು ಬಾಹ್ಯಾಕಾಶದಲ್ಲಿಯೂ ಲೀನವಾಗುವುದು. ಹೀಗೆಯೇ ಉಚ್ಚಾರಣಾದಿಕಾರ್ಯ (ವಿಶಿಷ್ಟ) ದಿಂದ ಕೂಡಿದ ವಾಕ್, ಕೃತಿ ವಿಶಿಷ್ಟ ಎರಡು ಕೈಗಳೂ, ಗತಿಯಿಂದ ಕೂಡಿದ ಪಾದಗಳೆರಡೂ, ವಿಸರ್ಗ ಸಹಿತ ಪಾಯು ರತಿ ಸಹಿತ ಉಪಸ್ಥ, ಈ ರೀತಿಯಾದ ಈ ಪಂಚ ಕರ್ಮೇಂದ್ರಿಯಗಳು ತಮ್ಮ ತಮ್ಮಗೆ ಕಾರಣಗಳಾದ ವಾಗಾದಿ ಕರ್ಮೇಂದ್ರಿಯಗಳಲ್ಲಿ ಲೀನವಾಗುತ್ತವೆ.

ಹಾಗೆಯೇ ಶಬ್ದವಿಶಿಷ್ಟ ಶ್ರೋತ್ರವೂ (ಕಿವಿ) ಸ್ಪರ್ಶದಿಂದ ಕೂಡಿದ ತ್ವಕ್ (ಚರ್ಮವು) ರೂಪದಿಂದ ಕೂಡಿದ ಕಣ್ಣು (ಚಕ್ಷುಃ) ರಸದಿಂದ ಕೂಡಿದ ಜಿಹ್ವೆ (ನಾಲಿಗೆ) ಯು ಗಂಧದಿಂದ ಸಹಿತವಾದ ಘ್ರಾಣೇಂದ್ರಿಯ (ಮೂಗು) ಹೀಗೆ ಪಂಚ ಜ್ಞಾನೇಂದ್ರಿಯಗಳೂ ತಮ್ಮತಮ್ಮಗೆ ಕಾರಣಗಳಾದ ಶ್ರೋತ್ರವೇ ಮೊದಲಾದ ಜ್ಞಾನೇಂದ್ರಿಯಗಳಲ್ಲಿ ಲೀನವಾಗುವವು. ಬುದ್ಧಿಯು ಬುದ್ಧಿಯಲ್ಲಿ ಲೀನವಾಗುತ್ತದೆ. ಮನಸ್ಸು ಮನಸ್ಸಿನಲ್ಲಿ ಲಯಹೊಂದುತ್ತದೆ.

ಹಾಗೆಯೇ ಕಾರ್ಯಗತರಾದ ಭಗವಂತನಿಗೂ, ದೇವತೆಗಳಿಗೂ ಸಹ ರೂಪಗಳಿಗೆ ಕಾರಣಗತಗಳಾದ ತಮ್ಮ ತಮ್ಮ ರೂಪಗಳಲ್ಲಿ ಏಕೀ ಭಾವಲಕ್ಷಣವೆಂಬ ಲಯವು ಆಗುವುದೆಂದು ತಿಳಿಯುವುದು.

ಊರ್ಧ್ವಲೋಕ ಗಮನ

ಹೀಗೆ ದೇವತೆಗಳಿಂದ ಅನುಸರಿಸಿ ಹೋಗುವ ಜೀವವನ್ನು ಆರೋಹಣ ಮಾಡಿ, ಶರೀರವನ್ನು ಪರಿತ್ಯಜಿಸಿ, ಸ್ವರ್ಗಾದಿ ಲೋಕಗಳಿಗೆ ಹೋಗುತ್ತಾ

ಪ್ರಾಜ್ಞನಾಮಕನಾದ ಹರಿಯು (ಸ್ವಪ್ನಾವಸ್ಥೆಯಲ್ಲಿ ಕಂಠದೇಶದಂತೆ) ಮಧ್ಯ ಮಾರ್ಗದಲ್ಲಿ ಜೀವನಿಗೆ ವಿಶ್ರಾಂತಿಗೋಸ್ಕರವಾಗಿ ಧೂಮಾದಿ ಲೋಕಕ್ಕೆ ಹೋಗುತ್ತಾನೆ. ಆ ರೀತಿ ಬರುತ್ತಿರುವ ಭಗವಂತನನ್ನು ಅಲ್ಲಲ್ಲಿರುವ ದೇವತೆಗಳು ಅಲ್ಲಿರುವ ಸಮಸ್ತೋಪಚಾರ ಸಾಮಗ್ರಿಗಳೊಡನೆ ಸಮೀಪಕ್ಕೆ ಬರುತ್ತಾರೆ. ಅನಂತರ ಅವರಿಂದ ಆದೃತ (ಪೂಜಿತ) ನಾಗಿ ಅಲ್ಲಿ ಸ್ವಲ್ಪಕಾಲ ಸ್ಥಿತನಾಗಿ ನಿಂತು ಪುನಃ ಜೀವನನ್ನು ಕರೆದುಕೊಂಡು ಮುಂದೆ ಮುಂದಕ್ಕೆ ಉತ್ತರತ್ರ ಹೋಗುತ್ತ. ಅಲ್ಲಲ್ಲಿರುವ ಲೋಕಗಳಲ್ಲೇ ಇದೇ ರೀತಿ ಪೂಜಿತನೂ ಆದೃತನೂ ಆಗಿ ಕ್ರಮವಾಗಿ ಸ್ವರ್ಗವನ್ನು ಕುರಿತು ಹೋಗುತ್ತಾನೆ. ಅಲ್ಲಾದರೋ ಸುಕೃತಾ (ಪುಣ್ಯಾ) ಖ್ಯ ಸ್ವಸ್ವರೂಪವನ್ನು ನಿಮಿತ್ತ ಮಾಡಿಕೊಂಡು ಬಹುಕಾಲದಿಂದ ಅಪೇಕ್ಷಿತಗಳಾದ ಸಮಸ್ತ ಕಾಮಗಳಿಂದ ವಿಹಾರಮಾಡಿ, ಆ ರೀತಿಯಾದ ಪ್ರಾರಬ್ಧ ಕರ್ಮವು ಮುಗಿದು, ಪರಿಪಾಕ ಕಾಲದಲ್ಲಿ "(ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ)" ಪುನಃ ಭೂಮಿ ಮೊದಲಾದ ಸ್ಥಾನಗಳಲ್ಲಿ ವಿಹರಿಸಲು ಇಚ್ಛಿಸುತ್ತಾನೆ.

ಪಂಚಾಗ್ನಿ ವಿದ್ಯೆ-ಭೂಲೋಕಕ್ಕೆ ಆಗಮನ

ಅನಂತರ ಆಗಲೇ ಹರಿಯೂ ತತ್ವೇಶರುಗಳೂ ಸ್ವರ್ಗದಲ್ಲಿರಲು, "ಅದನಾದಂಗ ನೇತೃತ್ವಾಚ್ಚ" (ತಿನ್ನುವುದರಿಂದಲೂ ಅಂಗನಿಯಾಮಕನಾಗಿರುವುದರಿಂದಲೂ) "ಅಗ್ನಿ"ಶಬ್ದವಾಚ್ಯನಾದ ನಾರಾಯಣನೆಂಬ ಅಗ್ನಿಯಲ್ಲಿ ಉತ್ತರ (ಮುಂದಿನ) ದೇಹಕ್ಕೆ ಆರಂಭಕಗಳಾದ ಭೂತ ಸೂಕ್ಷ್ಮಗಳಿಂದ ಪರಿವೇಷ್ಟಿತನಾದ ಜೀವನನ್ನು ಹೋಮ ಮಾಡುತ್ತಾನೆ. 1. ಇಲ್ಲಿ ನಾರಾಯಣನಿಂದ ಉದ್ಭವಿಸಿದ ನಾರಾಯಣಾದಿ ಪಂಚರೂಪಗಳೇ ಈ ಅಗ್ನಿಗೆ ಸಮಿತ್ತು ಮೊದಲಾದ ಪಂಚರೂಪಗಳಾಗುವುವು. ಅದು ಹೇಗೆಂದರೆ—

ಕರ್ಮ ಸಮೂಹವನ್ನು ತೆಗೆದುಕೊಂಡು ಹೋಗುತ್ತಾನಾದುದರಿಂದಲೂ ಹವಿಸ್ಸು ಮೊದಲಾದುವನ್ನು ಸ್ವೀಕರಿಸುವುದರಿಂದ (ಆದಾನಾದಾದಿತ್ಯನು) ಆದಿತ್ಯನಾಮಕನಾಗಿ ಆದಿತ್ಯಾಂತರ್ಗತನಾದ ನಾರಾಯಣ ನಾರಾಯಣನು ಚೆನ್ನಾಗಿ ಪುಷ್ಟನಾದ ಪ್ರಯುಕ್ತ (ಎಂದರೆ ಸರ್ವೋತ್ತಮನಾದುದರಿಂದ)

ಸವೋಧನಾತ್ ಸವಿತೃ ಎನಿಸಿರುವನು. ಇತರರಿಗೆ ಸುಖವನ್ನುಂಟುಮಾಡುವುದರಿಂದಲೂ ಸುಖರೂಪನಾದುದರಿಂದಲೂ (ರತಿ ಶಂ ಮಾನರೂಪತ್ವಾದ್ವಾ-ರಮಣಾಚ್ಛಾಮನಾಚ್ಚ) ರಶ್ಮಿನಾಮಕನಾಗಿ ರಶ್ಮಿಸ್ಥಿತನಾಗಿ ನಾರಾಯಣ ವಾಸುದೇವನು, ಶತ್ರುಗಳನ್ನು ತಿರಸ್ಕರಿಸುವುದರಿಂದಲೂ ಅಜ್ಞಾನಾದಿಗಳನ್ನು ಪರಿಹರಿಸುವುದರಿಂದಲೂ (ಧೂತ್ಕಾರಣಾತ್) ಧೂಮ ಎನಿಸಿಕೊಂಡು ಧೂಮದಲ್ಲಿರತಕ್ಕವನು, ಅಜ್ಞಾ (ತಮಸಾ ಅಹನೀಯತ್ವಾತ್) ನರಿಂದ ನಿಕೃಷ್ಟನಾಗದಿರುವುದರಿಂದ, ಸರ್ವೋತ್ತಮನಾದುದರಿಂದ, "ಅಹಃ" ಎನ್ನಿಸಿಕೊಂಡು ಅಹಸ್ಸಿ (ಹಗಲಿ)ನಲ್ಲಿ ಸ್ಥಿತನಾಗಿರುವ ನಾರಾಯಣ ಸಂಕರ್ಷಣನು ಪ್ರಕಾಶಸ್ಥಾನನೂ ಸರ್ವರಿಂದಲೂ ಪೂಜಿಸಲ್ಪಡುವವನೂ ಆದುದರಿಂದ "ಅರ್ಚಿಃ" ಎನಿಸಿಕೊಂಡು, ಅರ್ಚಿರ್ನಾಮಕನಾಗಿ ಅರ್ಚಿಸ್ಸಿನಲ್ಲಿರುವನು.

ಭಕ್ತರನ್ನು ಸಂತೋಷಪಡಿಸುವುದರಿಂದ (ಆಹ್ಲಾದಕತ್ವಾಚ್ಚಂದ್ರಃ) ಚಂದ್ರನಾಮಕನಾಗಿ ಚಂದ್ರನಲ್ಲಿದ್ದು ನಾರಾಯಣ ಪ್ರದ್ಯುಮ್ನನು. (ಅಂಗರತೇರಂಗಾರಃ) ತನ್ನ ಅಂಗಗಳಲ್ಲೇ ಕ್ರೀಡಿಸುವುದರಿಂದ "ಅಂಗಾರ" ಎಂಬ ಹೆಸರುಳ್ಳವನಾಗಿ ಅಂಗಾರದಲ್ಲಿರುವನು (ನ ವಿದ್ಯತೇ ಕ್ಷತ್ರಂ ಪಾಲಕಂ ಯಸ್ಯ) ಎಂದರೆ ತನ್ನನ್ನು ರಕ್ಷಿಸುವವರು ಬೇರೊಬ್ಬರಿಲ್ಲದಿರುವುದರಿಂದ "ನಕ್ಷತ್ರ" ನಾಮಕನಾಗಿ, ನಕ್ಷತ್ರ ಸ್ಥಿತನಾಗಿ, ನಾರಾಯಣಾಽನಿರುದ್ಧನು, ಬಹು ಪ್ರಕಾರವಾಗಿ ಪ್ರಕಾಶಿಸುವುದರಿಂದ (ವಿವಿಧಂ ಸ್ಫುರಣಾದ್ ವಿಸ್ಫುಲಿಂಗಃ) "ವಿಸ್ಫುಲಿಂಗದಲ್ಲಿರುವನು.

2. ಹೀಗೆ ದೇವತೆಗಳು ಜೀವನನ್ನು ನಾರಾಯಣಾಖ್ಯ ಅಗ್ನಿಯಲ್ಲಿ ಹೋಮ ಮಾಡಿ, ಅನಂತರ ಚಂದ್ರನ ದ್ವಾರಾ, ಉತ್ತಮನಾದ ಚತುರ್ಮುಖಾದಿಗಳನ್ನು ಹುಟ್ಟಿಸುವುದರಿಂದ (ಪರಂ ಬ್ರಹ್ಮಾದಿಕಮಪಿ ಜನ್ಯಮಸ್ಯ) "ಪರ್ಜನ್ಯ" ನಾಮಕನಲ್ಲಿ ಪರ್ಜನ್ಯ ಸ್ಥಿತನಾದ ವಾಸುದೇವಾಖ್ಯ ಅಗ್ನಿಯಲ್ಲಿ ಹೋಮ ಮಾಡುತ್ತಾನೆ.

ಇಲ್ಲಿಯೂ ಸಹ ವಾಸುದೇವನಿಂದ ಉದ್ಭೂತಗಳಾದ ನಾರಾಯಣಾದಿ ಪಂಚರೂಪಗಳೇ ಸಮಿತ್ತು ಮೊದಲಾದ ಪಂಚರೂಪಗಳು ಇದರಂತೆ ಉತ್ತರತ್ರ ತಿಳಿಯುವುದು. ಅದು ಹೇಗೆಂದರೆ—

"ಜ್ಞಾನ" ಮತ್ತು "ಆಯು" ರೂಪನಾದುದರಿಂದ ವಾಯು ನಾಮಕನಾಗಿ ವಾಯುವಿನಲ್ಲಿರುವ ವಾಸುದೇವ ನಾರಾಯಣನು " ಸಮಿತ್ " ಮೇಘದಲ್ಲಿ ಆಪಗಳನ್ನು ಧರಿಸಿ ಭರಿಸುವುದರಿಂದಲೂ ಬೇರೊಬ್ಬರಿಂದ ಪೋಷ್ಯನಾಗದಿರುವುದರಿಂದಲೂ " ಅಭ್ರನಾಮಕ "ನಾಗಿ ಅಭ್ರದಲ್ಲಿ ಸ್ಥಿತನಾದ ವಾಸುದೇವ ವಾಸುದೇವನು "ಧೂಮ" ಎನಿಸಿರುವನು. ವಿಶೇಷವಾಗಿ ಪ್ರಕಾಶಿಸುವುದರಿಂದ "ವಿದ್ಯುನ್ನಾಮಕ"ನಾಗಿ ವಿದ್ಯುತ್ತಿನಲ್ಲಿರುವ ವಾಸುದೇವ ಸಂಕರ್ಷಣನು "ಅರ್ಚಿಯು" ಜಗತ್ತನ್ನು ಭಕ್ಷಿಸುವುದರಿಂದ ಅಶನಿ ಎಂದು ಹೆಸರುಳ್ಳ "ಅಶನಿ" ಯಲ್ಲಿರತಕ್ಕ ವಾಸುದೇವ ಪ್ರದ್ಯುಮ್ನನು "ಅಂಗಾರ"ವೆಂಬ ಹೆಸರುಳ್ಳವನು ಗರ್ಜನೆ ಮಾಡುವುದರಿಂವ "ಹ್ರಾದುನಿ" ಎಂದು ಹೆಸರುಳ್ಳ (ನಿಹ್ರಾದನಾತ್ ಹ್ರಾದುನಿಃ) ಹ್ರಾದುನಿ (ಮೇಘಗರ್ಜನೆ)ಯಲ್ಲಿರತಕ್ಕ ವಾಸುದೇವಾ ನಿರುದ್ಧನು "ವಿಸ್ಫುಲಿಂಗ" (ಅಗ್ನಿಕಿಡಿ) ಗಳಲ್ಲಿರತಕ್ಕವನು. ಹೀಗೆ ವಾಸುದೇವಾsಗ್ನಿಯಲ್ಲಿ ಹೋಮಮಾಡಿ ವೃಷ್ಟಿದ್ವಾರಾ (ಪ್ರಥಿತತ್ವಾತ್ ಪೃಥವೀ) ವಿಸ್ತಾರನಾಗಿ ಪೃಥಿವೀ ನಾಮಕನಾಗಿ ಪೃಥಿವಿಯಲ್ಲಿ ಸ್ಥಿತನಾಗಿರುವ ಸಂಕರ್ಷಣಾಖ್ಯ ಅಗ್ನಿಯಲ್ಲಿ ಹೋಮಮಾಡುತ್ತಾನೆ.

3. ಅಲ್ಲಿ ಸಮ್ಯಕ್ ವಾಸಮಾಡಿಸುತ್ತಾನೆ ವತ್ಸರೂಪರಾದ ದೇವತೆಗಳನ್ನು ಸಂತೋಷಪಡಿಸುತ್ತಾನಾದುದರಿಂದಲೂ ಸಂವತ್ಸರ ನಾಮಕನಾಗಿ ಸಂವತ್ಸರದಲ್ಲಿ ಸ್ಥಿತನಾದ ಸಂಕರ್ಷಣ ನಾರಾಯಣನು ಸಮಿತ್. ಸರ್ವತ್ರ ಪ್ರಕಾಶಕನಾದುದರಿಂದ " ಆಕಾಶ "ನಾಮಕನಾಗಿ ಆಕಾಶ ಸ್ಥಿತನಾದ ಸಂಕರ್ಷಣ ವಾಸುದೇವನು "ಧೂಮವು". ರತಿಯನ್ನು ಕೊಡುತ್ತಾನಾದುದರಿಂದ "ರಾತ್ರಿನಾಮ"ಕನಾಗಿ ರಾತ್ರಿಸ್ಥಿತನಾದ ಸಂಕರ್ಷಣ ಸಂಕರ್ಷಣನು "ಅರ್ಚಿಯು" ಮೋಕ್ಷ ಮೊದಲಾದುವನ್ನು ಮುಖ್ಯವಾಗಿ ತೋರಿಸಿ ಕೊಡುತ್ತಾನಾದುದರಿಂದ ದಿಙ್‌ನಾಮಕನಾಗಿ ದಿಕ್ಕಿನಲ್ಲಿ ಸ್ಥಿತನಾದ ಸಂಕರ್ಷಣ ಪ್ರದ್ಯುಮ್ನನು ಅಂಗಾರವು. ಸ್ವರ್ಗವೇ ಮೊದಲಾದ ಅವಾಂತರ ಫಲವನ್ನು ಕೊಡುತ್ತಾನಾಗಿ "ಅವಾಂತದಿಙ್‌ನಾಮಕನಾಗಿ ಅವಾಂತರ ದಿಕ್ಕುಗಳಲ್ಲಿ ಸ್ಥಿತನಾದ ಸಂಕರ್ಷಣಾನಿರುದ್ಧನು "ವಿಸ್ಫುಲಿಂಗ" (ಬೆಂಕಿಯಕಿಡಿ)ಗಳು.

4. ಅನಂತರ ಅನ್ನದ್ವಾರಾ ಪೂರ್ಣನಾದುದರಿಂದ ಪುರುಷನಾಮಕ (ಪುರುತ್ವಾತ್ ಪೂರ್ಣತ್ವಾತ್ ಪುರುಷಃ)ನು ಪುರುಷನಲ್ಲಿ ಸ್ಥಿತನೂ ಆದ ಪ್ರದ್ಯು

ಮ್ನಾಖ್ಯ ಅಗ್ನಿಯಲ್ಲಿ ಹೋಮ ಮಾಡುತ್ತಾರೆ. ಅಲ್ಲಿ ವಚನಾದ್ "ವಾಜ್ ನಾಮಕ"ನೂ, ವಾಕ್ಕಿನಲ್ಲಿ ಸ್ಥಿತನಾದವನೂ ಆದ ಪ್ರದ್ಯುಮ್ನ ನಾರಾಯಣನು "ಸಮಿತ್", ಪ್ರಕರ್ಷವಾಗಿ "ನಯನ ಚೇಷ್ಟೆ" ಯುಕ್ತವನ್ನಾಗಿ ಮಾಡುತ್ತಾನಾಗಿ "ಪ್ರಾಣ ನಾಮಕ"ನೂ ಪ್ರಾಣನಲ್ಲಿ ಸ್ಥಿತನೂ ಆದ ಪ್ರದ್ಯುಮ್ನ ವಾಸುದೇವನು "ಧೂಮ"ವು–ಇವನಲ್ಲಿ ಹೋಮಿಸಲ್ಪಡುತ್ತಾನೆ, ಆಹ್ವಾನ ಮಾಡುತ್ತಾನೆಂದು "ಜಿಹ್ವಾನಾಮಕ"ನಾದ, ಜಿಹ್ವೆಯಲ್ಲಿ ಸ್ಥಿತನಾದ ಪ್ರದ್ಯುಮ್ನ ಸಂಕರ್ಷಣನು "ಅರ್ಚಿ"ಯು, ದರ್ಶನಮಾಡು (ನೋಡು)ವುದರಿಂದ "ಚಕ್ಷುರ್ನಾಮಕ"ನೂ, ಚಕ್ಷುಸ್ಸಿನಲ್ಲಿರುವವನೂ ಆದ ಪ್ರದ್ಯುಮ್ನ ಪ್ರದ್ಯುಮ್ನನು "ಅಂಗಾರವು. ಶ್ರವಣ ಮಾಡಿಸುವುದರಿಂದ ಶ್ರವಣ ನಾಮಕನೂ ಶ್ರವಣೇಂದ್ರಿಯದಲ್ಲಿರುವವನೂ ಆದ ಪ್ರದ್ಯುಮ್ನಾ ನಿರುದ್ಧನು "ವಿಸ್ಫುಲಿಂಗ" (ಅಗ್ನಿ ಕಿಡಿಯು)ವು.

5. ಅನಂತರ ರೇತೋದ್ವಾರಾ ಜೋಷ್ಯತ್ವಾತ್, ಭೋಗ್ಯತ್ವದ ದೆಶೆಯಿಂದ "ಯೋಷಿತ್" ಎನಿಸಿದ "ಯೋಷಾಖ್ಯ" ಅನಿರುದ್ಧಾಖ್ಯ ಅಗ್ನಿಯಲ್ಲಿ ಹೋಮ ಮಾಡುತ್ತಾನೆ.

ಅಲ್ಲಿ ಸಮೀಪದಲ್ಲಿ ಸ್ಥಿತವಾಗಿರುವುದರಿಂದ "ಉಪಸ್ಥನಾಮಾ" ಉಪಸ್ಥಿತನಾದ ಅನಿರುದ್ಧ ನಾರಾಯಣನು "ಸಮಿತ್." ಉಪಮಂತ್ರಣ ಕರ್ತೃತ್ವದ ದೆಶೆಯಿಂದ ಉಪ ಮಂತ್ರಣ ನಾಮಕನಾಗಿ ಉಪಮಂತ್ರಣದಲ್ಲಿರುವ ಅನಿರುದ್ಧ ವಾಸುದೇವನು "ಧೂಮವು. ಯುನಕ್ತಿ ಎಂದರೆ ಮಿಶ್ರೀಕರಣ ಮಾಡುತ್ತಾನಾಗಿ "ಯೋನಿನಾಮಕ"ನೂ ಯೋನಿಯಲ್ಲಿರುವವನೂ ಆದ ಅನಿರುದ್ಧ ಸಂಕರ್ಷಣನು "ಅರ್ಚಿಯು", ಯೋನಿಯ ಅಂತಃ ಬಳಗೆ ಕ್ರಿಯಮಾಣ ವ್ಯಾಪಾರ ಕರ್ತೃತ್ವಾತ್, "ಅಂತಃಕರಣ" ನಾಮನಾದ, ಅಂತಃಕರಣದಲ್ಲಿರುವ ಅನಿರುದ್ಧ ಪ್ರದ್ಯುಮ್ನನು "ಅಂಗಾರವು". ಅಭಿನಂದನ ಮಾಡುತ್ತಾನೆ ಆನಂದಪಡಿಸುತ್ತಾನಾಗಿ ಅಭಿನಂದನಾಮಕನೂ ಅಭಿನಂದ ಸ್ಥಿತನೂ ಆದ ಅನಿರುದ್ಧಾನಿರುದ್ಧನು "ವಿಸ್ಫುಲಿಂಗ" (ಬೆಂಕಿಕಿಡಿಯು)ವು.

ಹೀಗೆ ಪಂಚಮ ಅಗ್ನಿಯಲ್ಲಿ ಹೋಮಾನಂತದ ಜೀವನಿಗೆ ಪುರುಷ (ಶಬ್ದಿತ) ನೆಂಬ ಹೆಸರುಳ್ಳ ದೇಹವು ಉತ್ಪನ್ನವಾಗುತ್ತದೆ. ಆಗಲೇ ಇವನು "ಪುರುಷ"ನೆಂದು ಕರೆಯಲ್ಪಡುತ್ತಾನೆ. ಇಲ್ಲಿಯೂ ಸಹ ಪೂರ್ವದಂತೆ

> ವಿಷ್ಣುರ್ಯೋನಿಂ ಪ್ರಕಲ್ಪಯತು । ತ್ವಷ್ಟಾ ರೂಪಾಣಿ ಪಿಂಶತು ।
> ಆಸಿಂಚತು ಪ್ರಜಾಪತಿಃ । ಧಾತಾ ಗರ್ಭಂ ದಧಾತು ತೇ ಎಂಬ

ರೀತಿಯಲ್ಲಿ ವಾಸುದೇವ ದೆಶೆಯಿಂದ ಯೋನಿ ಕ್ಲಿಪ್ತಿಯೂ, ಪ್ರದ್ಯುಮ್ನನ ದೆಶೆಯಿಂದ ಅನೇಕ ಕರ್ಮವೂ ಸಂಕರ್ಷಣ ದೆಶೆಯಿಂದ ರೂಪ ನಿಷ್ಪತ್ತಿಯೂ ಅನಿರುದ್ಧನ ದೆಶೆಯಿಂದ ಧಾರಣವೂ, ಭಗವಂತನ ಮತ್ತು ದೇವತೆಗಳ ಶರೀರ ಪ್ರವೇಶವೂ, ಅವಸ್ಥಾತ್ರಯ (ಜಾಗ್ರತ್, ಸ್ವಪ್ನ, ಸುಷುಪ್ತಿ) ನಿರ್ಮಾಣವೂ, ಜ್ಞಾನೇಂದ್ರಿಯಗಳಿಂದ ಶಬ್ದಾದಿ ಅಶ್ಮ ಭೋಗವೂ, ಕರ್ಮೇಂದ್ರಿಯಗಳಿಂದ ಕ್ರಿಯಾತ್ಮ ಭೋಗವೂ, ಇವೇ ಮೊದಲಾದುವೆಲ್ಲವೂ ಆಗುವುವೆಂದು ಸರ್ವವನ್ನೂ ಅನುಸಂಧಾನ ಮಾಡಬೇಕು."

ಇತಿ ಗಮನಾಗಮನಂ.

ದೇವತೆಗಳು ಜೀವನನ್ನು ಅಗ್ನಿವಾಚ್ಯನಾದ ನಾರಾಯಣಾಗ್ನಿಯಲ್ಲಿ ಹೋಮ ಮಾಡುವ ಕ್ರಮ

1. ಆದಿತ್ಯನಾಮ ಆದಿತ್ಯಾಂತರ್ಗತ	....	ನಾರಾಯಣ ನಾರಾಯಣನು	....	ಸಮಿತ್	ಆದಿತ್ಯ
2. ರಶ್ಮಿನಾಮಾ ರಶ್ಮಿಸ್ಥ	....	ನಾರಾಯಣ ವಾಸುದೇವನು	....	ಧೂಮವು	ರಶ್ಮಿ
3. ಅಹರ್ನಾಮ ಅಹಸ್ಥ	....	ನಾರಾಯಣ ಸಂಕರ್ಷಣನು	....	ಅರ್ಚಿಃ	ಅಹಃ
4. ಚಂದ್ರನಾಮ ಚಂದ್ರಸ್ಥ	....	ನಾರಾಯಣ ಪ್ರದ್ಯುಮ್ನನು	....	ಅಂಗಾರವು	ಚಂದ್ರ
5. ನಕ್ಷತ್ರನಾಮ ನಕ್ಷತ್ರಸ್ಥ	....	ನಾರಾಯಣ ಅನಿರುದ್ಧನು	....	ವಿಸ್ಫುಲಿಂಗವು	ನಕ್ಷತ್ರ

ಪರ್ಜನ್ಯಸ್ಥಿತನಾದ ವಾಸುದೇವಾಖ್ಯ ಅಗ್ನಿಯಲ್ಲಿ ಹೋಮ

1. ವಾಯುನಾಮಾ ವಾಯುಸ್ಥನು	....	ವಾಸುದೇವ ನಾರಾಯಣನು	....	ಸಮಿತ್	ವಾಯು
2. ಅಭ್ರನಾಮಾ ಅಭ್ರಸ್ಥನು	....	ವಾಸುದೇವ ವಾಸುದೇವನು	....	ಧೂಮವು	ಅಭ್ರ
3. ವಿದ್ಯುನ್ನಾಮ ವಿದ್ಯುತ್ತಿನಲ್ಲಿ ಸ್ಥಿತ	....	ವಾಸುದೇವ ಸಂಕರ್ಷಣನು	....	ಅರ್ಚಿಃ	ವಿದ್ಯುತ್
4. ಅಶನಿನಾಮಾ ಅಶನಿಸ್ಥ	....	ವಾಸುದೇವ ಪ್ರದ್ಯುಮ್ನನು	....	ಅಂಗಾರವು	ಅಶನಿ
5. ಹ್ರಾದುನಿನಾಮಾ ಹ್ರಾದುನಿಸ್ಥ	....	ವಾಸುದೇವಾನಿರುದ್ಧನು	....	ವಿಸ್ಫುಲಿಂಗವು	ಹ್ರಾದುನಿ

ಪೃಥಿವೀನಾಮ ಪೃಥಿವೀಸ್ಥಿತನಾದ ಸಂಕರ್ಷಣಾಖ್ಯ ಅಗ್ನಿಯಲ್ಲಿ ಹೋಮ

1. ಸಂವತ್ಸರನಾಮ ಸಂವತ್ಸರಸ್ಥಿತ	....	ಸಂಕರ್ಷಣ ನಾರಾಯಣನು	....	ಸವಿತ್	ಸಂವತ್ಸರ
2. ಆಕಾಶನಾಮಾ ಆಕಾಶಸ್ಥಿತ	....	ಸಂಕರ್ಷಣ ವಾಸುದೇವನು	....	ಧೂಮ	ಆಕಾಶ
3. ರಾತ್ರಿನಾಮಾ ರಾತ್ರಿಸ್ಥಿತ	....	ಸಂಕರ್ಷಣ ಸಂಕರ್ಷಣನು	....	ಅರ್ಚಿಃ	ರಾತ್ರಿ
4. ದಿಙ್ನಾಮಾ ದಿಙ್ಸ್ಥಿತ	....	ಸಂಕರ್ಷಣ ಪ್ರದ್ಯುಮ್ನನು	....	ಅಂಗಾರ	ದಿಕ್
5. ಅವಾಂತರ ದಿಙ್ನಾಮಾ ಅವಾಂತರ ದಿಙ್ ಸ್ಥಿತನು	....	ಸಂಕರ್ಷಣಾನಿರುದ್ಧನು	....	ವಿಸ್ಫುಲಿಂಗ	ವಿದಿಕ್

ಪುರುಷನಾಮಕ ಪುರುಷಸ್ಥಿತ ಪ್ರದ್ಯುಮ್ನಾಖ್ಯ ಅಗ್ನಿಯಲ್ಲಿ ಹೋಮ

1. ವಾಙ್ನಾಮಾ ವಾಚಿಸ್ಥಿತ	....	ಪ್ರದ್ಯುಮ್ನ ನಾರಾಯಣನು	....	ಸವಿತ್	ವಾಕ್
2. ಪ್ರಾಣನಾಮಾ ಪ್ರಾಣಸ್ಥಿತ	....	ಪ್ರದ್ಯುಮ್ನ ವಾಸುದೇವನು	....	ಧೂಮ	ಪ್ರಾಣ
3. ಜಿಹ್ವಾನಾಮಾ ಜಿಹ್ವಾಸ್ಥಿತ	....	ಪ್ರದ್ಯುಮ್ನ ಸಂಕರ್ಷಣನು	....	ಅರ್ಚಿಃ	ಜಿಹ್ವಾ
4. ಚಕ್ಷುರ್ನಾಮಾ ಕಣ್ಣಿನಲ್ಲಿರುವ	....	ಪ್ರದ್ಯುಮ್ನ ಪ್ರದ್ಯುಮ್ನನು	....	ಅಂಗಾರ	ಚಕ್ಷುಃ
5. ಶ್ರವಣನಾಮಾ ಕಿವಿಯಲ್ಲಿದ್ದು ಶ್ರವಣ ಸ್ಥಿತನು	....	ಪ್ರದ್ಯುಮ್ನಾನಿರುದ್ಧನು	....	ವಿಸ್ಫುಲಿಂಗ	ಶ್ರವಣಂ

ಯೋಷಿತ್ ಎನಿಸಿದ ಯೋಷಾಖ್ಯ ಅನಿರುದ್ಧನೆಂಬ ಅಗ್ನಿಯಲ್ಲಿ ಹೋಮ

1. ಉಪಸ್ಥನಾಮಾ ಉಪಸ್ಥಿತ	....	ಅನಿರುದ್ಧ ನಾರಾಯಣನು	....	ಸವಿತ್	ಉಪಸ್ಥ
2. ಉಪಮಂತ್ರಣನಾಮಾ ಉಪಮಂತ್ರಸ್ಥಿತ		ಅನಿರುದ್ಧ ವಾಸುದೇವನು	....	ಧೂಮ	ಉಪಮಂತ್ರಣ
3. ಯೋನಿನಾಮಾ ಯೋನಿಯಲ್ಲಿರುವನು		ಅನಿರುದ್ಧ ಸಂಕರ್ಷಣನು	....	ಅರ್ಚಿಃ	ಯೋನಿ
4. ಅಂತಃಕರಣನಾಮಾ ಅಂತಃಕರಣದಲ್ಲಿರುವನು	....	ಅನಿರುದ್ಧ ಪ್ರದ್ಯುಮ್ನನು	....	ಅಂಗಾರ	ಅಂತಃಕರಣ
5. ಅಭಿನಂದನನಾಮಾ ಅಭಿನಂದಸ್ಥಿತನು		ಅನಿರುದ್ಧ ಅನಿರುದ್ಧನು	....	ವಿಸ್ಫುಲಿಂಗ	ಅಭಿನಂದ

ಪುರುಷ ಉತ್ಪತ್ತಿ ಕ್ರಮ

ವಾಸುದೇವನ ದೆಸೆಯಿಂದ	....	ಯೋನಿಕ್ಲುಪ್ತಿ
ಪ್ರದ್ಯುಮ್ನನ	....	ಆಸೇಕ ಕರ್ಮ
ಸಂಕರ್ಷಣನ	....	ರೂಪನಿಷ್ಪತ್ತಿ
ಅನಿರುದ್ಧನಿಂದ	....	ಧಾರಣ
ಭಗವಂತನ ಮತ್ತು ದೇವತೆಗಳ	....	ಶರೀರಪ್ರವೇಶ

ಮೋಕ್ಷ

ಹೀಗೆ ಬಿಂಬರೂಪಿಯಾದ ಶ್ರೀಹರಿಯು ಪುಣ್ಯಪಾಪಾತ್ಮಕವಾದ ಸ್ವ
ಪವನ್ನೇ ನಿಮಿತ್ತ ಮಾಡಿಕೊಂಡು ಜೀವನ ಜೊತೆಯಲ್ಲೇ ಭೂಮಿ, ಅ
ರಿಕ್ಷ, ಸ್ವರ್ಗಾದಿಗಳಲ್ಲಿ ಪುನಃ ವಿಹಾರ ಮಾಡಿದಾಗ್ಯೂ, ಅಲ್ಲಿ ಸರ್ವ
ಪ್ರಕೃಷ್ಟ, ಅಪ್ರಕೃಷ್ಟ (ಉತ್ತಮ, ಅಧಮ) ವಿಷಯಗಳಿಂದ ಹುಟ್ಟ
ಅತ್ಯವೂ ಅಲ್ಪವೂ ಆದ ಜೀವನ ಸುಖವನ್ನು ನೋಡಿ ಸಹಿಸದೆ, ಅಸಹಮ
ನಾಗಿ ಸ್ವರೂಪಭೂತವೂ, ಅನಾದಿನಿತ್ಯವೂ ಅಚ್ಛಿದ್ರವೂ ಆದ ಶಾಶ್ವತ ಸ
ವನ್ನು ಕೊಡಲು ಅದಕ್ಕೆ ಪ್ರತಿಬಂಧಕವಾದ ಪ್ರಕೃತಿ ಬಂಧನದ ಜೆಶೆಯಿ
ಸಂಪೂರ್ಣವಾಗಿ ಬಿಡುಗಡೆ ಮಾಡಿ, ಆ ಜೀವನನ್ನು ವೈಕುಂಠ ಶ್ವೇತದ್ವಿ
ಅನಂತಾಸನ ಮೊದಲಾದ ತನ್ನ ಲೋಕಗಳಿಗೆ (ನಯನ ಮಾಡಿ) ಕರೆ
ಯ್ಯಲು, ಧೂಮಾದಿ ಅಂತರಿಕ್ಷ ಲೋಕದಂತೆ, ಮಧ್ಯಮಾರ್ಗದಲ್ಲಿ ವಿಶ್ರಮಿ
ಕೊಳ್ಳಲು ಅಥವಾ ಕರ್ಮಕ್ಷಯ, ಉತ್ಕ್ರಾಂತಿ, ಮಾರ್ಗ, ಭೋಗ, ಭ
ದಿಂದ ನಾಲ್ಕು ವಿಧ ಮುಕ್ತಿಯು ಕ್ರಮವಾಗಿ ಪ್ರಾಪ್ತವಾದು (ಹೊಂದಲ್ಪ
ಬೇಕಾಗಿರುವು) ದರಿಂದ ಕರ್ಮಕ್ಷಯ (ಲಿಂಗ ಭಂಗ) ಮಾಡಿ "ಜೀವ
ಕ್ತ್ಯವಸ್ಥೆ"ಯನ್ನು ಕೊಡುತ್ತಾನೆ.

ಅನಂತರ ಬಹು ಜನ್ಮಗಳಲ್ಲಿ ಆರ್ಜಿಸಿ ಗಳಿಸಿದ ನಿಷ್ಕಾಮ ಭಗವದಚ
ನಾದಿಗಳಿಂದ ಬಂದ ಪುಣ್ಯ ಪರಿಪಾಕ ಕಾಲದಲ್ಲಿ ಪರಿಶುದ್ಧಾಂತಃಕರಣವು
ದ್ವೈವಿಕವಾದ ಭಗವದನುಗ್ರಹದಿಂದಲೇ ಲಬ್ಧವಾದ ಮಹತ್ಸೇವೆಯಿಂ
ಮಹಾತ್ಮರಾದ ಭಗವದ್ಭಕ್ತರ ಸೇವೆಯಿಂದ, ಚನ್ನಾ ಉತ್ಪನ್ನ (ಸಂಜಾತ
ವಾದ ವೈರಾಗ್ಯ, ಭಕ್ತಿ ಮೊದಲಾದ ಗುಣಗಳುಳ್ಳ ಜೀವಸಮೂಹಕ್ಕೆ ಸ್ವಯ
ಭಗವಂತನು ತಾನೇ ಗುರುಗಳು ಮೊದಲಾದವರಲ್ಲಿ ಸ್ಥಿತನಾಗಿ ನಿಂತು, ತ
ದ್ಯೋಗ್ಯತೆಯ (ಅವರವರ ಯೋಗ್ಯತಾ) ಪರಿಪಾಕ ಕಾಲಾನುಸಾರನಾ
ಅವರವರ ಯೋಗ್ಯತೆಯನ್ನು ವಿಚಾರದಂತೆ, ಮುಖ್ಯವಾದ ಮೋಕ್ಷಸಾಧನವನ
ಉಪದೇಶಿಸಿ, ಅದಕ್ಕಾಗಿ ಶ್ರವಣ, ಮನನ, ನಿದಿಧ್ಯಾಸನ ಭಕ್ತ್ಯಾದಿ ರೂ
ಸಾಧನಗಳನ್ನು ಜೀವನಸ್ವರೂಪಭೂತ ಶ್ರವಣಾದಿ ಸಾಧನ ವ್ಯಂಜಕಗಳಾ
ಸಾಧನಗಳನ್ನೂ, ಸಂಪಾದನೆ ಮಾಡಿಕೊಡುತ್ತಾನೆ. ಆ ಸಾಧನಗಳೂ ಸ

ಆಯಾ ನಾಮುಗಳೂ, ಅಲ್ಲಲ್ಲಿ ಸ್ಥಿತಳಾಗಿ ಆಯಾಯ ಎಂದರೆ ತತ್ತತ್ ಫಲ ಪ್ರದಗಳೂ ಸ್ವಸ್ವರೂಪಗಳೇ ಆಗಿವೆ. ಅವುಗಳನ್ನು ನಿಮಿತ್ತಮಾಡಿಕೊಂಡು ಅಪರೋಕ್ಷ ಪ್ರತಿಬಂಧಕವಾದ ಪ್ರಾರಬ್ಧಾವಸಾನದಲ್ಲಿ ಭಗವಂತನು ತನ್ನನ್ನು (ಸ್ವಾತ್ಮವನ್ನು) ಅಪರೋಕ್ಷತಯಾ ದರ್ಶನ ಮಾಡಿಸುತ್ತಾನೆ. ಭಕ್ತನ ಅಪ ರೋಕ್ಷ ವಿಷಯನಾಗಿ ಆತನ ಉಪಾಸನಾನುಗುಣವಾಗಿ ಕಾಣಿಸಿಕೊಳ್ಳಲ್ಪಡು ತ್ತಾನೆ. ಅದೂ ಸಹ ಪ್ರಥಮದಲ್ಲೇ ಅಲ್ಲವು. ಅದು ಹೇಗೆಂದರೆ—

ಮೊದಲು ಕರ್ಮಾಭಿಮಾನಿಯಾದ ಪುಷ್ಕರನಿಗೆ ಅಪರೋಕ್ಷವನ್ನು ಉತ್ಪಾದನೆ ಮಾಡಿ ಅನಂತರ ಅವನ ಪ್ರಸಾದದಿಂದ ಅವನಗಿಂತ ಉತ್ತಮ ನಾದ ದೇವನಿಗೆ ಅಪರೋಕ್ಷವನ್ನು ಉತ್ಪಾದನೆ ಮಾಡುತ್ತಾನೆ. ಹೀಗೆ ಅವನ ಪ್ರಸಾದದಿಂದ ಅವನಗಿಂತ ಉತ್ತಮನಿಗೆ ಎಂಬ ಈ ಪ್ರಕಾರವಾಗಿ ಈ ಕ್ರಮ ದಿಂದ ಸರ್ವರಲ್ಲೂ ಅವರನಾದ ಪುಷ್ಕರನನ್ನು ಪ್ರಾರಂಭಿಸಿ ಸರ್ವದೇವೋ ತ್ತಮನಾದ ಪ್ರಾಣನಾಯಕನ ಪರ್ಯಂತ ಅಪರೋಕ್ಷವನ್ನು ಉತ್ಪಾದನೆ ಮಾಡಿ ಸರ್ವರ ಅನುಜ್ಞೆಯಿಂದ ವಿಶೇಷವಾಗಿ ಪ್ರಾಣದೇವನ ಅನುಗ್ರಹ ದಿಂದ, ಅವನಿಗೆ ಪರಮಾತ್ಮಾ ಪರೋಕ್ಷವು ಉತ್ಪನ್ನವಾಗು (ಹುಟ್ಟು)ತ್ತದೆ. ಎಂದು ತಿಳಿಯುವುದು.

ಇಲ್ಲಿ ಸ್ವಯೋಗ್ಯ ಬಿಂಬದರ್ಶನವೇ ಸರ್ವರಿಗೂ ಮೋಕ್ಷ ಮುಖ ಸಾಧನವು. ಕದಾಚಿತ್ ಉತ್ಪನ್ನವಾಗಿ ಲಭಿಸುವ ರಾಮ ಕೃಷ್ಣಾದಿಗಳ ಅವತಾರ ದರ್ಶನವು ಬಿಂಬ (ರೂಪಿ) ದರ್ಶನಕ್ಕೆ ಪರಂಪರೆಯಿಂದ ಸಾಧನ ವಾಗುವುದೆಂದು ತಿಳಿಯುವುದು.

ಬಿಂಬದರ್ಶನವಾದರೋ ಈರೀತಿಯಾಗುವುದು. ಹೇಗೆ ಕನ್ನಡಿಯಲ್ಲಿ ತನ್ನ ಮುಖವು ತನಗೆ ಅಭಿಮುಖವಾಗಿ ಎದುರಿನಲ್ಲಿ ಕಾಣುತ್ತದೆಯೋ, ಇದ ರಂತೆಯೇ ಜೀವಸ್ವರೂಪಕ್ಕೆ ದರ್ಪಣದಂತೆ (ಜೀವಸ್ವರೂಪ ಕನ್ನಡಿಯಲ್ಲಿ) ಜೀವಸ್ವರೂಪದಲ್ಲಿ ಪಾದವನ್ನು ಪ್ರಾರಂಭಿಸಿ ತಲೆಯ (ಮಸ್ತಕದ) ವರೆವಿಗೆ ಪೂರ್ತಿ ಅವಯವಗಳಲ್ಲಿ ವ್ಯಾಪಿಸಿ ಇರುವ ಬಿಂಬರೂಪಿಯಾದ ಹರಿಯು ಕೇವಲ ಶುದ್ಧ ಜ್ಞಾನಾತ್ಮಕನಾದ ಜೀವನ ಜೀವಾಭಿನ್ನ ದರ್ಪಣದ (ಕನ್ನ ಡಿಯ)ಲ್ಲಿ ಅನಂತಗುಣ ಕ್ರಿಯಾತ್ಮಕಗಳನ್ನೂ ಜೀವೋಪಾಸಿತ ಗುಣಕ್ರಿಯಾ

ವಿಶಿಷ್ಟವಾದ ಸುಂದರ ವಿಗ್ರಹದ (ಮೂರ್ತಿಯು)ನ್ನು ಪ್ರಕಟಪಡಿಸಿ ಜೀವನ ಅಭಿಮುಖವಾಗಿ ತೋರಿಸುತ್ತಾನೆ. ಜೀವವಾದರೋ ಬಿಂಬಾಪರೋಕ್ಷಾನಂತರಲ್ಲಿ ಜೀವನ್ಮುಕ್ತ್ಯವಸ್ಥೆಯಲ್ಲಿ ಕದಾಚಿತ್, ಕ್ವಚಿತ್ ಮಾತ್ರವೇ ಅದನ್ನು ನೋಡುತ್ತಾನೆ. ಮುಕ್ತಿಯಲ್ಲಿಯಾದರೋ ನಿರಂತರ ಸ್ವರೂಪೇಂದ್ರಿಯ ಗೋಚರತಯಾ ಇರುವುದನ್ನು ಸರ್ವದಾ, ಯಾವಾಗಲೂ, ನೋಡುತ್ತಾನೆ,

ಹೀಗೆ ಬಿಂಬರೂಪಿಯಾದ ಜೀವನಿಗೆ ಅಪರೋಕ್ಷವನ್ನು ಉತ್ಪಾದನೆ ಮಾಡಿ ಪೂರ್ವೋತ್ತರ ಪಾಪಗಳಿಗೆ ಕ್ರಮವಾಗಿ ವಿಶ್ಲೇಷ ವಿನಾಶಗಳನ್ನುಂಟು ಮಾಡಿ ಎಂದರೆ ಪೂರ್ವದಲ್ಲಿ ಮಾಡಿದ್ದ ಸಂಚಿತ ಸಕಲ ಪಾಪಗಳನ್ನು ನಾಶ ಮಾಡಿ, ಉತ್ತರತ್ರ ಪಾಪಸಂಬಂಧವಿಲ್ಲದಂತೆ ಅದರ ಲೇಪವಾಗದಂತೆ ಮಾಡಿ ಭಾಗವತ ಧರ್ಮವೃದ್ಧಿ ಮಾಡಲು ಕೆಲವು ಕಾಲ ಜ್ಞಾನಿಯನ್ನಾಗಿ ಮಾಡಿಟ್ಟು, ಪ್ರಾರಬ್ಧ ಕರ್ಮಗಳನ್ನು ನಿಶ್ಶೇಷವಾಗಿ ಅನುಭವದಿಂದ ಹೋಗಲಾಡಿಸಿ, ಯೋಗ್ಯ ಜನರನ್ನು ಉದ್ಧರಿಸುತ್ತಾ ಕೆಲವುಕಾಲ ವಿಹಾರ ಮಾಡುತ್ತಾನೆ.

ಹೀಗೆ ಜೀವನ್ಮುಕ್ತ್ಯವಸ್ಥೆಯಲ್ಲಿ ವಿಹಾರ ಮಾಡಿ, ಅಲ್ಲಿ ಕರ್ಮಕ್ಷಯ ಲಕ್ಷಣವಾದ ಮುಕ್ತಿಯನ್ನು ಕೊಟ್ಟು ಸ್ವಕೀಯವಾದ ಅವಶೇಷಿತ (ಉಳಿದ) ಪ್ರಾರಬ್ಧ ಕರ್ಮವು ಮುಗಿಯಲು ಬ್ರಹ್ಮನಾಡಿಯಿಂದ "ಉತ್ಕ್ರಾಂತಿ" ಲಕ್ಷಣವೆಂಬ ಮುಕ್ತಿಯನ್ನು ಕೊಡಲು ಇಚ್ಛಿಸುತ್ತಾನೆ.

ಉತ್ಕ್ರಾಂತಿ

ಅನಂತ ಹೃದಯದಲ್ಲಿ ಸ್ಥಿತನಾಗಿರುವ ಹರಿಯು ತೇಜಸ್ಸಿನನಿಂದ ಹೃದಯಾಗ್ರದಲ್ಲಿ ಪ್ರಕಾಶವುಂಟಾಗುತ್ತದೆ. ಅನಂತರ ಆ ಪ್ರಕಾಶ ದಿಂದ ನಾಡೀದ್ವಾರವು ಪ್ರಕಾಶಿಸುತ್ತಿರಲು ಪೂರ್ವದಂತೆಯೇ ಪ್ರಾಣಾದಿ ಅಶೇಷ ಪರಿವಾರದಿಂದ ವೇಷ್ಟಿತನಾಗಿ ಕೂಡಿಕೊಂಡು, ಹೃದಯದಲ್ಲಿರುವ ಹರಿಯು ಜೀವನನ್ನು ತೆಗೆದುಕೊಂಡ ಆ ದ್ವಾರದಿಂದ ಬ್ರಹ್ಮನಾಡಿಯನ್ನು ಪ್ರವೇಶಿಸುತ್ತಾನೆ. ಅಲ್ಲಿ ಐವತ್ತೈದು (ಪಂಚ ಪಂಚಾಶತ್) ಸಂಖ್ಯಾಕ ಉತ್ತರಾಯಣ ಸಂಜ್ಞೆಯುಳ್ಳ ಆದಿತ್ಯನ ರಶ್ಮಿಗಳಿರುವುವು. ಆ ಪ್ರಕಾಶದಿಂದಲೇ ನಾಡಿಯ ಒಳಕ್ಕೆ ಹೋಗಿ ಊರ್ಧ್ವಕ್ಕೆ ಹೊರಟು ಮಸ್ತಕಸೀಮವ (ತಲೆಯ ನೆತ್ತಿಯ)ನ್ನು ಸೀಳಿಕೊಂಡು ಅಲ್ಲಿಂದ ಉತ್ಕ್ರಮಣವುಳ್ಳವನಾಗು

18584

ತ್ತಾನೆ. ಹೀಗೆ ಜೀವೋತ್ಕ್ರಾಂತಿ ಲಕ್ಷಣ ಮುಕ್ತಿಯನ್ನು ಕೊಟ್ಟು ಮಾರ್ಗ ಲಕ್ಷಣವಾದ ಮುಕ್ತಿಯನ್ನು ಕೊಡಲು ಅರ್ಚಿರಾದಿ ಮಾರ್ಗದಿಂದಲೇ ಹೊರಡುತ್ತಾನೆ. ಅದರ ಕ್ರಮವು ಹೀಗಿದೆ.

ಅರ್ಚಿರಾದಿ ಮಾರ್ಗ

ಮೊದಲು ಶರೀರದ ದೆಶೆಯಿಂದ ಉತ್ಕ್ರಾಂತನಾಗಿ ಅರ್ಚಿರ್ಲೋಕಕ್ಕೆ ಹೋಗುತ್ತಾನೆ, ಅರ್ಚಿಲೋಕದಲ್ಲಿ ಅರ್ಚಿರ್ನಾಮಕ ಅಗ್ನಿಸುತನು "ಅರ್ಚಿ" ಮತ್ತು "ಜ್ಯೋತಿ" ಎಂಬ ಎರಡು ರೂಪಗಳಿಂದ ಇದ್ದಾನೆ. ಅಲ್ಲಿ ಮೊದಲು ಅಗಿನಾಮಕ ರೂಪವನ್ನು ಹೊಂದಿ ಅನಂತರ ಜ್ಯೋತಿರ್ನಾಮಕ ದ್ವಿತೀಯ (ಎರಡನೇ) ರೂಪವನ್ನು ಹೊಂದುತ್ತಾನೆ. ಪ್ರತ್ಯುದ್ಗಮ, ಪ್ರಶ್ರವಣ, ಅಭಿವಾದನವೇ ಮೊದಲಾದವುಗಳಿಂದ ಭಗವತ್ಪೂಜೆಯು ಪೂರ್ವದಂತೆಯೇ ಸರ್ವ ಲೋಕಗಳಲ್ಲೂ ಆಗುವುವು. ಹೀಗೆ ಅರ್ಚಿರ್ಲೋಕದಲ್ಲಿ ಎರಡು ರೂಪಗಳಿಂದ ಸಂಸ್ಥಿತನಾದ ಅಗ್ನಿಯ ಮಗನಾದ ಅರ್ಚಿರ್ನಾಮಕ ದೇವನನ್ನು ಹೊಂದಿ ಅಲ್ಲಿಂದ ಆತಿವಾಹಿಕ ಲೋಕಕ್ಕೆ ಹೋಗುತ್ತಾನೆ.

ಅಲ್ಲಿ ಆತಿವಾಹಿಕ ಲೋಕನಾಮಕ ವಾಯು ಪುತ್ರನನ್ನು ಹೊಂದಿ ಅಲ್ಲಿಂದ ಅಹರಭಿಮಾನಿ ಲೋಕಕ್ಕೂ ಅನಂತರ ಶುಕ್ಲಪಕ್ಷಾಭಿಮಾನಿ ಲೋಕವನ್ನೂ ಅಲ್ಲಿಂದ ಉತ್ತರಾಯಣಾಭಿಮಾನಿ ಲೋಕ ಮಾಸಾಭಿಮಾನಿ ಅನಂತರ ಸಂವತ್ಸರಾಭಿಮಾನಿ ಲೋಕ, ಅನಂತರ ತಟಿತ್ (ವಿದ್ಯುದ)ಭಿಮಾನಿ ಲೋಕ ಅಲ್ಲಿಂದಾಚೆ ವರುಣಲೋಕ, ನಂತರ ಪ್ರಜಾಪತಿ ಲೋಕ, ಅಲ್ಲಿಂದ ಸೂರ್ಯಲೋಕಕ್ಕೂ ಅಲ್ಲಿಂದ ಸೋಮಲೋಕಕ್ಕೂ ಅಲ್ಲಿಂದ ಮೇಲ್ಪಟ್ಟ ಸೋಮಲೋಕಕ್ಕೂ ಅನಂತರ ವೈಶ್ವಾನರ ಲೋಕಕ್ಕೂ ಅನಂತರ ಇಂದ್ರ ಲೋಕಕ್ಕೂ ಅಲ್ಲಿಂದ ಧೃವಲೋಕಕ್ಕೂ ಅನಂತರ ಭಾರತೀ ಲೋಕಕ್ಕೂ, ಹೋಗಿ ಅನಂತರ ಕೊನೆಗೆ ವಾಯುಲೋಕಕ್ಕೆ ಹೋಗಿ ಸೇರುತ್ತಾನೆ.

ಅಲ್ಲಿ ವಾಯುದೇವನ ಪ್ರಸಾದದಿಂದ ಭಗವಧ್ಯಾನವೇ ಮೊದಲಾದ ಸುಖ ಸಂಭೃತ (ಪೂರ್ಣ)ವಾದ ಮನಸ್ಸುಳ್ಳವನಾಗಿ ಜೀವನು ಅಲ್ಲಿ ಇರುತ್ತಾನೆ. ಅನಂತರ "ಪರಾಂತ" ವೆನಿಸಿದ ಚತುರ್ಮುಖ ಬ್ರಹ್ಮನ

ನೂರು ವರ್ಷ ಆಯುಷ್ಯವು ಮುಗಿಯುತ್ತಿರಲು ಚತುರ್ಮುಖನ ಲಯವು ಪ್ರಾಪ್ತವಾಗಲು ಆಗ ಅಶೇಷ ತತ್ವಗಳ ಲಯವು ಆಗುತ್ತದೆ.

ಅದು (ಆ ತತ್ವಗಳ ಲಯವು) ಹೇಗೆಂದರೆ —

ಶರೀರವು ಅಗ್ನಿಯಲ್ಲಿ ಪ್ರಲೀನವಾಗುತ್ತದೆ. ಅನ್ನವು ಧಾನ್ಯಾದಿಗಳಲ್ಲಿ ಧಾನವು ಭೂಮಿಯಲ್ಲಿ ಭೂಮಿಯು ಗಂಧ ತನ್ಮಾತ್ರಾದಲ್ಲಿ ಮಾತ್ರದಿಂದ ಕೂಡಿದ ಭೂಮಿಯು ಆಪಗಳಲ್ಲಿ ಆಪ (ಉದಕವು) ರಸದಲ್ಲಿ ರಸದಿಂದ ಕೂಡಿದ ಆಪವು ತೇಜಸ್ಸಿನಲ್ಲಿ ತೇಜಸ್ಸು ರೂಪದಲ್ಲಿ ರೂಪ ಸಹಿತವಾದ ತೇಜಸ್ಸು ವಾಯುವಿನಲ್ಲಿ ವಾಯುವು ಸ್ಪರ್ಶದಲ್ಲಿ ಸ್ಪರ್ಶದಿಂದ ಕೂಡಿದ ವಾಯುವು ಆಕಾಶದಲ್ಲಿ, ಆಕಾಶವು ಶಬ್ದದಲ್ಲಿ, ಶಬ್ದದಿಂದ ಕೂಡಿದ ಆಕಾಶವು ಇಂದ್ರಿಯರೂಪ ಮನಸ್ಸಿನಲ್ಲಿ, ಮನಸ್ಸು ಇಂದ್ರಿಯಗಳೆಲ್ಲವೂ ಮನಸ್ತತ್ವದಲ್ಲೂ, ಮನಸ್ತತ್ವವು ಬುದ್ಧಿ ತತ್ವದಲ್ಲೂ, ಬುದ್ಧಿ ತತ್ವವು ಅಹಂಕಾರತತ್ವದಲ್ಲೂ, ಅಹಂಕಾರ ತತ್ವವು ಮಹತ್ತತ್ವದಲ್ಲೂ, ಮಹತ್ತತ್ವವು ಗುಣತ್ರಯದಲ್ಲೂ, ಗುಣತ್ರಯವು ಮೂಲ ಪ್ರಕೃತಿಯಲ್ಲೂ ಲೀನವಾಗುತ್ತದೆ.

ಆಗ ಬ್ರಹ್ಮಾಂಡಾವರಣಗಳ ಲಯವು ವ್ಯುತ್ಕ್ರಮದಿಂದ ಆಗುವುವು. ಹೀಗೆ ತತ್ವಗಳ ಲಯಾನಂತರದಲ್ಲಿ ಅಶೇಷ ದೇವತೆಗಳು ತಮ್ಮ ತಮ್ಮ ಉತ್ತಮ ದೇವತೆಗಳಲ್ಲಿ ಪ್ರವೇಶ ಮಾಡುವುದರಿಂದ ಶರೀರ ಲಯವಾಗುತ್ತದೆ. ಇಲ್ಲಿ (ಈ ಲಯ ವಿಷಯದಲ್ಲಿ) ಎರಡು ಮಾರ್ಗಗಳಿವೆ.

ಸುರಾನುಗರಿ (ದೇವತಾನುಯಾಯಿಗಳಿ)ಗೆ ಕುಬೇರನಲ್ಲೂ, ಕುಬೇರನಿಗೂ, ವರುಣನಿಗೂ ಸೋಮನಲ್ಲೂ, ಸೋಮನಿಗೂ ವಿಷ್ವಕ್‌ಸೇನನೇ ಮೊದಲಾದ ಭಗವತ್ ಪಾರ್ಷದವರಿಗೂ ಅನಿರುದ್ಧನಲ್ಲೂ, ಅನಿರುದ್ಧ ಮತ್ತು ಸನತ್ಕುಮಾರನ್ನು ಬಿಟ್ಟು ಉಳಿದ ಸನಕಾದಿಗಳಿಗೆ ಕಾಮನಲ್ಲೂ, ಕಾಮನಿಗೆ ವಾರುಣಿಯಲ್ಲೂ, ವಾರುಣಿಗೆ ಶೇಷನಲ್ಲಿ ಪ್ರವೇಶ ಮೂಲಕ ಲಯವು. ಹೀಗೆ ಹೀಗೆ **ಇದು ಶೇಷಮಾರ್ಗವು**.

ಉಕ್ತರಾದವರಿಂದ ವ್ಯತಿರಿಕ್ತವಾದ ಇತರ ದೇವತೆಗಳಿಗೆ ಅಗ್ನಿಯಲ್ಲೂ. ಅಗ್ನಿಗೆ ಸೂರ್ಯನಲ್ಲೂ, ಸೂರ್ಯನಿಗೂ, ಆಕಾಶಾಭಿಮಾನಿಗೂ, ಪೃಥಿವಿಗೂ ಗುರುವಿನಲ್ಲೂ, ಭೃಗು ಮೊದಲಾದವರಿಗೆ ದಕ್ಷನಲ್ಲೂ, ವರ್ಣಾಶ್ರಮಾಚಾರ

ತರಾದ ಮನುಷ್ಯರಿಗೂ ಪಿತೃಗಳಿಗೂ, ನಿಋತಿಗೂ ಧರ್ಮನಲ್ಲೂ, ಧರ್ಮ
ಗೂ, ವೈವಸ್ವತನೇ ಮೊದಲಾದ ಮನುಗಳಿಗೂ, ಪ್ರಿಯವ್ರತಾದಿ ರಾಜ
ಗೂ ಸ್ವಾಯಂಭುವ ಮನುವಿನಲ್ಲೂ, ಗುರು ದಕ್ಷಪ್ರಜೇಶ್ವರ ಸ್ವಾಯಂಭುವ
ನು ಮತ್ತು ಮರುದ್ಗಣಗಳಿಗೆ ಶಕ್ರ (ಇಂದ್ರ)ನಲ್ಲೂ, ಶಕ್ರನಿಗೆ ಸೌಪರ್ಣೀ
ದೇವಿಯಲ್ಲೂ, ಸೌಪರ್ಣಿಗೆ ಸುಪರ್ಣ (ಗರುಡ)ನಲ್ಲೂ ಲಯವೆಂದು ತಿಳಿಯು
ವುದು. ಹೀಗೆ **ಇದು ಗರುಡಮಾರ್ಗವು.**

ಅನಂತರ ಆ ಶೇಷ ಸುಪರ್ಣ (ಗರುಡ)ರಿಗೆ ವಾಣಿಯಲ್ಲೂ, ವಾಣೀದೇ
ಗೆ ಚತುರ್ಮುಖನಲ್ಲೂ, ಚತುರ್ಮುಖನಿಗೆ ಪರಬ್ರಹ್ಮನಾದ ವಾಸುದೇವ
ನಲ್ಲೂ ಪ್ರವೇಶ (ದ್ವಾರಾ ಲಯ)ವು, ಎಂದು ಉಕ್ತವಾಗಿದೆ.

ಅನಂತರ ವಾಯುಲೋಕದಲ್ಲಿ ಬಹುಕಾಲವಿರುವ ಜೀವನು ಚತು
ರ್ಮುಖನ ಲಯಕಾಲ ಪ್ರಾಪ್ತವಾಗಲು ಅವನೊಡನೆ ವೈಕುಂಠಲೋಕಕ್ಕೆ
ಹೋಗಿ, ಅದಕ್ಕೆ ಪರಿಖಾ (ಕಂದಕದಂತಿರುವ) ಭೂತ ವಿರಜಾನದಿಯ ಸ್ನಾನ
ದಿಂದ ಲಿಂಗಶರೀರದ (ಭಗ್ನ)ನಾಶವಾಗಿ, ಪುಷ್ಕರನನ್ನು ಪ್ರಾರಂಭಿಸಿ ಪ್ರಾಣಾಂತ
ರ್ವದೇವತೆಗಳ ದ್ವಾರಾ ಭಗವಂತನನ್ನು ಪ್ರವೇಶಿಸಿ ಪ್ರಲಯ (ಅವಸಾನದ)
ಮುಗಿಯುವ ವರೆಗೂ ಸ್ಥಿತನಾಗಿರುತ್ತಾನೆ.

ಭಗವಂತನಾದರೋ ವಾಸುದೇವಾದಿ ಚತುರ್ಮೂರ್ತಿಗಳೊಡನೆ ಅಶೇಷ
ಜೀವರನ್ನೂ ತನ್ನ ಉದರದಲ್ಲಿಟ್ಟುಕೊಂಡು ರಮಾದೇವಿಯೊಡನೆ ಪ್ರಲ
ಯೋದಕದಲ್ಲಿ ವಿಹಾರ ಮಾಡುತ್ತಾನೆ.

ಆ ಪ್ರಲಯದ ಅವಸಾನದಲ್ಲಿ ಸೃಷ್ಟಿಮಾಡಬೇಕೆಂಬ ಇಚ್ಛೆಯಿಂದ
ಪೂರ್ವೋಕ್ತ ರೀತಿಯಿಂದ ಮಹದಾದಿ ತತ್ವಗಳನ್ನೂ, ಬ್ರಹ್ಮಾಂಡವನ್ನೂ
ದರೊಳಗೆ ಚತುರ್ದಶ (ಹದಿನಾಲ್ಕು) ಲೋಕಗಳನ್ನೂ ಸೃಷ್ಟಿಮಾಡಿ, ಶ್ವೇತ
ದ್ವೀಪ. ಅನಂತಾಸನ, ವೈಕುಂಠಗಳೆಂಬ ಲೋಕಗಳಲ್ಲಿ ಯಥಾ ಪೂರ್ವಂ ಅಭಿ
ವ್ಯಕ್ತಪಾದ, ಯಾವ ಅವ್ಯವಹಿತ ಪೂರ್ವಕಲ್ಪದಲ್ಲಿ ಸಮೀಪದಲ್ಲಿರುವ ಈ
ಂದಿನ ಕಲ್ಪದಲ್ಲಿ ಲಿಂಗ ಶರೀರ ಭಂಗವಾಗಿ ಸಮಸ್ತಾನಿಷ್ಟ ನಿವೃತ್ತಿ ಪಡೆದ
ದೋಷದೂರರಾದ ಯಾವ ಜೀವರಿದ್ದಾರೆಯೋ ಅವರ (ಸ್ವ) ಸ್ವರೂಪಭೂತ
ಪರಮಾನಂದದ ಅನವರತ ಎಡೆಬಿಡದೆ ಸದಾ ಭೋಗಾನುಭವ ಮಾಡಲು

ಅನುಜ್ಞೆಯನ್ನು ಕೊಡುತ್ತಾನೆ. ಅನಂತರ ಭಗವದನುಜ್ಞೆಯನ್ನು ಪಡೆದ ನಂತರವೇ **ಇಚ್ಛಾವರಣ** (ಅಪಗತೇಚ್ಛಾವರಣರಾಗಿ) ರಹಿತರಾಗಿ ಜೀವರು ಶ್ವೇತದ್ವೀಪಕ್ಕೆ ಹೋಗಿ, ಅಲ್ಲಿರುವ ಭಗವಂತನನ್ನು ನೋಡಿ, ದರ್ಶನ ಮಾಡಿ ಅವನಿಂದ ಅನುಜ್ಞೆಯನ್ನು ಪಡೆದು ತಮ್ಮ ತಮ್ಮ ಯೋಗ್ಯತಾನುಸಾರವಾಗಿ ಪೃಥ್ವಿಯಲ್ಲಿ, ಅಂತರಿಕ್ಷದಲ್ಲಿ, ಸ್ವರ್ಗದಲ್ಲಿ ಮಹದಾದಿ ಲೋಕಗಳಲ್ಲಿ, ಸತ್ಯ ಲೋಕದಲ್ಲಿ ವೈಕುಂಠಾದಿಗಳಲ್ಲಿ **ಆನಂದಗಳನ್ನು** ಅನುಭವಿಸುತ್ತಾ ಸ್ಥಿತರಾಗಿ ರುವರು.

ಹೀಗೆ ಈ ರೀತಿಯಾದ ಭಗವದ್‌ಜ್ಞಾನ ಭೋಗಗಳಿಂದ ಸಮಸ್ತ ಕರ್ಮ ನಿವೃತ್ತಿಯುಳ್ಳವರಾಗಿ, ಸ್ವೋತ್ತಮರ ಪ್ರವೇಶದಿಂದಲೋ ಅಥವಾ ಬ್ರಹ್ಮ ನಾಡಿಯಿಂದ ಉತ್ಕ್ರಾಂತವಾಗುವುದರಿಂದಲೋ, ಪರಿತ್ಯಕ್ತ ದೇಹವುಳ್ಳವರಾಗಿ ತಮಗೆ ಉಚಿತವಾದ ಅರ್ಚಿರಾದಿ ಮಾರ್ಗದಿಂದ ವೈಕುಂಠವಾಸಿಯಾದ ಭಗ ವಂತನನ್ನು ಹಿರಣ್ಯಗರ್ಭ (ಚತುರ್ಮುಖ ಬ್ರಹ್ಮ)ನ ಜೊತೆಯಲ್ಲಿ ಲಿಂಗ ಶರೀರ ಭಂಗವುಳ್ಳವರಾಗಿ ಪ್ರಕೃತಿ ಬಂಧನಾಶವನ್ನು ಪಡೆದು ಸಕಲಾನಿಷ್ಟ ನಿವೃತ್ತಿಪೂರ್ವಕವಾಗಿ ಸಮ್ಯಕ್ ಸ್ವಯೋಗ್ಯ ಸಂಪೂರ್ಣಾನಂದಾದಿ ಗುಣಗ ಳುಳ್ಳವರಾಗಿ ಭಗವಂತರ ಸಮೀಪದಲ್ಲೇ ಆತನನ್ನು ಉಪಾಸನೆ ಮಾಡುತ್ತಾ ಸ್ವಸ್ವರೂಪದಿಂದ ಲೀಲೆಯಿಂದ ಸ್ವೀಕರಿಸುವ ವಿಗ್ರಹ (ದೇಹ)ಗಳುಳ್ಳವರಾಗಿ ಸಂಕಲ್ಪಮಾತ್ರ ಸಾಧ್ಯಗಳಾದ ದಿವ್ಯ ಭೋಗಗಳನ್ನು ತಾರತಮ್ಯದಿಂದ ಅನು ಭವಿಸುತ್ತಾ ಪುನಃ ಎಂದೆಂದಿಗೂ ಹಿಂತಿರುಗಿ ಸಂಸಾರಕ್ಕೆ ಬರದಂತೆ ಶಾಶ್ವತ ಸುಖಗಳನ್ನು ಅನುಭವಿಸುತ್ತಾ, ರಮಣಮಾಡುತ್ತಿರುವರು.

ಇತ್ಯಶೇಷಮತಿ ಮಂಗಳಂ

ಸರ್ವೈರ್ವಿಚಿತ್ರೈ ರಥ ಚೈಕಪೂರ್ವೈ ರ್ವಿಚಿತ್ರಕಾರ್ಯೈಃ ಶತಕೋಟಿಸಂಖ್ಯೈಃ ॥
ವಿಹಾರಕರ್ತ್ರೇ ಚ ಗತಿಪ್ರದಾತ್ರೇ ಸದಾ ಜನಾನಾಂ ಹರಯೇ ನಮೋಽಸ್ತು ॥

ಇತಿ ಶಂ

ಶ್ರೀ (ಚೀಮ) ಮಾನಹಳ್ಳಿ ಕೃಷ್ಣಾರ್ಯರ್ಯ ಹೃದಬ್ಜಾಮಲಮಂದಿರಃ
ಹಯಗ್ರೀವೋ ರಮಾಕಾಂತಃ ಪ್ರಿಯತಾಂ ಸೇವಯಾನಯಾ ॥

ಅರ್ಚಿರಾದಿ ಮಾರ್ಗ (ದೇವತೆಗಳು, ಜ್ಞಾನಿಗಳು) ಹೋಗುವ ಮಾರ್ಗ

೧. ಅರ್ಚಿ (ಅರ್ಚಿ ಅಗ್ನಿ ಜ್ಯೋತಿಃ)
೨. ಆತಿವಾಹಿಕ
೩. ಅಹಃ
೪. ಆಪೂರ್ಯಮಾಣ (ಶುಕ್ಲ) ಪಕ್ಷ
೫. ಮಾಸ
೬. ಸಂವತ್ಸರ
೭. ತಟಿ (ವಿದ್ಯು)ತ್
೮. ವರುಣ
೯. ಪ್ರಜಾಪತಿ
೧೦. ಸೂರ್ಯ
೧೧. ಸೋಮ
೧೨. ವೈಶ್ವಾನರ
೧೩. ಇಂದ್ರ
೧೪. ಧ್ರುವ
೧೫. ಭಾರತೀ (ದೈವದಿವೆ)
೧೬. ವಾಯು
೧೭. ಬ್ರಹ್ಮನನ್ನು

೧. ಪ್ರತೀಕಾಲಂಬನರು ಕಾರ್ಯ ಬ್ರಹ್ಮನನ್ನೂ,
೨. ಅಪ್ರತೀಕಾಲಂಬನರು ಪರಬ್ರಹ್ಮನನ್ನೂ ಹೊಂದುತ್ತಾರೆ.

ತತ್ವಗಳ ಲಯ

ಶರೀರವು	....	ಅಗ್ನಿಯಲ್ಲಿ
ಅನ್ನವು	....	ಧಾನಾಗಳಲ್ಲಿ
ಧಾನಾ	....	ಭೂಮಿ
ಭೂಮಿ	....	ಗಂಧತನ್ಮಾತ್ರ
ಗಂಧತನ್ಮಾತ್ರ ಭೂಮಿಯು	....	ಆಪಗಳಲ್ಲಿ
ಆಪಃ	....	ರಸದಲ್ಲಿ
ರಸ ಮತ್ತು ಆಪಗಳು	....	ತೇಜಸ್ಸಿನಲ್ಲ
ತೇಜಸ್ಸು	....	ರೂಪದಲ್ಲಿ
ರೂಪಸಹಿತ ತೇಜಸ್ಸು	....	ವಾಯುವಿನಲ್ಲಿ
ವಾಯುವು	....	ಸ್ಪರ್ಶದಲ್ಲಿ
ಸ್ಪರ್ಶಸಹಿತ ವಾಯು	....	ಆಕಾಶದಲ್ಲಿ
ಆಕಾಶ	....	ಶಬ್ದದಲ್ಲಿ

ಶಬ್ದ+ಆಕಾಶ .... (ಇಂದ್ರಿಯ) ಮನಸ್ಸು
ಮನಸ್ಸು ಇಂದ್ರಿಯಗಳು .... ಮನಸ್ತತ್ವದಲ್ಲಿ
ಮನಸ್ತತ್ವ .... ಬುದ್ಧಿಯಲ್ಲಿ
ಬುದ್ಧಿತತ್ವ .... ಅಹಂಕಾರತತ್ವದಲ್ಲಿ
ಅಹಂಕಾರತತ್ವ .... ಮಹತ್ತತ್ವದಲ್ಲಿ
ಮಹತ್ತತ್ವವು .... ಗುಣತ್ರಯ (ಸಾತ್ವಿಕ, ರಾಜಸ, ತಾಮಸ) ಗಳಲ್ಲಿ
ಗುಣತ್ರಯವು .... ಮೂಲ ಪ್ರಕೃತಿಯಲ್ಲಿ ಲಯವು

ಬ್ರಹ್ಮಾಂಡಾವರಣಲಯವು ವ್ಯುತ್ಕ್ರಮದಿಂದ

✣✣✣✣✣✣✣✣

ದೇವತೆಗಳು ತಮಗಿಂತ ಉತ್ತಮ ದೇವತೆಗಳ ಪ್ರವೇಶದಿಂದ ಅವರ ಶರೀರ ಲಯವು

೧. ಶೇಷಮಾರ್ಗ ಮತ್ತು ೨. ಗರುಡಮಾರ್ಗವೆಂದು ಎರಡು ವಿಧವು.

ಸುರಾನುಗರು .... ಕುಬೇರನಲ್ಲಿ
ಕುಬೇರ ಮತು ವರುಣ .... ಸೋಮನಲ್ಲಿ
ಸೋಮ+ವಿಷ್ವಕ್ಸೇನಾದಿ ಪಾರ್ಷದರಿಗೆ .... ಅನಿರುದ್ಧನಲ್ಲಿ
ಅನಿರುದ್ಧನಿಗೆ ಮತ್ತು ಸನಕಾದಿಗಳಿಗೆ (ಸನತ್ಕುಮಾರರನ್ನು ಬಿಟು) .... ಕಾಮನಲ್ಲಿ
ಇಂದ್ರ ಕಾಮರಿಗೆ .... ವಾರುಣಿಯಲ್ಲಿ
ವಾರುಣಿಗೆ .... ಶೇಷನಲ್ಲಿ ಲಯವು

ಇದು ಶೇಷಮಾರ್ಗವು

ಇತರ ದೇವತೆಗಳಿಗೆ .... ಅಗ್ನಿಯಲ್ಲಿ
ಅಗ್ನಿಗೆ ... ಸೂರ್ಯನಲ್ಲಿ

ಸೂರ್ಯನಿಗೆ+ಆಕಾಶಾಭಿಮಾನಿ ಮತ್ತು
ಪೃಥ್ವಿಗೆ .... ಗುರುವಿನಲ್ಲಿ
ಭೃಗು ಮೊದಲಾದವರಿಗೆ .... ದಕ್ಷನಲ್ಲಿ
ವರ್ಣಾಶ್ರಮಾಚಾರರತರು
ಮನುಷ್ಯರು ಪಿತೃಗಳಿಗೆ .... ನಿಋತಿಯಲ್ಲಿ ಗಂಧರ್ವನಲ್ಲಿ
ಧರ್ಮ ವೈವಶ್ವತ ಮನುಮೊದ
ಲಾದ ಮನುಗಳು, ಪ್ರಿಯವ್ರತಾದಿ ರಾಜರಿಗೆ ಸ್ವಾಯಂಭುಮನುವಿನಲ್ಲಿ
ಗುರು, ದಕ್ಷ ಪ್ರಜೇಶ್ವರ, ಸ್ವಾಯಂ
ಭುವ ಮನು ಮರುದ್ಗಣರಿಗೆ .... ಇಂದ್ರನಲ್ಲಿ
ಇಂದ್ರನಿಗೆ .... ಸೌಪರ್ಣಿಯಲ್ಲಿ
ಸೌಪರ್ಣಿಗೆ .... (ಸುವರ್ಣ)ಗರುಡನಲ್ಲಿ ಲಯವು

ಇದು ಗರುಡಮಾರ್ಗವು

ಶೇಷ ಮತ್ತು ಗರುಡರಿಗೆ .... ವಾಣೀದೇವಿಯಲ್ಲಿ
ವಾಣೀದೇವಿಗೆ .... ಚತುರ್ಮುಖ ಬ್ರಹ್ಮನಲ್ಲಿ
ಚತುರ್ಮುಖನಿಗೆ .... ಪರಬ್ರಹ್ಮ(ವಾಸುದೇವ)ನಲ್ಲಿ

ವಾಯುಲೋಕದಲ್ಲಿರುವ ಜೀವರು, ಚತುರ್ಮುಖನ ಲಯ ಕಾಲಕ್ಕೆ ವೈಕುಂಠಲೋಕಗಮನ, ವಿರಜಾಸ್ನಾನ, ಲಿಂಗಭಂಗ, ಪುಷ್ಕರಾದಿ, ಪ್ರಾಣಾಂತ, ಸರ್ವದೇವತೆಗಳು, ಭಗವಂತನಲ್ಲಿ ಪ್ರವೇಶ ಮಾಡುತ್ತಾನೆ

ಮಹಾ ಪ್ರಳಯದಲ್ಲಿ ಭಗವಂತನು ವಾಸುದೇವಾದಿ ಚತುರ್ಮೂರ್ತಿಗಳೊಡನೆ ಅಶೇಷ ಜೀವರನ್ನು ತನ್ನ ಉದರದಲ್ಲಿಟ್ಟು ರಮಾದೇವಿಯರೊಡನೆ ಪ್ರಳಯೋದಕದಲ್ಲಿ ವಿಹಾರ ಮಾಡುತ್ತಾನೆ.

ಆಯುರ್ಯಜ್ಞವು ಪಥಕ VIII

(ಮೋಕ್ಷಾಪೇಕ್ಷು)ಗಳಿಗೆ ಯೋಗ್ಯವಾದ ಅಪರೋಕ್ಷಾಂತರಂಗ ಸಾಧನವಾದುದು ಗೋಪ್ಯತಮವಾದ ಈ ಆಯುರ್ಯಜ್ಞವು ಇದನ್ನು ನಿರಂತರವೂ ಪರಮಾದರದಿಂದ ಅನುಸಂಧಾನ ಮಾಡಬೇಕು. ನಾನೇ ವಿಷ್ಣುಪೂಜಾತ್ಮಕ ಯಜ್ಞರೂಪನು. ಯಜ್ಞಾರಂಭಕ್ಕೆ ಪೂರ್ವದಲ್ಲಿ ನಾರಾಯಣನು ದೇವತೆಯು. ಪ್ರಸಿದ್ಧ ಯಜ್ಞದಲ್ಲಿ ಸವನತ್ರಯಗಳಿವೆ. ಅದರಂತೆ ಇಲ್ಲಿಯೂ ಸಹ ಮೂರು ಸವನಗಳಿಗೆ ಅದು ಹೇಗೆಂದರೆ —

ಪುರುಷನಿಗೆ ಶತಾಯು (ನೂರು ವರ್ಷ ಆಯುಸ್ಸು) ಕೆಲವು ಪಳಗಳ ಮೇಲೆ ಸ್ವಲ್ಪ ಅಧಿಕ ಇಪ್ಪತ್ತು ಘಳಿಗೆಗಳಕಿಂತ ಅಧಿಕ ಹತ್ತು ದಿನಾಧಿಕ ಹತ್ತು ತಿಂಗಳುಗಳಿಂದ ಕೂಡಿದ ವರ್ಷವಿವಿಕ್ಷೆಯಿಂದ ಒಂದೂನೂರು ಹದಿನಾರು ವರ್ಷಗಳಾಗುವುವು.

ಇದನ್ನು ಮೂರು ಭಾಗ ಮಾಡಿದರೆ ಮೊದಲನೆಯ (ಪೂರ್ವ) ಇಪ್ಪತು ನಾಲ್ಕು ವರ್ಷದ್ದು ಒಂದು ಭಾಗ ಅದರಾಚೆ ನಲವತ್ತನಾಲ್ಕು ವರ್ಷಾತ್ಮಕವಾದುದು, ಎರಡನೆಯ ಭಾಗ. ಅದಕ್ಕೆ ಆಚೆ ನಲವತ್ತೆಂಟು ವರ್ಷಗಳು ಮೂರನೆಯದು. (ಹೀಗೆ ೨೪+೪೪+೪೮=೧೧೬ ವರ್ಷಗಳಾಗುವುವು.)

ಪ್ರಸಿದ್ಧ ಯಜ್ಞವು ಪ್ರಾತಃ ಸವನ, ಮಾಧ್ಯಂದಿನ ಸವನ, ಮೂರನೆಯದು ಸಾಯಂ ಸವನವೆಂದು ಸವನತ್ರಯಾತ್ಮಕವಾದದು. ಅಲ್ಲಿ ಪ್ರಾತಃ ಸವನವು ೨೪ ಅಕ್ಷರಗಳಿಂದ ಕೂಡಿದ ಗಾಯತ್ರೀ ಛಂದಸ್ಸಿನ ಮಂತ್ರಗಳಿಂದ ಕೂಡಿದುದು. ಇಲ್ಲಿಯೂ ಸಹ ೨೪ ವರ್ಷಗಳಿಂದ ಕೂಡಿದ ಕಾಲರೂಪ ಪ್ರಾತಃ ಸವನವು. ಈ ಪ್ರಾತಃಸವನಕ್ಕೆ ವಾಸುದೇವನು ದೇವತೆಯು.

ಪ್ರಸಿದ್ಧ ಯಜ್ಞದಲ್ಲಿಯೂ ಪ್ರಾತಃ ಸವನಕ್ಕೆ ವಾಸುದೇವನೂ, ಮಾಧ್ಯಂದಿನಕ್ಕೆ ರುದ್ರರೂ, ಮೂರನೇ ಸಾಯಂ ಸವನಕ್ಕೆ ಆದಿತ್ಯರೂ ದೇವತೆಗಳು.

ಈ ಆಯುರ್ಯಜ್ಞದಲ್ಲಾದರೋ ತತ್ವೇಶರೇ ಸುಖವಾಗಿ ಯೋಗ್ಯ ಪ್ರಾಣಿ ಸಮೂಹವನ್ನು ವಾಸವಾಡಿಸ ತಕ್ಕಾರಾದುದರಿಂದ "ವಸುಗಳೆಂಬ" ಹೆಸರಿನಿಂದ ಪ್ರಾತಃ ಸವನದ ದೇವತೆಗಳಾಗಿದ್ದಾರೆ.

ಪ್ರಸಿದ್ಧ ಮಾಧ್ಯಂದಿನ (ಸವನ)ವು ನಲವತ್ತು ನಾಲ್ಕು ಅಕ್ಷರಾತ್ಮಕ ತ್ರಿಷ್ಟುಪ್ ಎಂಬ ಛಂದಸ್ಸಿನ ಮಂತ್ರಾತ್ಮಕವಾದುದು.

ಈ ಆಯುರ್ಯಜ್ಞವೂ ೪೪ ವರ್ಷಾತ್ಮಕ ಕಾಲದಿಂದ ಕೂಡಿ "ಮಾಧ್ಯಂದಿನ" ಸವನಾತ್ಮಕವಾಗಿದೆ. ಇದಕ್ಕೆ ಸಂಕರ್ಷಣನು ದೇವತೆಯು. ಇಲ್ಲಿಯೂ ತತ್ವೇಶರೇ ಯೋಗ್ಯ ಜನರನ್ನು ರೋದಯಂತೀತ (ಅಳಿಸುತ್ತಾರಾಗಿ) ರುದ್ರನಾಮಕರು ದೇವತೆಗಳು.

ಪ್ರಸಿದ್ಧವಾದ ತೃತೀಯ (ಮೂರನೇ ಸಾಯಂ) ಸವನವು ನಲವತ್ತೆಂಟು (೪೮) ಅಕ್ಷರಗಳಿಂದ ಕೂಡಿದ ಜಗತೀ ಛಂದಸ್ಸಿನ ಮಂತ್ರಗಳಿಂದ ಕೂಡಿದುದು.

ಇದೂ ಸಹ ೪೮ ವರ್ಷಾತ್ಮಕ ಕಾಲದಿಂದ ಕೂಡಿದ ಮೂರನೆಯ (ಸಾಯಂ) ಸವನವೆನಿಸಿರುವುದು. ಅದಕ್ಕೆ ಪ್ರದ್ಯುಮ್ನನು ದೇವತೆಯು. ತತ್ವೇಶರೇ (ಆದಾನಾದಿ ಕಾರಯಿತೃತ್ವಾತ್) ಮಾಡಿಸುವುದರಿಂದ ಆದಿತ್ಯನಾಮಕರು ದೇವತೆಗಳು.

ಪ್ರಸಿದ್ಧ ಸವನಗಳಲ್ಲಿ ವಸು ಮೊದಲಾದವರು ಯಜಮಾನನಿಂದ ಪ್ರಾರ್ಥಿತರಾಗಿ ತಮ್ಮಿಂದ ಅಧಿಷ್ಠಿತ ಕಾಲದಲ್ಲಿ ಬಂದ ವಿಘ್ನಗಳನ್ನು ನಿವಾರಣೆ ಮಾಡಿ ಯಜ್ಞವನ್ನು ಸಮಾಪನೆ ಮಾಡುತ್ತಾರೆ.

ಅಲ್ಲಿಯೂ ಸಹ ಪ್ರಾತಃ ಸವನದಲ್ಲಿ "ಭೋ ವಸುಗಳಿರಾ, ವಿಷ್ಣುಪೂಜಾತ್ಮಕ ಯಜ್ಞಸ್ವರೂಪನಾದ ನನಗೆ ಜ್ವರಾದ್ಯುಪದ್ರವದಿಂದ ಲೋಪವು ಹೇಗೆ ಆಗಬಾರದೋ ಹಾಗೆ ನನ್ನನ್ನು ರಕ್ಷಿಸಿರಿ. ತಮ್ಮ ಅಧಿಪತ್ಯದಲ್ಲಿ ಈ ರೀತಿಯಾದ ಕಾಯಿಲೆ ಮೊದಲಾದವುಗಳಿಂದ ಪೂಜೆಗೆ ವಿಚ್ಛಿತ್ತಿಯು (ಲೋಪವು) ಉಂಟಾಗಬಾರದು" ಎಂತೆಂದು ಈ ರೀತಿಯಾಗಿ ಪ್ರಾರ್ಥಿಸುವವರನ್ನು ರಕ್ಷಿಸುತ್ತಾರೆ

ಇದರಂತೆಯೇ ಮುಂದಿನ ಮಾಧ್ಯಂದಿನ, ಸಾಯಂ ಸವನಗಳೆರಡರಲ್ಲೂ ತಿಳಿಯುವುದು.

ಪ್ರಸಿದ್ಧ ಯಜ್ಞದಲ್ಲಿ, ದೀಕ್ಷಾ, ಉಪಸನ, ಸ್ತುತ, ಶಸ್ತ್ರಗಳಿಂದೂ, ದಕ್ಷಿಣಾ, ಸೋಷ್ಯತೀತ್ಯ ಸೋಷ್ಯಂತಿ ಎಂಬ ವ್ಯವಹಾರವೂ ಅಸೌಷ್ಟೀತಿ (ಎಂಬ) ವ್ಯವಹಾರವೂ ಅವಭೃತವು ಎಂದು ಏಳು ಇರುವುವು.

ಈ ಆಯುರ್ಯಜ್ಞದಲ್ಲೂ ಅಶನಾಯಾ, ಪಿಪಾಸೆ (ತಿನ್ನಬೇಕೆಂಬ ಹಸಿವು ಕುಡಿಯಬೇಕೆಂಬ ಬಾಯಾರಿಕೆ) ವ್ಯಾಧಿ ಮೊದಲಾದ ಉಪದ್ರವ ಗಳಿಂದ ಪ್ರಾಪ್ತವಾದ ಕಷ್ಟಗಳ ಅವಸ್ಥೆಯೂ ಮತ್ತು ದೀಕ್ಷೆಯೂ ಇವುಗಳಿಗೆ ಅಭಿಮಾನಿಯು ಸ್ವಾಯಂಭುವ ಮನುಗಳ ಪತ್ನಿಯಾದ ಶತ ರೂಪಾದೇವಿಯು ಅಭಿಮಾನ ದೇವತೆಯು.

ಅಶನ (ತಿನ್ನುವುದು) ಪಾನ (ಕುಡಿಯುವುದು) ಗಳಿಂದ ಸುಖವಾಗಿ ರುವುದು ಯಜಮಾನನ ವ್ಯಾಪಾರರೂಪವಾದ "ಉಪಸದ" ಸಂಜ್ಞೆ ಯುಳ್ಳದ್ದು.

ಹಾಸ (ನಗುವುದು) ನಲಿಯುವುದು ತಾಂಬೂಲವೇ ಮೊದಲಾದ ಭೋಗ ಸಾಮಗ್ರಿ ಭಕ್ಷಣೆ, ಅನುಭವ, ಮೈಥುನ, ಕೊನೆಗೆ ಶವವನ್ನು ಹೊತ್ತು ಕೊಂಡು ಹೋಗುವುದು, ಅಂಥ ಹೆಣ (ಶವ)ದ ದಹನ ಮೊದಲಾದುವೆಲ್ಲವೂ "ಸ್ತುತಶಸ್ತ್ರ" ಸಂಜ್ಞೆಯಿಂದ ಕೂಡಿದುದು.

ಋಕ್ಕುಗಳಲ್ಲಿ ಸಾಮಗಾನವು ಸ್ತೋತ್ರವು; ಕೇವಲ ಮಂತ್ರಪಾಠವು ಶಸ್ತ್ರವು ಎನಿಸಿದೆ. ಕಾಯಕ್ಲೇಶಾದಿರೂಪ ವೇದಾಭ್ಯಾಸ ರೂಪವಾದದು. ಚಿಂತನಾದಿ ರೂಪವಾದುದ ತಪಸ್ಸು. ವಿದ್ಯಾದಾನ ಅನ್ನಾದಿಗಳ ದಾನವು ಆರ್ಜವವು. ಅಹಿಂಸೆ, ಸತ್ಯವಾಕ್ ಎಂಬಿವೇ ದಕ್ಷಿಣೆಯು. ಇವುಗಳಿಗೆ ಅಭಿಮಾನಿಯು ಸ್ವಾಯಂಭುವ ಮನುವು.

ತಂದೆಯ ದೆಶೆಯಿನದ ತಾಯಿಯು ಉದರದಲ್ಲಿ ಪ್ರವೇಶಿಸಿ, ಹುಟ್ಟುವ ನೆಂಬ ವ್ಯವಹಾರವು ಯಾವುದಿದೆಯೋ ಅದೇನೇ "ಸೋಷ್ಯತಿ" ಎಂಬ ವ್ಯವ ಹಾರವು. ಅವನೇ ಮಾಡಿದನು (ಸ ಏವ ಅಕರೋತ್) ಎಂಬ ವ್ಯವಹಾರವು.

ತಾಯಿಯು ದೆಸೆಯಿಂದ ಉತ್ಪನ್ನವಾಗಲು "ಹುಟ್ಟಿದನು" ಎಂಬ ವ್ಯವಹಾರವು ಯಾವುದಿದೆಯೋ ಅದನ್ನು ಅವನೇ ಮಾಡಿದನು (ಸ ಏವ

ಅಕರೋತ್) ಎಂಬ ವ್ಯವಹಾರವು. ಮರಣವೇ ಅವಭೃತ ಸ್ನಾನವು. ಈ ವಿಷಯದಲ್ಲಿ ಇವು ಮೂರು ಮಂತ್ರಗಳು.

೧. ಅಕ್ಷತಮಸಿ, ೨. ಅಚ್ಯುತಮಸಿ, ೩. ಪ್ರಾಣಸಂಶಿತಮಸಿ. ಎಂದು
೧. ಎಲೈ ಭಗವಂತನೇ ನೀನು ಸ್ವರೂಪದಿಂದ ಅಕ್ಷಯನಾಗಿದ್ದಿ.
೨. ಗುಣಗಳಿಂದ ಅಚ್ಯುತನು (ಚ್ಯುತಿರಹಿತನು) ಆಗಿರುವಿ.
೩. ಮುಖ್ಯಪ್ರಾಣದ ದೆಸೆಯಿಂದಲೂ ಸಹ ಅಧಿಕ ಸುಖವುಳ್ಳವನಾಗಿ

ರುವಿ. ಎಂದು ಈ ಮಂತ್ರಗಳ ಅರ್ಥವು.

ಯಜ್ಞಾಂತದಲ್ಲಿ (ಕೊನೆಗೆ) ಅನಿರುದ್ಧನು ದೇವತೆಯು. ಇದರ ಉಪಾಸನೆಯಿಂದ ಮುಖ್ಯಫಲವು ಉಕ್ತವೇ ಆಗಿದೆ.

ರೋಗಾದಿಗಳ ವಿಘ್ನಪರಿಹಾರವೂ, ಆಯುರಭಿವೃದ್ಧಿಯೂ ಇವೆರಡೂ ಮಧ್ಯೆ ಸಿಗುವ ಅವಾಂತರ ಫಲಗಳು.

ಯಾವ ಜನ್ಮದಲ್ಲಿ ಈರೀತಿಯಾದ ಅನುಸಂಧಾನ ಸಾಮರ್ಥ್ಯವನ್ನು ಈಶ್ವರನು ಕೊಡುತ್ತಾನೆಯೋ ಆಗಲೇ ಕಳೆದುಹೋ (ಅತೀತಗಳ)ದ ಎಲ್ಲ ದೇಹಗಳ ಮತ್ತು ಮುಂದೆ ಒರುವ ಎಲ್ಲ ದೇಹಗಳಲ್ಲೂ ಹೀಗೆಯೇ ಎಂದು ತಿಳಿದು ಅನುಸಂಧಾನವನ್ನು ಮಾಡಬೇಕು.

ಹೀಗೆ ತಿಳಿದು ಅನುಸಂಧಾನ ಮಾಡುವುದ (ಇದ)ರಿಂದ ಭಗವದ್ ಭಕ್ತರಿಗೆ ಸಮಸ್ತ ಜನ್ಮಗಳೂ ಭಗವತ್ಪೂಜಾತ್ಮಕಗಳೇ ಆಗುವುವು.

++++++++

ಪಂಚಪ್ರಾಣಾಹುತಿ ಯಜ್ಞವು

ಕ್ರೀಡಾತ್ಮಕನಾದುದರಿಂದ "ದ್ಯುಶಾಮ"ನಾಗಿ, ಸ್ವರ್ಗಾಧಾರನಾದ ಅತಿ ತೇಜಸ್ಸುಳ್ಳವನಾದುದರಿಂದ "ತೇಜಃ" ಎಂಬ ಹೆಸರಿನಿಂದ "ವೈಶ್ವಾನರನ ಶಿರಸ್ಸ"ನ್ನು ಕರೆಯುತ್ತಾರೆ.

ಆಯುಃಸ್ಸನ್ನು ತಂದುಕೊಡುವುದರಿಂದ ಆದಿತ್ಯಾಖ್ಯನೂ ಆದಿತ್ಯನಿಗೆ ಆಧಾರನೂ, ಸರ್ವರೂಪ ವಿಷಯುಕ್ತದಿಂದ "ವಿಶ್ವರೂಪನು" ಎಂದು ವೈಶ್ವಾನರನ ಚಕ್ಷುಃಷ್ಸು ಕರೆಯಲ್ಪಡುಡುತ್ತದೆ.

ಆಹವನೀಯು (ಅಗ್ನಿಗೆ)ಕ್ಕೆ ಆಧಾರವಾದುದು ವೈಶ್ವಾನರನ ಮುಖವು.

ದಕ್ಷಿಣಾಗ್ನ್ಯಾಧಾರವಾದುದು ವೈಶ್ವಾನರನ ಮನಸ್ಸು. ಗಾರ್ಹಪತ್ಯಾಗ್ನಿಗೆ ಆಧಾರಭೂತವಾದುದು. ವೈಶ್ವಾನರನ ಹೃದಯುವು, ವೈಶ್ವಾನರನ ಉರಃ ಪ್ರದೇಶವು ವೇದಾಧಾರವಾದದು. ವೈಶ್ವಾನರನ ಲೋಮಗಳು ದರ್ಭಾಧಾರ ವಾದುದು.

ಜ್ಞಾನ ಮತ್ತು ಆಯು ರೂಪವಾದುದರಿಂದ ವಾಯುವೆಂಬ ಹೆಸರುಳ್ಳ ಆದಕ್ಕೆ ಆಶ್ರಯುವಾದ ಸರ್ವ ಆಕಲ್ಯ ಕರ್ಮಗಳನ್ನು ಮಾಡುವುದರಿಂದ "ಪೃಥುಗ್‌ವರ್ತ್ಮ ನಾಮಕನೂ" ಆ ರೀತಿಯಾದ ಕರ್ಮಗಳನ್ನೂ ಮಾಡುವು ದರಿಂದ ತನ್ನಾಮಕನಾದ ಮುಖ್ಯ ಪ್ರಾಣಾಶ್ರಯನೂ ಆದ ವೈಶ್ವಾನರನಿಗೆ ಪ್ರಾಣನು, ವಾಯುವು. ಆತನು ವೈಶ್ವಾನರನ ಆಶ್ರಯದಲ್ಲಿರುವನು.

ದೀಪ್ತ (ಪ್ರಕಾಶಕ)ನಾದುದರಿಂದ "ಆಕಾಶ"ನಾಮಕನಾಗಿ ಅದಕ್ಕೆ ಆಶ್ರಯನಾಗಿ ವಿಸ್ತೃತ (ನಾಗಿ)ತಯಾ ಬಹುನಾಮಗಳುಳ್ಳದ್ದು ವೈಶ್ವಾನರನ ಮಧ್ಯ ದೇಹವು

ವ್ಯಾಪ್ತನಾದುದರಿಂದ "ಆಪಃ"ಎಂದೆನಿಸಿ ಅಬಾಶ್ರಯ (ಆಪಗಳಿಗೆ ಆಶ್ರಯ)ನೆಂದೆನಿಸಿದ, ರತಿಯನ್ನುಂಟುಮಾಡುವುದರಿಂದ "ರಯಿ" ನಾಮಕ ನಾದ ವೈಶ್ವಾನರನ "ಬಸ್ತಿಃ" ಎಂಬ ಹೆಸರಿನ ನಾಭಿ (ಹೊಕ್ಕಳಿನ)ಯು ಅಧೋಭಾಗವು ಅಪಾನವಾಯುವಿಗೆ ಆಧಾರವಾದುದು.

ಪ್ರಥನಾತ್ "ಪೃಥವೀ"ನಾಮವುಳ್ಳವೂ, ಪೃಥಿವಿಗೆ ಆಶ್ರಯವಾದವೂ, ಪ್ರತಿಷ್ಠತ್ವಾತ್ "ಪ್ರತಿಷ್ಠ" ವೆಂಬ ಹೆಸರುಳ್ಳವೂ ವೈಶ್ವಾನರನ ಎರಡು ಪಾದಗಳು.

ಈರೀತಿಯಾದ ಹನ್ನೊಂದು ಅಂಗದಿಂದ ಕೂಡಿದ ವೈಶ್ವಾನರನನು ಉದರದ (ಹೊಟ್ಟೆಯ)ಲ್ಲಿ ಧ್ಯಾನಿಸಿ ಆತನ ದ್ವಾರಪಾಲಕರನ್ನು ಈ ರೀತಿ

ಕಂಡಂತೆ ಧ್ಯಾನ ಮಾಡಬೇಕು. ಅಲ್ಲಿ ಪೂರ್ವ ದ್ವಾರಪಾಲಕನು ಪ್ರಾಣಾದ್ಯಾಭಿಮಾನಿಯು ತ್ರಿರೂಪವುಳ್ಳ ಸೂರ್ಯನು.

ಪಶ್ಚಿಮ ದ್ವಾರಪಾಲಕನು ಅಪಾನಾದ್ಯಭಿಮಾನಿಯಾದ ತ್ರಿರೂಪಿಯಾದ ಅಗ್ನಿಯು.

ದಕ್ಷಿಣ ದ್ವಾರಪಾಲಕನು ವ್ಯಾನಾಭಿಮಾನಿಯಾದ ತ್ರಿರೂಪೀ ಚಂದ್ರನು ಊರ್ಧ್ವ ದ್ವಾರಪನು ಉದಾನಾಭಿಮಾನಿ ತ್ರಿರೂಪವುಳ್ಳ ಮುಖ್ಯ ವಾಯು.

ಉತ್ತರ ದ್ವಾರಪಾಲಕನು ಸಮಾನಾಭಿಮಾನಿ ತ್ರಿರೂಪವುಳ್ಳ ಚಂದ್ರನು.

ಶ್ರೀ ಪ್ರಾಣ ಭಾರತಿಯರಾದರೋ ಸರ್ವ ದ್ವಾರಗಳಲ್ಲೂ ಅವಿಶೇಷದಿಂದ (ವಿಶೇಷವಿಲ್ಲದೆ) ದ್ವಾರಪಾಲಕರು.

ಹೀಗೆ ಚಿಂತಿಸಿ ಅನುಸಂಧಾನ ಮಾಡಿದ ನಂತರ "ಪ್ರಾಣಾಯ ಸ್ವಾಹ" ಇತ್ಯಾದಿ ಮಂತ್ರಗಳಿಂದ ಪಂಚ ಪ್ರಾಣಾಹುತಿಗಳನ್ನು ಕೊಡಬೇಕು.

೧. ಇಲ್ಲಿ ಪ್ರಾಣಾಯಸ್ವಾಹ ಎಂಬ ಮಂತ್ರದಿಂದ ಕೊಡಲ್ಪಡುವ ಮೊದಲನೆಯ ಆಹುತಿಯಿಂದ ಪ್ರಾಣವಾಯುವಿಗೆ ಅಭಿಮಾನಿಯಾದ ಸೂರ್ಯನು ತೃಪ್ತನಾಗುತ್ತಾನೆ.

ಅನಂತರ ಚಕ್ಷುರಭಿಮಾನಿಯೂ, ಆಮೇಲೆ ಮಂಡಲಾಭಿಮಾನಿ ಸೂರ್ಯನೂ ಈ ರೀತಿ ತ್ರಿರೂಪಿಯಾದ ಸೂರ್ಯನು ತೃಪ್ತಿಯಾದಮೇಲೆ "ದು" ನಾಮಕಳಾದ ಭಾರತೀ ದೇವಿಯು ತೃಪ್ತಳಾಗುತ್ತಾಳೆ. ಅನಂತರ ಮುಖ್ಯಪ್ರಾಣನೂ ಆಮೇಲೆ ಲಕ್ಷ್ಮೀದೇವಿಯೂ ಆಕೆಯ ನಂತರ ಆಕೆಯ ಪತಿಯಾದ ಚಿದಾನಂದ ರೂಪವುಳ್ಳ ವೈಶ್ವಾನರ ಮೂರ್ತಿಯಾದ ನಾರಾಯಣನೂ ತೃಪ್ತನಾಗುತ್ತಾನೆ.

೨. ಹೀಗೆ "ಅಪಾನಾಯ ಸ್ವಾಹ" ಎಂದು ಕೊಡುವ ಎರಡನೆಯ ಆಹುತಿಯಿಂದ ಪಶ್ಚಿಮ ದ್ವಾರಪನಾದ ಅಗ್ನಿಯು ತೃಪ್ತನಾಗುತ್ತಾನೆ.

ಇಲ್ಲಿ ಮೊದಲು ಅಪಾನವಾಯು ಅಭಿಮಾನಿಯೂ, ಅನಂತರ ಪ್ರಸಿದ್ಧ ಅಗ್ನ್ಯಭಿಮಾನಿಯೂ ಈ ಕ್ರಮದಿಂದ ತ್ರಿರೂಪನಾದ ಅಗ್ನಿಯು ತೃಪ್ತಿಯಾದ ಮೇಲೆ ಲಕ್ಷ್ಮ್ಯಭಿಮನ್ಯಮಾನವಾದ "ಘಾ" ದೇವಿಯು ತೃಪ್ತಳಾಗುವಳು.

ಅನಂತರ ಆಕಾಶಾಭಿಮಾನಿಯಾದ ಭಾರತೀ ದೇವಿಯೂ ಅನಂತರ ಆಕೆಯ ಪತಿ ಮುಖ್ಯಪ್ರಾಣನೂ, ಆಮೇಲೆ ಲಕ್ಷ್ಮೀದೇವಿಯೂ, ನಂತರ ಚಿದ್ರೂಪಿ ಯಾದ ವೈಶ್ವಾನರನೂ ತೃಪ್ತರಾಗುತ್ತಾರೆ.

೩. ಹೀಗೆಯೆ, "ವ್ಯಾನಾ ಯಸ್ವಾಹ" ಎಂದು ಕೊಡುವ ಮೂರ ನೆಯ ಆಹುತಿಯು ದಕ್ಷಿಣ ದ್ವಾರಪಾಲಕನಾದ ಚಂದ್ರನನ್ನು ತೃಪ್ತಿಪಡಿಸು ತ್ತದೆ.

ಅಲ್ಲಿ ಮೊದಲು ವ್ಯಾನ ವಾಯುವಿಗೆ ಅಭಿಮಾನಿಯೂ, ಅನಂತರ ಶ್ರೋ ತ್ರಾಭಿಮಾನಿಯೂ ಆಮೇಲೆ ಮಂಡಲಾಭಿಮಾನಿಯೂ ತೃಪ್ತರಾಗುವರು. ಈ ರೀತಿ ತ್ರಿರೂಪಿಯಾದ ಚಂದ್ರನು ತೃಪ್ತನಾದಮೇಲೆ ದಿಙ್ ನಾಮಕಳಾದ ಭಾರತಿಯು ತೃಪ್ತಳಾಗುವಳು. ಅನಂತರ ಆಕೆಯ ಪತಿಯಾದ ಮುಖ್ಯ ಪ್ರಾಣನು, ಆಮೇಲೆ ಲಕ್ಷ್ಮೀದೇವಿಯು, ನಂತರ ಚಿದಾನಂದಸ್ವರೂಪನಾದ ವೈಶ್ವಾನರ ನಾಮಕ ಭಗವಂತನೂ ತೃಪ್ತರಾಗುತ್ತಾರೆ.

೪. ಇದರಂತೆಯೇ "ಉದಾನಾಯ ಸ್ವಾಹ" ಎಂದು ಕೊಡಲ್ಪಡುವ ನಾಲ್ಕನೆಯ ಆಹುತಿಯಿಂದ ಊರ್ಧ್ವ ದ್ವಾರಪನಾದ ಭಾರತೀಪತಿ ಮುಖ್ಯ ಪ್ರಾಣನು ತೃಪ್ತನಾಗುತ್ತಾನೆ. ಅಲ್ಲಿ ಮೊದಲು ಉದಾನ ವಾಯುವಿನ ಅಭಿ ಮಾನಿಯೂ, ಅನಂತರ ಭೂತವಾಯು ಅಭಿಮಾನಿಯೂ, ಆಮೇಲೆ ಆಕಾ ಶಾಭಿಮಾನಿಯೂ ತೃಪ್ತರಾಗುವರು. ಈ ಕ್ರಮದಿಂದ ತ್ರಿರೂಪಿಯಾದ ಮುಖ್ಯಪ್ರಾಣನ ತೃಪ್ತ್ಯನಂತರದಲ್ಲಿ, ಲಕ್ಷ್ಮೀಪತಿಯಾದ ಚಿದಾನಂದರೂಪೀ ವೈಶ್ವಾನರನು ತೃಪ್ತನಾಗುತ್ತಾನೆ.

೫. ಹೀಗೆಯೇ "ಸಮಾನಾಯ ಸ್ವಾಹ" ಎಂದು ಕೊಡಲ್ಪಡುವ ಐದ ನೆಯ ಆಹುತಿಯಿಂದ ಉತ್ತರ ದ್ವಾರಪಾಲಕನಾದ ಇಂದ್ರನು ತೃಪ್ತನಾಗು ತ್ತಾನೆ. ಅಲ್ಲಿ ಮೊದಲು ಸಮಾನ ವಾಯು ಅಭಿಮಾನಿಯೂ, ಅನಂತರ ಮನೋಭಿಮಾನಿಯೂ, ಆಮೇಲೆ ಪರ್ಜನ್ಯಾಭಿಮಾನಿಯೂ ತೃಪ್ತರಾಗು ತ್ತಾರೆ ಈ ಕ್ರಮದಿಂದ ತ್ರಿರೂಪಿಯಾದ ಇಂದ್ರನ ತೃಪ್ತಿಯಾದಮೇಲೆ "ವಿದ್ಯುತ್" ನಾಮಕಳಾದ ಭಾರತೀ ದೇವಿಯು ತೃಪ್ತಳಾಗುತ್ತಾಳೆ. ಆಮೇಲೆ

ಮುಖ್ಯಪ್ರಾಣನೂ, ಅನಂತರ ಲಕ್ಷ್ಮೀಪತಿಯಾದ ಚಿದಾನಂದರೂಪವುಳ್ಳ ವೈಶ್ವಾನರಾತ್ಮಾ ನಾರಾಯಣನು ತೃಪ್ತನಾಗುತ್ತಾನೆ.

ಅನಂತರದಲ್ಲಿ ಈ ಪಂಚ ಪ್ರಾಣಾಹುತಿ ರೂಪ ಯಜ್ಞದಿಂದ ಶರೀರದಲ್ಲಿರುವ ಎಪ್ಪತ್ತೆರಡು ಸಹಸ್ರ ನಾಡಿಗಳಲ್ಲಿ ಸಂಸ್ಥಿತರಾಗಿರುವ ಮತ್ತು ಅವರಿಂದ ಭಿನ್ನರಾಗಿ ಇನ್ನು ಬೇರೆ ರೂಪಗಳಿಂದಿರುವ ಸಮಸ್ತ ಭಗವದ್ರೂಪಗಳೂ ತೃಪ್ತಿಯನ್ನು ಹೊಂದುವುವು. ಅನಂತರ ಯಜಮಾನನು ತೃಪ್ತನಾಗುತ್ತಾನೆ.

ನಾರಾಯಣ ಮತ್ತು ಅನಿರುದ್ಧರಿಬ್ಬರೂ ಅನ್ನದಲ್ಲಿ ಸ್ಥಿತರಾಗಿ ಅವನಿಗೆ ತರ್ಪಕತ್ವ ಶಕ್ತಿಪ್ರದರಾಗುವರು. ಸಂಕರ್ಷಣ ಪ್ರದ್ಯುಮ್ನರಿಬ್ಬರೂ ಭೋಜನ ಮಾಡತಕ್ಕವನಲ್ಲಿ ನಿಂತು ಭೋಕ್ತೃತ್ವ ಶಕ್ತಿಪ್ರದರಾಗಿ ಸ್ವಯಂ ಉಭಯರೂ ಭೋಕ್ತೃಗಳಾಗಿರುವರು. ವಾಸುದೇವನು ಅವಕಾಶವನ್ನು ಕೊಡುತ್ತಾನೆ.

ವಾಯುದೇವನು ವೈಶ್ವಾನರನನ್ನು ಸಮಸ್ತ ದೇವತೆಗಳೊಡನೇ ಸದಾ ಸ್ತೋತ್ರ ಮಾಡುತ್ತಾನೆ. ಆ ಧ್ವನಿಯು ಎರಡು ಕಿವಿಗಳನ್ನೂ ಮುಚ್ಚಿದರೆ ಸಮುದ್ರ, ನದೀ, ಅಗ್ನಿಜ್ವಾಲಾ ಸಬ್ದದಂತೆ ಕೇಳಲ್ಪಡುತ್ತದೆ.

ಆದುದರಿಂದಲೇ ವಾಯುದೇವನು (ಉದಗಾತ್ರ್) ವಿಶೇಷವಾಗಿ ಸ್ತೋತ್ರ ಮಾಡುವುದರಿಂದ "ಉದರ"ವೆಂದು ವೈಶ್ವಾನರಿರುವ ಸ್ಥಾನಕ್ಕೆ ನಾಮ (ಹೆಸರು)ವು.

ಈ ರೀತಿಯಾಗಿ ಶರೀರದಲ್ಲಿ ಯಾವ ಶಾಖವು ಔಷ್ಣ್ಯವು ಕಾಣಲ್ಪಡುತ್ತದೆಯೋ, ಅದಕ್ಕೂ ವೈಶ್ವನರವೆಂದೇ ಹೆಸರು. ಆದುದರಿಂದ ವೈಶ್ವಾನರನನ್ನು "ದೃಷ್ಟಂ" ಎಂತಲೂ "ಶ್ರುತಂ" ಎಂತಲೂ "ನೋಡಿದನು" "ಕೇಳಿದನು" ಎಂಬ ನಾಮಗಳಿಂದ ಉಪಾಸನೆ ಮಾಡಿರಿ.

ಈ ರೀತಿಯಾಗಿ ವೈಶ್ವಾನರನನ್ನು ತಿಳಿದ ಅಧಿಕಾರಿಯು ಚಂಡಾಲನಿಗೆ ಉಚ್ಛಿಷ್ಟವನ್ನು ದಾನ ಮಾಡಿದರೂ ಅಥವಾ ಸಾಕ್ಷಾದ್ವೈಶ್ವಾನರಾತ್ಮನಲ್ಲೇ ಹೋಮ ಮಾಡಿದ ಫಲವನ್ನು ಪಡೆಯುತ್ತಾನೆ.

ಈ ರೀತಿಯಾಗಿ ಇದನ್ನು ತಿಳಿಯದೆ ಆಹುತಿ ದಾನ ಮಾಡಿದರೂ ಭಸ್ಮದಲ್ಲಿ ಹೋಮ ಮಾಡಿದಂತೆ ಅದು ನಿರರ್ಥಕವೇ ಆಗುವುದು. ಆದುದರಿಂದ

ಪ್ರತಿದಿನವೂ ಅವಶ್ಯಕವಾಗಿ ವೈಶ್ವಾನರನನ್ನು ಉದರದಲ್ಲಿ ಅನುಸಂಧಾನ ಮಾಡಿ ಪಂಚ ಪ್ರಾಣಾಹುತಿಗಳನ್ನು ಕೊಡಬೇಕು.

ಹೀಗೆ ಉಪಾಸನೆ ಮಾಡುವವನಿಗೆ ತಾಯಿಯು ದೆಸೆಯಿಂದ ಮಕ್ಕಳಿಗೆ ಇಷ್ಟಾರ್ಥಗಳು ಲಭಿಸುವಂತೆ ವೈಶ್ವಾನರಾತ್ಮನ (ನಾದ ಭಗವಂತನ) ದೆಸೆಯಿಂದ ಸರ್ವ ಪುರುಷಾರ್ಥ ಫಲಗಳ ಪ್ರಾಪ್ತಿಯಾಗುತ್ತದೆಂದು ತಿಳಿಯುವುದು.

ಹೀಗೆ ಪ್ರಾಣಾಗ್ನಿಹೋತ್ರ, ಪಂಚಪ್ರಾಣಾಹುತಿ, ವೈಶ್ವನರ ವಿದ್ಯೆಯ ರಹಸ್ಯವು.

॥ ಇತಿ ಶಂ ॥

ಶರೀರ ರಥ ವಿದ್ಯೆ

ಶ್ರೀಹರಿಯೂ, ಬ್ರಹ್ಮಾದಿ ದೇವತೆಗಳೂ, ಹರಿದಾಸರೂ ಈ ಶರೀರವನ್ನು ಅಧಿಷ್ಠಾನ ಮಾಡಿಕೊಂಡು ಅನೇಕ ರೀತಿಯಲ್ಲಿ ವಿಹಾರ ಮಾಡುತ್ತಾರೆ. ಒಂದು ಕಾಲದಲ್ಲಿ ಲೀಲೆಯಿಂದ ಈ ದೇಹವನ್ನು ರಥ ವೆಂದು ಭಾವಿಸಿ, ವಿಹರಿಸುತ್ತಾರೆ. ಅದು ಹೇಗೆಂದರೆ ಪ್ರತ್ಯಕ್ಷವಾದ ನಾವು ನೋಡುವ ರಥದಲ್ಲಿ ರಾಜನು ಮುಖ್ಯ ಯಜಮಾನನು, ಆತನ ಪಕ್ಕದಲ್ಲಿ ಚಾಮರ, ಬೀಸಣಿಗೆ ಮೊದಲಾದವುಗಳಿಂದ ಸೇವೆ ಮಾಡಲು ಯುವರಾಜನು, ನಾಲ್ಕು ಕುದುರೆಗಳು, ಅವುಗಳಿಗೆ ಕಟ್ಟಿರುವ ಹಗ್ಗಗಳು, ಅವುಗಳನ್ನು ನಿಯಮನ ಮಾಡುವ ಸಾರಥಿಯು ಮೊದಲಾದವರು ಇರುವರು. ಇದರಂತೆ ಇಲ್ಲಿಯೂ ಸಹ ಭಗವಾನ್ ಶ್ರೀಹರಿಯೇ ರಥದಲ್ಲಿ ಸ್ವಾಮಿಯಾಗಿ (ಒಡೆಯ)ರುವ ರಾಜನು. ಮುಖ್ಯ ಪ್ರಾಣನೇ ಆತನ ಸಮೀಪದಲ್ಲಿ ಕುಳಿತು ಅಥವಾ ನಿಂತು ಆತನ ಸೇವೆಯನ್ನು ಚಾಮರಾದಿಗಳಿಂದ ಮಾಡುವ ಯುವ ರಾಜನು.

ಬಲಗಣ್ಣಿನಲ್ಲಿರುವ ಸೂರ್ಯನೂ ಎಡಗಣ್ಣಿನಲ್ಲಿರುವ ಆತನ ಭಾರ್ಯೆ ಸಂಜ್ಞಾದೇವಿಯೂ ಇವರಿಬ್ಬರೂ ರಥದ ಮುಂಭಾಗದಲ್ಲಿ ಕಟ್ಟಿರುವ ಎರಡು ಅಶ್ವಗಳು, ಹಾಗೆಯೇ ಬಲಗಿವಿಯಲ್ಲಿರುವ ಚಂದ್ರನೂ, ಎಡಗಿವಿಯಲ್ಲಿ ಆತನ ಹೆಂಡತಿ ರೋಹಿಣಿಯೂ ಹೀಗೆ ಇವರಿಬ್ಬರೂ, ಹಿಂಭಾಗದಲ್ಲಿ ಕಟ್ಟಿ ನಿಯಮಿಸಲ್ಪಟ್ಟಿರುವ ಎರಡು ಕುದುರೆಗಳು, ಈರೀತಿಯಾದ ನಾಲ್ಕು ಕುದುರೆಗಳೆಂದು ತಿಳಿಯುವುದು.

ವಾಗಾಭಿಮಾನಿಯಲ್ಲಿ ವಾಕ್ಕಿನಲ್ಲಿ ಸ್ಥಿತಳಾಗಿರುವ ಉಮಾದೇವಿಯು ನಾಗಾಕಾರ (ಹಾವಿನ ಹಗ್ಗದಂತೆ)ದಿಂದ ಕಟ್ಟಿದ ಕುದುರೆಯು ರಥವನ್ನೆಳೆಯಲು ರಜ್ಜುವಾಗಿರುವಳು. ಮನಸ್ಸಿನಲ್ಲಿ ಸ್ಥಿತನಾಗಿರುವ ಮಹಾದೇವನೇ ಅದನ್ನು ಪತೋಟಿಯಲ್ಲಿಟ್ಟುಕೊಂಡು ಕುದುರೆಗಳನ್ನು ನಿಯಮನ ಮಾಡುವ ಸಾರಥಿಯು (ಉಮಾ ವೈ ವಾಕ್ ಸಮುದ್ದಿಷ್ಟಾ ಮನೋ ರುದ್ರ ಉದಾಹೃತಃ).

ಚಕ್ಷುಃ ಮತ್ತು ಶ್ರೋತ್ರಗಳ ವಿಷಯಗಳೇ ಅಶ್ವಗಳು ಸಂಚರಿಸುವ ದೇಶಗಳು – ಮಾರ್ಗಗಳು – ಎಂದು ತಿಳಿಯುವುದು.

ಶರೀರ ವೀಣಾವಿದ್ಯೆ

ಈ ಶರೀರವನ್ನು ಹರಿಯ ವೀಣೆಯೆಂದು ತಿಳಿದು ಉಪಾಸನೆ ಮಾಡುತ್ತಾರೆ. ಪ್ರಸಿದ್ಧವಾದ ಮಾನುಷೀ ವೀಣೆಯು ಇದನ್ನು ಅನುಕರಣ ಮಾಡುವುದೇ ಆಗಿದೆ. ಅದು ಹೇಗೆಂದರೆ —

ಹೇಗೆ ದೈವೀ ವೀಣೆಗೆ ತಲೆಯು ಇದೆಯೋ ಅದರಂತೆ ಮಾನುಷ ವೀಣೆಗೂ ಶಿರಸ್ಸು ಇದೆ. ಹೇಗೆ ದೈವೀವೀಣೆಗೆ ಉದರವಿದೆಯೋ ಅದರಂತೆ ಮಾನುಷ ವೀಣೆಗೂ ಸಹ ಉದರಸ್ಥಾನೀಯ ಅಂಭೃಣವೂ ಇದೆ. ಹೇಗೆ ದೇವವೀಣೆಗೆ ಜಿಹ್ವಾ(ನಾಲಿಗೆ) ಇದೆಯೋ ಹಾಗೆಯೇ ಮನುಷ್ಯವೀಣೆಗೆ ಶಾಲಾಕಗಳೂ ಇವೆ ಹೇಗೆ ದೈವವೀಣೆ ಅಂಗುಲಿಯುಗಳಿವೆಯೋ, ಅದರಂತೆ ಮಾನುಷ್ಯ ವೀಣೆಗೆ ತಂತಿಗಳೂ, ಹೇಗೆ ದೇವ ವೀಣೆಗೆ ಕಂಠದಲ್ಲಿ ಸ್ಥಿತವಾಗಿ ಮಂಜುಳವೂ, ಘೋ

ರವೂ ಆದ ಧ್ವನಿಗಳು ಇವೆಯೋ, ಹಾಗೇಯೇ ಮಾನುಷ ವೀಣೆಗೆ ತಂ(ತ್ರೀ)ತೀ ಕಂಠದಿಂದ ಹೊರಟು ಹೊರಬರುವ ತಂತಿಗಳ ಭೇದದಿಂದ ಮಂಜುಳಾದಿ ಭೇದವುಳ್ಳ ಧ್ವನಿಗಳು ಉಂಟಾಗಿ ಹೊರಹೊಮ್ಮಿ ಬರುವುವು. ಹೇಗೆ ದೈವೀ ವೀಣೆಯ ಕಂಠಸ್ಥಿತ ಧ್ವನಿಗಳು ವ್ಯಂಗ್ಯವಾಗಿ (ಉದ್ಭವಿಸಿ) ಸ್ವರಗಳು, ಸ್ಪರ್ಶಗಳು, ಅಂತಸ್ಥಗಳು, ಉಷ್ಮಾವರ್ಣಗಳು ಸಹ ಬರುವುವೋ, ಹಾಗೆಯೇ ಮಾನುಷೀ ವೀಣೆಯಿಂದಲೂ ಸಹ ತಂತ್ರೀಕಂಠದಿಂದ ಎದ್ದು ಬರುವ ಧ್ವನಿಗಳು ಸ್ವರಾದಿ ವರ್ಣಗಳು ಅಭಿವ್ಯಕ್ತಗಳಾಗಿರುವುವು ಹೇಗೆ ದೈವೀ ವೀಣೆಯಲ್ಲಿ ಲೋಮದಿಂದ ಕೂಡಿದ ಚರ್ಮದಿಂದ (Leather Case–ಜಿಂಕೆ ಅಥವಾ ಹುಲಿ ಇಲ್ಲವೇ ಚಿರತೆಯ ಚರ್ಮದಿಂದ) ಆಚ್ಛಾದನೆ ಮಾಡಲ್ಪಟ್ಟಿದೆಯೋ, ಅದರಂತೆ ಮಾನುಷೀ ವೀಣೆಯೂ ಸಹ ಲೋ(ರೋ)ಮಗಳಿಂದಲೂ ದೇಹದ ಚರ್ಮದಿಂದಲೂ ಆಚ್ಛಾದಿತವಾಗಿ ಮುಚ್ಚಲ್ಪಟ್ಟಿದೆ.

ಇಲ್ಲಿ ಕೇವಲ ನನ್ನ ಶರೀರಮಾತ್ರವೇ ದೈವೀ ವೀಣೆಯಲ್ಲವು. ಆದರೆ ಬ್ರಹ್ಮಾದಿ ಸಕಲ ದೇವತೆಗಳೇ ಮೊದಲಾದವರೆಲ್ಲರ ಶರೀರವೂ ಭಗವಂತ ವೀಣೆಯೆಂದು ಅನುಸಂಧಾನವನ್ನು ಮಾಡುವುದು.

ಮಧುವಿದ್ಯೆಯು

ಮೋಕ್ಷ ಯೋಗ್ಯರಲ್ಲಿ ವಸು, ರುದ್ರ, ಆದಿತ್ಯ ಪದಯೋಗ್ಯರು. ಅವುಗಳನ್ನು ಪಡೆಯಲು (ಅಯೋಗ್ಯರು) ಯೋಗ್ಯರಲ್ಲದವರು ಎಂದು ಎರಡು ವಿಧವು ಇರುವುದು.

ಪದಯೋಗ್ಯರಾದ ಈ ವಸ್ವಾದಿಗಳೂ ತಮ್ಮ ತಮ್ಮ ಸಹ ಪದವನ್ನು ಹೊಂದಿಬಿಟ್ಟಿರುವರು. ಇನ್ನೂ ಆ ಪದಗಳನ್ನು ಪಡೆಯ (ಹೊಂದ)ದೆ ಇರುವರು ಎಂದು ದ್ವಿವಿಧರು.

ಇಲ್ಲಿ ಪ್ರಾಪ್ತಪದರಾದ ವಸ್ವಾದಿಗಳಿಗೆ, ಭಗವದ್ಗುಣ ವಿಷಯಕ ಜ್ಞಾನ ವಿಶೇಷವು, ಮೋಕ್ಷದಲ್ಲಿ ಸುಖಾತಿಶಯವು ಫಲವು ಎಂದು

ಮೋಕ್ಷೇ ಫಲವಿಶೇಷೋಽಸ್ತಿ ನ ತು ಸರ್ವಪ್ರಕಾಶತಾ ।
ಸರ್ವಥಾ ತೇನ ದೇವಾನಾಂತ್ವಾಪರೋಕ್ಷಂ ಪದಾದಿಕಂ ॥
ಪುಪಿ ಯುಕ್ತಾಹ್ಯುಪಾಸನಾ ।
ಸೈವಂ ದೇವಪದಂ ಪ್ರಾಪ್ತಾ ಬಹ್ಮದರ್ಶನವರ್ಜಿತಾ ॥

ಇತಿ ಅನುವ್ಯಾಖ್ಯಾನದಲ್ಲಿ

ಇತ್ಯಾದಿಗಳಿಂದ ಅಪರೋಕ್ಷಾದಿ ಮಾತ್ರವು ನಿತ್ಯ ಸಿದ್ಧಗಳಾಗಿವೆ.

ಪದಗಳನ್ನು ಪಡೆಯದಿರುವ (ಅಪ್ರಾಪ್ತಪದ) ವರಿಗೆ, ಅದಕ್ಕೆ ಯೋಗ್ಯರಾದವರಿಗೆ, ಅಪರೋಕ್ಷ ಮತ್ತು ಪದಪ್ರಾಪ್ತ್ಯಾದಿಗಳು ಫಲವು. ಅದಕ್ಕೆ ಯೋಗ್ಯರಲ್ಲದ ಮನುಷ್ಯಾದಿಗಳಿಗೆ ಈ ವಿಷಯದಲ್ಲಿ ಉಪಾಸನೆ ಮಾಡಲು ಅಧಿಕಾರವಿಲ್ಲವು. ವಸ್ವಾದಿ ದೇವತೆಗಳೇ ಅದಕ್ಕೆ ಅಧಿಕಾರಿಗಳು. ವಸು ಮೊದಲಾದ ದೇವತೆಗಳು ಮಧು ವಿದ್ಯೆಯ ಉಪಾಸನೆಯಿಂದ ಅದರ ಫಲಗಳನ್ನು ಪಡೆಯುತ್ತಾರೆ. ಅವರೇ ಅದರ ಫಲಶಾಲಿಗಳು ಎಂದೂ ಜ್ಞಾನಮಾತ್ರದಲ್ಲಿ ಮಾತ್ರ ಮನುಷ್ಯರಿಗೆ ಅಧಿಕಾರವು ಎಂದು (ಇದು ಛಾಂದೋಗ್ಯ ಭಾಷ್ಯದಲ್ಲಿ ಹೀಗೆ) ಹೇಳಿದೆ.

"ತದನ್ಯೇ ಜ್ಞಾನಮಾತ್ರೋಪಾಶನೇಸ್ಸೈವ ಯೋಗ್ಯಾಃ
ತದ್ಯೋಗ್ಯಾ ಹಿ ಸುರಾ ಯತಃ"

ಎಂದು ಉಕ್ತವಾಗಿದೆ ಆದುದರಿಂದ ಅಂಥವರಿಗೆ ಆ ರೀತಿಯಾದ ಜ್ಞಾನಮಾತ್ರದಿಂದಲೇ ತಮಗೆ ಯೋಗ್ಯಗಳಾದ ಸರ್ವ ಪುರುಷಾರ್ಥ ಪ್ರಾಪ್ತಿಯು ಆಗುವುದು.

ಮಧುವಿದ್ಯೆಯಲ್ಲಿ ಆದಿತ್ಯಾಂತರ್ಗತನಾದ ಭಗವಂತನಲ್ಲಿ [illegible] ರೀತಿಯಾಗಿ ಅನುಸಂಧಾನವನ್ನು ಮಾಡಬೇಕು.

ಆದಿತ್ವಾತ್ (ಯಲ್ಲರಿಗೂ ಆದಿಯಾದುದರಿಂದಲೂ) ಆದ ತತ್ವಾತ್ (ಸಕಲಾಭೀಷ್ಟಗಳನ್ನು ಭಕ್ತರಾದ ಭಜಕರಿಗೆ ತಂದು ಕೊಡುವುದರಿಂದಲೂ) ಅದ್ಯತ್ವಾತ್ (ಸರ್ವವನ್ನೂ ಭಕ್ಷಣೆ ಮಾಡುವುದರ ದೆಶೆಯಿಂದಲೂ) ಜ್ಞಾನರೂಪನಾದುದರಿಂದಲೂ, ಆದಿತ್ಯನಾಮಕನಾಗಿ ಆದಿತ್ಯಾಂತರ್ಗತನಾದ "ವಿಷ್ಣುವು" ಸುಖಪೂರ್ಣನಾದುದರಿಂದ "ಮಧುನಾಮಕನು." ದೇವತೆಗಳಿಗೆ

ತರ್ಪಕನೂ, ಉದ್ದೀಪಕನೂ ಆದುದರಿಂದಲೇ "ಮಧ್ವಾಪಾನ"ನಾಗಿ ಪ್ರಸಿದ್ಧ "ಮಧುವ"ನಂತೆ ಇದ್ದಾನೆ.

ಪ್ರಸಿದ್ಧವಾದ ಮಧು ಸ್ಥಳದಲ್ಲಿ ಮಧ್ವಪೂಪ (ಜೇನು ಗೂಡಿಗೆ) ಕ್ಕೆ ಆಧಾರಭೂತವಾದ ಅಡ್ಡಬೊಂಬಿನಂತೆ ಅದನ್ನು ಆಶ್ರಯಿಸಿಕೊಂಡಿರುವ ಅಪ್ರಾಕೃತ ವ್ಯೋಮವನ್ನು ಆರಂಭಿಸಿ ಪಾತಾಳದವರೆಗೆ ಮರು (ಗೂಡಿನ) (ಎತ್ತರ)ವನ್ನು ಸೇರಿ ಐದು ದಿಕ್ಕುಗಳಲ್ಲಿ ಮಧುವಿಗೆ ಆಧಾರವಾದ ಛಿದ್ರಗಳು, ಜೇನುಗೂಡುಗಳಿರುವುವು. ಅರುಣಾದಿ ಮರೀಚಿ (ಗೂಡು) ಗಳು ಪೂರ್ಣವಾಗಿ ತುಂಬಿ, ಅವನ್ನು ಆಶ್ರಯಿಸಿರುವ ಜೇನುನೊಣ (ದುಂಬಿ)ಗಳು ಋತುಗಳ ಪ್ರತ್ಯೇಕಿಸಿದ ಮರಗಳು, ಅನೇಕ ಪುಷ್ಪ ಪಟಲಗಳಲ್ಲಿರುವ ಮಕರಂದಗಳನ್ನು ಸ್ವೀಕರಿಸಿ ಲಿಪ್ತವಾ, ಪುಷ್ಪಗಳಲ್ಲಿ ಸ್ಥಿತವಾಗಿರುವ ಮಧು (ಜೇನು) ಗಳನ್ನು ಪಾನಮಾಡಿ, ಅಲ್ಲಲ್ಲೇ ವಿವಿಧ ಪುಷ್ಪಗಳಲ್ಲಿ ಮಕರಂದದಿಂದ ಕೂಡಿದ ಪನ್ನಸಾದಿಗಳಿಂದ ಜೇನನ್ನು ತೀರಿಸಿ ತಂದು ಮಧ್ವಪೂಪ, ಜೇನುಹುಟ್ಟು ಎಂಬ ಜೇನಿನ ಗೂಡುಗಳಲ್ಲಿ ತಂದು ತುಂಬುವಂತೆ ಅಲ್ಲಲ್ಲಿರುವ ಅನೇಕ ಪದಾರ್ಥಗಳ ಸಂಗ್ರಹದಂತೆ ಇಲ್ಲಿಯೂ ಸಹ ಅಂಥ ರಸ ಪದಾರ್ಥಗಳು ಇವೆ ಯೆಂಬುದನ್ನು ಈ ರೀತಿ ತಿಳಿಯಬೇಕು ಅದು ಹೇಗೆಂದರೆ—

ಪ್ರಕಾಶಾದಿ ಗುಣಗಳಿಂದ ಕೂಡಿ "ದ್ಯುಃ"ಸ್ಥಳಗಳಾಗಿ ದ್ಯುನಾಮಕಳಾದ ಶ್ರೀದೇವಿಯು, ತಿರ್ಯಕ್‍ಸ್ಥಳಗಳಾಗಿ ಹರಿಯನ್ನು ವಹಮಾಡಿಕೊಳ್ಳುತ್ತಾಳೆ ಯಾದುದರಿಂದ ತಿರಶ್ಚೀನಂತ (ಅಡ್ಡಬೊಂಬು) ಶಬ್ದವಾಚ್ಯಳಾಗಿ ತಿರಶ್ಚೀನವಂಶ ಸ್ಥಾನೀಯಳು ಮಧ್ವಪೂಪಕ್ಕೆ ಆಶ್ರಯದಿಂದ ಕಾಣ್ವಳು.

ಅಂತರಿಕ್ಷ ಲೋಕವನ್ನು (ಒಳಗೊಳ್ಳುವ ಸರ್ವವನ್ನೂ) ಸಂಪೂರ್ಣವಾಗಿ ನೋಡುವವನಾದುದರಿಂದ ಅಂತರಿಕ್ಷ ನಾಮಕನೂ, ಅಂತರಿಕ್ಷಸ್ಥಿತನೂ, ಆದ ವಾಯುವು "ಅಪ"ಶಬ್ದವಾಚ್ಯನಾಗಿ, ಯಾವಾಗಲೂ ಉಪಾಸ್ಯನಾಗಿ ಭಗವಂತನ ಅನ್ನಮೂರ್ (ಸ್ವರೂಪ) ಅಂಥ ಅಪೂರ್ವನಾದವನ ಮಹಾರೂಪಕ್ಕಾಗಿ ಪ್ರಸಿದ್ಧ "ಮಧ್ವಪೂಪ ಸದೃಶನಾಗಿ, ತಿರಶ್ಚೀನವಂಶ ಶ್ರೀದೇವಿ ಆಶ್ರಯ ಅದನ್ನು ಪಿಡಿದಿರುವುದು. ಇದಿಕ್ಕಿನ ಐದು ದಿಕ್ಕುಗಳಲ್ಲಿಯೂ ರಶ್ಮಿ (ಕಿರಣ) ಗಳಿವೆ. ಅವುಗಳಲ್ಲಿ ಪ್ರಾಚೀ (ಪೂರ್ವ) ದಿಕ್ಕಿನಲ್ಲಿರುವ ರಶ್ಮಿಗಳಲ್ಲಿ ಸ್ಥಿತವಾಗಿ ಮಧ್ವಾಧಾರ ಛಿದ್ರ

ಸ್ಥಾನೀಯ ಮಧ್ವಾಕ್ಷಗಳು ಸಾಮ್ಯದಿಂದ ಪ್ರಾಚೀ (ಪೂರ್ವ) ದಿಕ್ಕಿನಲ್ಲಿರುವ ಆದಿತ್ಯ ರಶ್ಮಿಗಳಲ್ಲಿರುವ "ರ"ಮತ್ತು 'ಶ'ಕಾರ ಸಂಯೋಗದಿಂದ "ರಶ್ಮಿ" ಶಬ್ದ ವಾಚ್ಯರಾದ ವಾಸುದೇವ ಮೂರ್ತಿಗಳು ಅಯಾನು ಛಿದ್ರಗಳ (ಗೂಡಿನ)ಲ್ಲಿ ಮಾತ್ರ ಪರ್ಯಾಪ್ತ ಮಧುವಿನ ಅಂಶಸ್ಥಾನೀಯ ಛಿದ್ರಪೂರ್ಣತ್ವದಿಂದ ಸಾಮ್ಯವಿರುವುದು.

ಪ್ರಾತಃ ಸವನದಲ್ಲಿ ಅರ್ಪಿತವಾದುದರಿಂದಲೂ, ಋಗ್ವೇದದ ಅಭಿಮಾನಿತ್ವದಿಂದಲೂ, "ಋಕ್" ನಾಮಕರಾದ ವಸ್ವಾದಿಗಳು, "ವಷಟ್" ಎಂಬ ಮಧುಗಳನ್ನು ಬ್ರಹ್ಮನಿಗೆ ಅಭಿವ್ಯಕ್ತಿಯನ್ನು ಮಾಡಿ ಅವು ಮಧುಕೃತ್ ನಾಮಕಗಳಾಗಿ, ಪ್ರಸಿದ್ಧ ಮಧುಕೃತ್ಕೃತ್ಯ ಸಾಮ್ಯವು. ಪೂರ್ವ ಮರೀಚಿಗಳಲ್ಲಿರುವ ವಸು ಪುತ್ರರು ಮರೀಚಿಯೇ ಮೊದಲಾದ ಋಷಿಗಳು ಮಧುಕೃತ್ ಪುತ್ರಸ್ಥಾನೀಯರು. ನಾಡೀಗಳಲ್ಲಿ ಸ್ಥಿತರಾಗಿರುವ ಸಾಮ್ಯದಿಂದ ಋಗ್ವೇದವೇ ಜ್ಞಾನ ಪೋಷಕವಾದುದರಿಂದ ಪುಷ್ಪಸ್ಥಾನೀಯ ಪೋಷಕತ್ವವಿರುವುದರಿಂದ ಪ್ರಸಿದ್ಧವಾದ ಪುಷ್ಪವು ಭ್ರಮರ ಪೋಷಕವಾಗಿರುವುದು.

ಋಗ್ವೇದದಲ್ಲಿರುವ ವಾಕ್ಯಗಳು ಅಪೌರುಷೇಯಗಳಾದುದರಿಂದ ಶ್ರೋತ್ರಿಗಳಿಂದ ಶ್ರವಣ, ಪಾಠಾದಿಗಳಿಂದ ಪೇಯತ್ವಾತ್ (ಪಾನಮಾಡಲರ್ಹಗಳಾದುದರಿಂದ) ಅಮೃತ ಶಬ್ದವಾಚ್ಯಗಳಾದ, ಪ್ರಸಿದ್ಧ ಕುಸುಮಗಳಲ್ಲಿರುವ ಆಸವ, ಮಕರಂದ ಆದಿ ಪರ್ಯಾಯ ಸ್ಥಾನೀಯವಾದ ಋಕ್ ನಾಮಕಗಳಿಂದ ವಹ್ನಿ ಮೊದಲಾದ ವಸ್ತುಗಳಿಂದ ಉತ್ಪನ್ನಗಳಾದ ಮಕ್ಷಿಕ (ದುಂಬಿ) ಸದೃಶ ಋಗ್ವೇದಾಖ್ಯ ಪುಷ್ಪದಲ್ಲಿ ವಿಚಾರ ಮಾಡಲು ಜ್ಞಾನಾನಂದ ರೂಪವಾದುದರಿಂದ "ಯಶೋ"ನಾಮಕವೂ, ತೇಜೋ ರೂಪವಾದುದರಿಂದ "ತೇಜೋ" ನಾಮಕವೂ, ಸರ್ವೈಶ್ವರ್ಯದಿಂದ "ಇಂದ್ರ"ನಾಮಕವೂ, ವೀರ್ಯ ರೂಪತ್ವದ ದೆಸೆಯಿಂದ ವೀರ್ಯ ನಾಮಕವೂ, ಸ್ಥಿರವಾದ ಅದ್ಯತೀ (ತಿನ್ನತಕ್ಕದ್ದಾದುದರಿಂದ) "ಅನ್ನ"ನಾಮಕನೂ, ಬಲರೂಪನಾದುದರಿಂದ "ರಸ"ನಾಮಕನೂ ಆದ ವಾಸುದೇವಾಖ್ಯನು "ಮಧುವನ್ನು" ಅಭಿವ್ಯಕ್ತ ಮಾಡುತ್ತಾನೆ. ಅನಂ

ಲೋಹಿತ ವರ್ಣವಾದ ವಾಸುದೇವಾಖ್ಯ ಮಧುವು ಆದಿತ್ಯಮಂಡಲದ

ಪ್ರಾಗ್ (ಪೂರ್ವ) ಭಾಗದಲ್ಲಿ ಲೋಹಿತಾಕಾರದಲ್ಲಿ (ಪೂರ್ವ) ಪ್ರಾಚ್ಯರಶ್ಮಿಗಳಲ್ಲಿ ಸ್ಥಿತನಾಗಿ ತನ್ನನ್ನು ಉಪಾಸನೆ ಮಾಡುವ ವಸುವೇ ಮೊದಲಾದ ದೇವತೆಗಳಿಗೆ ಧರ್ಮ ಮೋಕ್ಷಾದಿಗಳನ್ನು ಕೊಡುತ್ತಾನೆ.

ಇದನ್ನು ಹೀಗೆಈ ರೀತಿ ತಿಳಿದವನಿಗೂ ಅವನಿಗೆ ಯೋಗ್ಯವಾದ ಪುರುಷಾರ್ಥವನ್ನು ಕೊಡುತ್ತಾನೆಂದು ಅನುಸಂಧಾನವನ್ನು ಮಾಡಬೇಕು.

ಹೀಗೆಯೇ ಉತ್ತರತ್ರ ಇನ್ನೂ ಈ ಮುಂದೆಯೂ ತಿಳಿಯಬೇಕು, ಅದು ಹೇಗೆಂದರೆ —

ದಕ್ಷಿಣ ದಿಕ್ಕಿನಲ್ಲಿರುವ ಕಿರಣ (ರಶ್ಮಿ)ಗಳೇ ದಕ್ಷಿಣ ದಿಕ್ಕಿನಲ್ಲಿರುವ ಮಧುವಿಗೆ ಆಧಾರವಾದ ಛಿದ್ರ (ಗೂಡಿನ) ಸ್ಥಾನೀಯಗಳಾದ ದಕ್ಷಿಣ ರಶ್ಮಿಗಳಲ್ಲಿರುವ "ರತಿ" "ಶಂ" ಮಾನ ರೂಪದಿಂದ "ರಶ್ಮಿ" ಶಬ್ದವಾಚ್ಯರಾದ ಸಂಕರ್ಷಣ ಮೂರ್ತಿಗಳೇ ದಕ್ಷಿಣ ಛಿದ್ರಗಳಲ್ಲಿ ಪರ್ಯಾಪ್ತ (ಸಾಕಾಗುವಷ್ಟು) ಮಧ್ವಂಶ ಸ್ಥಾನೀಯರಾದ ಯಜುರ್ವೇದಾಭಿಮಾನಿಗಳಾಗಿರುವುದರಿಂದಲೂ, ಯಾಜ್ಯ ಸ್ವರೂಪರಾಗಿರುವುದರಿಂದಲೂ, "ಯಜುಃ"ನಾಮಕರಾದ ವಾಯು ಮೊದಲಾದವರೂ, ರುದ್ರರೂ ಮಧುವನ್ನು ಮಾಡತಕ್ಕವರಾಗಿ ಯಜುರ್ವೇದ ವೆಂಬ ಪುಷ್ಪವು ಅದರಲ್ಲಿರುವ ವಾಕ್ಯಗಳೆಂಬ ಮಕರಂದವನ್ನು ಯಜುರ್ವೇದ ನಾಮಕಗಳಾದ ಮಕ್ಷಿಕಾ (ದುಂಬಿ)ಗಳಿಗೆ ಸದೃಶಗಳಾದ ವಾಯ್ವಾದಿಗಳಿಂದಲೂ, ರುದ್ರರಿಂದಲೂ ಯಜುರ್ವೇದಾಖ್ಯ ಪುಷ್ಪಗಳಲ್ಲಿ ವಿಚಾರಮಾಡಲಾಗಿ, ಉಕ್ತ ಕಾರಣಗಳಿಂದ ಯಶೋನಾಮಕ, ತೇಜೋನಾಮಕ, ಇಂದ್ರಿಯನಾಮಕ, ವೀರ್ಯನಾಮಕ, ಅನ್ನಾದಿನಾಮಕ, ರಸನಾಮಕ "ಸಂಕರ್ಷಣಾಖ್ಯ" ಮಧುವು ಅಭಿವ್ಯಕ್ತವಾಗುತ್ತದೆ. ಹೀಗೆ ಅಭಿವ್ಯಕ್ತವಾದ ಶುಕ್ಲವರ್ಣವಾದ ಸಂಕರ್ಷಣಾಖ್ಯ ಮಧುವು ಆದಿತ್ಯ ಮಂಡಲದ ದಕ್ಷಿಣ ಭಾಗದಲ್ಲಿ ಶುಕ್ಲರೂಪಗಳಾದ ದಕ್ಷಿಣ ರಶ್ಮಿಗಳಲ್ಲಿ ಸ್ಥಿತವಾಗಿ, ತನ್ನನ್ನು ಉಪಾಸನೆ ಮಾಡುವ ವಾಯುವೇ ಮೊದಲಾದವರಿಗೂ ರುದ್ರರಿಗೂ, ಧರ್ಮ ಮೋಕ್ಷಾದಿ ಗಳನ್ನು ಕೊಡುತ್ತಾನೆ. ಹೀಗೆ ತಿಳಿದವನಿಗೆ ಪುರುಷಾರ್ಥವನ್ನೂ ಕೊಡುತ್ತಾನೆ.

ಹೀಗೆ ಪ್ರತೀಚೀ (ಪಶ್ಚಿಮ) ದಿಕ್ಕುಗಳಲ್ಲಿ ಸ್ಥಿತವಾಗಿರುವ ರಶ್ಮಿಗಳೇ ಪ್ರಾತೀಚೀ ದಿಕ್ಕಿನಲ್ಲಿರುವ ಮಧುವಿಗೆ ಆಧಾರಗಳಾದ ಛಿದ್ರ (ಜೇನು ಗೂಡು)ಗಳಿಗೆ ಪ್ರಾತೀಚೀ ರಶ್ಮಿಗಳಲ್ಲಿರುವ ರಶ್ಮಿ ಶಬ್ದ ವಾಚ್ಯಗಳಿಂದ

ಪ್ರದ್ಯುಮ್ನ ರೂಪಗಳು ದಕ್ಷಿಣ ಛಿದ್ರಗಳಿಗೆ ಪರ್ಯಾಪ್ತ (ಸಾಕಾಗುವಷ್ಟು) ಮಧ್ವಂತ ಸ್ಥಾನೀಯಗಳು ಸಾಮಾಭಿಮಾನಿತ್ವದಿಂದಲೂ, ಪರಾವರತಃ ಸಮುಭೋಕ್ತೃತ್ವದ ದೆಶೆಯಿಂದಲೂ. ಸಾಮ ಸಾಮಕಗಳಾಗಿ ಶಕ್ರ ಮುಖ್ಯರಾದ ಆದಿತ್ಯರೇ ಮಧುವನ್ನು ಮಾಡತಕ್ಕವರಿಗೆ ಸಾಮವೇದವು ಪುಷ್ಪವು. ತದ್ಗತವಾಕ್ಯಗಳು (ತನ್ಮೂಲದ ಮಾಡಲ್ಪಟ್ಟ ಅಧ್ಯಯನವಾದ ವಾಕ್ಯಗಳು) ಮಕರಂದಗಳು (ಜೇನು ತುಪ್ಪವು) ಹೀಗೆ ಸಾಮ ಸಾಮಕ ಮಕ್ಷಿಕ (ದುಂಬಿ)ಗಳಿಂದ ತತ್ಸದೃಶರಾದ ಇಂದ್ರಾದಿ ಆದಿತ್ಯರುಗಳಿಂದ ಸಾಮವೇದಾಖ್ಯ ಪುಷ್ಪದಲ್ಲಿ ವಿಚಾರ ಮಾಡುತ್ತಿರಲಾಗಿ ಯಶ, ತೇಜಸ್ಸು, ಇಂದ್ರಿಯ, ವೀರ್ಯ, ಅನ್ನ, ರಸಸಾಮಕ "ಪ್ರದ್ಯುಮ್ನಾಖ್ಯ" ಮಧುವು ಅಭಿವ್ಯಕ್ತವಾಗುತ್ತದೆ.

ಹೀಗೆ ಅಭಿವ್ಯಕ್ತವಾದ ಕೃಷ್ಣವರ್ಣವುಳ್ಳ ಪ್ರದ್ಯುಮ್ನಾಖ್ಯವಾದ ಮಧುವು ಆದಿತ್ಯಮಂಡಲದಲ್ಲಿ ಪಶ್ಚಿಮ ಭಾಗದಲ್ಲಿ ಕೃ(ಷ್ಣಾಖ್ಯ)ಷ್ಣ ರೂಪ ಪ್ರಾತೀಚೀ (ಪಶ್ಚಿಮ) ರಶ್ಮಿಗಳಲ್ಲಿ ಸ್ಥಿತನಾಗಿ ತನ್ನನ್ನು ಉಪಾಸನೆ ಮಾಡುವ ಇಂದ್ರಾದಿತ್ಯಾದಿ ದೇವತೆಗಳಿಗೆ ಧರ್ಮ ಮೋಕ್ಷಾದಿಗಳನ್ನು ಕೊಡುತ್ತಾನೆ. ಹೀಗೆ ತಿಳಿದ ಅಧಿಕಾರಿಗಳಿಗೂ ಅವರಿಗೆ ಯೋಗ್ಯ ಫಲವನ್ನು ಕೊಡುತ್ತಾನೆ.

ಹೀಗೆ ಉತ್ತರದಿಕ್ಕಿನಲ್ಲಿ ಸ್ಥಿತವಾಗಿರುವ ಆದಿತ್ಯರಶ್ಮಿಗಳೇ ಉತ್ತರದಿಕ್ಕಿನಲ್ಲಿ ಅವಸ್ಥಿತಗಳಾದ ಮಧ್ವಾಧಾರ ಛಿದ್ರ ಸ್ಥಾನೀಯಗಳಾದ ಉದೀಚೀ (ಉತ್ತರ) ರಶ್ಮಿಗಳಲ್ಲಿರುವ ರಶ್ಮಿ ನಾಮಕಗಳಾದ "ಅನಿರುದ್ಧ" ರೂಪಗಳೇ ಉದೀಚೀ ದಿಕ್ಕಿನಲ್ಲಿ ಅವಸ್ಥಿತಗಳಾದ ಮಧುವಿಗೆ ಆಧಾರವಾದ ಛಿದ್ರಗಳು ತುಂಬಲು ಪರ್ಯಾಪ್ತವಾಗುವಷ್ಟು ಮಧುವಿನ ಅಂಶಗಳನ್ನು ಸ್ಥಾನಗಳನು ವೃಷ್ಟ್ಯಾದಿಗಳಿಂದ ಅಧಃ ಬಿಡ್ಯುತ್ತುವುದರಿಂದ, ನಯನ ಮಾಡುವುದರಿಂದಲೂ ಅಂಗಗಳ ರಸತ್ವದಿಂದಲೂ, ಅಥರ್ವಾಂಗಿರೋ ನಾಮಕಗಳಾಗಿ, ಇತಿಹಾಸ, ಪುರಾಣಾಭಿಮಾನಿಗಳಾಗಿರುವುದರಿಂದ ಇತಿಹಾಸ, ಪುರಾಣ ನಾಮಕಗಳಾದ ಸೋಮಾದಿ ಮರುತ್ತುಗಳು ಮಧುವನ್ನು ಮಾಡುವವರು. ಅಥರ್ವಾಂಗಿರಸರು ಇತಿಹಾಸ ಪುರಾಣಗಳೆಂಬುದು ಪುಷ್ಪವು. ಅವುಗಳಲ್ಲಿರುವ ವಾಕ್ಯಗಳು (ಅಧ್ಯಯನಾದಿ ವಾಚಗಳು) ಮಕರಂದ (ಜೇನುತುಪ್ಪ)ವು. ಹೀಗೆ ಅಥರ್ವಾದಿ ನಾಮಕಳಿಂದ ಸೋಮಾದಿ ಮರುತ್ತುಗಳಿಂದ ಅಥರ್ವಾಂಗಿರ ಆದ್ನಿ

ಗಳಲ್ಲಿಯೂ, ಇತಿಹಾಸ ಪುರಾಣಾದಿಗಳೆಂಬ ಪುಷ್ಪದಲ್ಲಿ ಸಂಚಾರಮಾಡುವ ಮಂತ್ರಗಳಾದ ಕಾರಣ (ಹೇತು)ಗಳಿಂದ "ಯಶ" ಆದಿಸಾರಾಂಶ ಅನಿರುದ್ಧಾಖ್ಯ ಮಧುವು ಆದಿತ್ಯಮಂಡಲದ ಉತ್ತರದಿಗ್ಭಾಗದಲ್ಲಿ ಅತ್ಯಂತ ಕೃಷ್ಣರೂಪವು, ಉದೀಚೀ ರಶ್ಮಿಗಳಲ್ಲಿ ಸ್ಥಿತನಾಗಿ ತನ್ನನ್ನು ಉಪಾಸನೆ ಮಾಡುವ ಸೋಮ, ಆದಿತ್ಯ, ಮರುತ್ತುಗಳಿಗೆ ಧರ್ಮ ಮೋಕ್ಷಗಳನ್ನು ಕೊಡುತ್ತಾನೆ.

ಹೀಗೆ ತಿಳಿದವರಿಗೂ ಮುಕ್ತಿಯೋಗ್ಯವಾದ ಫಲವನ್ನು ಕೊಡುತ್ತಾನೆ.

ಹೀಗೆಯೇ ಊರ್ಧ್ವ (ದಿಕ್ಕಿನ) ರಶ್ಮಿಗಳು ಸೂರ್ಯನ ಊರ್ಧ್ವ ಭಾಗದಲ್ಲಿರುವ ಮಧುವನ್ನು ಸೇರಿಸುವ ಊರ್ಧ್ವಾಭಿಮುಖ ನಾಡಿಗಳಾಗಿವೆ. ಊರ್ಧ್ವ ರಶ್ಮಿಗಳಲ್ಲಿರುವ ರಶ್ಮಿನಾಮಕಗಳಾದ ನಾರಾಯಣಾಖ್ಯ ರೂಪಗಳೇ ಮಧುವಿನ ಅಂಶಃ ಸ್ಥಾನಗಳಾಗಿವೆ. ಸರ್ವವೇದಾಭಿಮಾನಿತ್ವದಿಂದಲೂ, ಗುಹ್ಯ (ರಹಸ್ಯ) ಪ್ರದೇಶತ್ವದಿಂದಲೂ, ಗುಹ್ಯದೇಶ ಶಬ್ದವಾಚ್ಯರಾದ ಚತುರ್ಮುಖ ಬ್ರಹ್ಮಾದಿಗಳು, ಭೃಂಗಗಳೇ ಮಧುವನ್ನು ನಿರ್ಮಾಣಮಾಡತಕ್ಕವರು. ಉಪನಿಷತ್ ವೇದಗಳೇ ಪುಷ್ಪವು. ಅವುಗಳಲ್ಲಿರುವ ವಾಕ್ಯಗಳು (ವಾಚಗಳು) ಮಕರಂದಗಳು, ಹೀಗೆ ಬ್ರಹ್ಮಾದಿಗಳಿಂದಲೂ, ಭೃಂಗಗಳಿಂದಲೂ ಸರ್ವ ವೇದಾತ್ಮ ಪುಷ್ಪದಲ್ಲಿ ಚೆನ್ನಾಗಿ ವಿಹಾರ ಮಾಡುತ್ತಿರಲು ಉಕ್ತಿಗಳಾದ ಹೇತು (ಕಾರಣ)ಗಳಿಂದ ಯಶ ಆದಿ (ಯಶಸ್ಸು, ತೇಜಸ್ಸು, ಇಂದ್ರಿಯ, ವೀರ್ಯ, ಅನ್ನ, ರಸ) ನಾಮಕ "ನಾರಾಯಣಾಖ್ಯ" ಮಧುವು ಅಭಿವ್ಯಕ್ತವಾದ ಪ್ರೋದ್ಯದಾದಿತ್ಯ (ಜಗತ್ತಿನ ಮಧ್ಯದ ಸೂರ್ಯನಂತೆ ಕಾಂತಿಯುಳ್ಳ) ಸಮಾನ ಪ್ರಭೆಯುಳ್ಳ ನಾರಾಯಣಾಖ್ಯ ಮಧುವು ಆದಿತ್ಯಮಂಡಲದ ಊರ್ಧ್ವಭಾಗದಲ್ಲಿ ಊರ್ಧ್ವ ರಶ್ಮಿಗಳಲ್ಲಿ ಇರುವುದು. ಇದು ಅಚಲವಾಗಿದ್ದರೂ ಮಹಾ ಮರೀಚಿ (ಕಿರಣಗಳ) ಪುಂಜದಿಂದ, ಸಮೂಹಪ್ರಾಪ್ತಿಯಿಂದ ಚಲಿಸುತ್ತಿರುವಂತೆ ಕಾಣುತ್ತದೆ. ಅದನ್ನು ಅರಿತು ತನ್ನನ್ನು ಉಪಾಸನೆ ಮಾಡುವ ಬ್ರಹ್ಮಾದಿ ಸಾಧ್ಯರೆನಿಸಿದ ಉಪಾಸಕರಿಗೆ ಧರ್ಮ ಮೋಕ್ಷಾದಿಗಳನ್ನು ಕೊಡುತ್ತಾನೆ. ಹೀಗೆ ತಿಳಿದವನಿಗೂ ಅವನ ಯೋಗ್ಯತೆಯಂತೆ ಫಲವನ್ನು ಕೊಡುತ್ತಾನೆ.


ಗ ಯಾ ಮ ಹಾ ತ್ಮ್ಯೆ

ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ ಕನ್ನಡ ನುಡಿ

ಮಾರ್ಚಿ 1966ರಲ್ಲಿ ವಿಮರ್ಶೆ

ಗಯಾ ಕ್ಷೇತ್ರದ ಮಹಾತ್ಮ್ಯೆ—ಡೆಮ್ಮಿ ಕ್ರೌನ್ ೧/೮, ಪುಟಗಳು ೨೦+೧೦೪, ಬೆಲೆ ೧-೫೦, ಲೇಖಕರು : ಶಾಸ್ತ್ರರತ್ನ ವೇದಾಂತ ವಿಶಾರದ ವಿದ್ವಾನ್ ಚೀಮನಹಳ್ಳಿ ರಘುನಾಥಾಚಾರ್ಯರು, ಪ್ರಕಾಶಕರು : ಸಿ. ಆರ್. ವೆಂಕಟೇಶ ವಿಠಲಾಚಾರ್ಯರು. ಆಡಿಟರ್, ನಂ. ೨೯, ಹಯವದನ ಸದನ, ೬ನೇ ರಸ್ತೆ, ಚಾಮರಾಜಪೇಟೆ, ಬೆಂಗಳೂರು ೧೮.

ಇದರಲ್ಲಿ ಔರ್ಧ್ವದೇಹಿಕಗಳಾದ ಶ್ರಾದ್ಧಾದಿಗಳ ಔಚಿತ್ಯವನ್ನು ವಿವರಿಸಿ, ಅಂತಹ ಕಾರ್ಯಗಳಿಗೆ ಅತಿ ಪುಣ್ಯಕರವೆನಿಸುವ ಗಯಾ ಕ್ಷೇತ್ರದ ವಿವರಣೆಯನ್ನು ಶಾಸ್ತ್ರಾಧಾರ ಸಹಿತವಾಗಿ ಕೊಟ್ಟಿದೆ. ಅನೇಕ ಶ್ರುತಿ–ಸ್ಮೃತಿ–ಇತಿಹಾಸ–ಪುರಾಣಗಳ ವಾಕ್ಯೋದಾಹರಣೆಗಳಿಂದ ಇಲ್ಲಿನ ವಿಚಾರಗಳೆಲ್ಲವೂ ಮಾನನೀಯವಾಗಿವೆ. ಉತ್ತರ ಭಾರತ ತೀರ್ಥ ಯಾತ್ರಿಕರಿಗಂತೂ ಇದು ಕೈಗನ್ನಡಿ. ಇತರರಿಗೆ ಮನಸ್ಸಂಸ್ಕಾರಕ್ಕೂ ಧರ್ಮಾಭಿಮಾನ–ರಾಷ್ಟ್ರಾಭಿಮಾನಗಳ ಜಾಗೃತಿಗೂ ಈ ಗ್ರಂಥವು ನೆರವಾಗಬಲ್ಲುದು. ಗಯೆಯ ಸ್ಥಳ ಪುರಾಣ, ತೀರ್ಥ ವಿಶೇಷಗಳು, ದೇವತಾ ವಿಶೇಷಗಳು, ಅಲ್ಲಿ ಆಚರಿಸುವ ಕ್ರಿಯಾ ವಿಶೇಷಗಳು ಇವೆಲ್ಲ ಸಾಂಗವಾಗಿ ಒಂದೇ ಕಡೆ ಇಲ್ಲಿ ದೊರೆಯುವುದರಿಂದ ಆಚಾರಶೀಲರು ತೆಗೆದಿಟ್ಟುಕೊಳ್ಳುವ ಪುಸ್ತಕ ಇದಾಗಿರುವುದರಲ್ಲಿ ಸಂಶಯವಿಲ್ಲ.





ವಿದ್ವಾನ್ ಚೀಮನಹಳ್ಳಿ ರಘುನಾಥಾಚಾರ್ಯಃ
ಶಾಸ್ತ್ರರತ್ನಂ, ವೇದಾಂತವಿಶಾರದ,
ಉಪನಿಷದ್ರತ್ನಾಕರ, ಇತ್ಯಾದಿ.

(ಪುಟ ೬೨ರಿಂದ ೬೪)

ದೇಹದಲ್ಲಿರುವ ೭೨೦೦೦ ಭಗವದುಪಾಸನೆ

ನಾಡಿಗಳ ವಿವರ, ಅವುಗಳಿರುವ ಸ್ಥಾನಗಳು

ಸ್ಥಾನ	ಎಡ ಪಾರ್ಶ್ವ		ಬಲಪಾರ್ಶ್ವ		ಒಟ್ಟು	
	ಪರ್ವ ಗ್ರಂಥಿ ಗಳು	ಪುರುಷನಾಡಿ	ಗ್ರಂಥಿ ಗಳು	ಸ್ತ್ರೀನಾಡಿ	ಪರ್ವ ಗ್ರಂಥಿಗಳು	ನಾಡಿ ಗಳು
೪. ತಲೆ (ಕಂಠದಿಂದ ಶಿರಸ್ಸಿನವರೆಗೆ)	೬	೬೦೦೦	೬	೬೦೦೦	೧೨	೧೨೦೦೦
೩. ಹೃದಯದಮೇಲೆ ಕಂಠ ಪೂರ್ತಿ ಬಾಹುಗಳಲ್ಲಿ	೪	೪೦೦೦	೪	೪೦೦೦	೮	೮೦೦೦
೨. ನಾಭಿಯಿಂದ ಹೃದಯದವರೆವಿಗೆ ಮಧ್ಯ ದೇಹದಲ್ಲಿ	೧೪	೧೪೦೦೦	೧೪	೧೪೦೦೦	೨೮	೨೮೦೦೦
೧. ಮೂಲದಿಂದ ಆರಂಭಿಸಿ ನಾಭಿಯ ವರೆವಿಗೆ ಪಾದಗಳಲ್ಲಿ	೧೨	೧೨೦೦೦	೧೨	೧೨೦೦೦	೨೪	೨೪೦೦೦
ಒಟ್ಟು (ಆಹತ್ಯ ಎಲ್ಲ ಸೇರಿ)	೩೬	೩೬೦೦೦	೩೬	೩೬೦೦೦	೭೨	೭೨೦೦೦

N.B. ೧. ಮೇಲೆ (ನಂ. ೪ರಲ್ಲಿ) ಕಂಡ ೬ನೇ ಪರ್ವದಿಂ (ಗೆಣ್ಣಿನಿಂ)ದ ಉದ್ಭವಿಸಿದ ದ್ವಾದಶ ದಳಗಳುಳ್ಳ ಪದ್ಮವು)ಹೃದಯ ಕಮಲ) ಸದಾ ಅರಳಿ ವಕ್ಷಸ್ಥಳದಲ್ಲಿ ಸೂರ್ಯಕಾಂತಿಯಂತೆ ಪ್ರಕಾಶಿಸುತ್ತದೆ.

೨. ವಕ್ಷಸ್ಥಳ ಮತ್ತು ಹೃದಯದಲ್ಲಿರುವ ಪದ್ಮಗಳು ಮತ್ತು ನಾಳಗಳು ಆ ಅತಿಶಯ ಸಂಶ್ಲೇಷವುಳ್ಳವಾಗಿ ಪರ್ವದಿಂದ ಹೊರಗೆ ಉದ್ಭವಿಸಿದವು.

೩. ನಾಲ್ಕು ಪಾರ್ಶ್ವಗಳೂ ಅಂಶೋದ್ಭವ ಪದ್ಮಗಳೂ ಪದ್ಮದಿಂದ ಹೊರಗಿರುವುವು.

೪. ಎಡಬಲ ಪಾರ್ಶ್ವಗಳ ಮಧ್ಯೆ ಋಜುವಾದ ಸಾಂದನಂ ಬ್ರಹ್ಮನಾಡೀ, ಶುಷುಮ್ನಾ ಇರುವುದು.

ಪದ್ಮ ವಿದ್ಯೆ

(೩೨ ಪದ್ಮಗಳ ವಿವರ ೬ ಸ್ಥಾನಗಳಲ್ಲಿ ೫ರಂತೆ ೩೦ ಮೂರು ಮತ್ತು ಅನೇ ಸ್ಥಾನವೆನಿಸಿದ ಹೃದಯ ಮತ್ತು ಶಿರಸ್ಸಿನ ಮೇಲೆ ೧೨ ಅಂಗುಲದಲ್ಲಿ ಒಂದೊಂದರಂತೆ ೨ ಹೀಗೆ ಒಟ್ಟು ೩೨)

೮. ತಲೆಯ ನೆತ್ತಿಯಿಂದ ಆರಂಭಿಸಿ ೧೨ ಅಂಗುಲದ ಮೇಲೆ ಶ್ವೇತ ಛತ್ರಿಯಂತೆ ೧೨ ದಳಗಳು ಬಿಳಿಯ ತಾವರೆ ಒಂದು		ಇಲ್ಲಿ ಕರ್ಮಸಾಕ್ಷಿಯಾದ ತುರೀಯ ನಾಮಕ ಕಮಲಗಳು ಭಗವಾನ್ ಮೋಕ್ಷಪ್ರದನಿರುವನು.	೧
೭. ನೆತ್ತಿಯ ಒಳಗೆ ಮೂರ್ಧ್ನಾದಲ್ಲಿ	ಮಧ್ಯೆ ಒಂದು ನಾಲ್ಕು ಪಾರ್ಶ್ವಗಳ ನಾಲ್ಕು ಹೀಗೆ ೧೨ ದಳಗಳು ೫ ಶ್ವೇತಾಂಬುಜ ಬಳಿಯ ಕಮಲಗಳು	ಇವುಗಳಲ್ಲಿ ಕ್ರಮವಾಗಿ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ, ನಾರಾಯಣರೆಂಬ ಐದು ರೂಪಗಳಿರುವುವು.	೫
೬. ಭ್ರೂ (ಹುಬ್ಬುಗಳ) ಮಧ್ಯೆ	ಮಧ್ಯೆ ೧ ನಾಲ್ಕು ಪಾರ್ಶ್ವಗಳಲ್ಲಿ ೪ ಹೀಗೆ ೫ ಶಿತಾಬ್ಜ (ಬಿಳೀ ತಾವರೆಗಳು) ೪ ದಳಗಳುಳ್ಳವು	ಡಿಟೋ ಅನಿರುದ್ಧಾದಿ ೫ ರೂಪಗಳು	೫
೫. ಕಂಠದ (ತಾಲುವಿನ)	ಲ್ಲಿ ಮಧ್ಯೆ ೧ ನಾಲ್ಕು ಪಾರ್ಶ್ವಗಳಲ್ಲಿ ೪ ಹೀಗೆ ೨ ದಳಗಳ ಬಿಳೀ ತಾವರೆಗಳು	ಡಿಟೋ ಪಂಚ ರೂಪಗಳು	೫
೪. ಹೃದಯದ (ಮೇಲಿ ಭಾಗ) ಊರ್ಧ್ವ (ವಕ್ಷಃಸ್ಥಳದಲ್ಲಿ)	ಹನ್ನೆರಡು ದಳಗಳ ಅರುಣ ವರ್ಣದ ಕಮಲಗಳು ಐದರಲ್ಲಿ	ಐದು ರೂಪ (ಡಿಟೋ) ದಿಂದ ಕೂಡಿದ ವಿಷ್ಣುವು	೫
೩. ಹೃದಯ	ಎಂಟು ದಳಗಳ ಒಂದು ಪದ್ಮವು ಅಧೋಮುಖ ಊರ್ಧ್ವನಾಳವುಳ್ಳದ್ದು	ಬಿಂಬರೂಪಿ ಪ್ರತ್ಯಙ್ಮುಖ ನಾರಾಯಣನು ಜೀವನ ಅಭಿಮುಖನಾಗಿರುವನು	೧
೨. ನಾಭೀದೇಶ	ಆರು ದಳಗಳ ಅರುಣವರ್ಣದ ಐದು (ಮಧ್ಯೆ ೧ ನಾಲ್ಕು ಪಾರ್ಶ್ವಗಳಲ್ಲಿ ೪ ಹೀಗೆ) ಪದ್ಮಗಳಿವೆ	ಐದು ಪದ್ಮಗಳಲ್ಲಿ ಅನಿರುದ್ಧಾದಿ ರೂಪಗಳು	೫
೧. ಮೂಲ ದೇಶ	ಮಧ್ಯೆ ೧. ೪ ದಿಕ್ಕುಗಳಲ್ಲಿ ನಾಲ್ಕು ಹೀಗೆ ನಾಲ್ಕು ದಳಗಳುಳ್ಳ ೫ ಕೆಂಪು ಕಮಲಗು	ಐದು ಕಮಲಗಳಲ್ಲೂ ಕ್ರಮವಾಗಿ ಅನಿರುದ್ಧಾದಿ ಐದು ರೂಪಗಳು	೫

“ಅಧ್ಯಾತ್ಮಾಮೃತನಿಧಿ” ಮತ್ತು “ಪಂಚಾಖ್ಯಾನ” ಗ್ರಂಥಗಳ
ವಿಷಯದಲ್ಲಿ ಉಡುಪಿ ಮಠಗಳ ಆಸ್ಥಾನ ವಿದ್ವಾಂಸರೂ,
ಶ್ರೀಮದ್ ಮಧ್ವಸಿದ್ಧಾಂತ ಪ್ರಬೋಧಿನೀ ಮಹಾ
ಪಾಠಶಾಲೆಯ ನಿವೃತ್ತ ದ್ವೈತ ವೇದಾಂತ
ನ್ಯಾಯಶಾಸ್ತ್ರ ಪ್ರಧಾನಾಧ್ಯಾಪಕರೂ ಆದ ಶ್ರೀ ಮ.ಸಂ.
ನ್ಯಾಯ ವೇದಾಂತ ಶಿರೋಮಣಿ ಮತ್ತು ವಿದ್ವಾನ್ ಶ್ರೀಮಾನ್
ಅನಂತಕೃಷ್ಣಾಚಾರ್ಯರವರು ಬರೆದು ಕಳುಹಿಸಿದ

ಅಭಿಪ್ರಾಯ

—o—

श्रीमद्भिर्विद्वद्भिः “शास्त्ररत्नं” इत्यादिबिरुदाङ्कितैः चीमनहल्ली रघुनाथाचार्यैर्विरचितं “अध्यात्मामृत निध्याख्य ग्रन्थमवलोक्य” मोमुदीतिनश्चेतः । श्रीमदानन्दतीर्थ भगवत्पादानां उपनिषद्भाष्यादिकं सम्यग्विचार्य तत्रत्यं इतरपुराणादिभ्यस्तन्त्रसाराच्च सारमुद्धृत्य आपामरसाधारणं विज्ञानाय कर्णाटकभाषया प्रकटीकृतोऽयंग्रन्थः कस्य प्रमोदं न जनयेत्? ।

परंच स्त्रीणामपि गृहे स्वस्वकार्य विरतिसमये इमं ग्रन्थं विलोक्य तत्त्वज्ञानसंपदनाय कुशलता भवेत् ।

तथाच "पञ्चाख्यान" नामकोग्रन्थः सुवासिनीभिरश्वयं पठनीयः पत्यादौ कासांचिदिदानींतनानां भक्तिरहितानां "पञ्चाख्यानं" दृष्ट्वा शैलसाराशयानामपि नारीणां भक्तिः पौनःपुन्येन उदयादेव ।

अतः एवं ग्रन्थकरणेन लोकोपकारं कुर्वतामेषां भारतीशान्तर्गतः श्रीकृष्णः आयुरारोग्यादिकं दत्वा पुनः पुनः ग्रन्थकरणेन मनः प्रेरयत्विति श्रीकृष्णं प्रार्थये ॥

(Sd.) B. Anantha Krishnacharya
(अनन्तकृष्णाचार्यः)
न्यायवेदान्तशिरोमणिः विद्वांश्च
श्रीमन्मध्वसिद्धान्त प्रबोधिनी महापाठशालायां
निवृत्त द्वैतवेदान्त न्यायशास्त्र प्रधानाध्यापकः
उडपी मठनामास्थान विद्वान्
17–12–1966

Sree Vidya Manya Turtharu Bhandarkeri Mutt, Barkur (S. K.)

श्री विद्यायान्यतीर्थरु भंडारकेरिमठ, बारकूर (द. कन्नड)

ಮೈಸೂರು ಮೊಕ್ಕಾಂನಿಂದ
Date 24–7–1965.

ಸ್ವಸ್ತಿ ಶ್ರೀಮತ್ಪತಮಹಂಸ ಪರಿವ್ರಾಜಕ ಶ್ರೀ ಭಂಡಾರಕೇರೀ ಮಠಾಧೀಶ ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀಗಳವರು, ಪಂಡಿತ ಮಾರ್ತಾಂಡ ಇತ್ಯಾದಿ ಬಿರುದಾಂಕಿತ ಚೀಮನಹಳ್ಳಿ ರಘುನಾಥಾಚಾರ್ಯರಿಗೆ ನಾರಾಯಣ ಸ್ಮರಣಪೂರ್ವಕ ಬರೆಸಿದ ನಿರೂಪ.

ನೀವು ಕಳುಹಿಸಿಕೊಟ್ಟ "ಸದ್ಭಕ್ತಿದರ್ಪಣ" ಎಂಬ ಗ್ರಂಥವನ್ನು ನೋಡಿ ಬಹಳ ಸಂತೋಷಪಟ್ಟೆವು. ಶಾಸ್ತ್ರಾರ್ಥಸಾರರೂಪವಾದ ಆ ಪುಸ್ತಕದಿಂದ ಸಜ್ಜನರಿಗೆ ಬಹಳ ಉಪಕಾರ ಮಾಡಿದ್ದೀರಿ. "ಸ್ವಕರ್ಮ ವಿಪ್ರಸ್ಯ ಜಪೋಪದೇಶೌ" ಎಂಬಂತೆ ನೀವು ಸ್ವತಃ ಶಾಸ್ತ್ರಾಧ್ಯಯನ ಮಾಡಿ ಪರರಿಗೆ ಸಹಾ ಉಪದೇಶಮಾಡುವ ಇಂಥಾ ನಿಮ್ಮ ಪವಿತ್ರವಾದ ಕರ್ತವ್ಯವು "ಇದೇ ರೀತಿ ನಿರಂತರವಾಗಿ ನಡೆದು ನಿಮಗೆ ಶ್ರೀ ಹರಿವಾಯುಗಳ ಅನುಗ್ರಹವು ಪೂರ್ಣವಾಗಿ ಆಗಲಿ" ಎಂದ ಪ್ರಾರ್ಥನೆ ಮಾಡುತ್ತೇವೆ. ಇತ್ಯನೇಕ ನಾರಾಯಣ ಸ್ಮರಣಪೂರ್ವಕ ಬರೆದ ಶ್ರೀಮುಖ.

(Sd.) श्री विद्यामान्यतीर्थ :

Sri Jagadguru Mahasamstanam
Sharada Peetham

Sringeri Kadur, Mysore State

Camp : Sri Sankara Mutt,
Salem-1

Letter dated No. BI-1935-65/17th Aug. 1965 from the Private Secretary to His Holiness to Shastra Rathnam Pandit Chimanhalli Raghunathacharys, Bangalore.

DEAR SIR,

The contents of your letter dated 20-7-1965 were submitted to His Holiness with your Pranamas.

His Holiness was highly pleased to go through all your works (Viz) Sriman-Marutsastra Sara Sangrah, Sad-Bhakti Darpanam (both in sanskrit) and Sadbhaktis Darpana (Kannada) and he has blessed you for all your endeovours in publishing such valuable books for the use of the public.

Asir Mantrakshatam and Sri Sharada Chandramouli-swara Prasadam are here-with sent,

Yours Sincerely,
(Sd.) S. **Shankaranarayana Rao**
Private Secretary.

Riview in the Madras Weekly Mail dated 13th March 1965

INDIAN PHILOSOPHY

Sadbhakti-Darpanam : By Shastra Ratnam Pandit C. Raghunathacharya, Pub. by C. R. Venkatesha Vithalacharya 29, Sixth Road, Chamrajpet, Bangalore-18, Re. 1.75.

It has been always a subject of debate among philosophers in India whether Jnana (knowledge) is superior as a means of salvation or Bhakti (Devotion), though the question never arises among men of spiritual experience, For those that have felt the touch of God, knowledge is complete only when it yields love and devotion is fulfilled only when it culminates in the full knowledge of the beloved. Both are derived from one truth and lead to that one Reality. The present book in Sanskrit approaches the question from the standpoint of the Maddhva philosophy and brings out the main features of Bhakti-marga on the basis of various scriptures, especially the Bhagavatam and the Gita. The writer supports his argument that Bhakti is both the means and the end of the quest, with copious quotations from accepted authorities and makes his point in a scholarly way.

M. s. Venkataramanachar, M.A., B.T.,
Mysore Education Service

Bangalore
Dated 9-8-1965

Shastraratnam Pandita Cheemanahally Raghunatha charya has been engaging himself in the study of Madhva Phylosophy from the last 5 decades. So for he has offered to the orthodox world, several small and big works in simple Kannada and samskrita. He weilds a pen equally facile in kannada and samskrita. In all his work, numbering over 50, no where has he deviated from the Madhva tradition.

To mention, a few of his Samskrita works Sriman Marut Sastra Sara Sangraha, Sadbhakti-Darpana Dwaita-Adwaita Prasnottara Malika (an un-biased presentation of the two systems of philosophy) have received the praise of the president of India and are widely read in Nan-Kannada areas of the land.

A scholar of his standing and experience, Sri Acharya owes it to the fallowers of the Madhva, who are umfortunate in not having studied, samskrita, almost as a duty, to bring out at least a few of Sri Madhva Achary's works into simple Kannada. I wish he will bestow a little attention in this direction.

Just now two books "Badari Mahatmya and Adhyatma Amrita Nidhi" are in the press. I feel that these also deserve and will get public support. I would only add that any financial encouragements extended to the Acharya will mean invaluable benifit in the shape of many more such works.

(Sd.) **M. s. Venkataramanachar.**

C. K. Sreenivas, B.Sc. (Hons)., D.I.I.Sc. (E.T.)
Grad. Inst. P. (Lond).,
Asst. Works Manger,
BHARAT ELECTRONICS LTD., BANGALORE-13

Bangalore
1-11-65

"Sadbhakti Darpanam" by Sastra Ratna, Vedanta Visharada Cheemanahalli, Raghunathacharya.

It was indeed very kind of the learned author to have asked me to write a review of his book. The book under review is a very useful and diligently prepared and comprehensive account of an important spiritual subject "Sadbhakti".

The supreme spiritual ideal of the ethics of Dharma is Moksha and the ethics of Dharma bloms in its higher levels into yoga. Yoga means practising the presence of God. In the Bhaghavadgita—a work on Yoga, three forms of Yoga are indicated, the intensive cultivation of wisdom, devotion and service ; Jnana, Bhakti and Karma. Each one of these paths of Yoga involves the other two as well and so forms an indivisable organice unity. But the way to obtain a vision of the Divine presence is not by discussion, by learning or through the intellect but only through "Bhakti" that is by appealing to God Himself through prayer and only when our heart yearns for the Divine presence His Grace is obtained. The Kathopanished Says :

"Naayamatma pravachanena labhyo
na medhayaa na bahunaa strutena"

This is the theme of the book.

The author has made a rich harvest of several rare authorities from Sruti, Smriti, Purana, Itihasa, Bhagavata, Gita Bhashya and Tatparya and with his own lucid running commentary and illuminating remarks and several examples discussed well the three types of Yoga as a means of spiritual salvation and the various Bhakti levels :

Sadharana, Pakva, Paripakva, Ati Paripakva, Nirguna, Aninitta and Atyantika in the ladder of spiritual maturity and has substantiated that in the final analysis "BHAKTI" alone can lead to Moksha.

The step by step development of the subject indicated under contents of the book, helps study considerably.

This book written so well, should serve as a spiritual guide to all who have realisid their present limitations and seek to grow into newer dimensions of consciousness of the means to attain Salvation, Moksha, and is an important addition to our spiritual literature.

C. K. Sreenivas.

॥ श्रीः ॥

पण्डितवर्यैः श्री चीमनहळ्ळी रघुनाथाचार्यमहोदयैः विरचितः सद्भक्तिदर्पणाख्यो ग्रन्थः आमूलाग्रं अवलोकि अस्माभिः । अयं ग्रन्थः जिज्ञासूनां मुमुक्षूणां च अतीव आवश्यकः यतोऽत्र नवविधद्वेषोज्झिता भक्तिः सपरिकरं प्रतिपाद्यते । भक्तिं विना मुक्त्यभावात् मोक्षार्थं सर्वैर्मुमुक्षुभिः अवश्यं नवविधा भक्तिः संपादनीयेत्येतत् अतिरोहितं सर्वेषां विदुषां । ग्रन्थस्यास्य दर्शनेन अस्माकं महान् सन्तोषः समजनि । ग्रन्थकर्तृणां ग्रन्थसरणिः बालानां पण्डितानां च मनोहरा दरीदृश्यते । एतादृशग्रन्थोद्धारणेन अतीव वैष्णवसमाजस्य उपकारो भविष्यति । किंच शोधकमतयो एते ग्रन्थकारा इति प्रतिभाति । तस्मात् सर्वैः शुभार्थिभिः अयं ग्रन्थः संसेव्य इति अस्मदुपास्यं श्रीवेदव्यासं प्रार्थयामहे । अनया च ग्रन्थरचनया भगवान् लक्ष्मीनृसिंहः एतेषां शास्त्ररत्नं उपनिषद्रत्नाकरेत्यादि बिरुदांकितानां चीमनहळ्ळी रघुनाथाचार्याणां ज्ञानभक्तिवैराग्याभिवर्षणपूर्वकं आयुरारोग्यादिकं दद्यादिति अस्मत्कुलदेवतात्मकलक्ष्मीनृसिंहसन्निधौ प्रार्थयामहे ॥

(Sd.) श्रीमन्महाराज संस्कृतमहापाठशाला
तर्कप्रधानाध्यापकः
पि. श्रीनाथाचार्यः

मैसूरु
ता० ८-६-६५

॥ श्रीः ॥

उपनिषद्रत्नाकरादिविरुदभूषितैः म. शा. सं. चीमनहल्ली रघुनाथाचार्यैः विरचितं "सद्भक्तिदर्पणं" "मरुच्छास्त्रसारसंग्रहः" इति ग्रन्थद्वयं आमूलाग्रमालोड्य समतुष्यम् । विपुलप्रमाणग्रन्थोक्तिमौक्तिकैः ग्रथितं ग्रन्थद्वयमिदं माध्वराद्धान्ततत्वबुभुत्सूनामास्तिकानामत्युपयोगीति दृढं विश्वसिमि । सद्भक्तिदर्पणस्य कर्णाटकभाषानुवादोऽपि कर्णाटिकानां भृशं साह्यविधायिनिति प्रत्येमि ।

(Sd.) को. नरसिंहाचार्यः

विश्रान्तालङ्कारप्राध्यापकः

श्रीचामराजेन्द्रसंस्कृतमहापाठशाला

बेगलूर

ता० ११-७-१९६५

ಇದೇ ಗ್ರಂಥಕರ್ತರಿಂದ ರಚಿತವಾಗಿ ನಮ್ಮಲ್ಲಿ ದೊರೆಯುವ ಇತರ ಗ್ರಂಥಗಳು

೧.	ಸರ್ವಜ್ಞ ಸಂದೇಶ ಸಂಪುಟ ೧ ಬೈಂಡಾದವು	೪—೫೦
೨.	ಮಾಸಪತ್ರಿಕೆಗಳು ,, ೨ ,,	೫—೫೦
೩.	,, ,, ೩ ,,	೪—೫೦
೪	ಸದ್ಭಕ್ತಿದರ್ಪಣಂ (ಕನ್ನಡ ಭಾಷೆ)	೨—೦೦
೫	ಸದ್ಭಕ್ತಿದರ್ಪಣಂ (ಸಂಸ್ಕೃತ ಭಾಷೆ)	೧—೭೫
೬	ಪಂಚಾಖ್ಯಾನ	೧—೫೦
೭	ತತ್ವಮಸಿ ವಿಮರ್ಶೆ	೧—೫೦
೮	ಬದರೀ ಮಹಾತ್ಮ್ಯೆ	೧—೨೫
೯	ಗಯಾಕ್ಷೇತ್ರ ಮಹಾತ್ಮ್ಯೆ	೧—೫೦
೧೦	ತತ್ವಮಸಿ (ಪ್ರಮಾಣ ಸಹಿತ) ಕನ್ನಡ ಭಾಷೆ	೦—೭೫
೧೧	ಮುಕ್ತಿಸಾಧನಗಳು ಸುಲಭೋಪಾಯಗಳು	೦—೬೫
೧೨	ಸೂತ್ರ ಭಾಷ್ಯದ ಅಧಿಕರಣಾರ್ಥಸಾರ ಸಂಗ್ರಹ ೩ನೇ ಅಧ್ಯಾಯ ೩ನೇ ಪಾದ	೦—೬೫
೧೩	ಮರುಚ್ಛಾಸ್ತ್ರ ಸಾರಸಂಗ್ರಹ (ಸಂಸ್ಕೃತ)	೦—೫೦
೧೪	ವೈಷ್ಣವದೀಕ್ಷೆ	೦—೫೦
೧೫	ಪಿತೃಭಕ್ತಿ	೦—೪೦
೧೬	ಶ್ರೀಕೃಷ್ಣ ಚಾರಿತ್ರ್ಯ ಮಂಜರೀ ಮತ್ತು ರಾಮಚಾರಿತ್ರ್ಯ ಮಂಜರೀ (ಕನ್ನಡ ಅರ್ಥಸಹಿತ)	೦—೩೦
೧೭	ವೈದಿಕರ ವಡ್ಡಾಟ	೦—೨೫
೧೮	ಸನ್ಮಿತ್ರ ಸಮಾಗಮ	೦—೨೫
೧೯	ಅಧ್ಯಾತ್ಮರಸರಂಜನೀ	೩—೦೦
೨೦	ಅಧ್ಯಾತ್ಮಾಮೃತನಿಧಿ	೨—೦೦
೨೧	ಶ್ರೀರಾಮ ಚರಿತ್ರೆ (ಪದ್ಮಪುರಾಣ ಉತ್ತರಖಂಡದಿಂದ)	೧—೦೦